ಮಂಗಳವಾರ, ಡಿಸೆಂಬರ್ 19, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 349 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳನ್ನು ಕಾಡುವ ನ್ಯುಮೋನಿಯಾಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದರೆ ಅಪಾಯ ಎದುರಾಗಬಹುದು



ಆಳ-ಅಗಲ ದೂರಸಂಪರ್ಕ: ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ, ನಿಯಂತ್ರಣ
ಗುಲಾಮಗಿರಿ ಮನಃಸ್ಥಿತಿಯಿಂದ ದೇಶಕ್ಕೀಗ ಸ್ವಾತಂತ್ರ್ಯ: ಮೋದಿ 11
‘ಪುಂಡುಗಂಡಾಯದಂಥ ಹೊಣೆ ಹೊರಿಸಿ’ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,315	21,418	₹ 63,900 (ಬೆಂಗಳೂರು)	₹75,700 (ಬೆಂಗಳೂರು)	83.10

ಡಿಸೆಂಬರ್ 23 ಮತ್ತು 24 ರಂದು ಮಧ್ಯಕರ್ನಾಟಕದ ಕೇಂದ್ರವಾದ ದಾವಣಗೆರೆಯಲ್ಲಿ ನಡೆಯಲಿರುವ
ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾ ಅಧಿವೇಶನದಲ್ಲಿ
ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳ ಪಂಗಡಗಳ ಸಮಾಜ ಬಾಂಧವರು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿ.
ಹರಹರ ಮಹಾದೇವ ಸ್ವಾಭಿಮಾನ ಸಂಘಟನೆ ಸ್ವಾವಲಂಬನೆ ಸಹಕಾರ ಸಹಬಾಳ್ವೆ
ಸ್ವಾಗತ ಕೋರುವವರು : ಬಿ.ಎಸ್.ಚನ್ನಬಸಪ್ಪ & ಸನ್ಸ್ ದಾವಣಗೆರೆ & ಬೆಳಗಾವಿ
BSC B.S. CHANNABASAPPA & SONS Since - 1938

ಕಲಾಪಕ್ಕೆ ವಿರೋಧ ಪಕ್ಷಗಳ ಅಡ್ಡಿ: ಒಂದೇ ದಿನ ‘ದಾಖಲೆ’ ಸಂಖ್ಯೆಯ ಸದಸ್ಯರು ಹೊರಕ್ಕೆ

78 ಸಂಸದರ ಅಮಾನತು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್‌ನ ಭದ್ರತಾ ವೈಫಲ್ಯ ವಿಷಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಗೆ ಪಟ್ಟು ಹಿಡಿದು ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಘೋಷಣೆಗಳನ್ನು ಕೂಗಿದ್ದಕ್ಕಾಗಿ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ 78 ಸದಸ್ಯರನ್ನು ಸೋಮವಾರ ಅಮಾನತು ಮಾಡಲಾಗಿದೆ. ಈ ಮೂಲಕ, ಒಂದೇ ದಿನ ‘ದಾಖಲೆ’ ಸಂಖ್ಯೆಯ ಸದಸ್ಯರನ್ನು ಅಮಾನತು ಮಾಡಿದಂತಾಗಿದೆ.

ಪ್ರತಿಪಕ್ಷಗಳು ಪಟ್ಟು ಸಡಿಲಿಸದ ಕಾರಣ ಉಭಯ ಸದನಗಳಲ್ಲಿ ಮೂರನೇ ದಿನವೂ ಸುಗಮ ಕಲಾಪ ನಡೆಯಲಿಲ್ಲ. ವಿಪಕ್ಷಗಳ ಗದ್ದಲ, ಕೋಲಾಹಲದ ನಡುವೆಯೇ ಸರ್ಕಾರವು ದೂರಸಂಪರ್ಕ ಮಸೂದೆಯಂತಹ ಪ್ರಮುಖ ಮಸೂದೆಗಳನ್ನು ಮಂಡಿಸಿತು. ಕೇಂದ್ರಾಡಳಿತ ಪ್ರದೇಶ ಪುದುಚೆರಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಶೇ 33ರಷ್ಟು ಮಹಿಳಾ ಮೀಸಲಾತಿ ನೀಡುವ ಮಸೂದೆಗಳಿಗೆ ಹೆಚ್ಚಿನ ಚರ್ಚೆಯಿಲ್ಲದೆಯೇ ಅಂಗೀಕಾರ ಪಡೆಯಿತು.

ಡಿಎಂಕೆಯ 10, ಟಿಎಂಸಿಯ ಒಂಬತ್ತು, ಕಾಂಗ್ರೆಸ್‌ನ ಎಂಟು, ಐಯುಎಂಎಲ್, ಜೆಡಿಯು ಮತ್ತು ಆರ್‌ಎಸ್‌ಪಿಯ ತಲಾ ಒಬ್ಬರು ಸದಸ್ಯರು ಸೇರಿದಂತೆ 30 ಸದಸ್ಯರನ್ನು ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಲೋಕಸಭೆಯಲ್ಲಿ ಹೇಳಿದರು. ಕೆ.ಜಯಕುಮಾರ್, ವಿಜಯ್ ವಸಂತ್ ಮತ್ತು ಅಬ್ದುಲ್ ಖಲೀಕ್ ಅವರ ನಡವಳಿಕೆ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಲಾಗಿದ್ದು, ಸಮಿತಿಯು ವರದಿ ಸಲ್ಲಿಸುವವರೆಗೆ ಅವರನ್ನು ಅಮಾನತುಗೊಳಿಸುವ ಪ್ರತ್ಯೇಕ ನಿರ್ಣಯವನ್ನು ಜೋಶಿ ಮಂಡಿಸಿದರು.

ಅಶಿಸ್ತಿನ ವರ್ತನೆ ಹಾಗೂ ಸಭಾಪತಿ ನಿರ್ದೇಶನಗಳನ್ನು ಧಿಕ್ಕರಿಸಿದ ಕಾರಣಕ್ಕೆ ರಾಜ್ಯಸಭೆಯ 45 ಸದಸ್ಯರನ್ನು ಅಮಾನತುಗೊಳಿಸಲಾಗಿದೆ. 34 ಸದಸ್ಯರನ್ನು ಚಳಿಗಾಲದ ಉಳಿದ ಅಧಿವೇಶನದ ಅವಧಿಗೆ ಹೊರ ಹಾಕಲಾಗಿದೆ. 11 ಸದಸ್ಯರ ನಡವಳಿಕೆ ಪ್ರಕರಣವನ್ನು ಸದನದ ಹಕ್ಕುಬಾಧ್ಯತಾ ಸಮಿತಿಗೆ ನೀಡಲಾಗಿದ್ದು, ಆ ವರದಿ ಬರುವವರೆಗೆ ಸದನದಿಂದ ದೂರ ಉಳಿಯುವಂತೆ ಸೂಚಿಸಲಾಗಿದೆ.

ಮೂರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸಮಿತಿಗೆ ನಿರ್ದೇಶನ ನೀಡಲಾಗಿದ್ದು, ಅಲ್ಲಿಯವರೆಗೆ 11 ಸಂಸದರು ಸದನದ ಕಲಾಪಕ್ಕೆ ಹಾಜರಾಗುವಂತಿಲ್ಲ. ಚಳಿಗಾಲದ ಅಧಿವೇಶನ ಇದೇ 22ರಂದು ಮುಗಿಯಲಿದೆ.

ಕಲಾಪಕ್ಕೆ ಅಡ್ಡಿಪಡಿಸಿದ ಕಾರಣಕ್ಕೆ ರಾಜ್ಯಸಭೆಯ ಒಬ್ಬರು ಹಾಗೂ ಲೋಕಸಭೆಯ 13 ಸದಸ್ಯರನ್ನು ಕಳೆದ ವಾರ ಅಮಾನತುಗೊಳಿಸಲಾಗಿತ್ತು. ಅಮಾನತುಗೊಂಡಿರುವ ವಿರೋಧ ಪಕ್ಷದ ಸದಸ್ಯರ ಒಟ್ಟು ಸಂಖ್ಯೆ 92ಕ್ಕೆ ಏರಿದೆ.

11ನೇ ಪುಟ ನೋಡಿ

ಅಮಾನತುಗೊಂಡ ಪ್ರಮುಖರು

ಲೋಕಸಭೆ: ಅಧೀರ್ ರಂಜನ್ ಚೌಧರಿ, ಗೌರವ್ ಗೊಗೊಯ್, ಟಿ.ಆರ್.ಬಾಲು, ಎ.ರಾಜಾ, ದಯಾನಿಧಿ ಮಾರನ್.

ರಾಜ್ಯಸಭೆ: ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್, ಸಯ್ಯದ್ ನಾಸಿರ್ ಹುಸೇನ್, ಎಲ್.ಹನುಮಂತಯ್ಯ, ಜಿ.ಸಿ.ಚಂದ್ರಶೇಖರ್.

ಅಮಾನತುಗೊಂಡ ವಿರೋಧ ಪಕ್ಷಗಳ ಸಂಸದರು ಸಂಸತ್ತಿನ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಈ ಅಧಿವೇಶನದಲ್ಲಿ ಅಮಾನತು

	ಲೋಕಸಭೆ	ರಾಜ್ಯಸಭೆ	ಒಟ್ಟು
ಡಿಸೆಂಬರ್ 18ರಂದು	33	45	78
ಡಿಸೆಂಬರ್ 14ರಂದು	13	1	14

ಹಿಂದಿನ ಪ್ರಮುಖ ಅಮಾನತು ಪ್ರಕರಣಗಳು

1989ರ ಮಾರ್ಚ್ 15: ಮಾಜಿ ಪ್ರಧಾನಿ ಇಂದಿರಾಗಾಂಧಿ ಹತ್ಯೆಯ ತನಿಖೆ ನಡೆಸಿದ ಠಕ್ಕರ್ ಆಯೋಗದ ವರದಿಗೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸಿದ್ದಕ್ಕಾಗಿ 63 ಸಂಸದರನ್ನು ಒಂದು ವಾರಗಳ ಕಾಲ ಅಮಾನತು ಮಾಡಲಾಗಿತ್ತು. ಇದು ಈವರೆಗಿನ ‘ದಾಖಲೆ’ ಆಗಿತ್ತು.

2015ರ ಆಗಸ್ಟ್ 24: ಲಲಿತ್ ಮೋದಿಗೆ ಸಹಾಯ ಮಾಡಿದ ಆರೋಪದ ಮೇಲೆ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ರಾಜೀನಾಮೆಗೆ ಆಗ್ರಹಿಸಿ ಗದ್ದಲ ಎಬ್ಬಿಸಿದ್ದ 25 ಕಾಂಗ್ರೆಸ್ ಸಂಸದರನ್ನು ಸದನದಿಂದ ಹೊರ ಹಾಕಲಾಗಿತ್ತು.

2019ರ ಜನವರಿ 2: ಕಾವೇರಿ ವಿಚಾರವಾಗಿ ಪ್ರತಿಭಟನೆ ನಡೆಸಿದ 24 ಎಐಎಡಿಎಂಕೆ ಸಂಸದರನ್ನು ಅಮಾನತುಗೊಳಿಸಲಾಗಿತ್ತು.

2019ರ ಜನವರಿ 4: ಕಾವೇರಿ ವಿವಾದ ಮತ್ತು ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನಕ್ಕಾಗಿ ಪ್ರತಿಭಟನೆ ನಡೆಸಿದ 21 ಎಐಎಡಿಎಂಕೆ, ಟಿಡಿಪಿ ಸಂಸದರನ್ನು ಅಮಾನತು ಮಾಡಲಾಗಿತ್ತು.

ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿರುವ ‘ಇಂಡಿಯಾ’ ಒಕ್ಕೂಟದ ಸಂಸದರು–237 (ಲೋಕಸಭೆ 139 ಹಾಗೂ ರಾಜ್ಯಸಭೆ 98)

- **ಅಮಾನತುಗೊಂಡ ಸದಸ್ಯರು–93.** ಮುಂಗಾರು ಅಧಿವೇಶನದಿಂದ ಸಂಜಯ್ ಸಿಂಗ್ ಅವರನ್ನು ಅಮಾನತುಗೊಳಿಸಲಾಗಿದೆ. ಹೀಗಾಗಿ, ಅಮಾನತುಗೊಂಡವರ ಸಂಖ್ಯೆ 93ಕ್ಕೆ ಏರಿದೆ.

ವಿಪಕ್ಷಗಳ ಬೇಡಿಕೆ ಏನು?

- ಭದ್ರತಾ ವೈಫಲ್ಯದ ಕುರಿತು ಗೃಹ ಸಚಿವ ಅಮಿತ್ ಶಾ ಸದನದಲ್ಲಿ ಹೇಳಿಕೆ ನೀಡಬೇಕು.
- ಭದ್ರತಾ ವೈಫಲ್ಯದ ಕುರಿತು ಸದನದಲ್ಲಿ ವಿಸ್ತೃತ ಚರ್ಚೆ ನಡೆಯಬೇಕು.
- ಲೋಕಸಭೆಯ ಕಲಾಪದೊಳಗೆ ನುಗ್ಗಿದ ಇಬ್ಬರು ಆರೋಪಿಗಳಿಗೆ ಪಾಸ್ ನೀಡಿದ ಬಿಜೆಪಿ ಸಂಸದ ಪ್ರತಾಪಸಿಂಹ ವಿರುದ್ಧ ಕ್ರಮ ಕೈಗೊಳ್ಳಬೇಕು.

8 ಶಂಕಿತ ಉಗ್ರರ ಬಂಧನ

ಬೆಂಗಳೂರು, ಬಳ್ಳಾರಿ ಸೇರಿ ದೇಶದ 19 ಕಡೆ ಎನ್‌ಐಎ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಬಳ್ಳಾರಿ: ಕಚ್ಚಾ ಬಾಂಬ್ (ಐಇಡಿ) ಬಳಸಿ ದೇಶದ ಹಲವೆಡೆ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದ ತಂಡವನ್ನು ಪತ್ತೆ ಮಾಡಿರುವ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಐಎಸ್ (ಇಸ್ಲಾಮಿಕ್ ಸ್ಟೇಟ್) ಭಯೋತ್ಪಾದನಾ ಸಂಘಟನೆ ಜೊತೆ ಒಡನಾಟವಿಟ್ಟುಕೊಂಡಿದ್ದ ಎಂಟು ಶಂಕಿತ ಉಗ್ರರನ್ನು ಸೋಮವಾರ ಬಂಧಿಸಿದ್ದಾರೆ.

ಬಳ್ಳಾರಿ, ಬೆಂಗಳೂರು ಸೇರಿದಂತೆ ದೇಶದ 19 ಸ್ಥಳಗಳ ಮೇಲೆ ದಾಳಿ ಮಾಡಿರುವ ಅಧಿಕಾರಿಗಳು, ಕಚ್ಚಾ ಬಾಂಬ್ ತಯಾರಿಸಲು ಸಂಗ್ರಹಿಸಿದ್ದ ಸಾಮಗ್ರಿಗಳನ್ನು ಜಪ್ತಿ ಮಾಡಿದ್ದಾರೆ.

‘ಐಎಸ್ ಭಯೋತ್ಪಾದನಾ ಸಂಘಟನೆ ಉಗ್ರರ ಜೊತೆ ಒಡನಾಟ ಹೊಂದಿ ದೇಶದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಡಿ. 14 ರಂದು ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ತನಿಖೆಯಲ್ಲಿ ಲಭ್ಯವಾದ ಖಚಿತ ಮಾಹಿತಿ ಮೇರೆಗೆ ಕರ್ನಾಟಕ, ಮಹಾರಾಷ್ಟ್ರ, ಜಾರ್ಖಂಡ್ ಹಾಗೂ ದೆಹಲಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ 8 ಶಂಕಿತ ಉಗ್ರರನ್ನು ಸೆರೆ ಹಿಡಿಯಲಾಗಿದೆ’ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

‘ಕಚ್ಚಾ ಬಾಂಬ್ ತಯಾರಿಸಲು ಶಂಕಿತರು ಸಂಗ್ರಹಿಸಿಟ್ಟುಕೊಂಡಿದ್ದ ಸಲ್ಫರ್, ಪೊಟ್ಯಾಶಿಯಂ ನೈಟ್ರೇಟ್, ಗನ್ ಪೌಡರ್, ಇದ್ದಿಲು, ಎಥೆನಾಲ್, ಚೂಪಾದ ಆಯುಧಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಸ್ಮಾರ್ಟ್ ವಾಚ್‌ಗಳು, ನಗದು ಹಾಗೂ ಕೆಲ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಹೇಳಿವೆ.

ಕೇಂದ್ರ ಸ್ಥಾನ ಬಳ್ಳಾರಿ: ‘ಬಳ್ಳಾರಿ ನಿವಾಸಿ ಮಿನಾಜ್ ಅಲಿಯಾಸ್ ಮೊಹಮ್ಮದ್ ಸುಲೈಮಾನ್, ಸ್ಫೋಟದ ಸಂಚಿನ ಪ್ರಮುಖ ರೂವಾರಿ. ಬಳ್ಳಾರಿಯಲ್ಲಿ ಹಲವು ವರ್ಷಗಳಿಂದ ವಾಸವಿದ್ದ ಈತ, ಧರ್ಮದ ಹೆಸರಿನಲ್ಲಿ ಕಾಲೇಜು ವಿದ್ಯಾರ್ಥಿಗಳನ್ನು ಭಯೋತ್ಪಾದನಾ ಕೃತ್ಯಕ್ಕೆ ಪ್ರಚೋದಿಸುತ್ತಿದ್ದ. ಬಳ್ಳಾರಿಯನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದನೆಂದು ಗೊತ್ತಾಗಿದೆ. ಈತನ ಮನೆಯಲ್ಲಿ ನಗದು ಸಿಕ್ಕಿದೆ’ ಎಂದು ಮೂಲಗಳು ತಿಳಿಸಿವೆ.

‘ಐಇಡಿ ತಯಾರಿಸುವುದು ಹೇಗೆ ಎಂಬ ಬಗ್ಗೆ ಶಂಕಿತರು ತರಬೇತಿ ಪಡೆದುಕೊಂಡಿದ್ದರು. ಒಂದೊಂದೇ ಕಚ್ಚಾ ಸಾಮಗ್ರಿಯನ್ನು ತಂದು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಮುಂಬರುವ ದಿನಗಳಲ್ಲಿ ಸ್ಫೋಟಕ್ಕೆ ಸೂಕ್ತ ಸ್ಥಳವನ್ನು ನಿಗದಿ ಮಾಡಿದ ನಂತರವೇ ಐಇಡಿ ತಯಾರಿಸಿ ಸ್ಫೋಟಿಸುವುದು ಶಂಕಿತರ ಉದ್ದೇಶವಾಗಿತ್ತು’ ಎಂದು ಮಾಹಿತಿ ನೀಡಿವೆ.

ಆ್ಯಪ್ ಮೂಲಕ ಸಂವಹನ: ‘ಬಳ್ಳಾರಿ, ಬೆಂಗಳೂರು, ಅಮರಾವತಿ, ಪುಣೆ, ಜಮ್‌ಶೆಡ್‌ಪುರ, ಬೊಕಾರೊ ಹಾಗೂ ದೆಹಲಿಯಲ್ಲಿ ಶಂಕಿತರು ನೆಲೆ ಹೊಂದಿದ್ದರು. ಮೊಬೈಲ್ ಆ್ಯಪ್ ಬಳಸಿಕೊಂಡು ಮಾತನಾಡುತ್ತಿದ್ದರು. ಆ್ಯಪ್ ಮೂಲಕವೇ ಕರಪತ್ರಗಳು, ವಿಡಿಯೊ, ಆಡಿಯೊಗಳನ್ನು ಹಂಚಿಕೊಳ್ಳುತ್ತಿದ್ದರು’ ಎಂದು ಎನ್‌ಐಎ ಮೂಲಗಳು ಹೇಳಿವೆ.

ಮತ್ತಷ್ಟು ಮಂದಿ ವಶಕ್ಕೆ: ಬೆಂಗಳೂರು ಹಾಗೂ ಬಳ್ಳಾರಿಯಲ್ಲಿ ಕಾರ್ಯಾಚರಣೆ ನಡೆಸಿರುವ ಎನ್‌ಐಎ ಅಧಿಕಾರಿಗಳು, ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವುದಾಗಿ ಗೊತ್ತಾಗಿದೆ.

‘ಬ್ಯಾಡರಹಳ್ಳಿಯಲ್ಲಿ ವರ್ಷದಿಂದ ವಾಸ’

‘ಬೆಂಗಳೂರಿನಲ್ಲಿ ಬಂಧಿಸಲಾಗಿರುವ ಮೊಹಮ್ಮದ್ ಮುನಿರುದ್ದಿನ್, ಸೈಯದ್ ಸಮೀವುಲ್ಲಾ ಹಾಗೂ ಮೊಹಮ್ಮದ್ ಮುಜಮಿಲ್, ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ಬಾಡಿಗೆ ಮನೆಯೊಂದರಲ್ಲಿ ಒಂದು ವರ್ಷದಿಂದ ವಾಸವಿದ್ದರು’ ಎಂದು ಸ್ಥಳೀಯರು ಹೇಳಿದರು.

‘ವಿದ್ಯಾಭ್ಯಾಸ ಹಾಗೂ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ಶಂಕಿತರು, ಮನೆ ಮಾಲೀಕರಿಗೆ ಹೇಳಿದ್ದರು. ಸ್ಥಳೀಯರ ಜೊತೆಗೆ ಹೆಚ್ಚು ಬೆರೆಯುತ್ತಿರಲಿಲ್ಲ. ಇವರ ಮನೆಯಲ್ಲಿಯೇ ಕಚ್ಚಾ ಸಾಮಗ್ರಿ ಸಿಕ್ಕಿರುವ ಮಾಹಿತಿ ಇದೆ’ ಎಂದು ಅವರು ತಿಳಿಸಿದರು.

ಬಂಧಿತರು

ಬಳ್ಳಾರಿಯ ಮಿನಾಜ್ ಅಲಿಯಾಸ್ ಮೊಹಮ್ಮದ್ ಸುಲೈಮಾನ್, ಸೈಯದ್ ಸಮೀರ್, ಬೆಂಗಳೂರಿನ ಮೊಹಮ್ಮದ್ ಮುನಿರುದ್ದಿನ್, ಸೈಯದ್ ಸಮೀವುಲ್ಲಾ, ಮೊಹಮ್ಮದ್ ಮುಜಮಿಲ್, ಮುಂಬೈನ ಅನಸ್ ಇಕ್ಬಾಲ್ ಶೇಖ್, ದೆಹಲಿಯ ಶಿಯಾನ್ ರಹಮಾನ್ ಅಲಿಯಾಸ್ ಹುಸೇನ್, ಜಾರ್ಖಂಡ್‌ನ ಮೊಹಮ್ಮದ್ ಶಹಬಾಜ್ ಅಲಿಯಾಸ್ ಜುಲ್ಫಿಕರ್ ಅಲಿಯಾಸ್ ಗುಡ್ಡು.

ಒಳ ಪುಟಗಳು
ದಕ್ಷಿಣ ತಮಿಳುನಾಡಿನಲ್ಲಿ ಪ್ರವಾಹ: 4 ಜಿಲ್ಲೆಗಳಲ್ಲಿ ಭಾರಿ ಮಳೆ– ಹೈ ಅಲರ್ಟ್ 11
ಗಾಜಾದಲ್ಲಿ ಹಮಾಸ್ ಸುರಂಗ ಪತ್ತೆ: ಇಸ್ರೇಲ್ ಸೇನೆ ಮಾಹಿತಿ 10
ಐಪಿಎಲ್ ಮಿನಿಬಿಡ್ ಇಂದು: ಕಮಿನ್ಸ್, ಶಾರ್ದೂಲ್ ಮೇಲೆ ಕಣ್ಣು 12

ಆಶ್ರಯ ಯೋಜನೆ ಅಸಾಂವಿಧಾನಿಕ: ಹೈಕೋರ್ಟ್

ಬೆಂಗಳೂರು: ‘ಆಶ್ರಯ ಯೋಜನೆ ಅಸಾಂವಿಧಾನಿಕ’ ಎಂದು ಸಾರಿರುವ ಹೈಕೋರ್ಟ್, ‘ಈ ಯೋಜನೆಯನ್ನು ಜಾರಿಗೊಳಿಸಲಾಗದು’ ಎಂದು ಆದೇಶಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಮೈಸೂರಿನ ರಮಾಬಾಯಿ ನಗರದ ಪ್ರೇಮಾ ಸೇರಿದಂತೆ ಒಟ್ಟು 40 ಜನರು ಸಲ್ಲಿಸಿದ್ದ ಈ ಕುರಿತ ಮೇಲ್ಮನವಿ ವಜಾಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ರಾಜ್ಯ ಸರ್ಕಾರ ತನ್ನ ಅಧಿಕಾರ ವ್ಯಾಪ್ತಿ ಮೀರಿ ಈ ಯೋಜನೆಯನ್ನು ಜಾರಿಗೆ ತಂದಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಆಶ್ರಯ ಯೋಜನೆ ಅಸಾಂವಿಧಾನಿಕ ಎಂಬ ಅಂಶವನ್ನು ವಿಭಾಗೀಯ ನ್ಯಾಯಪೀಠ ಈಗಾಗಲೇ ಡಾ.ಬಿ.ಆರ್. ಅಂಬೇಡ್ಕರ್ ದಲಿತ ಮತ್ತು ಹಿಂದುಳಿದ ಅಲ್ಪಸಂಖ್ಯಾತರ ಗ್ರಾಮಾಭಿವೃದ್ಧಿ ಸಂಘ (ರಿ) v/s ಕರ್ನಾಟಕ ಮತ್ತು ಇತರರ ಪ್ರಕರಣದಲ್ಲಿ ಸ್ಪಷ್ಟಪಡಿಸಿದೆ’ ಎಂದು ಹೇಳಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೋವಿಡ್: ರಾಜ್ಯಗಳಿಗೆ ಕೇಂದ್ರ ಸರ್ಕಾರದ ಸಲಹೆ

ನಿಗಾ ವಹಿಸಿ, ಪರೀಕ್ಷೆ ಹೆಚ್ಚಿಸಿ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್-19 ಪ್ರಕರಣಗಳ ಹೆಚ್ಚಳ ಮತ್ತು ಕೊರೊನಾ ವೈರಾಣುವಿನ ಜೆಎನ್.1 ಉಪತಳಿಯ ಮೊದಲ ಪ್ರಕರಣ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಕೋವಿಡ್ ಪರಿಸ್ಥಿತಿಯ ಮೇಲೆ ನಿರಂತರ ನಿಗಾ ಇರಿಸಲು ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹೆ ನೀಡಿದೆ.

10ನೇ ಪುಟ ನೋಡಿ

‘60 ವರ್ಷವಾದವರಿಗೆ ಮಾಸ್ಕ್ ಕಡ್ಡಾಯ’

ಮಡಿಕೇರಿ: ‘60 ವರ್ಷ ತುಂಬಿದವರು, ಹೃದಯ ಸಂಬಂಧಿ ಕಾಯಿಲೆ ಹಾಗೂ ಕೋವಿಡ್–19 ಲಕ್ಷಣ ಹೊಂದಿರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಈ ಬಗ್ಗೆ ಮಾರ್ಗಸೂಚಿಯನ್ನು ಇಲಾಖೆ ಹೊರಡಿಸಲಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಕುಶಾಲನಗರದಲ್ಲಿ ಸುದ್ದಿಗಾರರ ಜೊತೆಗೆ ಸೋಮವಾರ ಮಾತನಾಡಿದ ಅವರು, ‘ಕೋವಿಡ್ ಪರೀಕ್ಷೆ ಹೆಚ್ಚಿಸಲಾಗುವುದು. ಉಸಿರಾಟದ ತೊಂದರೆ ಹಾಗೂ ಕೋವಿಡ್ ಲಕ್ಷಣ ಹೊಂದಿರುವವರಿಗೆ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗುವುದು. ಆದರೆ, ಎಲ್ಲರಿಗೂ ಮಾಸ್ಕ್ ಕಡ್ಡಾಯ, ಜನರ ಓಡಾಟ ಹಾಗೂ ಪ್ರವಾಸಿಗರ ಮೇಲೆ ನಿರ್ಬಂಧ ವಿಧಿಸುವಂತಹ ಸ್ಥಿತಿ ಬಂದಿಲ್ಲ’ ಎಂದರು.

ಜ್ಞಾನವಾಪಿ: ಸಮೀಕ್ಷಾ ವರದಿ ಸಲ್ಲಿಕೆ

ವಾರಾಣಸಿ (ಪಿಟಿಐ): ಭಾರತೀಯ ಪುರಾತತ್ವ ಇಲಾಖೆಯು (ಎಎಸ್‌ಐ) ಜ್ಞಾನವಾಪಿ ಮಸೀದಿ ಸಂಕೀರ್ಣದ ಸಮೀಕ್ಷಾ ವರದಿಯನ್ನು ವಾರಾಣಸಿಯ ಜಿಲ್ಲಾ ನ್ಯಾಯಾಲಯಕ್ಕೆ ಸೋಮವಾರ ಸಲ್ಲಿಸಿದೆ.

‘ಎಎಸ್‌ಐನ ವಕೀಲ ಅಮಿತ್ ಶ್ರೀವಾತ್ಸವ ಅವರು ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸಿದ್ದಾರೆ. ಈ ಕುರಿತ ವಿಚಾರಣೆಯನ್ನು ಇದೇ 21ರಂದು ನಿಗದಿಪಡಿಸಲಾಗಿದೆ’ ಎಂದು ಹಿಂದೂ ಅರ್ಜಿದಾರರ ಪರ ವಕೀಲ ಮದನ್ ಮೋಹನ್ ಯಾದವ್ ಹೇಳಿದ್ದಾರೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮತ್ತೊಂದು ಪ್ರಕರಣ

ದೇಗುಲಕ್ಕೆ ಮಕ್ಕಳಿಂದ ಹಣ ಸಂಗ್ರಹ

ಪ್ರಜಾವಾಣಿ ವಾರ್ತೆ

ಕೋಲಾರ: ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿನ ಆವರಣದಲ್ಲಿ ದೇಗುಲ ನಿರ್ಮಿಸಲು ಮಕ್ಕಳಿಂದ ಪ್ರಾಂಶುಪಾಲರು ಹಾಗೂ ಶಿಕ್ಷಕರು ಬಲವಂತವಾಗಿ ಹಣ ವಸೂಲಿ ಮಾಡಿರುವುದು ಗೊತ್ತಾಗಿದೆ.

ವಿದ್ಯಾರ್ಥಿಗಳನ್ನು ಬೆದರಿಸಿ ಪ್ರತಿ ವಿದ್ಯಾರ್ಥಿಯಿಂದ ₹500 ಸಂಗ್ರಹಿಸಿದ್ದಾರೆ ಎನ್ನಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಮಾಲೂರು ತಾಲ್ಲೂಕಿನ ಸಹಾಯಕ ನಿರ್ದೇಶಕ ವಿ.ಶಿವಕುಮಾರ್ ನೀಡಿದ ದೂರಿನ ಮೇಲೆ ಮಾಸ್ತಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ನಲ್ಲೂ ಈ ಅಂಶ ಇದೆ.

ವಸತಿ ನಿಲಯದಲ್ಲಿ 6ರಿಂದ 10ನೇ ತರಗತಿಯ ಸುಮಾರು 240 ಮಕ್ಕಳು ಇದ್ದಾರೆ. ಬಹುತೇಕ ಮಕ್ಕಳಿಂದ ಹಣ ಸಂಗ್ರಹಿಸಲಾಗಿದೆ. ಕೆಲವರು ಹಣ ನೀಡಿಲ್ಲ. ಈಗಾಗಲೇ ದೇವಸ್ಥಾನ ಹಾಗೂ ಪೋಷಕರು ತಂಗಲು ಶೆಡ್ ನಿರ್ಮಿಸಲಾಗಿದೆ.

‘ದೇಗುಲ ನಿರ್ಮಾಣಕ್ಕೆ ಹಣ ನೀಡುವಂತೆ ಪ್ರಾರ್ಥನೆ ವೇಳೆ ಮಕ್ಕಳಿಗೆ ಸೂಚಿಸಿದ್ದಾರೆ. ಆ ಸೂಚನೆಯಂತೆ ಶಿಕ್ಷಕರು ಹಣ ವಸೂಲಿ ಮಾಡಿದ್ದರು. ದೇಗುಲ ನಿರ್ಮಿಸಿದ್ದು, ಆದರೆ, ಒಳಗೆ ದೇವರ ಮೂರ್ತಿಯನ್ನು ಇಟ್ಟಿಲ್ಲ. ಬಾಕಿ ಹಣ ಶಿಕ್ಷಕರೊಬ್ಬರ ಬಳಿ ಇದೆ’ ಎಂದು ಹೆಸರು ಹೇಳಲು ಇಚ್ಛಿಸದ ಶಿಕ್ಷಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ದೇಗುಲ ಹಾಗೂ ಪೋಷಕರು ತಂಗುವ ಶೆಡ್ ನಿರ್ಮಾಣಕ್ಕೆ ಹಣ ನೀಡಿರುವುದಾಗಿ ಪೋಷಕರೊಬ್ಬರು ಹೇಳಿಕೊಂಡಿರುವ ವಿಡಿಯೊ ಕೂಡ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಮಕ್ಕಳಿಂದ ಮಲ ಗುಂಡಿ ಸ್ವಚ್ಛಗೊಳಿಸಿರುವ ಕೃತ್ಯದ ಸಂಬಂಧ ಈಗಾಗಲೇ ಪ್ರಾಂಶುಪಾಲೆ ಭಾರತಮ್ಮ, ಪ್ರಭಾರ ವಾರ್ಡನ್ ಮಂಜುನಾಥ್, ಅತಿಥಿ ಶಿಕ್ಷಕ ಅಭಿಷೇಕ್, ಸಹ ಶಿಕ್ಷಕ ಮುನಿಯಪ್ಪ, ಸ್ವಚ್ಛತಾ ಸಿಬ್ಬಂದಿ ಕಲಾವತಿ ವಿರುದ್ಧ ದೌರ್ಜನ್ಯ ಪ್ರಕರಣ ದಾಖಲಾಗಿದೆ.

ಅನುಮತಿ ಇಲ್ಲದೇ ಮಕ್ಕಳ ವಿಡಿಯೋ ತೆಗೆದು ಹಂಚಿಕೊಂಡಿರುವುದಕ್ಕೆ ಮುನಿಯಪ್ಪ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ. ಭಾರತಮ್ಮ ಹಾಗೂ ಮುನಿಯಪ್ಪ ಅವರನ್ನು ಬಂಧಿಸಿದ್ದು, ಇನ್ನುಳಿದವರು ತಲೆಮರೆಸಿಕೊಂಡಿದ್ದಾರೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ ಆವರಣದಲ್ಲಿರುವ ದೇವಸ್ಥಾನ

ಸಮಸ್ಯೆ ಆಲಿಸದ ಸಚಿವ: ಮಕ್ಕಳ ಆಕ್ರೋಶ

ವಸತಿ ಶಾಲೆಗೆ ಭೇಟಿ ನೀಡಿದ್ದ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ತಮ್ಮ ಮನವಿ ಆಲಿಸದಿರುವುದನ್ನು ಖಂಡಿಸಿ ಮಕ್ಕಳು ಪ್ರತಿಭಟನೆ ನಡೆಸಿದರು. ಚಿತ್ರಕಲಾ ಸಹ ಶಿಕ್ಷಕ ಮುನಿಯಪ್ಪ ಅವರನ್ನು ಬಂಧಿಸಿರುವುದನ್ನೂ ವಿದ್ಯಾರ್ಥಿಗಳು ಖಂಡಿಸಿದ್ದಾರೆ.

ಸಚಿವರನ್ನು ಶಾಲೆಯ ಆವರಣದಿಂದ ಹೊರಗೆ ಹೋಗಲು ಬಿಡುವುದಿಲ್ಲ ಎಂದು ವಿದ್ಯಾರ್ಥಿಗಳು ಮುಖ್ಯ ಗೇಟ್ ಹಾಕಿ ಘೋಷಣೆ ಕೂಗಿದರು.

ಅಧಿಕಾರಿಗಳು ಬಂದು ಮನವೊಲಿಸಿ ಗೇಟ್ ತೆಗೆಸಿದರು. ಇದಾದ ಬಳಿಕ ಸಚಿವರು ಮಕ್ಕಳನ್ನು ಮಾತನಾಡಿಸಿ ಸಮಸ್ಯೆ ಆಲಿಸಿದರು.

pnb Housing Finance Limited
Ghar Ki Baat

30* ವರ್ಷಗಳ ಸಾಲದ ಅವಧಿ | 90%* ವರೆಗೆ ಸಾಲ | 8.50%* ನಿಂದ ಪ್ರಾರಂಭವಾಗುವ ಗೃಹ ಸಾಲ

ಈ ಸಂಖ್ಯೆಗೆ ಒಂದು ಮಿಸ್ಡ್ ಕಾಲ್ ನೀಡಿ: 81427 81427
Scan to apply

*Maximum tenure and loan to value | Terms and conditions apply | All loans are at the discretion of the company
For further details, refer our website www.pnbhousing.com | CIN: L65922DL1988PLC033856

ಬೆಂಗಳೂರು ವಿ.ವಿ ಸೈನ್ಸ್ ಫೋರಂ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ಸೈನ್ಸ್ ಫೋರಂ' ಅಸ್ತಿತ್ವಕ್ಕೆ ಬಂದಿದ್ದು, ವಿಜ್ಞಾನ ಕ್ಷೇತ್ರದ ಎಲ್ಲಾ ಕಲಿಕೆ, ಸಂಶೋಧನೆ, ಅನ್ವೇಷಣೆಗಳು ಇನ್ನು ಮುಂದೆ ಒಂದೇ ಸೂರಿನಡಿ ನಡೆಯಲಿವೆ.

ಬೆಂಗಳೂರು ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಆವರಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ 'ಸೈನ್ಸ್ ಫೋರಂ'ನ ಲೋಗೊ ಅನಾವರಣ ಮಾಡಿದ ಕುಲಪತಿ ಡಾ.ಜಯಕರ ಎಸ್.ಎಂ, ವಿಜ್ಞಾನದ ಎಲ್ಲಾ ವಿಭಾಗಗಳನ್ನು ಒಟ್ಟುಗೂಡಿಸಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯದ ಸಂಶೋಧನೆ, ಅನ್ವೇಷಣೆಗಾಗಿ ಸೂಕ್ತ ಮಾರ್ಗದರ್ಶನ ಮಾಡುವುದು ಈ ವೇದಿಕೆಯ ಉದ್ದೇಶ ಎಂದು ಹೇಳಿದರು.

ಶ್ರೇಷ್ಠ ವಿಜ್ಞಾನಿಗಳಿಂದ ಉಪನ್ಯಾಸ ಮಾಲಿಕೆ ಆಯೋಜನೆ, ಅಂತರ ರಾಷ್ಟ್ರೀಯ ವಿಜ್ಞಾನ ಸಂಸ್ಥೆಗಳೊಂದಿಗೆ ಒಪ್ಪಂದ, ಉದ್ಯಮಶೀಲತೆ ಸಹಭಾಗಿತ್ವ ಒದಗಿಸುವ ಗುರಿಯನ್ನೂ ವೇದಿಕೆ ಹೊಂದಿದೆ ಎಂದು ಡಾ.ಜಯಕರ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎಚ್.ಎ.ರಂಗನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಶೇಕ್ ಲತೀಫ್, ಪರೀಕ್ಷಾಂಗ ಕುಲಸಚಿವ ಶ್ರೀನಿವಾಸ್, ವಿಜ್ಞಾನ ವಿಭಾಗದ ಡೀನ್ ಅಶೋಕ್ ಹಂಜಗಿ ಉಪಸ್ಥಿತರಿದ್ದರು.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. 40/2023 ದಿನಾಂಕ: 13.12.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ	ಸಂಕ್ಷಿಪ್ತ ವಿವರಣೆ
1	ಮಲ್ಟಿ ಸೆಕ್ಷನ್ ಡಿಜಿಟಲ್ ಆಕ್ಸಲ್ ಕೌಂಟರ್ (MSDAC) ಪೂರೈಕೆ, ವಿನ್ಯಾಸ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ. (ಟೆಂಡರ್ ಸಂಖ್ಯೆ L8236706) (ಪ್ರಮಾಣ: 02 ಸೆಟ್)
2	3-ಫೇಜ್ ಅಸಿಂಕ್ರೋನಸ್ ಟ್ರಾಕ್ಷನ್ ಮೋಟಾರ್ (ಟೆಂಡರ್ ಸಂಖ್ಯೆ L8236742) (ಪ್ರಮಾಣ: 14 ಸಂಖ್ಯೆಗಳು)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08-01-2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು ಬೆಂಗಳೂರು

PUB/565/AAV/PRB/SWR/2023-24

South Western Railway-SWR SWRRLY SWRRLY

ಆಸ್ತಿ ತೆರಿಗೆ ಪಾವತಿಸದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳ ಕ್ರಮ

836 ವಾಣಿಜ್ಯ ಕಟ್ಟಡಗಳಿಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಪಾವತಿ ಮಾಡದ 836 ವಾಣಿಜ್ಯ ಕಟ್ಟಡಗಳಿಗೆ ಬಿಬಿಎಂಪಿ ಸಿಬ್ಬಂದಿ ಬೀಗ ಹಾಕಿದ್ದಾರೆ.

ಪಶ್ಚಿಮ ವಲಯದಲ್ಲಿ ಅತಿ ಹೆಚ್ಚು ವಾಣಿಜ್ಯ ಮಳಿಗೆಗಳಿಗೆ ಬೀಗ ಹಾಕಿದ್ದು, ಪೂರ್ವ ವಲಯದಲ್ಲಿ ಅತಿ ಕಡಿಮೆ ಸಂಖ್ಯೆ ಇದೆ. ವಾಣಿಜ್ಯ ಕಟ್ಟಡಗಳು ಹೆಚ್ಚಿನ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದು, ಡಿಮ್ಯಾಂಡ್ ನೋಟಿಸ್ ನೀಡಿದ 30 ದಿನಗಳ ನಂತರವೂ ಪಾವತಿಸದಿರುವುದರಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಸ್ತಿ ಸಂಗ್ರಹದಲ್ಲಿ ಶೇ 10ರಷ್ಟು ಹೆಚ್ಚಳವಾಗಿದ್ದು, ನ.1ರಿಂದ 1.74 ಲಕ್ಷ ಆಸ್ತಿಗಳ ತೆರಿಗೆಯನ್ನು ಪುನರ್‌ವಿಮರ್ಶಿಸಲಾಗಿದೆ. ಈ ಪುನರ್‌ವಿಮರ್ಶೆಯಿಂದಲೇ ಸುಮಾರು ₹400 ಕೋಟಿ ಹೆಚ್ಚು ಆಸ್ತಿ ತೆರಿಗೆ ಸಂಗ್ರಹಿಸುವ ನಿರೀಕ್ಷೆ ಹೊಂದಲಾಗಿದೆ.

ಆಸ್ತಿ ವಿಸ್ತೀರ್ಣದ ತಪ್ಪು ಮಾಹಿತಿ, ವಲಯ ಬದಲು ಇತ್ಯಾದಿ ಲೋಪವಿರುವ ಆಸ್ತಿಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. ನ.1ರಿಂದ 12 ಸಾವಿರ ಆಸ್ತಿಗಳಿಗೆ ನೋಟಿಸ್ ನೀಡಿ, 23 ಸಾವಿರಕ್ಕೂ ಹೆಚ್ಚಿನ ಆಸ್ತಿಗಳಿಗೆ ಡಿಮ್ಯಾಂಡ್ ನೋಟಿಸ್ ಜಾರಿ ಮಾಡಲಾಗಿದೆ. 233 'ಎ' ಖಾತಾ ಹಾಗೂ 483 'ಬಿ' ಖಾತಾ ಆಸ್ತಿಗಳು ಹೊಸದಾಗಿ ಆಸ್ತಿ ತೆರಿಗೆ ವ್ಯಾಪ್ತಿ ಬಂದಿವೆ.

'ವಾಣಿಜ್ಯ ಕಟ್ಟಡಗಳ ಆಸ್ತಿ ತೆರಿಗೆ ಬಾಕಿಗೆ ಸಂಬಂಧಿಸಿದಂತೆ ಸದ್ಯಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ವಸತಿ ಕಟ್ಟಡಗಳ ಆಸ್ತಿ ತೆರಿಗೆ ಬಾಕಿ ಇದ್ದರೂ ಶೋಕಾಸ್ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗುತ್ತದೆ. ಚರಾಸ್ತಿ (ವಾಹನಗಳು) ಹಾಗೂ ಬ್ಯಾಂಕ್ ಖಾತೆ ಮುಟ್ಟುಗೋಲು ಹಾಕಿಕೊಳ್ಳುವ ಯೋಜನೆಯೂ ಇದೆ. ಈ ಆರ್ಥಿಕ ವರ್ಷದಲ್ಲಿ ಗುರಿ ಹೊಂದಿರುವ ಆಸ್ತಿ ತೆರಿಗೆ ಸಂಗ್ರಹದ ಜೊತೆಗೆ, ಪುನರ್ ವಿಮರ್ಶೆ ಪೂರ್ಣಗೊಳಿಸಿ ಹೆಚ್ಚಿನ ತೆರಿಗೆ ಸಂಗ್ರಹಿಸಲು ಯೋಜಿಸಲಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಸರ್ಕಾರಿ ಹಾಗೂ ಸಾರ್ವಜನಿಕ ವಲಯದ ಕಟ್ಟಡಗಳಿಂದಲೂ ಆಸ್ತಿ ತೆರಿಗೆ ಬಾಕಿ ಬರಬೇಕಿದೆ. ಇದನ್ನು ಪರಿಶೀಲಿಸಲಾಗುತ್ತಿದ್ದು, ಆ ತೆರಿಗೆಯನ್ನೂ ಸಂಗ್ರಹಿಸಲಾಗುತ್ತದೆ' ಎಂದರು.

'ಹೊಸದೇನೂ ಇಲ್ಲ'

'ಆಸ್ತಿ ತೆರಿಗೆ ಸಂಗ್ರಹಕ್ಕೆ ಹೊಸದಾದ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಬಿಬಿಎಂಪಿ ಕಾಯ್ದೆಯಲ್ಲಿರುವ ಅಧ್ಯಾಯಗಳನ್ನೇ ಅನುಷ್ಠಾನಗೊಳಿಸಲಾಗುತ್ತಿದೆ. ಮೊದಲು ನೋಟಿಸ್, ಡಿಮ್ಯಾಂಡ್ ನೋಟಿಸ್, ನಂತರ ವಾಣಿಜ್ಯ ಕಟ್ಟಡಗಳಿಗೆ ಬೀಗ, ಬ್ಯಾಂಕ್ ಖಾತೆ ವಶಕ್ಕೆ, ಚರಾಸ್ತಿ, ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ವರ್ಷದ ಆಸ್ತಿ ತೆರಿಗೆ ಬಾಕಿ ಇದ್ದರೂ ಕ್ರಮ ಕೈಗೊಳ್ಳಲಾಗುತ್ತದೆ. ನಾಗರಿಕರು ಜವಾಬ್ದಾರಿ ಯುತವಾಗಿ ಆಸ್ತಿ ತೆರಿಗೆ ಪಾವತಿಸಿ ನಗರ ಅಭಿವೃದ್ಧಿಗೆ ಸಹಕರಿಸಬೇಕು' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಆಸ್ತಿ ತೆರಿಗೆ ಪುನರ್‌ವಿಮರ್ಶೆ (ನ.1ರಿಂದ): 12,861 ಒಟ್ಟು ಶೋಕಾಸ್ ನೋಟಿಸ್ | 23,868 ಒಟ್ಟು ಡಿಮ್ಯಾಂಡ್ ನೋಟಿಸ್ | ₹400.8 ಕೋಟಿ ಡಿಮ್ಯಾಂಡ್ ನೋಟಿಸ್‌ನಂತೆ ಸಂಗ್ರಹಿಸಬೇಕಾದ ಮೊತ್ತ

ವಲಯ	ಒಟ್ಟು ಆಸ್ತಿಗಳು	ಶೋಕಾಸ್ ನೋಟಿಸ್ (ನ.1ರಿಂದ)	ಶೋಕಾಸ್ ನೋಟಿಸ್ ಮೊತ್ತ (ಕೋಟಿಗಳಲ್ಲಿ)	ಡಿಮ್ಯಾಂಡ್ ನೋಟಿಸ್	ಪುನರ್ ವಿಮರ್ಶೆಯಂತೆ ಸಂಗ್ರಹ ನಿರೀಕ್ಷೆ	ಪುನರ್ ವಿಮರ್ಶೆಯಂತೆ ಸಂಗ್ರಹ	ಆಸ್ತಿಗಳಿಗೆ ಬೀಗ
ಬೊಮ್ಮನಹಳ್ಳಿ	3,05,998	1,882	₹9.21	6,790	₹36.72 ಕೋಟಿ	₹1.82 ಕೋಟಿ	142
ದಾಸರಹಳ್ಳಿ	82,911	395	₹6.48	753	₹15.01 ಕೋಟಿ	₹60.14 ಲಕ್ಷ	44
ಪೂರ್ವ	3,09,231	1,585	₹13.69	2,035	₹37.74 ಕೋಟಿ	₹1.34 ಕೋಟಿ	35
ಮಹದೇವಪುರ	4,00,683	2,273	₹28.84	4,040	₹44.60 ಕೋಟಿ	₹3.82 ಕೋಟಿ	72
ಆರ್.ಆರ್. ನಗರ	2,56,683	1,786	₹18.17	1,080	₹23.03 ಕೋಟಿ	₹1.24 ಕೋಟಿ	130
ದಕ್ಷಿಣ	2,60,291	1,648	₹7.20	2,185	₹33.31 ಕೋಟಿ	₹1.26 ಕೋಟಿ	148
ಪಶ್ಚಿಮ	2,20,172	2,453	₹22.63	5,431	₹202.45 ಕೋಟಿ	₹1.79 ಕೋಟಿ	193
ಯಲಹಂಕ	1,86,394	839	₹27.02	1,554	₹6.93 ಕೋಟಿ	₹1.54 ಕೋಟಿ	72

ಆಸ್ತಿ ತೆರಿಗೆ ಸಂಗ್ರಹ

₹4558 ಕೋಟಿ — 2023–24ನೇ ಸಾಲಿನ ಗುರಿ

₹3,158 ಕೋಟಿ — 2023ರ ಡಿ.18ರಂತೆ ಸಂಗ್ರಹ

₹2,699 ಕೋಟಿ — 2022ರ ಡಿಸೆಂಬರ್ ಅಂತ್ಯಕ್ಕೆ ಸಂಗ್ರಹ

ಆಸ್ತಿ ತೆರಿಗೆ ಸಂಗ್ರಹ (ಡಿ.18ರಂತೆ)

ವಲಯ	ಗುರಿ (ಕೋಟಿಗಳಲ್ಲಿ)	ಸಂಗ್ರಹ (ಕೋಟಿಗಳಲ್ಲಿ)	ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚಳ (ಶೇಕಡ)
ಮಹದೇವಪುರ	₹1238.00	₹867.85	25.71
ಪೂರ್ವ	₹764.00	₹559.51	11.25
ದಕ್ಷಿಣ	₹624.21	₹456.17	10.43
ಬೊಮ್ಮನಹಳ್ಳಿ	₹501.58	₹340.40	17.39
ಪಶ್ಚಿಮ	₹493.01	₹340.00	15.74
ಯಲಹಂಕ	₹428.71	₹285.08	15.95
ಆರ್.ಆರ್. ನಗರ	₹345.01	₹217.52	17.45
ದಾಸರಹಳ್ಳಿ	₹164.00	₹91.32	16.59

ಡಾ.ಪ್ರಸಾದ್ ಆಯ್ಕೆ

ಬೆಂಗಳೂರು: ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷರಾಗಿ ಡಾ.ಎಂ.ಆರ್.ವಿ. ಪ್ರಸಾದ್ ಆಯ್ಕೆಯಾಗಿದ್ದಾರೆ. ಬೆಂಗಳೂರು ಗಾಯನ ಸಮಾಜದಲ್ಲಿ ಭಾನುವಾರ ನಡೆದ 118ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಟಿ. ಅಚ್ಯುತ ರಾವ್ ಪದಕಿ (ಉಪಾಧ್ಯಕ್ಷ), ಕೆ. ನಾಗರಾಜ್ (ಕಾರ್ಯದರ್ಶಿ), ಪಿ.ಶ್ರೀನಿವಾಸಮೂರ್ತಿ (ಜಂಟಿ ಕಾರ್ಯಾಧ್ಯಕ್ಷ), ಜಿ.ಕೆ. ವೇಣು (ಖಜಾಂಚಿ), ಹನುಮಂತ ರಾವ್ (ಆಂತರಿಕ ಲೆಕ್ಕ ಪರಿಶೋಧಕ), ಎಸ್.ಎಸ್. ಪ್ರಸಾದ್, ಆನೂರು ಅನಂತ ಕೃಷ್ಣ ಶರ್ಮ, ಕೌಶಲ್ಯ ಮೂರ್ತಿ, ಜ್ಯೋತಿ ಪುತ್ತೂರಾಯ, ಶ್ರೀಪ್ರಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಜಾತಿ ಗಣತಿಯಿಂದ ಬದಲಾವಣೆಯಾಗಲ್ಲ'

ರಾಮನಗರ: 'ಜಾತಿಗಣತಿ ನಡೆಸಿ ವರದಿಯನ್ನು ಅನುಷ್ಠಾನಕ್ಕೆ ತಂದ ಮಾತ್ರಕ್ಕೆ ಕೆಳಗಿನವರು (ತಳ ಸಮುದಾಯದವರು) ಮೇಲಕ್ಕೆ ಹೋಗುತ್ತಾರೆ, ಮೇಲಿನವರು (ಮೇಲ್ಜಾತಿಗಳು) ಕೆಳಕ್ಕೆ ಬರುತ್ತಾರೆ ಎಂಬುದು ತಪ್ಪು ಅಭಿಪ್ರಾಯ. ಜನಸಂಖ್ಯೆಗೆ ಅನುಗುಣವಾಗಿ ಸಮುದಾಯಗಳಿಗೆ ಸರ್ಕಾರಿ ಸೌಲಭ್ಯಗಳನ್ನು ನೀಡುವುದಕ್ಕೆ ವರದಿ ಸಹಕಾರಿಯಾಗಲಿದೆ' ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು. ನಗರದಲ್ಲಿ ಸೋಮವಾರ ಈ ಕುರಿತು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ಜಾತಿ ಗಣತಿ ಆಗಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಆದರೆ, ಅದನ್ನು ವೈಜ್ಞಾನಿಕವಾಗಿ ಮತ್ತು ನಿಖರವಾಗಿ ಮಾಡಬೇಕು. ಎಂದರು.

ಸುದ್ದಿ 2 ನಿಮಿಷ

2 ವರ್ಷದ ಒಳಗೆ ಎತ್ತಿನಹೊಳೆ ಯೋಜನೆ ಪೂರ್ಣ: ಪರಮೇಶ್ವರ

ಬೆಂಗಳೂರು: 'ಎತ್ತಿನ ಹೊಳೆ ಯೋಜನೆಗೆ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಬಿಜೆಪಿ ಸರ್ಕಾರ ಅನುದಾನ ನೀಡಿಲ್ಲ. ಹೀಗಾಗಿ ಯೋಜನೆ ಸ್ಥಗಿತಗೊಂಡಿತ್ತು. ನಮ್ಮ ಸರ್ಕಾರ ಯೋಜನೆಯ ಕೆಲಸವನ್ನು ಮತ್ತೆ ಆರಂಭಿಸಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸದಾಶಿವನಗರದಲ್ಲಿರುವ ತಮ್ಮ ನಿವಾಸದಲ್ಲಿ ಎತ್ತಿನಹೊಳೆ ಯೋಜನೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಎರಡು ವರ್ಷದ ಒಳಗೆ ಯೋಜನೆಯನ್ನು ಪೂರ್ಣಗೊಳಿಸಲಾಗುವುದು' ಎಂದರು.

'ಎತ್ತಿನಹೊಳೆ ಯೋಜನೆಗೆ ಆರಂಭದಲ್ಲಿ ₹13,500 ಸಾವಿರ ಕೋಟಿ ವೆಚ್ಚ ಅಂದಾಜಿಸಲಾಗಿತ್ತು. ಅಂದಾಜು ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಪ್ರಸ್ತುತ ₹ 22 ಸಾವಿರ ಕೋಟಿ ಅಂದಾಜಿಸಲಾಗಿದೆ. ಈ ಹಿಂದಿನ ಅವಧಿಯಲ್ಲಿ ಬಿಜೆಪಿ ಸರ್ಕಾರ ಅನುದಾನ ನೀಡಿಲ್ಲ. ಇದೇ ಕಾರಣದಿಂದ ಕಾಮಗಾರಿ ಸ್ಥಗಿತಗೊಂಡಿತ್ತು' ಎಂದರು.

'ಈಗ ನಮ್ಮ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ಯೋಜನೆಯಲ್ಲಿ ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲಾಗುವುದು. ನೀರು ಸಂಗ್ರಹಿಸುವ ಟ್ಯಾಂಕ್ ನಿರ್ಮಿಸಲು ಕೊರಟಗೆರೆ ರೈತರು ನೀಡಿರುವ ಭೂಮಿಗೆ ಎಕರೆಗೆ ₹ 8 ಲಕ್ಷ ಹಾಗೂ ದೊಡ್ಡಬಳ್ಳಾಪುರದಲ್ಲಿ ಭೂಮಿಗೆ ಎಕರೆಗೆ ₹ 32 ಲಕ್ಷ ಪರಿಹಾರ ನಿಗದಿಪಡಿಸಲಾಗಿದೆ. ಎಲ್ಲ ರೈತರಿಗೂ ಸಮಾನ ಪರಿಹಾರ ಕಲ್ಪಿಸುವಂತೆ ಒತ್ತಾಯಿಸಲಾಗಿದೆ' ಎಂದರು.

ವಂಡರ್ ಲಾದಲ್ಲಿ ಕ್ರಿಸ್‌ಮಸ್‌ಗೆ ಸಿದ್ಧತೆ

ಬೆಂಗಳೂರು: ವಂಡರ್ ಲಾ ಪಾರ್ಕ್‌ನಲ್ಲಿ ಡಿ.23ರಿಂದ ಜ. 1ರ ವರೆಗೆ ಕ್ರಿಸ್‌ಮಸ್ ಆಚರಣೆ ನಡೆಯಲಿದೆ. ಈ ವೇಳೆ ಪಾರ್ಕ್‌ಗೆ ಭೇಟಿ ನೀಡುವ ಅತಿಥಿಗಳಿಗೆ ವಿಶೇಷ ಆಟೋಟಗಳನ್ನು ಹಮ್ಮಿಕೊಳ್ಳಲಾಗಿದೆ. ಲೈವ್ ಶೋಗಳು, ಫನ್ ಗೇಮ್ಸ್, ಫುಡ್ ಫೆಸ್ಟ್ ಕೂಡ ಆಯೋಜಿಸಲಾಗಿದೆ. ಸಂಜೆ 6ರಿಂದ ರಾತ್ರಿ 8.30ರ ವರೆಗೆ ಈ ಕಾರ್ಯಕ್ರಮಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 80372 30333 ಅಥವಾ 80350 73966 ಸಂಪರ್ಕಿಸಬಹುದು.

ತೆಲುಗು ಸಮಾವೇಶ 23ರಿಂದ

ಬೆಂಗಳೂರು: ತೆಲುಗು ವಿಜ್ಞಾನ ಸಮಿತಿ ಮತ್ತು ರಾಷ್ಟ್ರೇತರ ತೆಲುಗು ಒಕ್ಕೂಟ ಸಹಯೋಗದಲ್ಲಿ ಇದೇ 23 ಮತ್ತು 24ರಂದು ಅಖಿಲ ಭಾರತ ತೆಲುಗು ಸಂಘ ಸಂಸ್ಥೆಗಳ ಸಮಾವೇಶ ನಡೆಯಲಿದೆ ಎಂದು ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣ ರಾಜು ತಿಳಿಸಿದ್ದಾರೆ.

ಮಲ್ಲೇಶ್ವರದ ವೈಯಾಲಿ ಕಾವಲ್ ನಲ್ಲಿರುವ ಚೌಡಯ್ಯ ಮೆಮೊರಿಯಲ್ ಹಾಲ್ ಹಿಂಭಾಗದಲ್ಲಿರುವ ಶ್ರೀಕೃಷ್ಣದೇವರಾಯ ಕಲಾಮಂದಿರದಲ್ಲಿ ಸಮಾವೇಶ ಆಯೋಜಿಸಲಾಗಿದೆ. 23ರ ಬೆಳಿಗ್ಗೆ 9 ಗಂಟೆಗೆ ಸಮಾವೇಶ ಆರಂಭವಾಗಲಿದೆ. ಮಾಜಿ ಉಪ ರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಉದ್ಘಾಟಿಸಲಿದ್ದಾರೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪಾಲ್ಗೊಳ್ಳಲಿದ್ದಾರೆ.

ತೆಲುಗು ಭಾಷೆ, ಸಂಸ್ಕೃತಿ, ಸಾಹಿತ್ಯದ ಬಗ್ಗೆ ಗೋಷ್ಠಿಗಳು ನಡೆಯಲಿವೆ. ದೇಶದ ವಿವಿಧ ಭಾಗಗಳಿಂದ ಆಗಮಿಸುವ ಕಲಾವಿದರಿಂದ ಕಲಾ ಪ್ರದರ್ಶನ, ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು ನಡೆಯಲಿದ್ದು, 22 ಸಂಘ ಸಂಸ್ಥೆಗಳ 300 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ' ಎಂದು ಸಮಿತಿ ಅಧ್ಯಕ್ಷ ಎ. ರಾಧಾಕೃಷ್ಣ ರಾಜು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

PUBLIC NOTICE

IN THE SUPREME COURT OF INDIA
EXTRA-ORDINARY APPELLATE JURISDICTION
SPECIAL LEAVE PETITION (CIVIL) No. 3346 OF 2020 WITH PRAYER FOR INTERIM RELIEF

V. GIRIJA ...Petitioner(s)/Appellant(s)
VERSUS
STATE BANK OF INDIA AND OTHERS ...Respondent(s)

1) SHIVARAMA NAIDU S/o SRI RAMA NAIDU, R/A NO. 30, 4TH CROSS, 14TH MAIN ROAD, HANUMANTHANAGARA, BENGALURU, KARNATAKA-560019	PID: 239902/2023 FOR R[2] IN SLP(C) NO.3346/2020 (SEC IV-A)
2) M/S USHODAYA TRANSPORT REP. BY ITS PARTNER SRI D.V.RAMANA, NO.55, 8TH F-MAIN ROAD, 3RD BLOCK, JAYANAGAR, BENGALURU - 560011	PID: 239903/2023 FOR R[3] IN SLP(C) NO.3346/2020 (SEC IV-A)
3) D.V.RAMANA S/o D.GANAPATHI RAO, PARTNER, M/S USHODAYA TRANSPORT, NO.2620, 8TH A MAIN ROAD, 15TH CROSS, BANASHANKAR1 SECOND STAGE, BENGALURU, KARNATAKA-560070	PID: 239904/2023 FOR R[4] IN SLP(C) NO.3346/2020 (SEC IV-A)
4) G.SHYAMALA W/O SRI.G. RADHAKRISHNA, NO. 275/A, 11TH MAIN, 5TH BLOCK, JAYANAGAR, BENGALURU, KARNATAKA – 560011	PID: 239905/2023 FOR R[6] IN SLP(C) NO.3346/2020 (SEC IV.A)
5) V. VENKATAPATHI, NO. 62/25, 8TH F MAIN ROAD, 3RD BLOCK, JAYANAGAR, BENGALURU, KARNATAKA – 560011	PID: 239906/2023 FOR R[9] IN SLP(C) NO.3346/2020 (SEC IV-A)

WHEREAS the Petition for Special Leave to Appeal with prayer for interim relief along with application for CONDONATION OF DELAY IN FILING, **CONDONATION OF DELAY IN REFILING / CURING THE DEFECTS, EXEMPTION FROM FILING AFFIDAVIT, APPLICATION FOR PERMISSION** above mentioned (copy enclosed) filed in the Registry by **Mr. T. R. B. SIVAKUMAR,** Advocate on behalf of the Petitioner(s) above named was listed for hearing before this Court on **24th January, 2020,** when the Court was pleased to pass the following order:-

"Delay condoned. Issue notice, on the condition that the petitioner shall deposit an amount of Rs.45,00,000/- (Rupees Forty five lakh only) in this Registry, within a period of eight weeks from today."

AND WHEREAS, the matter above-mentioned was listed before **Hon'ble Court (In Chambers) on 24th November, 2023,** When the following order was passed:-

"I.A.No.185382 of 2023

By way of this application, the petitioner in the Special Leave Petition seeks permission to effect substituted service of notice upon unserved Respondent Nos.2-6 and 9. Respondent Nos.2, 3, 4, 6 and 9 are stated to be residents of Bengaluru City in Karnataka.

Substituted service is sought to be effected upon them by way of publication of the notice in `Prajavani' Kannada Newspaper and 'Deccan Herald' English Newspaper. In so far as Respondent No.5 is concerned, he is stated to be residing at Hyderabad in the State of Telangana. Substituted service of notice may be effected upon him by publication of the notice in 'The Indian Express' English Newspaper and 'Andhra Jyoti' Telugu Newspaper. Permission is granted to do so. Proof of such publication shall be filed within four weeks. List thereafter."

NOW THEREFORE, TAKE NOTICE that the above petition with prayer for interim relief will be posted for hearing before this Court in due course and you may enter appearance before this Court either in person or through an advocate on record of this Court duly appointed by you in that behalf within 30 days from the date of service of notice. You may thereafter show cause to the Court on the day that may subsequently be specified as to why Special Leave Petition and interim relief as prayed be not granted and the resultant appeal be not allowed.

Take Further Notice that the prayer for interim relief after notice will also be listed before the Court in due course. You may file your affidavit in opposition to the petition as provided under Rule 14(1) of Order XXI, S.C.R.2013 within 30 days from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Copy to :
1) Mr. T. R. B. Sivakumar (adv.) 31, Lawyers Chamber, Supreme Court Compound, New Delhi ? 110001 New Delhi, Delhi
2) Mr. Sanjay Kapur (adv.)c-52, 2nd Floor, Neeti Bagh, Khel Gaon Road, New Delhi - 110049 New Delhi , Delhi

Dated :28th November, 2023 ASSISTANT REGISTRAR

CONNECT

ವೆಡ್ಡಿಂಗ್ ಸೀಸನ್ ಸ್ಪೆಷಲ್
ಸಾಂಪ್ರದಾಯಿಕ & ಜೀವನಶೈಲಿ ಆಧಾರಿತ
ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ಪ್ರದರ್ಶನ ಮತ್ತು ಮಾರಾಟ
ಭಾರತದ 100+ ನುರಿತ ನೇಕಾರರು ಮತ್ತು ಅತ್ಯುತ್ತಮ ವಿನ್ಯಾಸಕಾರರು
16 ರಿಂದ 25 Dec.
ಸಮಯ: ಬೆಳಿಗ್ಗೆ 11 ರಿಂದ ರಾತ್ರಿ 9 ರವರೆಗೆ
ಸ್ಥಳ: ಶಿಲ್ಪ ಕಲಾ ಮಂಟಪ
9ನೇ ಅಡ್ಡ ರಸ್ತೆ, ಜೆಪಿ ನಗರ, 3ನೇ ಹಂತ ಬನ್ನೇರುಘಟ್ಟ ಮುಖ್ಯರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆ ಸಮೀಪ, ಬೆಂಗಳೂರು
ದೇಶದಾದ್ಯಂತ ಕೈಮಗ್ಗ ರೇಷ್ಮೆ ಸೀರೆಗಳು ಮತ್ತು ಕಾಟನ್ ಸೀರೆಗಳು, ಆಕರ್ಷಕ ವಿನ್ಯಾಸ, ಸಾಂಪ್ರದಾಯಕ, ಪಾಶ್ಚಿಮಾತ್ಯ ಉಡುಪುಗಳು, ಫ್ಯಾಷನ್ ಜ್ಯುವೆಲ್ಲರಿ, ಹೋಮ್ ಲಿನೆನ್ ಮತ್ತು ಇನ್ನೂ ಅನೇಕ ಉತ್ಪನ್ನಗಳು ಲಭ್ಯ.
UP TO 40% Discount by Weavers
M: 9441987009 | ALL DEBIT & CREDIT CARDS ACCEPTED | ENTRY FREE

BUSINESS

Business Offers

Finance

WANTED BUSINESS Partners Saree Business 12 Lakhs Investment Monthly Income 2 Lakhs Contact: 8892501007/ 9606701007

EDUCATIONAL

Training

NURSERY TEACHERS TRAINING Course at JNANABHARATHI,with in Class Training 6 Months/1 year (offline/online),100% Job Assurance. Call:6363032729

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PERSONAL

Change of Name

I G Kanchana W/o R Natesan R/o No 168, 7th Cross, Jai Jawan Nagar Subbanapalya, M. S. Magar Post, Bangalore -560033 have changed my name to N Kanchana for all purposes Affidavit No IN-KA72981313602655VDATE D 18/12/2023 at Bangalore

CHANGE OF NAME
I, H N LAKSHMI NARASIMHA SWAMY S/o. Late. Narasimha Murthy R/a #190, Sathkruthi, 4th Main, BSK 5th Stage, Uttarahalli, Bengaluru-560061 declare that H N LAKSHMI NARASIMHA SWAMY and LAKSHMI NARASIMHA SWAMY above both Names are one and the same person and referred to me only. Henceforth, I will be Known as H N LAKSHMI NARASIMHA SWAMY only. Vide affidavit dated: 18.12.2023 bfore Notary S. R. Thulasikrishna, Bengaluru.

CHANGE OF NAME
I, JAGADEESHA MUNISWAMAPPA, R/at # 2637, Jagadeeswari Nilaya, Near Canara Bank, Dodda Begur, Begur, Bengaluru-560068 have changed my name to JAGADEESH MUNISHAMAPPA # 2637, Jagadeeshwari Nilaya, Near Canara Bank, Dodda Begur, Begur, Bengaluru-560068 vide affidavit dt:18-12-2023, before Notary Gangaraju B N, Bengaluru. Henceforth I shall be called JAGADEESH MUNISHAMAPPA only.

Lost

ದಾಖಲೆ ಕಳೆದಿದೆ
ಪ್ರದೀಪ್ ಜಿ ಎಲ್. ವಿಳಾಸ # 449, 5ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಕೆಸಿಎಚ್ ಲೇಔಟ್, ಬೆಂಗಳೂರು-560056, ನನ್ನ ಮೂಲ ಶುದ್ಧ ಕ್ರಯಪತ್ರ ದಾಖಲೆಗಳು ಪ್ರಯಾಣಿಸುವಾಗ ಕಳೆದುಹೋಗಿವೆ. ದಾಖಲೆ ಸಂಖ್ಯೆ(1) 6812/2011-2012, ನಿವೇಶನ ಸಂಖ್ಯೆ 05, ಖಾತಾ ನಂ. 44, ಸಿದ್ದನ ಹೊಸಹಳ್ಳಿ ಗ್ರಾಮ, ಮಾದನಾಯಕನಹಳ್ಳಿ. ದಾಖಲೆ ಸಂಖ್ಯೆ (2). 1817/2018-2019. ಸೈಟ್ ನಂ. 11, ಸರ್ವೆ ನಂ. 14/1 & 14/4, ಸೂಲಿಕೆರೆ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ. (ಎಫ್‌ಐಆರ್ ನಂ.0851427/2023). ಈ ದಾಖಲೆಗಳು ನಿಮಗೆ ಸಿಕ್ಕಿದ್ದಲ್ಲಿ ದಯವಿಟ್ಟು ಸಂಪರ್ಕಿಸಿ: 9743451088

REAL ESTATE SELLING

Flat

Yelahanka

FOR SALE. 1452sqft 3BHK near BMSIT. DSMAX Streak. Contact 9740470574/9886135928. Genuine buyers only.

DH DECCAN HERALD
To Place your ad in Deccan Herald & Prajavani Classifieds
For details contact : 9845114560 : 9731810277 080 - 45557163 / 164

ನಗರಸಭಾ ಕಾರ್ಯಾಲಯ, ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123
ದೂರವಾಣಿ : 080-27722135, ಸಹಾಯವಾಣಿ : 080-27723627
Email : itstaff_ulb_nelamangala@yahoo.com

ಸಂಖ್ಯೆ: ನಸನೆ/ಆರೋಗ್ಯ(ವಿ)/ಟೆಂಡರ್/01/2023-24 ದಿನಾಂಕ: 15.12.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KW 1&2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, 2023-24ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಹಾಗೂ ನಗರಸಭೆ ನಿಧಿಯಡಿ ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಯ ಹಾಗೂ ಪಾರಂಪರಿಕ ತ್ಯಾಜ್ಯ (ಲೇಗಸಿ ವೇಸ್ಟ್) ವಿಲೇವಾರಿಗಾಗಿ ವಾಹನಗಳ, ಯಂತ್ರೋಪಕರಣಗಳನ್ನು ಖರೀದಿಸಲು ಮತ್ತು ಮಾನವ ಸಂಪನ್ಮೂಲಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ ಕೈಗೊಳ್ಳುವ ಕಾಮಗಾರಿಗಳ **ಒಟ್ಟು ಮೊತ್ತ ರೂ: 83.35 ಲಕ್ಷಗಳ** ಐಟಾಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ **ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಗಂಟೆಯವರೆಗೆ)** ಟೆಂಡರ್ ತೆರೆಯುವ **ದಿನಾಂಕ:(As per KPPP Portal)** ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/- ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ | ಸಹಿ/- ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ | ಸಹಿ/- ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ | ಸಹಿ/- ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/2607/2023-24

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಕನಕಪುರ
ಮಿಸ್ ನಂ.5001/2022

ಅರ್ಜಿದಾರರು: ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ರಾಷ್ಟ್ರೀಯ ಹೆದ್ದಾರಿ-209, ಮಳವಳ್ಳಿ

ವಿರುದ್ಧ

ಪ್ರತಿ ಅರ್ಜಿದಾರರು: ಶ್ರೀ ಸೈಯದ್ ಅಮೀನ್ ಮತ್ತು ಇತರರು
ಪ್ರತಿ ವಾದಿ ಸಂ.1 – ಶ್ರೀ ಸೈಯದ್ ಅಮೀನ್ ಬಿನ್ ಬಿ.ಎನ್. ನಾಜಿರ್ ಹುಸೇನ್ ವಯಸ್ಸು 52 ವರ್ಷಗಳು
ಪ್ರತಿ ವಾದಿ ಸಂ.2 – ಶ್ರೀ ಕೆ.ಎಂ.ಮ್ಯಾಥಿವ್ ಬಿನ್ ಕೆ.ಎಂ.ಕಾರಿಯನ್
ವಿಳಾಸ: ಮೇಲ್ಕಂಡ 1 ಮತ್ತು 2 ರವರೆಗಿನ ಪ್ರತಿವಾದಿಗಳ ವಾಸಸ್ಥಾನ ಹೊಸಕೋಟೆ ಗ್ರಾಮ, ಹಾರೊಹಳ್ಳಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ

ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ಸಲ್ಲಿಸುವುದರ ಮೂಲಕ ಪ್ರತಿವಾದಿ 1 ಮತ್ತು 2 ಇವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಾರೊಹಳ್ಳಿ ಹೋಬಳಿ, ಹೊಸಕೋಟೆ ಗ್ರಾಮದ ಮೂಲ ನಿವಾಸಿಗಳಾಗಿದ್ದು, ಮೇಲ್ಕಂಡ ಪ್ರತಿವಾದಿ 1 ಮತ್ತು 2 ಆದ ತಮಗೆ ನ್ಯಾಯಾಲಯದ ಮೂಲಕ ಹಲವಾರು ಬಾರಿ ನೋಟಿಸ್ ಹಾಗೂ ರಿಜಿಸ್ಟರ್ ಪೋಸ್ಟ್ (ಆರ್.ಪಿ.ಎ.ಡಿ) ಮೂಲಕ ನ್ಯಾಯಲಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಅದರೆ ತಾವುಗಳು ಘನ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ, ಆದುದರಿಂದ ತಮಗೆ ಈ ಮೂಲಕ ತಿಳಿಸುವುದೇನೆಂದರೆ ಸದರಿ ಪ್ರಕರಣವನ್ನು **ದಿನಾಂಕ: 22.01.2024** ರಂದು ಗೊತ್ತು ಪಡಿಸಿದ್ದು ಅ ದಿನದಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರು ತಕರಾರು ಇದ್ದಲ್ಲಿ ಯಾವುದೇ ಪಕ್ಷಗಾರರು ತಾವಾಗಲೀ ಅಥವಾ ಪರ ವಕೀಲರಾಗಲಿ ನ್ಯಾಯಾಲಯವು ನಿಗದಿ ಪಡಿಸಿರುವ ಅ ದಿನ ಬೆಳಿಗ್ಗೆ 11:00 ಗಂಟೆಗೆ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ಯಾರು ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ನ್ಯಾಯಾಲಯವು ಯಾರದೂ ತಕರಾರು ಇಲ್ಲವೆಂದು ಆದೇಶ ಹೊರಡಿಸುತ್ತದೆ. ಎಂದು ತಿಳಿಸುವುದಕ್ಕಾಗಿ ಈ ಪತ್ರಿಕಾ ಪ್ರಕಟಣೆ.

ದಾವ ಷೆಡ್ಯೂಲ್

ಸ್ವಾಧೀನ ಆಗಿರುವ ದಾವ ಸ್ವತ್ತು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಾರೊಹಳ್ಳಿ ಹೋಬಳಿ, ಹೊಸಕೋಟೆ ಗ್ರಾಮದ ಸರ್ವೆ ನಂ. 46/6 ಮತ್ತು 55/3ಬಿ ಯಲ್ಲಿ ವಿಸ್ತೀರ್ಣ 50 ಸ್ಕೇರ್ ಮೀಟರ್ ಮತ್ತು 550 ಸ್ಕೇರ್ ಮೀಟರ್ ಕ್ರಮವಾಗಿ ಸರ್ವೆ ನಂ. 55/3ಬಿ ಯಲ್ಲಿ ಹೆಚ್ಚುವರಿ ವಿಸ್ತೀರ್ಣ 145 ಸ್ಕೇರ್ ಮೀಟರ್, ಒಟ್ಟು ಪರಿಹಾರದ ಮೊತ್ತ ರೂ. 17,48,114/-

ದಿನಾಂಕ: 11.12.2023 ರಂದು ನನ್ನ ಸ್ವಹಸ್ತಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರ್
2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ
ಕನಕಪುರ, ರಾಮನಗರ

ಸ್ಥಳ: ಕನಕಪುರ
ದಿನಾಂಕ: 11.12.2023

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಕನಕಪುರ
ಮಿಸ್ ನಂ.5018/2020

ಅರ್ಜಿದಾರರು: ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ರಾಷ್ಟ್ರೀಯ ಹೆದ್ದಾರಿ-209, ಮಳವಳ್ಳಿ

ವಿರುದ್ಧ

ಪ್ರತಿ ಅರ್ಜಿದಾರರು: ಶ್ರೀ ಹೆಚ್. ತೇಜ್ ಕುಮಾರ್ ಮತ್ತು ಇತರರು
ಪ್ರತಿ ವಾದಿ ಸಂ.7 – ಶ್ರೀ ಪುನೀತ್ ಬಿನ್ ಬಸವರಾಜು ವಯಸ್ಸು 39 ವರ್ಷಗಳು
ಪ್ರತಿ ವಾದಿ ಸಂ.9 – ಶ್ರೀ ಹನುಮಪ್ಪ ಜಗ್ಗಿನ್ ಬಿನ್ ಧರ್ಮಪ್ಪ ಜಗ್ಗಿನ್ ವಯಸ್ಸು 49 ವರ್ಷಗಳು
ಪ್ರತಿ ವಾದಿ ಸಂ.10 – ಶ್ರೀ ಧನಂಜಯ ಬಿನ್ ಚಂದ್ರನಾಯ್ಕ ವಯಸ್ಸು 50 ವರ್ಷಗಳು
ಪ್ರತಿ ವಾದಿ ಸಂ.11 – ಶ್ರೀ ನಾಗಪ್ಪ ಕರದಗಿ ಬಿನ್ ಸಿದ್ದಪ್ಪ ಕರದಗಿ ವಯಸ್ಸು 47 ವರ್ಷಗಳು
ಪ್ರತಿ ವಾದಿ ಸಂ.12 – ಶ್ರೀ ಧರೇಸಪ್ಪ ಬಾಲ ಸಾಹೇಬ್ ದೇಸಾಯಿ ಬಿನ್ ಬಾಲ ಸಾಹೇಬ್ ದೇಸಾಯಿ ವಯಸ್ಸು 54 ವರ್ಷಗಳು
ಪ್ರತಿ ವಾದಿ ಸಂ.13 – ಶ್ರೀ ಸೋಮಶೇಖರ ಬಿನ್ ಮಹದೇವಪ್ಪ ವಯಸ್ಸು 56 ವರ್ಷಗಳು
ವಿಳಾಸ: ಮೇಲ್ಕಂಡ 7, 9 ರಿಂದ 13 ರವರೆಗಿನ ಪ್ರತಿವಾದಿಗಳ ವಾಸಸ್ಥಾನ ಆನೇಕಲ್ ಮುಖ್ಯರಸ್ತೆ ರಾಯಲ್ ಮೆಡಿಕಲ್ ಅಂಗಡಿ ಎದುರು ಹಾರೊಹಳ್ಳಿ ಗ್ರಾಮ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ
ಪ್ರತಿ ವಾದಿ ಸಂ.14 – ಶ್ರೀ ಎಂ ರಾಮಣ್ಣ ಬಿನ್ ಮುನಿಶಂಭಪ್ಪ ವಯಸ್ಸು 54 ವರ್ಷಗಳು
ವಿಳಾಸ: ಅವರೆಮಾಳ ರಾಂಪುರ ಗ್ರಾಮ ಮರಳವಾಡಿ ಹೋಬಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ

ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ಸಲ್ಲಿಸುವುದರ ಮೂಲಕ ಪ್ರತಿವಾದಿ 7, 9 ಇಂದ 14 ಇವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಾರೊಹಳ್ಳಿ ಗ್ರಾಮದ ಮೂಲ ನಿವಾಸಿಗಳಾಗಿದ್ದು, ಮೇಲ್ಕಂಡ ಪ್ರತಿವಾದಿ 7, 9 ಇಂದ 14 ಆದ ತಮಗೆ ನ್ಯಾಯಾಲಯದ ಮೂಲಕ ಹಲವಾರು ಬಾರಿ ನೋಟಿಸ್ ಹಾಗೂ ರಿಜಿಸ್ಟರ್ ಪೋಸ್ಟ್ (ಆರ್.ಪಿ.ಎ.ಡಿ) ಮೂಲಕ ನ್ಯಾಯಲಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಅದರೆ ತಾವುಗಳು ಘನ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ, ಆದುದರಿಂದ ತಮಗೆ ಈ ಮೂಲಕ ತಿಳಿಸುವುದೇನೆಂದರೆ ಸದರಿ ಪ್ರಕರಣವನ್ನು **ದಿನಾಂಕ: 22.01.2024** ರಂದು ಗೊತ್ತು ಪಡಿಸಿದ್ದು ಅ ದಿನದಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರು ತಕರಾರು ಇದ್ದಲ್ಲಿ ಯಾವುದೇ ಪಕ್ಷಗಾರರು ತಾವಾಗಲೀ ಅಥವಾ ಪರ ವಕೀಲರಾಗಲಿ ನ್ಯಾಯಾಲಯವು ನಿಗದಿ ಪಡಿಸಿರುವ ಅ ದಿನ ಬೆಳಿಗ್ಗೆ 11:00 ಗಂಟೆಗೆ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ಯಾರು ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ನ್ಯಾಯಾಲಯವು ಯಾರದೂ ತಕರಾರು ಇಲ್ಲವೆಂದು ಆದೇಶ ಹೊರಡಿಸುತ್ತದೆ. ಎಂದು ತಿಳಿಸುವುದಕ್ಕಾಗಿ ಈ ಪತ್ರಿಕಾ ಪ್ರಕಟಣೆ.

ದಾವ ಷೆಡ್ಯೂಲ್

ಸ್ವಾಧೀನ ಆಗಿರುವ ದಾವ ಸ್ವತ್ತು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಾರೊಹಳ್ಳಿ ಗ್ರಾಮದ ಸರ್ವೆ ನಂ. 474/2 ಯಲ್ಲಿ ವಿಸ್ತೀರ್ಣ 237 ಸ್ಕೇರ್ ಮೀಟರ್ ಒಟ್ಟು ಪರಿಹಾರದ ಮೊತ್ತ ರೂ. 33,65,638/-

ದಿನಾಂಕ: 11.12.2023 ರಂದು ನನ್ನ ಸ್ವಹಸ್ತಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರ್
2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ
ಕನಕಪುರ, ರಾಮನಗರ

ಸ್ಥಳ: ಕನಕಪುರ
ದಿನಾಂಕ: 11.12.2023

ಸಂಚಾರ ನಿಯಮ ಉಲ್ಲಂಘನೆ • ಠಾಣೆವಾರು ಟಾಪ್–100 ವಾಹನಗಳ ಮಾಲೀಕರ ಪಟ್ಟಿ ಸಿದ್ಧ

ದಂಡ ಬಾಕಿ: ಮನೆ ಬಾಗಿಲಿಗೆ ಪೊಲೀಸರು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದಲ್ಲಿ ಪದೇ ಪದೇ ಸಂಚಾರ ನಿಯಮ ಉಲ್ಲಂಘಿಸಿ ಕಣ್ತಪ್ಪಿಸಿಕೊಂಡು ಓಡಾಡುತ್ತಿರುವ ವಾಹನಗಳ ಮಾಲೀಕರನ್ನು ಪತ್ತೆ ಮಾಡಿ ದಂಡ ವಸೂಲಿ ಮಾಡಲು ಪೊಲೀಸರು ಮನೆ ಬಾಗಿಲಿಗೇ ಲಗ್ಗೆ ಇಡುತ್ತಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಪ್ರಮಾಣ ಹೆಚ್ಚಾಗುತ್ತಿದ್ದು, ಹಲವರು ದಂಡ ಕಟ್ಟದೆ ಬಾಕಿ ಉಳಿಸಿಕೊಳ್ಳುತ್ತಿದ್ದಾರೆ. ಅತೀ ಹೆಚ್ಚು ದಂಡ ಬಾಕಿ ಇರುವ ವಾಹನಗಳ ಮಾಲೀಕರ ಪಟ್ಟಿ ಸಿದ್ಧಪಡಿಸಿರುವ ಪೊಲೀಸರು, ಅವರ ಮನೆ ಬಾಗಿಲಿಗೆ ಹೋಗಿ ದಂಡ ವಸೂಲಿ ಮಾಡುವ ಹೊಸ ಪ್ರಯತ್ನ ಆರಂಭಿಸಿದ್ದಾರೆ.

‘ಸಂಚಾರ ನಿಯಮ ಉಲ್ಲಂಘನೆಯಿಂದಾಗಿ ಅಪಘಾತಗಳು ಹೆಚ್ಚಾಗುತ್ತಿವೆ. ಹೀಗಾಗಿ, ನಿಯಮ ಉಲ್ಲಂಘನೆ ಪತ್ತೆಗೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ. ನಗರದ ಬಹುತೇಕ ರಸ್ತೆಗಳಲ್ಲಿ ಗುಣಮಟ್ಟದ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಯಾರಾದರೂ ನಿಯಮ ಉಲ್ಲಂಘನೆ ಮಾಡಿದರೆ ಫೋಟೊ ಸಮೇತ ಪ್ರಕರಣ ದಾಖಲಾಗುತ್ತಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ‘ಪ್ರಜಾವಾಣಿ’ಗೆ ತಿಳಿಸಿದರು.

ಅಂಕಿ-ಅಂಶಗಳು

83.97 ಲಕ್ಷ
2023ರ ಜನವರಿಯಿಂದ ನವೆಂಬರ್‌ವರೆಗೆ ದಾಖಲಾದ ಒಟ್ಟು ಪ್ರಕರಣ

180.75 ಕೋಟಿ
2023ರ ಜನವರಿಯಿಂದ ನವೆಂಬರ್‌ವರೆಗೆ ವಿಧಿಸಿದ ಒಟ್ಟು ದಂಡ

‘ಇತ್ತೀಚೆಗಷ್ಟೇ ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ನೀಡಲಾಗಿತ್ತು. ಈ ಸಂದರ್ಭದಲ್ಲಿ ಹಲವರು ದಂಡ ಪಾವತಿ ಮಾಡಿದ್ದಾರೆ. ಆದರೆ, ಇನ್ನೂ ಕೆಲವರು ದಂಡ ಪಾವತಿ ಮಾಡಿಲ್ಲ. ಹೀಗಾಗಿ, ದಂಡ ಬಾಕಿ ಉಳಿದಿದೆ. ನೋಟಿಸ್ ಸಮೇತ ಮನೆ ಬಾಗಿಲಿಗೆ ಹೋಗಿ ದಂಡ ಸಂಗ್ರಹಿಸಲಾಗುತ್ತಿದೆ’ ಎಂದು ಹೇಳಿದರು.

ಟಾಪ್– 100 ಪಟ್ಟಿ ಸಿದ್ಧ: ಸಂಚಾರ ವಿಭಾಗಕ್ಕೆ ಸಂಬಂಧಪಟ್ಟಂತೆ ನಗರದಲ್ಲಿ 48 ಸಂಚಾರ ಠಾಣೆಗಳಿವೆ. ಪ್ರತಿ ಠಾಣೆ ವ್ಯಾಪ್ತಿಯಲ್ಲಿ ಅತೀ ಹೆಚ್ಚು ದಂಡ ಬಾಕಿ ಇರುವ ಟಾಪ್–100 ವಾಹನಗಳ ಮಾಲೀಕರ ಪಟ್ಟಿಯನ್ನು ಪೊಲೀಸರು ಸಿದ್ಧಪಡಿಸಿದ್ದಾರೆ.

‘ಕ್ಯಾಮೆರಾ ಫೋಟೊ ಪುರಾವೆಯನ್ನಾಗಿಟ್ಟುಕೊಂಡು ನೋಂದಣಿ ಸಂಖ್ಯೆ ಆಧರಿಸಿ ವಾಹನಗಳ ಮೇಲೆ ದಂಡ ವಿಧಿಸಲಾಗುತ್ತಿದೆ. ಜೊತೆಗೆ, ವಾಹನ ನೋಂದಣಿ ಸಮಯದಲ್ಲಿ ಮಾಲೀಕರು ನೀಡಿರುವ ವಿಳಾಸಕ್ಕೆ ನೋಟಿಸ್ ಕಳುಹಿಸಿ, ದಂಡ ಪಾವತಿಸುವಂತೆ ಸೂಚಿಸಲಾಗುತ್ತಿದೆ. ಇಷ್ಟಾದರೂ ಹಲವರು ದಂಡ ಪಾವತಿ ಮಾಡುತ್ತಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಟಾಪ್–100 ಪಟ್ಟಿಯಲ್ಲಿರುವ ವಾಹನಗಳ ಮಾಲೀಕರ ಮನೆಗಳಿಗೆ ಹೋಗಿ ದಂಡ ಸಂಗ್ರಹಿಸುವಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ. ನಿಗದಿತ ಸಮಯದಲ್ಲಿ ಪೊಲೀಸರು, ಮನೆಗಳಿಗೆ ಹೋಗಿ ದಂಡ ಸಂಗ್ರಹಿಸುತ್ತಿದ್ದಾರೆ’ ಎಂದರು.

‘ಕೆಲ ಮಾಲೀಕರು, ವಿಳಾಸ ಬದಲಿಸಿದ್ದಾರೆ. ಇನ್ನು ಕೆಲವರು, ತಪ್ಪು ವಿಳಾಸ ನೀಡಿದ್ದಾರೆ. ಉಳಿದಂತೆ ಬಹುತೇಕರು, ವಿಳಾಸದಲ್ಲಿ ಲಭ್ಯರಾಗಿದ್ದಾರೆ. ಅಂಥವರಿಂದ ದಂಡ ಕಟ್ಟಿಸಿಕೊಳ್ಳಲಾಗುತ್ತಿದೆ. ಹೆಚ್ಚು ದಂಡ ಬಾಕಿ ಉಳಿಸಿಕೊಂಡಿರುವವರು, ನೋಟಿಸ್ ಪಡೆಯುತ್ತಿದ್ದಾರೆ. ನ್ಯಾಯಾಲಯದಲ್ಲಿ ದಂಡ ಪಾವತಿ ಮಾಡುವುದಾಗಿ ಹೇಳುತ್ತಿದ್ದಾರೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

₹70 ಸಾವಿರ ಮೌಲ್ಯದ ವಾಹನ; ₹3.25 ಲಕ್ಷ ದಂಡ

ಸಂಚಾರ ನಿಯಮಗಳನ್ನು 643 ಬಾರಿ ಉಲ್ಲಂಘನೆ ಮಾಡಿದ್ದ ದ್ವಿಚಕ್ರ ವಾಹನ ಮಾಲೀಕರೊಬ್ಬರನ್ನು ಪೊಲೀಸರು ಪತ್ತೆ ಮಾಡಿದ್ದು ₹3.25 ಲಕ್ಷ ದಂಡ ಪಾವತಿಸುವಂತೆ ನೋಟಿಸ್ ನೀಡಿದ್ದಾರೆ.

643 ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ₹3.25 ಲಕ್ಷ ದಂಡ ವಿಧಿಸಲಾಗಿದ್ದ ದ್ವಿಚಕ್ರ ವಾಹನ

‘ಆರ್‌.ಟಿ. ನಗರ ಬಳಿಯ ಗಂಗಾನಗರದಲ್ಲಿ ಮಾಲಾ ಅವರಿಗೆ ಸೇರಿದ್ದ ದ್ವಿಚಕ್ರ ವಾಹನದ ಮೇಲೆ ₹3.25 ಲಕ್ಷ ದಂಡ ಬಾಕಿ ಇತ್ತು. ವಿಳಾಸಕ್ಕೆ ಹೋಗಿ ವಾಹನವನ್ನು ಜಪ್ತಿ ಮಾಡಲಾಗಿದೆ. ದಂಡ ಪಾವತಿಸುವಂತೆ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹೆಲ್ಮೆಟ್ ರಹಿತ ಚಾಲನೆ, ಸಿಗ್ನಲ್ ಜಂಪ್ ಸೇರಿದಂತೆ ಹಲವು ಬಾರಿ ನಿಯಮ ಉಲ್ಲಂಘಿಸಲಾಗಿದೆ. ವಾಹನ ಮಾಲೀಕರು ಪೊಲೀಸರ ಕಣ್ತಪ್ಪಿಸಿ ಸುತ್ತಾಡುತ್ತಿದ್ದರು. ಹೀಗಾಗಿ, ಇದುವರೆಗೂ ಸಿಕ್ಕಿಬಿದ್ದಿರಲಿಲ್ಲ. ಇದೀಗ ₹70 ಸಾವಿರ ಮೌಲ್ಯದ ದ್ವಿಚಕ್ರ ವಾಹನದ ಮೇಲೆ ₹3.25 ಲಕ್ಷ ದಂಡವಿರುವುದನ್ನು ನೋಡಿ ಆಶ್ಚರ್ಯಗೊಂಡಿರುವ ಮಾಲೀಕರು, ಇನ್ನೊಮ್ಮೆ ನಿಯಮ ಉಲ್ಲಂಘನೆ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಪೊಲೀಸರ ಕಂಡು ಗಾಬರಿ

ದಂಡ ವಸೂಲಿ ಮಾಡಲು ಪೊಲೀಸರು ಮನೆಗೆ ಬರುತ್ತಿರುವುದನ್ನು ನೋಡಿ ಕೆಲ ಮಾಲೀಕರು ಹಾಗೂ ಅಕ್ಕ-ಪಕ್ಕದ ಮನೆಯವರು ಗಾಬರಿಯಾಗುತ್ತಿದ್ದಾರೆ. ಪೊಲೀಸರ ಹೊಸ ಪ್ರಯತ್ನದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಿರುವ ಸಾರ್ವಜನಿಕರು, ‘ಮನೆ ಮನೆಗೆ ಬಂದು ದಂಡ ವಸೂಲಿ ಮಾಡುವುದು ಒಳ್ಳೆಯ ತೀರ್ಮಾನ. ಆದರೆ, ದಿಢೀರನೇ ಪೊಲೀಸರು ಮನೆಗೆ ಬಂದರೆ ಅಕ್ಕ-ಪಕ್ಕದ ಜನ ಏನಾಯಿತೆಂದು ವಿಚಾರಿಸುತ್ತಿದ್ದಾರೆ. ಪೊಲೀಸರು ಬಂದು ಹೋದ ನಂತರ, ಅನುಮಾನಾಸ್ಪದ ರೀತಿಯಲ್ಲಿ ನೋಡುತ್ತಿದ್ದಾರೆ’ ಎಂದು ಬರೆದುಕೊಂಡಿದ್ದಾರೆ.

‘ಸಂಚಾರ ಪೊಲೀಸರು, ರಸ್ತೆಯಲ್ಲಿ ನಿಂತು ವಾಹನಗಳನ್ನು ತಪಾಸಣೆ ಮಾಡುವುದು ಕಡಿಮೆಯಾಗಿದೆ. ಇದೇ ಕಾರಣಕ್ಕೆ ಹಲವರು, ದಂಡ ಬಾಕಿ ಇದ್ದರೂ ಪಾವತಿ ಮಾಡುತ್ತಿಲ್ಲ’ ಎಂದು ಅಧಿಕಾರಿ ಹೇಳಿದರು.

ಅಧ್ಯಯನ ಪ್ರವಾಸ

ಪ್ರಜಾವಾಣಿ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ‘ಅಧ್ಯಯನ ಪ್ರವಾಸ’ದ ಭಾಗವಾಗಿ ಕುಂಬಳಗೋಡಿನಲ್ಲಿರುವ ದಿ ಪ್ರಿಂಟರ್ಸ್ ಮೈಸೂರು ಪ್ರೈ ಲಿಮಿಟೆಡ್ ಸಂಸ್ಥೆಯ ಮುದ್ರಣ ಘಟಕಕ್ಕೆ ಸೋಮವಾರ ಭೇಟಿ ನೀಡಿದರು

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪತ್ರಕ್ಕೆ ಸ್ಪಂದನೆ

ವಿಮಾನ ನಿಲ್ದಾಣದಲ್ಲಿ ಕನ್ನಡ ಬಳಕೆ ಮಾಡಿದ ಅಧಿಕಾರಿಗಳ ನಡೆ ಎಲ್ಲರಿಗೂ ಮಾದರಿ ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು

ವಿಮಾನ ನಿಲ್ದಾಣದ ಲಾಂಛನದಲ್ಲಿ ಕನ್ನಡ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳು, ನಿಲ್ದಾಣದ ಲಾಂಛನದಲ್ಲಿ ಕನ್ನಡವನ್ನು ಬಳಸಲಾರಂಭಿಸಿದ್ದಾರೆ.

ಈ ಮೊದಲು ಲಾಂಛನದಲ್ಲಿ ಇಂಗ್ಲಿಷ್ ಸಾಲುಗಳಿದ್ದವು. ಇದನ್ನು ಆಕ್ಷೇಪಿಸಿ ಲಾಂಛನದಲ್ಲಿ ಕನ್ನಡವನ್ನು ಬಳಸುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸೂಚನೆ ನೀಡಿತ್ತು. ಆ ಸೂಚನೆ ಬೆನ್ನಲ್ಲೇ ಎಚ್ಚೆತ್ತುಕೊಂಡ ನಿಲ್ದಾಣದ ಅಧಿಕಾರಿಗಳು, ಲಾಂಛನದಲ್ಲಿ ಕನ್ನಡವನ್ನು ಬಳಸಿದ್ದಾರೆ.

ಲಾಂಛನದಲ್ಲಿ ಇಂಗ್ಲಿಷ್ ಬಳಸಿರುವ ವಿಷಯ ತಮ್ಮ ಗಮನಕ್ಕೆ ಬರುತ್ತಿದ್ದಂತೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಪತ್ರ ಬರೆಯುವಂತೆ ಪ್ರಾಧಿಕಾರಕ್ಕೆ ಸೂಚಿಸಿದ್ದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಅವರು ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದು, ಕರ್ನಾಟಕದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಂಸ್ಥೆಗಳು ಇಲ್ಲಿನ ಭಾಷಾ ಸಂಸ್ಕೃತಿ ಗೌರವಿಸುವುದು ಪ್ರಾಥಮಿಕ ಜವಾಬ್ದಾರಿ. ಕೂಡಲೇ ನಿಲ್ದಾಣದ ಲಾಂಛನದಲ್ಲಿ ಕನ್ನಡ ಭಾಷೆಯನ್ನು ಅಳವಡಿಸಿಕೊಳ್ಳಬೇಕು ಎಂದು ಸೂಚಿಸಿದ್ದರು.

ಪ್ರಾಧಿಕಾರದ ಪತ್ರದಿಂದ ಎಚ್ಚೆತ್ತುಕೊಂಡ ವಿಮಾನ ನಿಲ್ದಾಣದ ಅಧಿಕಾರಿಗಳು ತಮ್ಮ ಲಾಂಛನದಲ್ಲಿ ಕನ್ನಡ ಭಾಷೆಯನ್ನು ಬಳಸಿದ್ದಾರೆ. ಈ ಬಗ್ಗೆ ಪ್ರಾಧಿಕಾರಕ್ಕೆ ಪತ್ರ ಬರೆದಿರುವ ನಿಲ್ದಾಣದ ಅಧಿಕಾರಿ ದಿನೇಶ್ ಕುಮಾರ್, ’ಕನ್ನಡ ಭಾಷೆ ಬೆಳವಣಿಗೆ, ಇಲ್ಲಿನ ಸಂಸ್ಕೃತಿ ಉಳಿವಿಗೆ ನಾವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜತೆ ಕೆಲಸ ಮಾಡಲಿದ್ದೇವೆ. ಮುಂದಿನ ನಮ್ಮ ಯಾವುದೇ ಕಾರ್ಯಕ್ರಮ ಹಾಗೂ ಪತ್ರ ವ್ಯವಹಾರದಲ್ಲಿ ಹೆಚ್ಚಾಗಿ ಕನ್ನಡ ಭಾಷೆಯನ್ನೇ ಬಳಸಲಾಗುವುದು. ಅಲ್ಲದೆ, ನಿಲ್ದಾಣದ ಪ್ರತಿ ಸೂಚನಾ ಫಲಕಗಳನ್ನು ಕನ್ನಡದಲ್ಲಿ ಬರೆಸಲಾಗುವುದು, ಸಾಮಾಜಿಕ ಜಾಲತಾಣದಲ್ಲಿಯೂ ಕನ್ನಡವನ್ನು ಬಳಕೆ ಮಾಡುವುದಾಗಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಮಹಿಳೆಯರ ಸುರಕ್ಷತೆಗೆ ಗ್ಯಾರಂಟಿ ಕೊಡಿ

ರಾಜ್ಯ ಮಹಿಳಾ ಆಯೋಗಕ್ಕೆ ಅಧ್ಯಕ್ಷರ ನೇಮಿಸಲು ಆಮ್ ಆದ್ಮಿ ಪಕ್ಷ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಹಿಳಾ ಆಯೋಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಮಹಿಳಾ ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

‘ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆಗಳು ನಡೆಯುತ್ತಿವೆ. ಮಹಿಳೆಯರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿವೆ. ರಾಜ್ಯ ಸರ್ಕಾರಕ್ಕೆ ಮಹಿಳೆಯರ ಬಗ್ಗೆ ಕಾಳಜಿ ಇಲ್ಲ. ಮಹಿಳೆಯರ ಸುರಕ್ಷತೆಗೆ ಗ್ಯಾರಂಟಿ ನೀಡುತ್ತಿಲ್ಲ’ ಎಂದು ದೂರಿದರು.

‘ರಾಜ್ಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿದ್ದರೂ ಮಹಿಳಾ ಆಯೋಗ ಯಾವುದೇ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ’ ಎಂದು ಎಎಪಿ ಬೆಂಗಳೂರು ನಗರ ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಸರ್ರಾವ್ ಹೇಳಿದರು.

ರಾಜ್ಯ ಮಹಿಳಾ ಆಯೋಗಕ್ಕೆ ಅಧ್ಯಕ್ಷರನ್ನು ನೇಮಿಸುವಂತೆ ಆಗ್ರಹಿಸಿ ಸೋಮವಾರ ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಆಮ್ ಆದ್ಮಿ ಪಕ್ಷದ ಮಹಿಳಾ ಸದಸ್ಯರು ಪಾಲ್ಗೊಂಡಿದ್ದರು

‘ಬೆಳಗಾವಿ ಜಿಲ್ಲೆಯಲ್ಲಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿದ ಪ್ರಕರಣದಲ್ಲಿ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ’ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಉಷಾ ಮೋಹನ್ ದೂರಿದರು.

’ಮಹಿಳೆಯರ ಸುರಕ್ಷತೆಗೆ ಇರುವ ಮೊಬೈಲ್ ಆ್ಯಪ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸಹಾಯವಾಣಿ 112 ಸಂಖ್ಯೆಗೆ ಕರೆ ಮಾಡಿದರೆ ಸ್ಪಂದಿಸುತ್ತಿಲ್ಲ. ಸರ್ಕಾರ, ಪೊಲೀಸ್ ಇಲಾಖೆಗೆ ಇದರ ಬಗ್ಗೆ ಕಾಳಜಿಯೇ ಇಲ್ಲ. ಮಹಿಳೆಯರಿಗೆ ರಕ್ಷಣೆಯನ್ನೇ ಒದಗಿಸದೆ ರಾಜ್ಯದಲ್ಲಿ ಯಾವ ರೀತಿ ಮಹಿಳಾ ಸಬಲೀಕರಣ ಮಾಡುತ್ತೀರಿ’ ಎಂದು ಪ್ರಶ್ನಿಸಿದರು.

ಮನೆ ಕೆಲಸಕ್ಕೆ ನೇಮಕ ಇಬ್ಬರು ಬಾಲಕಿಯರ ರಕ್ಷಣೆ

ಬೆಂಗಳೂರು: ತೆರಿಗೆ ವಂಚನೆ ಆರೋಪದಡಿ ಚಿನ್ನಾಭರಣ ವ್ಯಾಪಾರಿಯೊಬ್ಬರ ಮನೆ ಮೇಲೆ ಇತ್ತೀಚೆಗೆ ದಾಳಿ ನಡೆಸಿದ್ದ ಆದಾಯ ತೆರಿಗೆ (ಐಟಿ) ಅಧಿಕಾರಿಗಳು, ಮನೆ ಕೆಲಸಕ್ಕೆ ನೇಮಿಸಿಕೊಂಡಿದ್ದ ಇಬ್ಬರು ಬಾಲಕಿಯರನ್ನು ಪೊಲೀಸರ ಸಹಾಯದಿಂದ ರಕ್ಷಿಸಿದ್ದಾರೆ.

ಬಾಲಕಿಯರನ್ನು ಮನೆ ಕೆಲಸಕ್ಕೆ ನೇಮಿಸಿಕೊಂಡಿದ್ದ ಆರೋಪದಡಿ ಅಶೋಕಕುಮಾರ್, ಶ್ರೇಯಾನ್ಸ್ ಚೌಧರಿ ಹಾಗೂ ಗೌರವ್ ಚೌಧರಿ ವಿರುದ್ಧ ಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳಿಂದ ರಕ್ಷಿಸಲಾದ 10 ವರ್ಷ ಹಾಗೂ 8 ವರ್ಷ ವಯಸ್ಸಿನ ಇಬ್ಬರು ಬಾಲಕಿಯರನ್ನು ಸರ್ಕಾರಿ ಬಾಲ ಮಂದಿರದಲ್ಲಿ ಇರಿಸಲಾಗಿದೆ.

ಪ್ರಕರಣದ ವಿವರ: ‘ತೆರಿಗೆ ವಂಚನೆ ಆರೋಪದಡಿ ನಗರದ ಹಲವು ಚಿನ್ನಾಭರಣ ವ್ಯಾಪಾರಿಗಳ ಮನೆ ಹಾಗೂ ಮಳಿಗೆಗಳ ಮೇಲೆ ಐ.ಟಿ ಅಧಿಕಾರಿಗಳು ಇತ್ತೀಚೆಗೆ ದಾಳಿ ಮಾಡಿದ್ದರು. ಯಡಿಯೂರಿನಲ್ಲಿ ವಾಸವಿರುವ ವ್ಯಾಪಾರಿ ಅಶೋಕಕುಮಾರ್ ಮನೆಯಲ್ಲಿ ಇಬ್ಬರು ಬಾಲಕಿಯರು ಇರುವುದನ್ನು ಅಧಿಕಾರಿಗಳು ಗಮನಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಕ್ಕಳ ಬಗ್ಗೆ ಐ.ಟಿ ಅಧಿಕಾರಿಗಳು ವಿಚಾರಿಸಿದಾಗ, ಅವರು ಕೆಲಸಕ್ಕೆ ಇರುವುದು ಗೊತ್ತಾಗಿತ್ತು. ಅವಾಗಲೇ ಅಧಿಕಾರಿಗಳು, ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿದ್ದ ಪಿಎಸ್‌ಐ ನೇತೃತ್ವದ ತಂಡ, ಇಬ್ಬರು ಮಕ್ಕಳನ್ನು ರಕ್ಷಿಸಿದ್ದಾರೆ. ಆರೋಪಿಗಳ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂವೆ.

‘ಬಾಲಕಿಯರು, ಬಿಹಾರದವರು ಎಂಬುದು ಗೊತ್ತಾಗಿದೆ. ಅವರ ತಂದೆ–ತಾಯಿ ಮೈಸೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಆರೋಪಿ ಅಶೋಕ ಕುಮಾರ್, ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ತಮ್ಮ ಪತ್ನಿಯ ಆರೈಕೆಗೆಂದು ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡಿದ್ದರೆಂಬುದು ಸದ್ಯಕ್ಕೆ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಜನಪ್ರತಿನಿಧಿಗಳು, ಅಧಿಕಾರಿಗಳು ದಾಂಗುಡಿ

ಮಲದ ಗುಂಡಿ ಸ್ವಚ್ಛತೆಗೆ ಮಕ್ಕಳ ಬಳಕೆ: ನ್ಯಾಯಾಧೀಶರಿಂದ ತನಿಖೆಗೆ ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಕೋಲಾರ: ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಲದ ಗುಂಡಿ ಸ್ವಚ್ಛತೆಗೆ ಮಕ್ಕಳನ್ನು ಬಳಸಿಕೊಂಡ ಪ್ರಕರಣ ಸಂಬಂಧ ಕೇಂದ್ರ, ರಾಜ್ಯ ಸಚಿವರು, ಸಂಸದವರು, ಶಾಸಕರು, ವಿರೋಧ ಪಕ್ಷದ ಮುಖಂಡರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸೋಮವಾರ ದಾಂಗುಡಿ ಇಟ್ಟು ಪರಿಶೀಲಿಸಿದರು.

ಘಟನೆಯನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದ ಪ್ರತಿಪಕ್ಷ ನಾಯಕ ಆರ್‌.ಅಶೋಕ ಹಾಲಿ ನ್ಯಾಯಾಧೀಶರದಿಂದ ತನಿಖೆಗೆ ಆಗ್ರಹಿಸಿದರು. ಮಲದ ಗುಂಡಿ ಪರಿಶೀಲನೆ ವೇಳೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಅವರನ್ನು ತರಾಟೆಗೆ ತೆಗೆದುಕೊಂಡರು. ಮಕ್ಕಳನ್ನು ಮುಚ್ಚಿದ ಕೋಣೆಯಲ್ಲಿ ಮಾತನಾಡಿಸಿದರು. ವಿಧಾನ ಪರಿಷತ್ತಿನ ಬಿಜೆಪಿ ಮಹಿಳಾ ಸದಸ್ಯರು ಬಾಲಕಿಯರ ಸಮಸ್ಯೆ ಆಲಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ, ‘ಡಿ.1ರಂದು ಮಕ್ಕಳನ್ನು ಮಲದ ಗುಂಡಿಗೆ ಇಳಿಸಿ ಸ್ವಚ್ಛತೆ ಮಾಡಿಸಲಾಗಿದೆ. ಈ ವಿಚಾರ ಇಲಾಖೆಯ ಅಧಿಕಾರಿಗಳ ಗಮನಕ್ಕೆ ಬಂದಿದ್ದರೂ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ಮಾಡಲಾಗಿದೆ. ಇವತ್ತು ಜಿಲ್ಲಾ ಉಸ್ತುವಾರಿ ಸಚಿವರು ಬಂದಿದ್ದಾರೆ. ಪ್ರಾಂಶುಪಾಲರು ಹಾಗೂ ಶಿಕ್ಷಕರ ವಿರುದ್ಧ ಮಾತ್ರ ಅಲ್ಲ; ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು. ನ್ಯಾಯಾಧೀಶರು ರಾಜ್ಯದ ಎಲ್ಲಾ ಕಡೆ ತೆರಳಿ ವರದಿ ನೀಡಿದರೆ ಸರ್ಕಾರದ ಕಾಮಾಲೆ ಕಣ್ಣು ತೆರೆಯಲು ಸಾಧ್ಯ’ ಎಂದರು

‘ಮಕ್ಕಳಿಂದ ಶೌಚಾಲಯವನ್ನೂ ಸ್ವಚ್ಛಗೊಳಿಸಿದ್ದಾರೆ. ಇದು ಸರ್ಕಾರಕ್ಕೆ ನಾಚಿಕೆಗೇಡಿನ ಸಂಗತಿ. ಸರ್ಕಾರ ಬದುಕಿದೆಯೇ, ಸತ್ತಿದೆಯೇ ಗೊತ್ತಾಗುತ್ತಿಲ್ಲ. ಕೆಲ ನಾಲಾಯಕ್ ಅಧಿಕಾರಿಗಳಿದ್ದಾರೆ. ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಮೃತಪಟ್ಟ ಮಗುವಿನ ದೇಹ ಕೇಳಿದರೆ ದುಡ್ಡಿಗೆ ಪೀಡಿಸಿದ್ದಾರೆ’ ಎಂದು ಟೀಕಾ ಪ್ರಹಾರ ನಡೆಸಿದರು.

‘ಮಕ್ಕಳ ವಿಡಿಯೋ ಸೆರೆ ಹಿಡಿದಿರುವ ದೂರು ಇದೆ. ಹೆಣ್ಣು ಮಕ್ಕಳನ್ನು ಹಾಸ್ಟೆಲ್‌ಗೆ ಕಳಿಸುವುದು ಹೇಗೆ? ಇಲ್ಲಿ ಪ್ರಾಂಶುಪಾಲರು ಸೇರಿ 13 ಮಂದಿಗೆ ಮನೆ ಕೊಟ್ಟಿದ್ದರೂ ಮೂವರು ಮಾತ್ರ ವಾಸ್ತವ್ಯ ಇದ್ದಾರೆ’ ಎಂದು ಆಕ್ಷೇಪಿಸಿದರು. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಸ್ಪಿ ಎಚ್‌.ಡಿ.ಆನಂದ್ ಭೇಟಿ ನೀಡಿ ಮಕ್ಕಳ ಜೊತೆ ಚರ್ಚಿಸಿದರು. ಪ್ರತ್ಯೇಕ ವರದಿ ನೀಡುವುದಾಗಿ ಹೇಳಿದರು.

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್, ಸಂಸದ ಎಸ್‌.ಮುನಿಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ಎನ್‌.ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ, ಭಾರತಿ ಶೆಟ್ಟಿ, ತೇಜಸ್ವಿನಿ ಗೌಡ, ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಗೀತಾ ವಿವೇಕಾನಂದ, ಜಿಲ್ಲಾ ಪಂಚಾಯಿತಿ ಸಿಇಒ ಪದ್ಮಾ ಬಸವಂತಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಜಿಲ್ಲಾ ಜಾಗೃತಿ ಸಮಿತಿಯ ಸದಸ್ಯರು, ವಿವಿಧ ಸಂಘಟನೆಗಳ ಮುಖಂಡರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೊರಾರ್ಜಿ ದೇಸಾಯಿ ವಸತಿ ನಿಲಯಕ್ಕೆ ಸೋಮವಾರ ಭೇಟಿ ನೀಡಿದ್ದ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್‌.ಅಶೋಕ ಹಾಗೂ ಬಿಜೆಪಿ ಮುಖಂಡರು ಮಲದ ಗುಂಡಿ ಪರಿಶೀಲಿಸಿದರು

ಮುಖ್ಯಾಂಶಗಳು

- ಪ್ರಾಂಶುಪಾಲರು, ಶಿಕ್ಷಕರ ಜೊತೆಗೆ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು: ಬಿಜೆಪಿ ಒತ್ತಾಯ
- ಈ ಪ್ರಕರಣದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ: ಸಚಿವ ಬೈರತಿ ಸುರೇಶ್ ಭರವಸೆ

ಎಲ್ಲಾ ಸಿಬ್ಬಂದಿ ವರ್ಗಾವಣೆ: ಬೈರತಿ

‘ಶಾಲೆಯ ಎಲ್ಲಾ ಶಿಕ್ಷಕರು ಹಾಗೂ ಸಿಬ್ಬಂದಿಯನ್ನು ವರ್ಗಾವಣೆ ಮಾಡಲಾಗುವುದು. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವರ ಬೈರತಿ ಸುರೇಶ್ ಸುದ್ದಿಗಾರರಿಗೆ ತಿಳಿಸಿದರು.

‘ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ವಿಷಾದ ವ್ಯಕ್ತಪಡಿಸಿದ್ದಾರೆ. ತಪ್ಪು ಯಾರೇ ಮಾಡಿರಲಿ ಮಾದರಿ ಆಗುವ ರೀತಿಯಲ್ಲಿ ಶಿಕ್ಷೆ ನೀಡುತ್ತೇವೆ. ಘಟನೆಗೆ ಶಿಕ್ಷಕರಲ್ಲಿನ ಗುಂಪುಗಾರಿಕೆಯೇ ಕಾರಣವಾಗಿದೆ’ ಎಂದರು.

ಅಧಿಕಾರಿಗಳು, ಸಿಬ್ಬಂದಿ ಹಾಗೂ ಮಕ್ಕಳ ಜೊತೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು. ಮಲದ ಗುಂಡಿ ವೀಕ್ಷಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಮಕ್ಕಳ ಕಾಲಿಗೆ ಅಲರ್ಜಿ: ಅಶೋಕ

‘ಮಲದ ಗುಂಡಿಗೆ ಇಳಿದಿದ್ದ ಮಕ್ಕಳ ಕಾಲಿಗೆ ಸಮಸ್ಯೆ ಉಂಟಾಗಿದೆ. ಒಬ್ಬರ ಕಾಲಿಗೆ ಗಾಜು ತಾಗಿದೆ. ಹಲವರಿಗೆ ಚರ್ಮದ ಅಲರ್ಜಿ ಆಗಿದೆ. ಮಲ ಗುಂಡಿಗೆ ಇಳಿದ ಈ ಮಕ್ಕಳ ಬಟ್ಟೆಗಳನ್ನು ಸುಟ್ಟು ಹಾಕಲಾಗಿದೆ. ಈ ಸರ್ಕಾರಕ್ಕೆ ಕಣ್ಣು ಇಲ್ಲ’ ಎಂದು ಪ್ರತಿಪಕ್ಷ ನಾಯಕ ಅಶೋಕ ಟೀಕಿಸಿದರು.

ಎಸ್‌ಐಟಿ ತನಿಖೆಗೆ ಕೇಂದ್ರ ಸಚಿವ ನಾರಾಯಣಸ್ವಾಮಿ ಆಗ್ರಹ

ಪ್ರಕರಣವನ್ನು ಎಸ್‌ಐಟಿ ಮೂಲಕ ತನಿಖೆ ನಡೆಸಬೇಕು ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಆಗ್ರಹಿಸಿದರು. ‘ಮಕ್ಕಳ ಕೈಯಲ್ಲಿ ಸ್ವಚ್ಛ ಮಾಡಿಸಿರುವುದು ಸಮಾಜಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ಮಾಡಿರುವಂಥ ಅಪಮಾನ. ಇದನ್ನು ಯಾರೂ ಸಹಿಸಿಕೊಳ್ಳಲು ಸಾಧ್ಯವಿಲ್ಲ’ ಎಂದರು.

ಬೀಗ ಒಡೆದು ದಾಖಲೆ ಪರಿಶೀಲನೆ

ವಸತಿ ಶಾಲೆಗೆ ಅಧಿಕಾರಿಗಳ ಭೇಟಿ ಬಗ್ಗೆ ಮಾಹಿತಿ ಪಡೆಯಲು ದಾಖಲೆ ಪುಸ್ತಕ ಕೊಡಿ ಎಂದು ಸಚಿವ ಎ.ನಾರಾಯಣಸ್ವಾಮಿ ಹಾಗೂ ಸಂಸದ ಎಸ್‌. ಮುನಿಸ್ವಾಮಿ ಕೇಳಿದರು. ಆಗ ಅಧಿಕಾರಿಗಳು ಪ್ರಾಂಶುಪಾಲರ ಕೊಠಡಿಯ ಕಪಾಟಿನ ಬೀಗ ಒಡೆದು ದಾಖಲೆ ಒದಗಿಸಿದರು.

ಯಂತ್ರದಿಂದ ಮಲದ ಗುಂಡಿ ಸ್ವಚ್ಛ: ಅಧಿಕಾರಿಗಳು ಸೋಮವಾರ ವಸತಿ ನಿಲಯಕ್ಕೆ ಸಕ್ಕಿಂಗ್ ವಾಹನ ತರಿಸಿ ಅದರ ಮೂಲಕ ಮಲದ ಗುಂಡಿ ಸ್ವಚ್ಛಗೊಳಿಸಿದರು.

ನಗರದಲ್ಲಿ ಇಂದು

‘ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್’ ಉದ್ಘಾಟನೆ: ಅನಿಲ್ ಕೆಂಪಣ್ಣ, ಆಯೋಜನೆ ಮತ್ತು ಸ್ಥಳ: ನ್ಯೂ ಹಾರಿಜೋನ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಳ್ಳಂದೂರು, ಮಾರತ್‌ಹಳ್ಳಿ, ಬೆಳಿಗ್ಗೆ 7.45

ಅಂತರ ಕಾಲೇಜು ಅಥ್ಲೆಟಿಕ್ ಮೀಟ್: ಉದ್ಘಾಟನೆ: ಲಿಂಗರಾಜ ಗಾಂಧಿ, ಅತಿಥಿಗಳು: ಜವರೇಗೌಡ ಟಿ., ಆನಂದ್ ಕುಮಾರ್ ಸಿ.ಎಸ್., ವಿಜಯಲಕ್ಷ್ಮಿ ಎಂ.ವಿ., ಅಧ್ಯಕ್ಷತೆ: ವಿ.ಆರ್. ದೇವರಾಜ್, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 11.30

ಆಹಾರ ಮತ್ತು ಪಾನೀಯಗಳ ಉದ್ಯಮದಲ್ಲಿ ಉದ್ಯೋಗವಕಾಶಗಳು: ಅತಿಥಿಗಳು: ಜಿ.ಕೆ. ಪ್ರಮೋದ್, ಎಂ.ಆರ್. ಪ್ರಸನ್ನ ಕುಮಾರ್, ಅಧ್ಯಕ್ಷತೆ: ರಾಘವೇಂದ್ರ ಆರ್., ಆಯೋಜನೆ: ನಿಟ್ಟೆ ಎಜುಕೇಷನ್ ಟ್ರಸ್ಟ್, ಸ್ಥಳ: ಎನ್.ಎಸ್.ಎ.ಎಂ. ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರ, ಮಧ್ಯಾಹ್ನ 12

‘ಶ್ರೀಮದ್ಭಗವದ್ಗೀತ’ ಕುರಿತು ಉಪನ್ಯಾಸ: ಕಲ್ಲಾಪುರ ಪವಮಾನಾಚಾರ್ಯ, ಭಜನೆ: ವಿಜಯ ವಿಠಲ ಭಜನಾ ಮಂಡಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳ ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಗೀತಾ ಮಂದಿರ, ಶ್ರೀರಾಮಪುರ, ಸಂಜೆ 6

ನಟರಾಜ್ ಹುಳಿಯಾರ್ ಅವರು ಬರೆದಿರುವ ‘ಡೈರೆಕ್ಟ್ ಆ್ಯಕ್ಷನ್’ (ಎಂ.ಡಿ. ನಂಜುಂಡಸ್ವಾಮಿ ಹೋರಾಟ ಗಾಥ) ನಾಟಕ ಪ್ರದರ್ಶನ: ನಿರ್ದೇಶನ: ಕಬಡ್ಡಿ ನರೇಂದ್ರಬಾಬು, ಮುಖ್ಯಪಾತ್ರದಲ್ಲಿ: ಸಂಪತ್ ಮೈತ್ರೇಯ, ಆಯೋಜನೆ: ಸಮತಾ ಚಿಂತನಾ, ಸ್ಥಳ: ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 7

‘ಹನ್ನೆರಡು ಮೈನಸ್ ಒಂದು’ ನಾಟಕ ಪ್ರದರ್ಶನ: ಆಯೋಜನೆ: ಅನೇಕ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ದಾವೂದ್ ಆರೋಗ್ಯವಾಗಿದ್ದಾನೆ ಆಪ್ತ ಶಕೀಲ್

ಮುಂಬೈ: ಪಾಕಿಸ್ತಾನದಲ್ಲಿ ನೆಲೆಸಿರುವ ಭೂಗತ ಪಾತಕಿ ದಾವೂದ್ ಇಬ್ರಾಹಿಂಗೆ ‘ಅಪರಿಚಿತ’ರು ವಿಷ ಹಾಕಿದ್ದಾರೆ ಎಂಬ ವದಂತಿಗಳು ವ್ಯಾಪಕವಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಈ ವಿಷಯ ಹೆಚ್ಚು ಚರ್ಚೆಗೆ ಒಳಗಾಗಿದೆ.

ಈ ಕುರಿತು ಸುದ್ದಿವಾಹಿನಿಯೊಂದಕ್ಕೆ ಪ್ರತಿಕ್ರಿಯಿಸಿದ ದಾವೂದ್‌ನ ಆಪ್ತ, ಛೋಟಾ ಶಕೀಲ್, ‘ದಾವೂದ್‌ಗೆ ವಿಷ ಹಾಕಿದ್ದಾರೆ ಎಂಬ ವರದಿಗಳು ಸುಳ್ಳು. ಆತ ಆರೋಗ್ಯವಾಗಿದ್ದಾನೆ. ಪ್ರತಿ ವರ್ಷವೂ ಇಂಥ ಸುದ್ದಿಗಳನ್ನು ಹಬ್ಬಿಸುತ್ತಾರೆ’ ಎಂದಿದ್ದಾನೆ.

‘ಅಪರಿಚಿತ’ರು ವಿಷ ಹಾಕಿದ್ದರಿಂದ ತೀವ್ರ ಅಸ್ವಸ್ಥಗೊಂಡಿರುವ ದಾವೂದ್‌ನನ್ನು ಕರಾಚಿಯ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಬಿಗಿ ಭದ್ರತೆ ನಡುವೆ ಚಿಕಿತ್ಸೆ ನೀಡಲಾಗುತ್ತಿದೆ. ವಿಷ ಹಾಕಿದ್ದರಿಂದಾಗಿ ದಾವೂದ್ ಮೃತಪಟ್ಟಿದ್ದಾನೆ ಎಂಬ ವರದಿಗಳೂ ಹರಿದಾಡುತ್ತಿವೆ.

ಸುದ್ದಿಗೋಷ್ಠಿಗೆ ನುಗ್ಗಿ ಗಲಾಟೆ ಕಾರಜೋಳ ಜೊತೆ ವಾಗ್ವಾದ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಸರ್ಕಾರಿ ಅತಿಥಿ ಗೃಹದಲ್ಲಿ ಮಾಜಿ ಸಚಿವ ಗೋವಿಂದ ಕಾರಜೋಳ ಅವರು ಪತ್ರಿಕಾಗೋಷ್ಠಿ ನಡೆಸುತ್ತಿದ್ದ ವೇಳೆ ಏಕಾಏಕಿ ನುಗ್ಗಿದ ಮಾದಿಗ ಮಹಾಸಭಾದ ಸದಸ್ಯರು ಕಾರಜೋಳ ಜೊತೆ ವಾಗ್ವಾದ ನಡೆಸಿದರು. ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಹತ್ತು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಮಾಜಿ ಸಚಿವರು ಪತ್ರಿಕಾಗೋಷ್ಠಿ ನಡೆಸುತ್ತಿದ್ದ ವಿಚಾರ ತಿಳಿದು ಸ್ಥಳಕ್ಕೆ ಬಂದ ಮಹಾಸಭಾದ ಸದಸ್ಯರು, ಬಿಜೆಪಿ ಅವಧಿಯಲ್ಲಿ ಮಾದಿಗ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಪ್ರಶ್ನಿಸಿದರು.

ಗಲಾಟೆ ಸಂಬಂಧ ಹನುಮಂತಪ್ಪ ದುರ್ಗ, ದೇವರಾಜ್, ಸತೀಶ್ ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

‘ಅಧಿಕಾರದಲ್ಲಿದ್ದಾಗ ಮಾದಿಗ ಸಮುದಾಯಕ್ಕೆ ನೀವು ಅನ್ಯಾಯ ಮಾಡಿದ್ದೀರಿ. ಸಮುದಾಯದ ಬಗ್ಗೆ ಮಾತನಾಡಲು ನಿಮಗೆ ಯಾವ ನೈತಿಕತೆ ಇದೆ’ ಎಂದು ಹನುಮಂತಪ್ಪ ದುರ್ಗ ನೇತೃತ್ವದ ಗುಂಪು ಕಾರಜೋಳ ಅವರನ್ನು ಪ್ರಶ್ನಿಸಿತು.

ಏಕಾಏಕಿ ಎದುರಾದ ಈ ಪ್ರಶ್ನೆ ಕೇಳಿ ಕಾರಜೋಳ ಕುಪಿತರಾದರು.

‘ಸಮುದಾಯದ ಬಗ್ಗೆ ಮಾತನಾಡಲು ಕಾಲಾವಕಾಶವಿದೆ. ಬಿಜೆಪಿ ಪತ್ರಿಕಾಗೋಷ್ಠಿಗೆ ನುಗ್ಗಿ ಗಲಾಟೆ ಮಾಡುವುದು ಸರಿಯಲ್ಲ. ಕಾಂಗ್ರೆಸ್ ಪ್ರೇರಿತ ಗೂಂಡಾಗಿರಿಗೆ ಇದು ನಿದರ್ಶನ. ಪೊಲೀಸರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಗಲಾಟೆ ಮಾಡಿದವರನ್ನು ಬಂಧಿಸಬೇಕು’ ಎಂದು ಕಾರಜೋಳ ಆಗ್ರಹಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿ ವಿಫಲರಾದರು.

ಹಂದಿಗುಂದ ಬೆಟ್ಟದಲ್ಲಿ ಚಾರಣ ಕೈಗೊಂಡಿದ್ದರು

ಬೆಟ್ಟದಲ್ಲಿ ಸಿಲುಕಿದ್ದ ಯುವತಿಯರ ರಕ್ಷಣೆ

ಪ್ರಜಾವಾಣಿ ಚಿತ್ರ

ರಾಮನಗರ: ತಾಲ್ಲೂಕಿನ ಹಂದಿಗುಂದಿ ಬೆಟ್ಟಕ್ಕೆ ಚಾರಣ ಕೈಗೊಂಡು ದಾರಿತಪ್ಪಿ ರಾತ್ರಿಯವರೆಗೆ ಬೆಟ್ಟದಲ್ಲೇ ಸಿಲುಕಿದ್ದ ಯುವತಿಯರ ಗುಂಪನ್ನು ಪೊಲೀಸರು ರಕ್ಷಿಸಿದ್ದಾರೆ. ಬೆಂಗಳೂರು ಮೂಲದ ಆರು ಯುವತಿಯರು ಡಿ. 16ರಂದು ಬೆಳಿಗ್ಗೆ ಬೆಟ್ಟಕ್ಕೆ ಚಾರಣ ಹೋಗಿದ್ದರು. ಸಂಜೆವರೆಗೆ ಬೆಟ್ಟದಲ್ಲೇ ಸುತ್ತಾಡಿದ್ದ ಯುವತಿಯರು, ಕೆಳಕ್ಕೆ ಇಳಿಯುವಾಗ ದಾರಿ ತಪ್ಪಿದ್ದರು.

ಯುವತಿಯರು ಸರಿಯಾದ ದಾರಿ ಹುಡುಕಾಡುವ ಹೊತ್ತಿಗೆ ಕತ್ತಲಾಗಿತ್ತು. ಮೊಬೈಲ್ ಫೋನ್‌ನಲ್ಲಿ ನೆಟ್‌ವರ್ಕ್ ಸಮಸ್ಯೆ ಜೊತೆಗೆ, ಕುರುಚಲು ಕಾಡಿನ ಬೆಟ್ಟದಲ್ಲಿ ಕಾಡುಪ್ರಾಣಿಗಳ ಭಯವೂ ಶುರುವಾಗಿದೆ. ಮೊಬೈಲ್ ಟಾರ್ಚ್ ಬೆಳಕಲ್ಲೇ ನೆಟ್‌ವರ್ಕ್ ಸಿಗುವ ಜಾಗಕ್ಕೆ ಬಂದಿದ್ದ ಯುವತಿಯರು, ಕೂಡಲೇ 112ಗೆ ಕರೆ ಮಾಡಿ ಬೆಟ್ಟದಲ್ಲಿ ಸಿಲುಕಿಕೊಂಡಿರುವ ಕುರಿತು ಮಾಹಿತಿ ನೀಡಿದರು ಎಂದು ಪೊಲೀಸರು ಹೇಳಿದರು.

ಕರ್ತವ್ಯನಿರತ ಪೊಲೀಸರಾದ ರಾಜೇಶ್ ಮತ್ತು ರಮೇಶ್ ಅವರು, ರಕ್ಷಣೆಗಾಗಿ ತಪ್ಪಲಿನವರೆಗೆ ವಾಹನದಲ್ಲಿ ಬಂದರು. ಬೆಟ್ಟಕ್ಕೆ ವಾಹನ ಹೋಗಲು ಸಾಧ್ಯವಾಗದಿದ್ದರಿಂದ ಸ್ಥಳೀಯರ ನೆರವಿನೊಂದಿಗೆ ಕಾಲ್ನಡಿಗೆಯಲ್ಲೇ ರಕ್ಷಣಾ ಕಾರ್ಯಾಚರಣೆ ಕೈಗೊಂಡರು. ಬೆಟ್ಟಕ್ಕೆ ಸುಮಾರು 10 ಕಿಲೋಮೀಟರ್ ಕಾಲ್ನಡಿಗೆಯಲ್ಲೇ ತೆರಳಿದರು ಎಂದು ತಿಳಿಸಿದರು.

ಯುವತಿಯರ ಮೊಬೈಲ್ ನೆಟ್‌ವರ್ಕ್ ಮತ್ತು ಟಾರ್ಚ್ ಬೆಳಕು ಆಧರಿಸಿ ಎರಡು ತಾಸಿನ ಬಳಿಕ ಅವರಿರುವ ಸ್ಥಳವನ್ನು ಪತ್ತೆ ಹಚ್ಚಲಾಯಿತು. ನಂತರ, ಆರು ಮಂದಿಯನ್ನು ಬೆಟ್ಟದಿಂದ ಕೆಳಕ್ಕೆ ಸುರಕ್ಷಿತವಾಗಿ ಕರೆದುಕೊಂಡು ಬಂದು, ಕಳಿಸಿ ಕೊಡಲಾಯಿತು ಎಂದರು.

ದಾರಿ ಕಾಣದೆ ಬೆಟ್ಟದಲ್ಲಿ ಸಿಲುಕಿದ್ದ ತಮ್ಮನ್ನು ರಕ್ಷಿಸಿದ ಪೊಲೀಸರಿಗೆ ಯುವತಿಯರು ಕೃತಜ್ಞತೆ ಸಲ್ಲಿಸಿದರು. ರಕ್ಷಣಾ ಕಾರ್ಯಾಚರಣೆ ವಿಷಯವನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿರುವ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಅವರು, ಸಿಬ್ಬಂದಿಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಾಮನಗರ ತಾಲ್ಲೂಕಿನ ಹಂದಿಗುಂದಿ ಬೆಟ್ಟದಲ್ಲಿ ಚಾರಣಕ್ಕೆ ಬಂದು ದಾರಿ ತಪ್ಪಿದ್ದ ಯುವತಿಯರನ್ನು ಪೊಲೀಸರು ರಕ್ಷಿಸಿದರು

ಕ್ಷೇಮ ಕುಶಲ

ನಕಾರಾತ್ಮಕ ಯೋಚನೆಗಳ ಸುಳಿಯಲ್ಲಿ

ಮಕ್ಕಳಲ್ಲಿ ನ್ಯುಮೋನಿಯಾ ಎಚ್ಚರವಿರಲಿ

ಡಾ. ಕಿರಣ್ ವಿ.ಎಸ್.

> ಮಕ್ಕಳಲ್ಲಿ ನ್ಯುಮೋನಿಯಾ ಕಾಯಿಲೆಯನ್ನು ಯಾವ ಕಾರಣಕ್ಕೂ ಅವಗಣಿಸಬಾರದು. ಪೋಷಕರ ಸಹಕಾರ, ವೈದ್ಯರ ಪ್ರಯತ್ನ, ಉತ್ತಮ ಲಸಿಕೆಗಳು, ಪರಿಣಾಮಕಾರಿ ಚಿಕಿತ್ಸೆ ಮತ್ತು ಸರ್ಕಾರಗಳ ಬೆಂಬಲದಿಂದ ಮಕ್ಕಳ ನ್ಯುಮೋನಿಯಾ ಚಿಕಿತ್ಸೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ.

ಎಳೆಯ ವಯಸ್ಸಿನ ಮಕ್ಕಳಲ್ಲಿ ಶ್ವಾಸಕೋಶಗಳ ಸಮಸ್ಯೆ ಗಂಭೀರವಾದದ್ದು. ಜಗತ್ತಿನಾದ್ಯಂತ ಐದು ವರ್ಷಗಳ ಒಳಗಿನ ಮಕ್ಕಳ ಅನಾರೋಗ್ಯ ಮತ್ತು ಸಾವಿಗೆ ಪ್ರಮುಖ ಕಾರಣ ನ್ಯುಮೋನಿಯಾ.

ಗ್ರೀಕ್ ಭಾಷೆಯಲ್ಲಿ ನ್ಯುಮೋನ್ ಎಂದರೆ ಶ್ವಾಸಕೋಶಗಳು ಎಂದರ್ಥ. ನ್ಯುಮೋನಿಯಾ ಎಂದರೆ ಶ್ವಾಸಕೋಶಗಳ ಸೋಂಕು. ಪ್ರತಿವರ್ಷ ಪ್ರಪಂಚದಲ್ಲಿ ಎರಡು ಲಕ್ಷ ನವಜಾತ ಶಿಶುಗಳೂ ಸೇರಿ ಐದು ವರ್ಷಗಳ ಒಳಗಿನ ಸುಮಾರು 7,50,000 ಮಕ್ಕಳು ನ್ಯುಮೋನಿಯಾ ಕಾರಣದಿಂದ ಮರಣಿಸುತ್ತಾರೆ.

ಮಕ್ಕಳ ಸಾವುಗಳ ಎಲ್ಲ ಕಾರಣಗಳ ಪೈಕಿ ನ್ಯುಮೋನಿಯಾ ಶೇ 15ರಷ್ಟು ಎಂದು ಅಂದಾಜು. ವಯಸ್ಸು ಕಡಿಮೆಯಿದ್ದಷ್ಟೂ ಮಕ್ಕಳು ನ್ಯುಮೋನಿಯಾದಿಂದ ಬಳಲುವ ಸಾಧ್ಯತೆಗಳು ಅಧಿಕ. ಸರಿಯಾದ ಲಸಿಕೆ ಮತ್ತು ಚಿಕಿತ್ಸೆಗಳು ದಕ್ಕಿದರೆ ಈ ಎಲ್ಲ ಮಕ್ಕಳ ಮರಣವನ್ನೂ ತಡೆಗಟ್ಟಬಹುದು. ನ್ಯುಮೋನಿಯಾ ಕಾರಣದಿಂದ ಆಗುವ ಮಕ್ಕಳ ಮರಣ ಆಯಾ ದೇಶದ ಆರೋಗ್ಯ ವ್ಯವಸ್ಥೆಯ ನ್ಯೂನತೆಗಳ ಮಾಪಕ.

ಮಕ್ಕಳಲ್ಲಿ ರೋಗ-ನಿರೋಧಕ ಶಕ್ತಿ ಕ್ಷೀಣವಾಗಿರುತ್ತದೆ. ಬಹುತೇಕ ಬಡದೇಶಗಳ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಾರೆ. ಅಂತಹವರಲ್ಲಿ ಯಾವುದೇ ಸೋಂಕು ಘಾತಕವಾಗಬಲ್ಲದು. ನ್ಯುಮೋನಿಯಾ ರೋಗಿಗಳು ಕೆಮ್ಮುವಾಗ, ಸೀನುವಾಗ ರೋಗಕಾರಕ ಪರೋಪಜೀವಿಗಳು ಸಣ್ಣ ಬಿಂದುಗಳ ಗಾತ್ರದಲ್ಲಿ ಗಾಳಿಯನ್ನು ಸೇರುತ್ತವೆ. ಈ ಹಾದಿಯಲ್ಲಿ ಉಸಿರಾಟದ ಮೂಲಕ ಒಬ್ಬರಿಂದೊಬ್ಬರಿಗೆ ಹಬ್ಬುವ ನ್ಯುಮೋನಿಯಾ ಸೋಂಕಿಗೆ ವ್ಯಾಪಕವಾಗಿ ಹರಡುವ ಸಾಮರ್ಥ್ಯವಿದೆ.

ಬ್ಯಾಕ್ಟೀರಿಯಾ, ವೈರಸ್ ಅಥವಾ ಫಂಗಸ್ ಸೋಂಕುಕಾರಕ ಪರೋಪಜೀವಿಗಳು ನ್ಯುಮೋನಿಯಾ ಉಂಟುಮಾಡಬಲ್ಲವು. ವೈರಸ್ ನ್ಯುಮೋನಿಯಾ ಮುಖ್ಯವಾಗಿ ಒಂದು ತಿಂಗಳ ವಯಸ್ಸಿನಿಂದ ಎರಡು ವರ್ಷದವರೆಗಿನ ಮಕ್ಕಳಲ್ಲಿ ಕಾಣುತ್ತದೆ.

ಸೋಂಕಿನಲ್ಲಿ ರೋಗಲಕ್ಷಣಗಳು ತೀವ್ರವಾಗಿರುತ್ತವೆ. ಇದರಲ್ಲಿ ಆ್ಯಂಟಿಬಯಾಟಿಕ್ ಔಷಧಗಳು ಕೆಲಸ ಮಾಡಲಾರವು. ಎರಡು ವರ್ಷದ ವಯಸ್ಸಿನ ನಂತರ ಬ್ಯಾಕ್ಟೀರಿಯಾ ಮೂಲದ ನ್ಯುಮೋನಿಯಾಗೆ ತುತ್ತಾಗುವ ಸಾಧ್ಯತೆಗಳು ಏರುತ್ತಾ ಹೋಗುತ್ತವೆ. ಈ ಸೋಂಕಿನ ಚಿಕಿತ್ಸೆಯಲ್ಲಿ ಸೂಕ್ತ ಆ್ಯಂಟಿಬಯಾಟಿಕ್ ಔಷಧಗಳನ್ನು ಬಳಸಬೇಕು. ಫಂಗಸ್ ಮೂಲದ ನ್ಯುಮೋನಿಯಾ ಸಾಮಾನ್ಯವಾಗಿ ರೋಗ-ನಿರೋಧಕ ಶಕ್ತಿ ಕುಂಠಿತವಾಗಿರುವ ಮಕ್ಕಳನ್ನು ಕಾಡುತ್ತದೆ. ಇದನ್ನು ಪತ್ತೆ ಮಾಡುವುದು ಮತ್ತು ಚಿಕಿತ್ಸೆ ನೀಡುವುದು ಸವಾಲಿನ ಸಂಗತಿ.

ಲಕ್ಷಣಗಳೇನು?

ಉಸಿರಿನ ಮೂಲಕ ಶ್ವಾಸನಾಳಗಳನ್ನು ಪ್ರವೇಶಿಸುವ ಸೋಂಕುಕಾರಕ ಪರೋಪಜೀವಿಗಳು ಶ್ವಾಸಕೋಶಗಳಲ್ಲಿ ಹರಡಿ ನ್ಯುಮೋನಿಯಾ ಲಕ್ಷಣಗಳನ್ನು ತೋರುತ್ತವೆ. ಮಗುವಿಗೆ ಜ್ವರ, ಕೆಮ್ಮುಗಳು ಕಾಡುತ್ತವೆ. ಉಸಿರಾಟದ ಗತಿ ತೀವ್ರವಾಗುತ್ತದೆ. ಮೂಗಿನ ಹೊಳ್ಳೆಗಳ ಹಿಗ್ಗುವಿಕೆ, ಎದೆಯ ಪಕ್ಕೆಗಳ ಸೆಳೆತಗಳು ಮಗು ಉಸಿರನ್ನು ಎಳೆದುಕೊಳ್ಳಲು ಕಷ್ಟಪಡುವುದನ್ನು ಸೂಚಿಸುತ್ತವೆ. ಪ್ರತಿಯೊಂದು ಉಸಿರಿನ ಜೊತೆಗೂ ಮಗು ಮುಲುಗುವಂತೆ ಸದ್ದು ಮಾಡುತ್ತದೆ. ನಿಶ್ಶಕ್ತಿ ಆವರಿಸಿ, ಮಗು ಚಟುವಟಿಕೆಯಿಲ್ಲದೆ ಮಂಕಾಗುತ್ತದೆ. ಹಾಲು ಕುಡಿಯಲು, ಆಹಾರ ಸೇವಿಸಲು ನಿರಾಕರಿಸುತ್ತದೆ. ಇದು ಮುಂದುವರೆದು ಮಗು ಅರೆ-ಪ್ರಜ್ಞಾವಸ್ಥೆಗೆ ಜಾರಬಹುದು; ಸೆಳೆತ ಉಂಟಾಗಬಹುದು. ಇದು ಅತ್ಯಂತ ತೀವ್ರ ನ್ಯುಮೋನಿಯಾದ ಸಂಕೇತ. ಈ ಹಂತದಲ್ಲೂ ಚಿಕಿತ್ಸೆ ದೊರೆಯದಿದ್ದರೆ ಮರಣ ಸಂಭವಿಸಬಹುದು.

ನುರಿತ ವೈದ್ಯರು ನ್ಯುಮೋನಿಯಾ ಸೋಂಕನ್ನು ಶ್ವಾಸಕೋಶಗಳ ಭೌತಿಕ ಪರೀಕ್ಷೆಯಿಂದ ಅನುಮಾನಿಸಬಲ್ಲರು. ಇದಕ್ಕೆ ಪೂರಕವಾಗಿ ರಕ್ತದ ಪರೀಕ್ಷೆಗಳು ಮತ್ತು ಶ್ವಾಸಕೋಶಗಳ ಎಕ್ಸ್-ರೇ ತಪಾಸಣೆ ನೆರವಾಗುತ್ತವೆ. ನ್ಯುಮೋನಿಯಾ ಚಿಕಿತ್ಸೆಗೆ ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರಮಾಣಿಸಲ್ಪಟ್ಟ, ಜಾಗತಿಕವಾಗಿ ಮಾನ್ಯವಾದ ಚಿಕಿತ್ಸೆಯ ಮಾರ್ಗಸೂಚಿಗಳಿವೆ. ಅದರ ಪ್ರಕಾರ ನೀಡುವ ಚಿಕಿತ್ಸೆ ಬಹುತೇಕ ಮಕ್ಕಳಲ್ಲಿ ಫಲಕಾರಿಯಾಗುತ್ತದೆ.

ತೀವ್ರವಾದ ನ್ಯುಮೋನಿಯಾ ಇರುವ ಮಕ್ಕಳನ್ನು ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಬೇಕು. ಬಾಯಿಂದ ಔಷಧ ಸೇವಿಸಲು ಅಸಮರ್ಥರಾದ ಮಕ್ಕಳಿಗೆ ನೇರವಾಗಿ ರಕ್ತಕ್ಕೆ ಔಷಧ ನೀಡಬೇಕಾಗುತ್ತದೆ. ಉಸಿರಾಟಕ್ಕೆ ಹೋರಾಡುವ ಮಕ್ಕಳಿಗೆ ಆಕ್ಸಿಜನ್ ನೀಡಬೇಕು. ಕೆಲವೊಮ್ಮೆ ಕೃತಕ ಉಸಿರಾಟ ಯಂತ್ರಗಳ ನೆರವೂ ಬೇಕಾಗಬಹುದು. ಸೋಂಕಿಗೆ ಕಾರಣವಾಗಿರುವ ರೋಗಕಾರಕ ಪರೋಪಜೀವಿಗೆ ಅನುಗುಣವಾಗಿ ಚಿಕಿತ್ಸೆ ನಡೆಯಬೇಕು.

ತಡೆಗಟ್ಟುವ ವಿಧಾನಗಳು

ಯಾವುದೇ ಸಾಂಕ್ರಾಮಿಕ ಕಾಯಿಲೆಯ ಚಿಕಿತ್ಸೆಯಷ್ಟೇ ಮುಖ್ಯವಾದದ್ದು ಅದನ್ನು ಬಾರದಂತೆ ತಡೆಯುವ ವಿಧಾನಗಳು. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯುನಿಸೆಫ್ ಸಂಘಟನೆಗಳು ಮಕ್ಕಳಲ್ಲಿ ನ್ಯುಮೋನಿಯಾ ತಡೆಗಟ್ಟಲು ಮತ್ತು ಸೂಕ್ತ ಚಿಕಿತ್ಸೆ ನೀಡಲು ಕಾರ್ಯತಂತ್ರವನ್ನು ರೂಪಿಸಿವೆ.

ನ್ಯುಮೋನಿಯಾ ತಡೆಗಟ್ಟುವಲ್ಲಿ ಪೌಷ್ಟಿಕ ಆಹಾರಸೇವನೆ, ಕಾಯಿಲೆಯಿಂದ ಬಳಲುತ್ತಿರಬಹುದಾದವರಿಂದ ಅಂತರ ಕಾಯ್ದುಕೊಳ್ಳುವುದು, ಕೈಗಳನ್ನು ಸಾಬೂನು ಬಳಸಿ ಚೆನ್ನಾಗಿ ತೊಳೆಯುವುದು, ಅಡುಗೆ ಮಾಡಲು ಉರುವಲು ಉರಿಸುವಾಗ ಬರುವ ಹೊಗೆಯ ಮಾಲಿನ್ಯವನ್ನು ತಗ್ಗಿಸುವ ಪ್ರಯತ್ನಗಳು, ಪೋಷಕರು ಧೂಮಪಾನದಿಂದ ದೂರವಿರುವುದು, ಮಕ್ಕಳಿಗೆ ಬದುಕಿನ ಮೊದಲ ಆರು ತಿಂಗಳ ಕಾಲ ಕೇವಲ ತಾಯಿಯ ಮೊಲೆಹಾಲನ್ನು ಕುಡಿಸುವುದು, ಆಯಾ ವಯಸ್ಸಿನ ಲಸಿಕೆಗಳ ಬಳಕೆ ಮೊದಲಾವುಗಳು ಪರಿಣಾಮಕಾರಿ.

ಕಾಯಿಲೆಯ ಲಕ್ಷಣಗಳನ್ನು ಸರಿಯಾಗಿ ಅರಿತು, ಕಾಯಿಲೆ ಇನ್ನೂ ಪ್ರಾಥಮಿಕ ಮಟ್ಟದಲ್ಲಿ ಇರುವಾಗಲೇ ಚಿಕಿತ್ಸೆ ಪಡೆಯುವುದು ಮಗುವಿನ ಆರೋಗ್ಯದ ದೃಷ್ಟಿಯಿಂದ ಬಹಳ ಸೂಕ್ತ. ನಮ್ಮ ದೇಶದಲ್ಲಿ ನ್ಯುಮೋನಿಯಾ ಬಾರದಂತೆ ಕಾಪಾಡುವ ಲಸಿಕೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ.

ಮಕ್ಕಳಲ್ಲಿ ನ್ಯುಮೋನಿಯಾ ಕಾಯಿಲೆಯನ್ನು ಯಾವ ಕಾರಣಕ್ಕೂ ಅವಗಣಿಸಬಾರದು. ಪೋಷಕರ ಸಹಕಾರ, ವೈದ್ಯರ ಪ್ರಯತ್ನ, ಉತ್ತಮ ಲಸಿಕೆಗಳು, ಪರಿಣಾಮಕಾರಿ ಚಿಕಿತ್ಸೆ ಮತ್ತು ಸರ್ಕಾರಗಳ ಬೆಂಬಲದಿಂದ ಮಕ್ಕಳ ನ್ಯುಮೋನಿಯಾ ಚಿಕಿತ್ಸೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ.

ಕಳೆದ ಎರಡು ದಶಕಗಳಲ್ಲಿ ನ್ಯುಮೋನಿಯಾದಿಂದ ಮರಣಿಸುವ ಮಕ್ಕಳ ಸಂಖ್ಯೆ ಶೇ 60ರಷ್ಟು ಕಡಿಮೆಯಾಗಿದೆ. ಆದರೂ ಈ ನಿಟ್ಟಿನಲ್ಲಿ ಸಾಧಿಸಬೇಕಾದ ಬೆಳವಣಿಗೆ ಇನ್ನೂ ಸಾಕಷ್ಟಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯಗಳನ್ನು ಉತ್ತಮಗೊಳಿಸುವುದು ಮುಂದಿನ ದಶಕದ ಧ್ಯೇಯ. ಇದು ಸಾಧ್ಯವಾದರೆ ಮಕ್ಕಳ ನ್ಯುಮೋನಿಯಾ ಚಿಕಿತ್ಸೆಯಲ್ಲಿ ಗಣನೀಯ ಪ್ರಗತಿ ಸಾಧಿಸಬಹುದಾಗಿದೆ. ❖

ರೂಪಾ ಕೆ.ಎಂ.

ಮಕ್ಕಳ ಮನಸ್ಸನ್ನು ನಕಾರಾತ್ಮಕ ಆಲೋಚನೆಗಳಿಂದ ದೂರವಿರಿಸುವುದು ಅಷ್ಟು ಸುಲಭದ ಮಾತಲ್ಲ. ಮನೆ ಹಾಗೂ ಸುತ್ತಲಿನ ಪರಿಸರದಲ್ಲಿರುವ ನಕಾರಾತ್ಮಕ ನಡವಳಿಕೆಗಳನ್ನು ಮಗು ಬಹುಬೇಗ ಕಲಿತುಬಿಡುವ ಸಾಧ್ಯತೆಯೇ ಹೆಚ್ಚು. ಯಾಕೆಂದರೆ ಮಗು ನೋಡಿ ಕಲಿಯುವುದೇ ಹೆಚ್ಚು.

'ಇದು ಹೀಗಲ್ಲ, ಇದು ತಪ್ಪು' ಎಂದು ಹೇಳಿದರೆ ಅರ್ಥ ಮಾಡಿಕೊಳ್ಳುವುದಕ್ಕಿಂತ ಸರಿಯೋ ತಪ್ಪೋ ಎಂದು ಯೋಚಿಸುವಷ್ಟು ಪ್ರಬುದ್ಧರಲ್ಲದ ಮಕ್ಕಳು ಇತರರ ವರ್ತನೆಗಳನ್ನು ಬಹಳ ಸಲೀಸಾಗಿ ಅನುಕರಿಸುತ್ತಾರೆ. ಪೋಷಕರಾದವರು ಆಗಾಗ್ಗೆ ತಮ್ಮ ನಡವಳಿಕೆಯನ್ನು ಸ್ವವಿಮರ್ಶೆಗೆ ಒಳಪಡಿಸಿಕೊಳ್ಳುವುದು ಅನಿವಾರ್ಯ. ಕಿರುಚಿ ಮಾತನಾಡುವ, ಸದಾ ಬೈಯುವ ಪೋಷಕರ ನಡವಳಿಕೆಗಳು ಮಕ್ಕಳ ಮೃದು ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಜೊತೆಗೆ ಈ ನಡವಳಿಕೆಯನ್ನೆ ಮಾದರಿಯಾಗಿ ತೆಗೆದುಕೊಳ್ಳುತ್ತಾರೆ.

ಇನ್ನು ಬಣ್ಣ, ರೂಪ, ಆಕಾರ ಕಾರಣಗಳಿಗಾಗಿ ಮಕ್ಕಳಿಗೆ ನಾವಿಡುವ ಅಡ್ಡ ಹೆಸರುಗಳು, ಹೀಗಳೆಯುವಿಕೆ, ತೆಗಳುವಿಕೆಯ ವಾತಾವರಣವು ಅವರೊಳಗೆ ನಕಾರಾತ್ಮಕ ಆಲೋಚನೆಗಳಿಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಪದೇ ಪದೇ 'ನೀನು ಹೀಗೆ; ಕೋಪಿಷ್ಠ, ಹಠವಾದಿ, ಪುಕ್ಕಲ' ಎಂದು ನಾವು ಕೊಡುವ ಹಣೆಪಟ್ಟಿಗಳು ಅವರ ಸುಪ್ತಮನಸ್ಸನ್ನು ಅದೇ ದಿಕ್ಕಿನಲ್ಲಿ ಸಾಗುವಂತೆ ಮಾಡಬಲ್ಲವು.

ಮಕ್ಕಳು ಪುಟಿದೇಳುವ ಅದಮ್ಯ ಶಕ್ತಿ. ಶಿಸ್ತಿನ ಪಾಠ ಕಲಿಸುವ ನೆಪದಲ್ಲಿ ಅವರ ಮೇಲೆ ಹೇರುವ ನಿಯಮಗಳು ಕೆಲವೊಮ್ಮೆ ಆತ್ಮವಿಶ್ವಾಸವನ್ನು ಕುಗ್ಗಿಸಿ, ಭಯವನ್ನು ತುಂಬಬಲ್ಲವು. ನಕಾರಾತ್ಮಕ ಯೋಚನೆಗಳನ್ನು ತುಂಬಿಕೊಂಡ ಮಕ್ಕಳನ್ನು ಮೊದಲಿಗೆ ಗುರುತಿಸಬೇಕು.

ಗುರುತಿಸುವುದು ಹೇಗೆ?

ತನ್ನ ಶಕ್ತಿಯ ಬಗ್ಗೆ ತನಗೆ ಅಪನಂಬಿಕೆ; ಏನೇ ಆಟ ಆಡಲು ಹೇಳಿದರೂ, ಸಣ್ಣ ಕೆಲಸ ಹೇಳಿದರೂ ಅದನ್ನು ಮಾಡಲು ಹಿಂಜರಿಯುವುದು. ಗುಂಪಿನಲ್ಲಿದ್ದಾಗಲೂ ಕ್ರಿಯಾಶೀಲವಾಗಿ ಇರಲು ಇಚ್ಛಿಸದೇ ಇರುವುದು. ಪರಿಪೂರ್ಣತೆಯ ಗೀಳು ಬೆಳೆಸಿಕೊಳ್ಳುವುದು, ಯಾರು ಏನು ಅಂದುಕೊಳ್ಳುತ್ತಾರೋ ಅಂದುಕೊಂಡೇ ಕಾಲಹರಣ ಮಾಡಲು ನೋಡುವುದು ಇವೆಲ್ಲವೂ ನಕಾರಾತ್ಮಕ ಆಲೋಚನೆಯ ಪ್ರಭಾವಕ್ಕೆ ಒಳಗಾದ ಮಕ್ಕಳ ಪ್ರಮುಖ ಲಕ್ಷಣಗಳು.

ಎಂಥದ್ದೇ ಪರಿಸ್ಥಿತಿಯಲ್ಲಿಯೂ ಅಪಜಯದ ಬಗ್ಗೆಯೇ ಹೆಚ್ಚು ಗಮನವಿಡುವುದು. ಫೇಲಾದರೆ, ಈ ಪರೀಕ್ಷೆಯನ್ನು ತೆಗೆದುಕೊಳ್ಳಲು ಸಾಧ್ಯವಾಗದೇ ಹೋದರೆ, ಈ ಆಟ ಆಡಲು ಆಗದೇ ಇದ್ದರೆ ಹೀಗೆ ಎಲ್ಲದರಲ್ಲಿಯೂ ಸಂಶಯಾತ್ಮಕ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳಲು ಆಗದೇ ಕೈ ಚೆಲ್ಲುವುದು. ಫಲಿತಾಂಶ ಏನಾಗುವುದೋ ಎಂದು ಅವಕಾಶಗಳು ಎದುರಾದಾಗೆಲ್ಲ ಕೈಕಟ್ಟಿ ಕುಳಿತುಬಿಡುವ ಈ ಮಕ್ಕಳ ಬದುಕನ್ನು ಈ ನಕಾರಾತ್ಮಕ ಆಲೋಚನೆಗಳು ನಿರ್ದೇಶಿಸುತ್ತಿರುತ್ತವೆ.

ಬೇರೆ ಬೇರೆ ಕಾರಣಗಳಿಂದ ನಕಾರಾತ್ಮಕ ಆಲೋಚನೆಗಳನ್ನು ತುಂಬಿಕೊಂಡ ಮಕ್ಕಳನ್ನು ಅದರಿಂದ ಪಾರು ಮಾಡಲು ಪೋಷಕರಾದವರು ಮೊದಲು ಮನಸ್ಸು ಮಾಡಬೇಕು. ಸೋಮಾರಿ ಎಂದು ಹೀಗಳೆಯದೆ ಯಾವ ಕಾರಣಕ್ಕೆ ಮಗು ಹಿಂಜರಿಯುವ ಸ್ವಭಾವ ಬೆಳೆಸಿಕೊಂಡಿದೆ ಎಂಬುದನ್ನು ಅರಿಯಬೇಕು.

ಸವಾಲುಗಳು ದೊಡ್ಡದಿರಲಿ, ಸಣ್ಣದಿರಲಿ ಅದನ್ನು ಎದುರಿಸುವಂತೆ ಸದಾ ಪ್ರೇರೇಪಿಸಬೇಕು. ತಪ್ಪು ಆದರೆ ಆಗಲಿ. ಸರಿ ಮಾಡಿಕೊಂಡರಾಯ್ತು. ಪ್ರಯತ್ನವೇ ಮಾಡದೇ ಹೋದರೆ ಸಮಯ ವ್ಯರ್ಥವಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಮಕ್ಕಳಿಗೆ ಮನದಟ್ಟು ಮಾಡಬೇಕು. ಪೋಷಕರ ನಡವಳಿಕೆ ಸದಾ ಇದನ್ನೇ ಪುಷ್ಟೀಕರಿಸುವಂತೆ ಇರಲಿ. ಮಕ್ಕಳು ಮಾಡುವ ಸಣ್ಣ ಕೆಲಸಕ್ಕೂ ಪ್ರಶಂಸೆ ಸಿಗುವಂತೆ ನೋಡಿಕೊಳ್ಳಿ. ಮಗು ಊಟಕ್ಕೆ ಬಡಿಸುವಾಗ ಅದರ ಕೈಯಿಂದ ನೀರಿನ ಲೋಟವೋ, ಸಾರಿನ ಪಾತ್ರೆಯೋ ಜಾರಿ ಬಿದ್ದರೆ ಜೋರಾಗಿ ಕೂಗದೇ, ಪರವಾಗಿಲ್ಲ, ಇಷ್ಟಾದರೂ ಪ್ರಯತ್ನ ಮಾಡಿದೆಯಲ್ಲ 'ಜಾಣ ಅಥವಾ 'ಜಾಣೆ' ಎಂದು ಕೊಂಡಾಡಿ. ಮೊದಲೇ ಹೇಳಿದಂತೆ ಮಕ್ಕಳು ನೋಡಿ ಕಲಿಯುವುದರಿಂದ, ಮಕ್ಕಳಿಗಾಗಿಯಾದರೂ ಪೋಷಕರು ತಮ್ಮ ದುರ್ವರ್ತನೆಗಳನ್ನು ಬದಲಿಸಿಕೊಳ್ಳಲು ಕಿಂಚಿತ್ತಾದರೂ ಮನಸ್ಸು ಮಾಡಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ:1 ಸಮಾಂತರ ಶ್ರೇಢಿ

5) ಮೊತ್ತ ಮತ್ತು ಗುಣಲಬ್ಧಗಳು ಈ ಕೆಳಕಂಡಂತೆ ಕ್ರಮವಾಗಿ ಇರುವ ಹಾಗೆ ಸಮಾಂತರ ಶ್ರೇಢಿಯಲ್ಲಿನ ಮೂರು ಪದಗಳನ್ನು ಕಂಡುಹಿಡಿಯಿರಿ.

i) 21 ಮತ್ತು 231. ii) 36 ಮತ್ತು 1620

ಉತ್ತರ:– (.........ಹಿಂದಿನ ಸಂಚಿಕೆಯಿಂದ)

$(a-d)(a)(a+d) = 1620$

$(12-d)(12)(12+d) = 1620$

$12^2 - d^2 = \frac{1620}{12}$

$144 - d^2 = 135$

$144 - 135 = d^2$

$d^2 = 9$

$d^2 = \pm\sqrt{9}$

$d = \pm 3$

∴ A.P. ಯಲ್ಲಿನ ಮೂರು ಪದಗಳು a-d, a, a+d ಆದಾಗ

(12-3), (12), (12+3), ಅಥವಾ [12-(-3)], 12,(12+(-3)

9, 12, 15 ಅಥವಾ 15, 12, 9. ಆಗಿರುತ್ತವೆ.

ಹಿಂದಿನ ಪ್ರಶ್ನೆ ಪತ್ರಿಕೆಯಿಂದ

1) ಒಂದು ಸಮಾಂತರ ಶ್ರೇಢಿಯಲ್ಲಿ 5ಪದಗಳಿದ್ದು ಅವುಗಳ ಮೊತ್ತ 55 ಮತ್ತು ಶ್ರೇಢಿಯ ಪದವು ಮೊದಲೆರಡು ಪದಗಳ ಮೊತ್ತಕ್ಕಿಂತ 5 ಹೆಚ್ಚಾಗಿದೆ. ಸಮಾಂತರ ಶ್ರೋಢಿಯ ಪದವನ್ನು ಕಂಡು ಹಿಡಿಯಿರಿ.

(2019ರ ವಾರ್ಷಿಕ ಪರೀಕ್ಷೆ)

ಉತ್ತರ: $S_5 = 55$

$\frac{5}{2}[2a + 4d] = 55$

$\frac{5}{2} x 2[a + 2d] = 55$

$a + 2d = 11$ ....(1)

$a_4 = a_1 + a_2 + 5$

$a + 3d = a + a + d + 5$

$2d - a = 5$ ....(2)

ಸಮೀಕರಣ 1 ಮತ್ತು 2ನ್ನು ಕೂಡಲಾಗಿ

$4d = 16$

$d = 4$

ಸಮೀಕರಣ 2ರಿಂದ $2d - a = 5$

$= 2(4)-a = 5$

$= 8-a = 5$

$= 8 = 5-a$

$a = 3$

ಅಪೇಕ್ಷಿತ ಶ್ರೇಢಿ= a, a+d, a+2d, a+3d, a+4d

=3, 3+4, 3+2(4), 3+ 3(4), 3+ 4(4)

= 3, 7, 11, 15, 19

ಈ ವರ್ಷ ನಡೆದ (ಮಾರ್ಚ್– 2023) ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ ಈ ಪಾಠದಿಂದ ನೀಡಲಾದ ಪ್ರಶ್ನೆಗಳು.

1) 4, 7, 10 ...... ಸಮಾಂತರ ಶ್ರೇಢಿಯ 20ನೇ ಪದವನ್ನು ಕಂಡುಹಿಡಿಯಿರಿ

ಪರಿಹಾರ 4, 7, 10 ....

ಇಲ್ಲಿ $a = 4$,

$d = 7 - 4 = 3$,

$n = 20$

$t_n = a + (n-1)d$

$t_{20} = 4 + (20-1)3$

$= 4 + 19 \times 3$

$= 4 + 57$

$= 61$

2) ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54 ಹಾಗೂ ಅದರ ಮೊದಲ 11 ಪದಗಳ ಮೊತ್ತ 693 ಆದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಈ ಶ್ರೇಢಿಯ ಎಷ್ಟನೇ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ?

ಪರಿಹಾರ:– ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54

$a_2 + a_4 = 54$

$a + d + a + 3d = 54$

$2a + 4d = 54$

$a + 2d = 27$ ..... (i)

ಮೊದಲ 11 ಪದಗಳ ಮೊತ್ತ 693

$S_{11} = 693$

$\frac{11}{2}[2a + (11-1)d] = 693$

$2a + 10d = 693\frac{2}{11}$

$2a + 10d = 126$

$a + 5d = 63$ .... (ii)

(i) ರಲ್ಲಿ (ii) ಅನ್ನು ಕಳೆದಾಗ

$a + 2d = 27$

$a + 5d = 63$

$-3d = -36$

$\therefore d = 12$

ಈಗ d ಇರುವ ಜಾಗದಲ್ಲಿ 12ನ್ನು ಹಾಕಿದಾಗ

$a + 2(12) = 27$

$\therefore a = 3$

ಸಾಮಾನ್ಯ AP ಯು ಹೀಗಿದೆ

$a, a + d, a + 2d, a + 3, ...$

$3, 3 + 12, 3 + 24, 3 + 36, ...$

$3, 15, 27, 39, ...$

ಆದ್ದರಿಂದ ಸಮಾಂತರ ಶ್ರೇಢಿ = 3, 15, 27, 39, ...

$x_n = 132 + a_{54}$

$x_n = 132 + a + 53d$

$x_n = 132 + 3 + 636$

$x_n = 771$

$a + (n-1) = 771$

$3 + (n-1)12 = 771$

$12(n-1) = 768$

$n - 1 = 64$

$n = 65$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ

(ಮುಂದುವರಿಯುವುದು..........)

II PUC PHYSICS

Chapter – 1

ELECTRIC CHARGES AND FIELDS

(..........Contd)

Draw a Gaussian surface in the form of a sphere of radius r.

The net charge inside the Gaussian surface, q = charge on nucleus + negative charge within the sphere of radius r.

= Ze + p x volume of Gaussian surface

$= Ze - \frac{3Ze}{4\pi R^3} x \frac{4}{3}\pi r^3$

$= \left(Ze - \frac{Zer^3}{R^3}\right)$ ....(ii)

According to Gauss's theorem,

$\oint \vec{E}.d\vec{s} = \frac{q}{\epsilon_0}$ (or) $\oint E\, dS\cos 0° = \frac{q}{\epsilon_0}$

(or) $E \times 4\pi r^2 = \frac{q}{\epsilon_0}$ $(\because \oint dS = 4\pi r^2)$

(or) $E = \frac{q}{4\pi\epsilon_0 r^2}$

Using eqn.(ii), we get

$E = \frac{1}{4\pi\epsilon_0 r^2}\left[Ze - \frac{Zer^3}{R^3}\right]$

$= \frac{Ze}{4\pi\epsilon_0}\left[\frac{1}{r^2} - \frac{r}{R^3}\right]$

ONE MARK QUESTIONS

1. Write relation between electric flux ϕ and electric intensity E.

Ans:- $\phi = \vec{E}.\vec{ds}$, where ds is area vector.

2. What is electric flux? Write its SI unit.

Ans:- Electric flux linked with a surface is defined as the total number of lines passing through that surface. SI unit of electron flux is Nm^2C^{-1}.

3. State Gauss' theorem/law in electrostatics.

Ans:- *Gauss' theorem* - The total electric flux through any closed surface in free space is equal to $\frac{1}{\epsilon_0}$ time the total electric charge enclosed by the surface.

4. What is Gaussian surface?

Ans:- Gaussian surface is an imaginary closed surface enclosing charge such that the intensity of electric field at all points on the surface is same and the electric flux over the surface is always normal to the surface.

5. What is the S.I. unit of electric flux?

Ans:- $NM^2 C^{-1}$.

6. The electric flux through a closed surface is zero. What do you mean by it?

Ans:- It means inward electric flux is equal to the outward electric flux. In other words, net charge inside the closed surface is zero, although the closed surface may have equal and opposite charges.

7. What is the importance of Gaussian surface?

Ans:- The concept of Gaussian surface helps in evaluating the electric field intensity due to symmetric charge distribution.

8. What is the intensity of electric field inside a charged spherical shell?

Ans:- Zero.

9. When electric flux through a closed surface is negative, what type of charge does it contain?

Ans:- It contains negative charge.

10. Do Coulomb's law and Gauss' law complement each other?

Ans. Yes, because Coulomb's law can be derived from Gauss' law and vice-versa.

11. Does $\vec{E}$ due to infinite plane sheet of charge depend upon distance of observation point from the sheet?

Ans:- $E = \frac{\sigma}{\epsilon_0}$, therefore $\vec{E}$ due to infinite plane sheet of charge does not depend upon the distance of observation point from the sheet.

12. The charge *q* is placed at the centre of a cube with side L. what is the electric flux linked with cubical surface?

Ans. If the charge *q* is enclosed within the cube, then the electric flux linked with cubical surface = q/ϵ_0.

13. Charges of magnitudes 2Q and –Q are located at points (a, 0, 0) and (4a, 0, 0). Find the ratio of the flux of electric field due to these charges through concentric spheres of radii 2a and 8a centred at the origin.

Ans:- Electric flux through a sphere of radius 2a (containing charge, $q = 2Q$),

$\phi_1 = \frac{q}{\epsilon_0} = \frac{2Q}{\epsilon_0}$

Electric flux through a sphere of radius 8*a* (containing charge, $q = 2Q - Q = Q$),

$\phi_2 = \frac{q}{\epsilon_0} = \frac{Q}{\epsilon_0}$

$\therefore \frac{\phi_1}{\phi_2} = 2$

Multiple Choice Questions:-

1. Electric flux ϕ through a closed surface in free space enclosing a charge q is

a) $\epsilon_0 q$ b) q

c) $\frac{q}{\epsilon_0}$ d) $\frac{\epsilon_0}{q}$

2. Electric flux ϕ through a closed surface enclosing an electric dipole is

a) $\epsilon_0 q$ b) q

c) $\frac{q}{\epsilon_0}$ d) Zero

3. Electric flux ϕ through a closed surface enclosing charge Q is $\frac{Q}{\epsilon_0}$. What will be the electric flux through the closed surface if its size is doubled?

a) $\frac{2Q}{\epsilon_0}$ b) $\frac{Q}{2\epsilon_0}$

c) $\frac{Q}{\epsilon_0}$ d) Zero

4. Electric field intensity due to an infinitely long straight uniformly charged wire at a distance *r* from the wire varies as

(Contd.........)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಹೈಕೋರ್ಟ್ ವಿಭಾಗೀಯ ಪೀಠಕ್ಕೆ ನಿರ್ಧಾರ ತಿಳಿಸಿದ ರಾಜ್ಯ ಸರ್ಕಾರ

ಶಾಲೆ ಸಮಯ ಬದಲಾಗದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನ ನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಶಾಲಾ-ಕಾಲೇಜು ಮತ್ತು ಕಾರ್ಖಾನೆಗಳ ಸಮಯ ಬದಲಾವಣೆ ಮಾಡಬಹುದೇ ಹೇಗೆ ಎಂಬ ಹೈಕೋರ್ಟ್ ಸೂಚನೆಯ ಅನುಸಾರ ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ರಾಜ್ಯ ಸರ್ಕಾರ ,'ಸಮಯ ಬದಲಾವಣೆ ಮಾಡಲಾಗದು' ಎಂಬ ನಿರ್ಧಾರವನ್ನು ಹೈಕೋರ್ಟ್‌ಗೆ ತಿಳಿಸಿದೆ.

ಬಳ್ಳಾರಿ ರಸ್ತೆ ವಿಸ್ತರಣೆ ಕುರಿತಂತೆ, 'ಸಮರ್ಪಣಾ ಸಾಂಸ್ಕೃತಿಕ ಮತ್ತು ಸಮಾಜ ಸೇವಾ ಸಂಘಟನೆ' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, 'ವಾಹನ ದಟ್ಟಣೆ ತಗ್ಗಿಸುವ ನಿಟ್ಟಿನಲ್ಲಿ ಏನೆಲ್ಲಾ ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ ಈ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಶಿಕ್ಷಣ ಇಲಾಖೆ ಹಾಗೂ ಕಾರ್ಮಿಕ ಇಲಾಖೆಯ ಸಂಬಂಧಿಸಿದವರ ಜೊತೆ ನಡೆಸಿರುವ ಹಲವು ಸುತ್ತಿನ ಮಾತುಕತೆಗಳ ಫಲಿತಾಂಶವೂ ವರದಿಯಲ್ಲಿದೆ' ಎಂದು ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಜನವರಿ ಮೊದಲ ವಾರಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ರೇಸ್ ಕೋರ್ಸ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಮೊದಲಿಗಿಂತಲೂ ಹೆಚ್ಚಿನ ಅಡಚಣೆಯಾಗುತ್ತಿದೆ' ಎಂದರು. ಅಂತೆಯೇ ಸುಗಮ ವಾಹನ ಸಂಚಾರಕ್ಕೆ ಏನೇನು ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ ನ್ಯಾಯಪೀಠಕ್ಕೆ ಕೆಲವು ಸಲಹೆಗಳ ಪಟ್ಟಿಯನ್ನು ಸಲ್ಲಿಸಿದರು.

ಕಾರ್ಖಾನೆಗಳಿಂದ ವಾಹನ ದಟ್ಟಣೆ ಇಲ್ಲ

- 'ಕೈಗಾರಿಕಾ ಸಂಘಟನೆಗಳ ಜತೆ ವಿಸ್ತೃತ ಮಾತುಕತೆ ನಡೆಸಿದ ಬಳಿಕ ಹೊರಹೊಮ್ಮಿದ ಅಭಿಪ್ರಾಯದ ಅನುಸಾರ ಕಾರ್ಖಾನೆಗಳಿಂದ ವಾಹನ ದಟ್ಟಣೆ ಉಂಟಾಗುತ್ತಿಲ್ಲ. ಹಾಗಾಗಿ ಬದಲಾವಣೆ ಅಗತ್ಯವಿಲ್ಲ' ಎಂದು ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ವರದಿಯಲ್ಲಿ ತಿಳಿಸಿದ್ದಾರೆ.
- ಕಾರ್ಖಾನೆಗಳ ಸಿಬ್ಬಂದಿಯ ಕಾರ್ಯ ನಿರ್ವಹಣೆಯಿಂದ ವಾಹನ ದಟ್ಟಣೆ ಉಂಟಾಗುತ್ತಿಲ್ಲ. ಅವರು ಬೆಳಿಗ್ಗೆ 6ರಿಂದ 9ರ ಅವಧಿಯಲ್ಲಿ ಪ್ರಯಾಣ ಮಾಡುತ್ತಾರೆ ಮತ್ತು ಸಂಜೆಯ ನಂತರ ದುಡಿಯುವ ಸ್ಥಳದಿಂದ ಮನೆಗೆ ಮರಳುತ್ತಾರೆ.
- ಹೊರವರ್ತುಲ ರಸ್ತೆಯಲ್ಲಿ ಕಾರ್ಯನಿರ್ವಹಣೆ ಮಾಡುತ್ತಿರುವ ಕಂಪನಿಗಳು ಹೈಬ್ರೀಡ್ ಮಾದರಿಯನ್ನು ಅಳವಡಿಸಿ-ಕೊಳ್ಳುವುದನ್ನು ಉತ್ತೇಜಿಸಬೇಕು. ಇದರಿಂದ ರಸ್ತೆಗಳಲ್ಲಿನ ಸಂಚಾರ ದಟ್ಟಣೆ ತಗ್ಗುವುದಲ್ಲದೆ, ಕಚೇರಿಗೆ ಆಗಮಿಸುವ ಸಿಬ್ಬಂದಿಯ ಸಂಖ್ಯೆಯಲ್ಲಿ ಇಳಿಮುಖವಾಗುತ್ತದೆ.
- ಕಾರ್ಖಾನೆಗಳ ಸಮಯ ಬದಲಾವಣೆಯಿಂದ ಸಂಚಾರ ದಟ್ಟಣೆ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ.

ದಟ್ಟಣೆ ತಪ್ಪಿಸಲು ಕೈಗೊಳ್ಳಬಹುದಾದ ಕ್ರಮಗಳು

- ಶಾಲಾ ಆವರಣದ ಒಳಗೆ ವಾಹನ ನಿಲುಗಡೆಗೆ ಅವಕಾಶ ಒದಗಿಸಲು ಸಾಧ್ಯವಿರದೇ ಇರುವ ಶಾಲೆಗಳ ಸಮೀಪ ನಿರ್ದಿಷ್ಟ ಪಿಕ್ ಅಪ್ ಮತ್ತು ಡ್ರಾಪ್ ಪಾಯಿಂಟ್‌ಗಳನ್ನು ನಿಗದಿ ಮಾಡುವುದು.
- ಶಾಲೆಗಳ ಸಮೀಪದಲ್ಲಿ ಶಾಲಾ ಆರಂಭ ಮತ್ತು ಮುಕ್ತಾಯದ ವೇಳೆ ಟ್ರಾಫಿಕ್ ಪೊಲೀಸ್ ಸಿಬ್ಬಂದಿ ಮತ್ತು ಸ್ವಪ್ರೇರಣೆ-ಯಿಂದ ಬರುವ ಪಾಲಕರನ್ನು ಸಂಚಾರಿ ವಾರ್ಡನ್‌ಗಳನ್ನಾಗಿ ನೇಮಿಸಿ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳುವುದು.
- ಹೆಚ್ಚಿನ ವಾಹನ ದಟ್ಟಣೆ ಉಂಟಾಗುವ ಶಾಲೆಗಳ ಸುತ್ತಮುತ್ತ 'ಲೋಕಲ್ ಏರಿಯಾ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಪ್ಲಾನ್' ಜಾರಿಗೊಳಿಸುವುದು.
- ಪೋಷಕರು ಮಕ್ಕಳನ್ನು ಶಾಲೆಗೆ ತಲುಪಿಸಲು ಮತ್ತು ಕರೆತರಲು ಸ್ವಂತ ವಾಹನ ಬಳಸುವುದನ್ನು ತಪ್ಪಿಸಲು 3-4 ಶಾಲೆಗಳಿಗೆ ಒಟ್ಟುಗೂಡಿ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಬಿಎಂಟಿಸಿ ಬಸ್ ಸೇವೆ ಒದಗಿಸುವುದು.

'ಮಕ್ಕಳಿಗೆ ತೊಂದರೆ ಆಗಲಿದೆ'

'ಸಂಚಾರ ದಟ್ಟಣೆ ತಪ್ಪಿಸಲು ಶಾಲೆಗಳನ್ನು ಬೇಗನೆ ಆರಂಭಿಸಿದಲ್ಲಿ ಮಕ್ಕಳಿಗೆ ನಿದ್ರೆ, ಊಟ, ಉಪಚಾರ ನಿಗದಿತ ಸಮಯಕ್ಕೆ ಆಗದೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಒಟ್ಟಾರೆ ಅಭಿಪ್ರಾಯದ ಅನುಸಾರ ಹೇಳುವುದಾದರೆ ಸದ್ಯ ಇರುವ ಶಾಲಾ ಸಮಯದಲ್ಲಿ ಯಾವುದೇ ಬದಲಾವಣೆ ಮಾಡುವ ಅವಶ್ಯಕತೆ ಇಲ್ಲ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಬೆಂಗಳೂರು ಮಹಾನಗರದ ಸಂಚಾರ ದಟ್ಟಣೆಯು ಕೇವಲ ಶಾಲಾ ಸಮಯದ ದೆಸೆಯಿಂದ ಉಂಟಾಗುವುದಿಲ್ಲ. ದಟ್ಟಣೆಯ ವೇಳೆ ಕಚೇರಿ, ಕೈಗಾರಿಕೆ ಮತ್ತು ಇತರೆಡೆ ತೆರಳುವ ವಾಹನಗಳ ದೆಸೆಯಿಂದಲೂ ಉಂಟಾಗುತ್ತದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.

'ಬಲಕ್ಕೆ ಬೈತಲೆ ತೆಗೆದೆ; ಬಲಪಂಥೀಯ ಆಗಲಿಲ್ಲ'

ವಿಮರ್ಶಾ ಕೃತಿ ಬಿಡುಗಡೆ ಸಮಾರಂಭದಲ್ಲಿ ಬರಗೂರು ರಾಮಚಂದ್ರಪ್ಪ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮುಮ್ತಾಜ್ ಬೇಗಂ (ಎಡದಿಂದ ಐದನೆಯವರು) ಅವರ 'ಭೂಮಿ ಬೆಳಕಿನ ಬರಗೂರು ಕಾವ್ಯ' ವಿಮರ್ಶಾ ಕೃತಿಯನ್ನು ಲೇಖಕ ಕರೀಗೌಡ ಬೀಚನಹಳ್ಳಿ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ಸಿ.ಕೆ.ರಾಮೇಗೌಡ, ಸೌಮ್ಯಾ ಕೋಡೂರು, ರಾಜಪ್ಪ ದಳವಾಯಿ, ಬರಗೂರು ರಾಮಚಂದ್ರಪ್ಪ, ಸಿದ್ದು ಬಿರಾದಾರ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಬಲಕ್ಕೆ ಬೈತಲೆ ತೆಗೆದರೂ ನಾನು ಬಲಪಂಥೀಯನಾಗದೆ ಉಳಿ-ದುಕೊಂಡಿದ್ದೇನೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ನಗರದಲ್ಲಿ ಸೋಮವಾರ ಕನ್ನಡ ಜನಶಕ್ತಿ ಕೇಂದ್ರ ಹಾಗೂ ಗಂಗಾವತಿ ಜೀವನ ಪಬ್ಲಿಕೇಷನ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಮುಮ್ತಾಜ್ ಬೇಗಂ ಅವರ 'ಭೂಮಿ ಬೆಳಕಿನ ಬರಗೂರು ಕಾವ್ಯ' ವಿಮರ್ಶಾ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಬರವಣಿಗೆಯ ಮೂಲಕ ನಾಡಿಗಾಗಿ ನನ್ನ ಹೋರಾಟ ಮುಂದು-ವರಿಸುತ್ತೇನೆ. ನನ್ನ ಕೊನೆಯ ಉಸಿರು ಇರುವ ತನಕ ಬರಹ ಕ್ಷೇತ್ರದಲ್ಲಿ ಮಾಜಿ ಆಗುವುದಿಲ್ಲ' ಎಂದರು.

'ವಿಮರ್ಶೆಯ ವಿಳಂಬ ನೀತಿ ಎಲ್ಲ ಕಾಲದಲ್ಲೂ ಇದೆ. ಕೆಲವು ಒಳ್ಳೆಯ ಕೃತಿಗಳು ಪ್ರಕಟವಾದರೂ ಆ ಕೃತಿ ಕುರಿತು ಒಳ್ಳೆಯ ಮಾತು ಹೇಳುವುದಕ್ಕೆ 10 ವರ್ಷ ಬೇಕಾಗುತ್ತಿದೆ. ತಕ್ಷಣವೇ ವಿಮರ್ಶೆ ಬಂದರೆ ಲೇಖಕನಿಗೆ ತಿದ್ದಿಕೊ-ಳ್ಳುವುದಕ್ಕೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಬೆಳೆಯುವುದಕ್ಕೆ ಅವಕಾಶವಾಗಲಿ-ದೆ. ವಿಮರ್ಶಾ ಲೋಕ ವಿಳಂಬ ನೀತಿ ಅನುಸರಿಸುತ್ತಿದೆ. ಪೂರ್ವಾಗ್ರಹವಿಲ್ಲದೆ ಬರುವ ಟೀಕೆಗಳನ್ನು ಬರಹಗಾರರು ಸಹಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಕೃತಿ ಬಿಡುಗಡೆ ಮಾಡಿದ ಲೇಖಕ ಕರೀಗೌಡ ಬೀಚನಹಳ್ಳಿ ಮಾತನಾಡಿ, 'ಬರಗೂರು ಅವರ ಲೇಖನಗಳನ್ನು ಬಿಟ್ಟರೆ ಕಾವ್ಯದ ಕುರಿತು ವಿಮರ್ಶಾ ಕೃತಿಗಳು ಪ್ರಕಟವಾಗಿರಲಿಲ್ಲ. ಈ ಪ್ರವೇಶಿಕೆ ಸ್ವಾಗತಾರ್ಹ' ಎಂದರು.

'ತಮ್ಮ ಕೃತಿಗಳ ಮೂಲಕವೇ ಬರಗೂರು ರಾಮಚಂದ್ರಪ್ಪ ಅವರು ತಿಳಿವಳಿಕೆ ಪರಂಪರೆ, ಅರಿವಿನ ತತ್ವ, ಶಿಕ್ಷಣದ ಮಹತ್ವ, ಜ್ಞಾನ ಆಧಾರಿತ ಸಮಾಜ ಕಟ್ಟುವ ಬಗೆಯನ್ನು ತಿಳಿಸಿಕೊ-ಡುತ್ತಿದ್ದಾರೆ' ಎಂದು ಹೇಳಿದರು.

ಕನ್ನಡ ಉಪನ್ಯಾಸಕಿ ಸೌಮ್ಯಾ ಕೋಡೂರು ಮಾತನಾಡಿ, ಬರಗೂರು ರಾಮಚಂದ್ರಪ್ಪ ಅವರಿಗೂ ಕಾವ್ಯಕ್ಕೂ ಅವಿನಾಭಾವ ಸಂಬಂಧವಿದೆ. ಬರಗೂರು ಮೂಲತಃ ಕವಿ. ಈ ಕೃತಿಯಲ್ಲಿ ಸಂಶೋಧನಾ ಶಿಸ್ತು ಇದೆ. ಶಿಖರ ಪ್ರಾಯದ ಅಧ್ಯಯನವಿದೆ' ಎಂದು ಹೇಳಿದರು.

'ರಾಮಚಂದ್ರಪ್ಪ ಬರೀ ಬಂಡಾಯಕ್ಕೆ ಸೀಮಿತ ಅಲ್ಲ. ಸಮಕಾಲೀನ ಕವಿ. ಅವರೆಂದೂ ಮಾಜಿ ಅಲ್ಲ' ಎಂದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಮಾತನಾಡಿ, 'ಬರಗೂರು ಅವರು ಕಟ್ಟಿದ ಬಂಡಾಯ ಸಾಹಿತ್ಯ ಸಂಘಟನೆ ಈಗಲೂ ಸಕ್ರಿಯವಾಗಿದೆ. ಅದೇ ದಲಿತ ಸಂಘಟನೆಗಳು ಬೇರೆ ಬೇರೆ ಕಾರಣಕ್ಕೆ ವಿಭಜನೆಗೊಂಡಿವೆ. ಕನ್ನಡಪರ ಸಂಘಟನೆಗಳಲ್ಲೂ ಹಲವು ಬಣಗಳಾಗಿವೆ' ಎಂದು ಬೇಸರ ಹೊರಹಾಕಿದರು.

ಕೃತಿ ಪ್ರಕಾಶಕ ಸಿದ್ದು ಬಿರಾದಾರ ಪಾಲ್ಗೊಂಡಿದ್ದರು. ಲೇಖಕ ರಾಜಪ್ಪ ದಳವಾಯಿ ಅಧ್ಯಕ್ಷತೆ ವಹಿಸಿದ್ದರು.

ಕೃತಿ ಪರಿಚಯ

ಕೃತಿ: 'ಭೂಮಿ ಬೆಳಕಿನ ಬರಗೂರು ಕಾವ್ಯ'
ಲೇಖಕಿ: ಮುಮ್ತಾಜ್ ಬೇಗಂ
ಪ್ರಕಾಶನ: ಗಂಗಾವತಿಯ ಜೀವನ ಪಬ್ಲಿಕೇಷನ್
ಪುಟಗಳು: 176
ದರ: ₹180

ಕೋಚಿಮುಲ್: ಅಧಿಕೃತ ಪ್ರಕಟಣೆಗೂ ಮುನ್ನವೇ ಬಹಿರಂಗ

ಜಾಲತಾಣದಲ್ಲಿ ನೇಮಕ ಪಟ್ಟಿ!

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ ಮತ್ತು ಚಿಕ್ಕ-ಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟದಿಂದ (ಕೋಚಿಮುಲ್) ಹೊಸದಾಗಿ ನಡೆಸುತ್ತಿರುವ ವಿವಿಧ ಹುದ್ದೆಗಳ ನೇಮಕಾತಿಯ ಘೋಷಣೆಗೆ ಮುನ್ನವೇ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಈ ಪಟ್ಟಿಯಲ್ಲಿ ಅಭ್ಯರ್ಥಿ ಹೆಸರು ಹಾಗೂ ಪಕ್ಕದಲ್ಲಿ ಶಿಫಾರಸು ಮಾಡಿದವರ ಹೆಸರು ಇವೆ. ಡಿ.ಕೆ.ಸಿ ಎಂದೂ ಒಂದು ಕಡೆ ನಮೂದಾಗಿದೆ. ಕೋಚಿಮುಲ್ ಅಧ್ಯಕ್ಷರು, ನಿರ್ದೇಶಕರು, ಅಧಿಕಾರಿಗಳ ಹೆಸರೂ ಇದೆ.

'ಲಿಖಿತ ಪರೀಕ್ಷೆ ಮುಗಿದಿದ್ದು, ಸಂದರ್ಶನದ ಪ್ರಕ್ರಿಯೆ ನಡೆದಿದೆ. ಹುದ್ದೆಗಳನ್ನು ತಮಗಿಷ್ಟು ಎಂದು ಹಂಚಿ-ಕೊಳ್ಳಲಾಗಿದೆ' ಎಂಬ ಮಾಹಿತಿಯೂ ಹರಿದಾಡುತ್ತಿದೆ.

ಕೋಚಿಮುಲ್ ಕಚೇರಿಯಲ್ಲಿ ನೇಮಕಾತಿ ಅಂತಿಮ ಗೊಳಿಸಲು ಮಂಗಳವಾರ ಆಡಳಿತ ಮಂಡಳಿ ಸಭೆ ಇದ್ದು, ಹಿಂದಿನ ದಿನವಾದ ಸೋಮವಾರ ಈ ಪಟ್ಟಿ ಹರಿದಾಡಿದೆ.

ಈ ಸಂಬಂಧ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕೋಚಿಮುಲ್ ಅಧ್ಯಕ್ಷರೂ ಆಗಿರುವ ಕೆ.ವೈ.ನಂಜೇಗೌಡ, 'ಪಟ್ಟಿ ಹರಿದಾಡುತ್ತಿರುವ ವಿಚಾರ ಗೊತ್ತಾಗಿದೆ. ಇದು ನಕಲಿ ಪಟ್ಟಿ. ಯಾರೋ ಕಿಡಿಗೇಡಿಗಳು ಸೃಷ್ಟಿ ಮಾಡಿ ಹರಿಬಿಟ್ಟಿದ್ದಾರೆ. ಪಟ್ಟಿಯಲ್ಲಿ ಯಾರ ಸಹಿ, ಮುದ್ರೆ ಕೂಡ ಇಲ್ಲ. ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇನೆ. ಈ ಸಂಬಂಧ ಆಡಳಿತ ಮಂಡಳಿ ಸದಸ್ಯರೊಂದಿಗೆ ಚರ್ಚಿಸಿದ್ದೇನೆ' ಎಂದರು.

'ಈ ಪಟ್ಟಿಯಲ್ಲಿರುವ ಹೆಸರು ಶೇ 90ರಷ್ಟು ಸುಳ್ಳು. ಈ ನಕಲಿ ಪಟ್ಟಿಯನ್ನು ಹಾಗೆಯೇ ಇಟ್ಟುಕೊಳ್ಳಿ. ಮೂರ್ನಾಲ್ಕು ದಿನಗಳಲ್ಲಿ ಅಂತಿಮ ಪಟ್ಟಿ ಬಿಡುಗಡೆಯಾಗಲಿದೆ. ಆಗ ಪರಿಶೀಲಿಸಿ. ಆಗ ಯಾರು ಹುದ್ದೆಗೆ ಆಯ್ಕೆ ಆಗಿದ್ದಾರೆ ಎಂಬುದು ಗೊತ್ತಾಗುತ್ತದೆ' ಎಂದರು.

81 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಆರು ಹುದ್ದೆಗಳಿಗೆ ಯಾರೂ ಅರ್ಜಿ ಸಲ್ಲಿಸಿರಲಿಲ್ಲ. 75 ಹುದ್ದೆಗಳಿಗೆ ತಿಂಗಳ ಹಿಂದೆಯೇ ಪರೀಕ್ಷೆ ನಡೆಸಲಾಗಿದೆ. ಮಂಗಳವಾರ ನಡೆಯಲಿರುವ ಆಡಳಿತ ಮಂಡಳಿ ಸಭೆ ಮುಂದೆ ಅಂತಿಮ ಪಟ್ಟಿ ಇಡಲಾಗುವುದು. ಒಪ್ಪಿಗೆ ಪಡೆದು ಘೋಷಣೆ ಮಾಡಲಾಗುವುದು ಎಂದು ಅವರು ತಿಳಿಸಿದರು.

'ಗೃಹ ಸಚಿವರ ಮೇಲೆ ಏಕೆ ಕ್ರಮವಿಲ್ಲ?'

ಕಲಬುರಗಿ: 'ಸಂಸತ್ ಭದ್ರತಾ ಲೋಪ ಪ್ರಶ್ನಿಸುವ ಸಂಸದರನ್ನು ಅಮಾನತು ಮಾಡಲಾಗುತ್ತಿದೆ. ಆದರೆ, ಗೃಹ ಸಚಿವ ಅಮಿತ್ ಶಾ ಮೇಲೆ ಏಕೆ ಕ್ರಮವಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮಹಾರಾಣಿ ಕಾಲೇಜು ಆವರಣದಲ್ಲಿ ಪ್ರತಿಭಟನೆ

ಮೂಲಸೌಕರ್ಯಕ್ಕೆ ವಿದ್ಯಾರ್ಥಿಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಲಸೌಕರ್ಯಗಳ-ನ್ನು ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಹಾರಾಣಿ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ಮಹಾರಾಣಿ ಕಾಲೇಜಿನಲ್ಲಿ ಶೌಚಾಲಯಗಳು ಅತ್ಯಂತ ಕೆಟ್ಟ ಸ್ಥಿತಿಯಲ್ಲಿವೆ. ಮೂಲಸೌಕರ್ಯವಿಲ್ಲದೇ ವಿದ್ಯಾರ್ಥಿಗಳು ಪ್ರತಿನಿತ್ಯ ಪರದಾಡುವ ಪರಿಸ್ಥಿತಿ ಎದುರಾಗಿದೆ. ಸರಿಯಾದ ಸಮಯಕ್ಕೆ ಪರೀಕ್ಷಾ ಫಲಿತಾಂಶ ಪ್ರಕಟಿಸುತ್ತಿಲ್ಲ. ಕೆಲ ವಿದ್ಯಾರ್ಥಿಗಳ ಫಲಿತಾಂಶಗಳಲ್ಲಿ ಅನೇಕ ತಪ್ಪುಗಳಿವೆ' ಎಂದು ಪ್ರತಿಭಟನನಿರತ ವಿದ್ಯಾರ್ಥಿಗಳು ಆರೋಪಿಸಿದರು.

'ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಪರಿಚಯಿಸಿರುವ ಓಪನ್ ಎಲೆಕ್ಟಿವ್ ವಿಷಯಗಳ ತರಗತಿಗಳೇ ನಡೆಯುತ್ತಿಲ್ಲ. ವಾರದಿಂದ ಅತಿಥಿ ಉಪನ್ಯಾಸಕರು ತರಗತಿ ತೆಗೆದುಕೊಳ್ಳದೇ ಹೋರಾಟ ಮಾಡುತ್ತಿದ್ದಾರೆ. ಮಹಾರಾಣಿ ಕಾಲೇಜು ಸಮಸ್ಯೆಗಳ ಆಗರವಾಗಿದ್ದು, ಕೂಡಲೇ ಇಲ್ಲಿನ ಸಮಸ್ಯೆಗಳನ್ನು ಇತ್ಯರ್ಥ-ಪಡಿಸಬೇಕು' ಎಂದು ಆಗ್ರಹಿಸಿದರು. ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿತ್ತು.

ಮಹಾರಾಣಿ ಕಾಲೇಜಿನಲ್ಲಿ ಮೂಲಸೌಕರ್ಯ ಒದಗಿಸುವಂತೆ ಆಗ್ರಹಿಸಿ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು.



ಕಬ್ಬನ್ ಉದ್ಯಾನದಲ್ಲಿ ನಿರ್ಮಿಸಿರುವ ಸೇತುವೆ ಬಳಿ ಸಂಗ್ರಹವಾಗಿರುವ ಹೂಳು (ಎಡಚಿತ್ರ) ಉದ್ಯಾನದಲ್ಲಿರುವ ಕೆರೆಗೆ ತ್ಯಾಜ್ಯ ನೀರು ಹರಿದು ಕಲ್ಮಶವಾಗಿರುವುದು

ಪ್ರಜಾವಾಣಿ ಚಿತ್ರಗಳು/ರಂಜು ಪಿ

ಕಬ್ಬನ್ ಉದ್ಯಾನ ಸೌಂದರ್ಯಕ್ಕೆ ಧಕ್ಕೆ ತರುತ್ತಿರುವ ಕೊಳಚೆ ನೀರು

ಜಲಮೂಲಗಳು ಕಲುಷಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಲಿಕಾನ್' ಸಿಟಿ ಜನರ ನೆಚ್ಚಿನ ತಾಣವಾಗಿರುವ ಕಬ್ಬನ್ ಉದ್ಯಾನಕ್ಕೆ (ಜಯಚಾಮರಾಜೇಂದ್ರ ಒಡೆಯರ್ ಉದ್ಯಾನ) ಕೊಳಚೆ ನೀರು ಹರಿಯುತ್ತಿದ್ದು ಇದರಿಂದ, ಉದ್ಯಾನದಲ್ಲಿರುವ ಜಲಮೂಲಗಳು ಕಲುಷಿತಗೊಳ್ಳುತ್ತಿವೆ.

ಚಿನ್ನಸ್ವಾಮಿ ಕ್ರೀಡಾಂಗಣ ಸೇರಿ ಉದ್ಯಾನದ ವಿವಿಧ ಭಾಗಗಳಲ್ಲಿರುವ ಒಳಚರಂಡಿ ಮೂಲಕ ಕೊಳಚೆ ನೀರು ಉದ್ಯಾನಕ್ಕೆ ಹರಿದು ಬರುತ್ತಿದೆ. ಇಲ್ಲಿ ನಿರ್ಮಿಸಿರುವ ಸೇತುವೆ ಬಳಿ ಪ್ಲಾಸ್ಟಿಕ್ ತ್ಯಾಜ್ಯ, ಬಾಟಲ್ ಸೇರಿದಂತೆ ಕೊಳಚೆ ತುಂಬಿಕೊಂಡು ಈ ಪ್ರದೇಶವೆಲ್ಲ ಗೆಬ್ಬೆದ್ದು ನಾರುತ್ತಿದೆ. ಬಿದಿರು ಮೆಳೆಯ ಸುತ್ತಮುತ್ತ ನಿಂತಿರುವ ತ್ಯಾಜ್ಯ ನೀರಿನಿಂದ ಇಡೀ ಪರಿಸರ ದುರ್ನಾತ ಬೀರುತ್ತಿದೆ. ಈ ನೀರು ಬಿದಿರು ಮೆಳೆಯ ಮಾರ್ಗವಾಗಿ ಉದ್ಯಾನದ ಕೆರೆಗಳು, ಕಮಲದ ಕೊಳ ಮತ್ತು ಬಾಲಭವನದ ಪುಟಾಣಿ ಕೆರೆಗಳನ್ನು ತಲುಪುತ್ತಿದೆ.

'ಸ್ಮಾರ್ಟ್‌ಸಿಟಿ ಯೋಜನೆಯಡಿ ₹24 ಕೋಟಿ ವೆಚ್ಚದಲ್ಲಿ ಕಬ್ಬನ್ ಉದ್ಯಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಲಾಗಿದೆ. ಆದರೆ, ಈ ಕೊಳಚೆ ನೀರಿನ ಸಮಸ್ಯೆ ಮಾತ್ರ ಬಗೆಹರಿಸಿಲ್ಲ' ಎಂದು ವಾಯುವಿಹಾರಿಗಳು ಆರೋಪಿಸಿದರು.

'ಉದ್ಯಾನಕ್ಕೆ ಹರಿದು ಬರುವ ಕೊಳಚೆ ನೀರಿನ ಬಗ್ಗೆ ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಶಾಶ್ವತ ಪರಿಹಾರ ಸಿಕ್ಕಿಲ್ಲ. ಕೊಳಚೆ ನೀರಿನ ದುರ್ನಾತದಿಂದ ಮೂಗು ಮುಚ್ಚಿಕೊಂಡು ವಾಕಿಂಗ್ ಮಾಡುವ ಪರಿಸ್ಥಿತಿ ಇದೆ. ಉದ್ಯಾನದಲ್ಲಿರುವ ಹಳೆಯ ಯುಜಿಡಿ ಲೈನ್ ಬದಲಿಸಬೇಕು. ಕೂಡಲೇ ತ್ಯಾಜ್ಯ ನೀರು ಹರಿಯುತ್ತಿರುವುದನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು' ಎಂದು ವಾಯುವಿಹಾರಿ ಶ್ರೀಸುರೇಶ್ ಆಗ್ರಹಿಸಿದರು.

'ಕಬ್ಬನ್ ಉದ್ಯಾನದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯ ಅಡಿಯಲ್ಲಿ ಮಾಡಬೇಕಾದ ಎಲ್ಲ ಕೆಲಸಗಳು ಪೂರ್ಣಗೊಂಡಿವೆ. ಉದ್ಯಾನಕ್ಕೆ ಕೊಳಚೆ ನೀರು ಹರಿದು ಬರುತ್ತಿರುವುದನ್ನು ದುರಸ್ತಿಗೊಳಿಸಬೇಕೆಂದು ಬೆಂಗಳೂರು ಜಲಮಂಡಳಿ ಅಧಿಕಾರಿಗಳಿಗೆ (ಬಿಡಬ್ಲ್ಯುಎಸ್‌ಎಸ್‌ಬಿ) ಪತ್ರ ಬರೆಯಲಾಗಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕಬ್ಬನ್ ಉದ್ಯಾನದ ಸುತ್ತಮುತ್ತಲು ಇರುವ ಕಟ್ಟಡಗಳ ತ್ಯಾಜ್ಯ ನೀರು ಉದ್ಯಾನಕ್ಕೆ ಹರಿಯುತ್ತಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಸ್ಮಾರ್ಟ್' ಆಗದ ಉದ್ಯಾನ!

'ಸ್ಮಾರ್ಟ್ ಸಿಟಿ ಯೋಜನೆಯಡಿ ಮೊದಲ ಹಂತದಲ್ಲಿ ₹ 8 ಕೋಟಿ ವೆಚ್ಚದಲ್ಲಿ ಉದ್ಯಾನದಲ್ಲಿರುವ ಪ್ರೆಸ್‌ಕ್ಲಬ್, ಹೈಕೋರ್ಟ್ ಆವರಣ, ಕೇಂದ್ರ ಗ್ರಂಥಾಲಯ ಸೇರಿದಂತೆ ಎಲ್ಲ ಪಾದಚಾರಿ ಮಾರ್ಗಗಳಿಗೆ ಹೊಸ ಪೇವರ್ಸ್‌ಗಳನ್ನು ಅಳವಡಿಸಲಾಗಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

'ಉದ್ಯಾನದ ಒಳಭಾಗದ ಪಾದಚಾರಿ ಮಾರ್ಗಗಳಿಗೆ ಮಾತ್ರ ಹಳೆಯ ಪೇವರ್ಸ್‌ಗಳನ್ನು ಹಾಕಲಾಗಿದೆ. ಕೆಲವೊಂದು ಪಾದಚಾರಿ ಮಾರ್ಗಗಳಲ್ಲಿ ಬರೀ ಮಣ್ಣು ಹಾಕಿ ಹಾಗೆಯೇ ಬಿಡಲಾಗಿದೆ. ಇದು, ಮಳೆಗಾಲದಲ್ಲಿ ರಸ್ತೆಯಲ್ಲ ಕೆಸರುಮಯವಾಗಿ ಓಡಾಡುವುದಕ್ಕೂ ತೊಂದರೆ ಆಗಲಿದೆ' ಎಂದು ವಾಯುವಿಹಾರಿ ದೂರಿದರು.

'ಸ್ಮಾರ್ಟ್‌ಸಿಟಿ ಯೋಜನೆ ಅಡಿ ಬಾಲಭವನವನ್ನು ಮಾತ್ರ ಅಭಿವೃದ್ಧಿ ಪಡಿಸಲಾಗಿದೆ. ಕಬ್ಬನ್ ಉದ್ಯಾನದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆದಿಲ್ಲ.

ಎಸ್. ಉಮೇಶ, ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ

ಕಬ್ಬನ್ ಉದ್ಯಾನದ ಪಾರಂಪರಿಕ ಸೌಂದರ್ಯ ಕಾಪಾಡುವುದರ ಜೊತೆಗೆ ಇಲ್ಲಿನ ಜಲಮೂಲಗಳ ರಕ್ಷಣೆ ಮಾಡಬೇಕು. ಜೊತೆಗೆ ಪರಿಸರದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು.

ಶ್ರೀಸುರೇಶ್, ವಾಯುವಿಹಾರಿ

₹754 ಕೋಟಿ ವೆಚ್ಚದಲ್ಲಿ 61 ಕಿ.ಮೀ ರಸ್ತೆ ವೈಟ್ ಟಾಪಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ₹754.74 ಕೋಟಿ ವೆಚ್ಚದಲ್ಲಿ 61.12 ಕಿ.ಮೀ ರಸ್ತೆಯನ್ನು ವೈಟ್‌ಟಾಪಿಂಗ್ ಮಾಡಲು ನಿರ್ಧರಿಸಲಾಗಿದ್ದು, ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಕರೆಯಲಾಗಿದೆ.

19 ವಿಧಾನಸಭೆ ಕ್ಷೇತ್ರಗಳಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ನಡೆಯಲಿದ್ದು, ಇದಕ್ಕಾಗಿ 9 ಪ್ಯಾಕೇಜ್‌ಗಳನ್ನು ಮಾಡಲಾಗಿದೆ. ಡಿ.16ರಂದು ಟೆಂಡರ್ ಆಹ್ವಾನಿಸಲಾಗಿದ್ದು, 26ರಂದು ಬಿಡ್ ಸಲ್ಲಿಸಲು ಕೊನೆಯ ದಿನವಾಗಿದೆ.

ನಗರದಲ್ಲಿ ₹800 ಕೋಟಿ ವೆಚ್ಚದಲ್ಲಿ ರಸ್ತೆಗಳನ್ನು ವೈಟ್ ಟಾಪಿಂಗ್ ಮಾಡಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದರು.

ಎಲ್ಲೆಲ್ಲಿ ವೈಟ್ ಟಾಪಿಂಗ್?

- **ಸರ್ವಜ್ಞನಗರ, ಪುಲಕೇಶಿನಗರ:** ₹105.94 ಕೋಟಿ ವೆಚ್ಚದಲ್ಲಿ 8.7 ಕಿ.ಮೀ.
- **ಶಾಂತಿನಗರ, ಶಿವಾಜಿನಗರ:** ₹105.37 ಕೋಟಿ ವೆಚ್ಚದಲ್ಲಿ 7.38 ಕಿ.ಮೀ.
- **ಗೋವಿಂದರಾಜನಗರ, ವಿಜಯನಗರ:** ₹75.25 ಕೋಟಿ ವೆಚ್ಚದಲ್ಲಿ 6.67 ಕಿ.ಮೀ.
- **ಬ್ಯಾಟರಾಯನಪುರ, ಯಲಹಂಕ, ಮಲ್ಲೇಶ್ವರ:** ₹77.11 ಕೋಟಿ ವೆಚ್ಚದಲ್ಲಿ 6.48 ಕಿ.ಮೀ.
- **ರಾಜರಾಜೇಶ್ವರಿನಗರ, ಯಶವಂತಪುರ, ದಾಸರಹಳ್ಳಿ:** ₹95.44 ಕೋಟಿ ವೆಚ್ಚದಲ್ಲಿ 7.25 ಕಿ.ಮೀ.
- **ಜಯನಗರ, ಚಿಕ್ಕಪೇಟೆ, ಚಾಮರಾಜಪೇಟೆ:** ₹86.04 ಕೋಟಿ ವೆಚ್ಚದಲ್ಲಿ 6.8 ಕಿ.ಮೀ.
- **ಗಾಂಧಿನಗರ, ಬಿಟಿಎಂ ಲೇಔಟ್:** ₹74.24 ಕೋಟಿ ವೆಚ್ಚದಲ್ಲಿ 7.44 ಕಿ.ಮೀ.
- **ಕೆ.ಆರ್. ಪುರ:** ₹86.33 ಕೋಟಿ ವೆಚ್ಚದಲ್ಲಿ 5.5 ಕಿ.ಮೀ.
- **ಹೆಬ್ಬಾಳ:** ₹50.02 ಕೋಟಿ ವೆಚ್ಚದಲ್ಲಿ 4.9 ಕಿ.ಮೀ.

ಬಿಬಿಎಂಪಿ: 4 ಎಸ್‌ಐಟಿ ರದ್ದು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2019–20ರಿಂದ 2022–23ನೇ ಸಾಲಿನಲ್ಲಿ ನಡೆದಿದ್ದ ಕಾಮಗಾರಿಗಳ ಅಕ್ರಮ ತನಿಖೆಗೆ ರಚಿಸಿದ್ದ ವಿಶೇಷ ತನಿಖಾ ಸಮಿತಿಗಳನ್ನು (ಎಸ್‌ಐಟಿ) ಸರ್ಕಾರ ರದ್ದುಪಡಿಸಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ವಿಚಾರಣಾ ಆಯೋಗವು ತನಿಖೆಯನ್ನು ಮುಂದುವರಿಸುತ್ತದೆ ಎಂದು ಡಿ.15ರ ಆದೇಶದಲ್ಲಿ ತಿಳಿಸಲಾಗಿದೆ.

ಘನತ್ಯಾಜ್ಯ ನಿರ್ವಹಣೆ, ರಸ್ತೆ ಅಭಿವೃದ್ಧಿ, ಒಎಫ್‌ಸಿ ಕೇಬಲ್ ಅಳವಡಿಕೆ, ಬೃಹತ್ ನೀರುಗಾಲುವೆ, ಕೇಂದ್ರ- ವಲಯ ನಗರ ಯೋಜನೆ ವಿಭಾಗಗಳಲ್ಲಿ ನಕ್ಷೆ ಮಂಜೂರು, ಸ್ವಾಧೀನಾನುಭವ ಪತ್ರ, ಕೆರೆಗಳ ಅಭಿವೃದ್ಧಿ, ಸ್ಮಾರ್ಟ್ ಸಿಟಿ ಯೋಜನೆ, ವಾರ್ಡ್ ಮಟ್ಟದ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ದೂರು ಪ್ರಕರಣಗಳ ತನಿಖಾ ವರದಿಯನ್ನು ಶಿಫಾರಸಿನ ಜೊತೆ 30 ದಿನಗಳಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ನಾಲ್ಕು ತಜ್ಞರ ತನಿಖಾ ಸಮಿತಿಗಳನ್ನು 2023ರ ಆ.5ರಂದು ರಚಿಸಲಾಗಿತ್ತು.

ಹೈಕೋರ್ಟ್ ವಿಶೇಷ ತನಿಖಾ ಸಮಿತಿಗಳ ತನಿಖೆಗೆ ತಡೆಯಾಜ್ಞೆ ನೀಡಿದೆ. ನಾಗಮೋಹನ್ ದಾಸ್ ಅವರ ವಿಚಾರಣಾ ಆಯೋಗಕ್ಕೆ ವಹಿಸಲಾಗಿರುವ ವಸ್ತುವಿಷಯಗಳ ಬಹುಪಾಲು ಅಂಶಗಳಲ್ಲಿ ಸಾಮ್ಯತೆ ಇರುವುದರಿಂದ, ಒಂದೇ ಸಂಸ್ಥೆಯಿಂದ ತನಿಖೆ ಕೈಗೊಳ್ಳುವುದು ಸೂಕ್ತ ಎಂದು ತೀರ್ಮಾನಿಸಲಾಗಿದೆ.

ತನಿಖಾ ಸಮಿತಿಗಳು ತಮ್ಮ ಸುಪರ್ದಿಯಲ್ಲಿರುವ ಎಲ್ಲ ಕಡತ, ದಾಖಲೆ, ಮಾಹಿತಿಗಳನ್ನು ನಾಗಮೋಹನ್ ದಾಸ್ ಅವರ ವಿಚಾರಣಾ ಆಯೋಗಕ್ಕೆ ಸಲ್ಲಿಸಿ, ಸ್ವೀಕೃತಿ ಪಡೆದು ಬಿಬಿಎಂಪಿ ಕೇಂದ್ರ ಕಚೇರಿಗೆ ಸಲ್ಲಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

'ಕಾರ್ಯಕ್ರಮಕ್ಕೆ ಬರದಂತೆ ಅಡ್ವಾಣಿ, ಜೋಶಿಗೆ ಮನವಿ'

ಅಯೋಧ್ಯಾ(ಪಿಟಿಐ): 'ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯುವ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಬಿಜೆಪಿ ವರಿಷ್ಠರಾದ ಎಲ್.ಕೆ.ಅಡ್ವಾಣಿ ಹಾಗೂ ಮುರಳಿಮನೋಹರ್ ಜೋಷಿ ಅವರು ಪಾಲ್ಗೊಳ್ಳುವ ಸಾಧ್ಯತೆ ಇಲ್ಲ' ಎಂದು ರಾಮ ಮಂದಿರ ಟ್ರಸ್ಟ್ ಸೋಮವಾರ ತಿಳಿಸಿದೆ.

'ವಯಸ್ಸು ಹಾಗೂ ಆರೋಗ್ಯದ ಕಾರಣಗಳಿಂದಾಗಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದಂತೆ ಈ ಇಬ್ಬರು ಹಿರಿಯರನ್ನು ಕೋರಿದ್ದು, ಅದಕ್ಕೆ ಸಮ್ಮತಿಸಿದ್ದಾರೆ' ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿರುವ ಆಹ್ವಾನಿತರ ಕುರಿತ ವಿವರಗಳನ್ನು ನೀಡಿದ ರಾಯ್, 'ಅಡ್ವಾಣಿ ಅವರಿಗೆ ಈಗ 96 ವರ್ಷ, ಜೋಷಿ ಅವರಿಗೆ ಮುಂದಿನ ತಿಂಗಳು 90 ವರ್ಷ ತುಂಬುತ್ತವೆ' ಎಂದರು.

ಕೋವಿಡ್: ಗಡಿಯಲ್ಲಿ ತಪಾಸಣೆ ಆರಂಭ

ಪ್ರಜಾವಾಣಿ ವಾರ್ತೆ

ವಿರಾಜಪೇಟೆ (ಕೊಡಗು ಜಿಲ್ಲೆ): ನೆರೆಯ ಕೇರಳದಲ್ಲಿ ಕೋವಿಡ್ ಪ್ರಕರಣಗಳು ನಿರಂತರವಾಗಿ ಹೆಚ್ಚುತ್ತಿರುವುದರಿಂದ ಗಡಿ ಪ್ರದೇಶವಾದ ಪೆರುಂಬಾಡಿ ಚೆಕ್‌ಪೋಸ್ಟ್‌ನಲ್ಲಿ ಸೋಮವಾರ ಪ್ರಯಾಣಿಕರ ಆರೋಗ್ಯ ತಪಾಸಣೆ ಆರಂಭಿಸಲಾಯಿತು.

ಕೇರಳದಿಂದ ಬರುವ ಖಾಸಗಿ ವಾಹನಗಳನ್ನು ತಡೆದು ಪ್ರಯಾಣಿಕರ ಆರೋಗ್ಯ ತಪಾಸಣೆ ನಡೆಸಲಾಯಿತು.

ಆರೋಗ್ಯ ನಿರೀಕ್ಷಣಾಧಿಕಾರಿ ಚಿರಂಜೀವಿ ಪ್ರತಿಕ್ರಿಯಿಸಿ, 'ಇಲಾಖೆಯ ಸೂಚನೆಯಂತೆ ತಪಾಸಣೆ ನಡೆಸಲಾಗುತ್ತಿದೆ. ಸೋಂಕಿನ ಲಕ್ಷಣ ಕಂಡುಬಂದಲ್ಲಿ ಅವರಿಗೆ ವಿರಾಜಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ನಂತರ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗೆ ಕಳಿಸಲಾಗುತ್ತದೆ.

ಇಲ್ಲಿಯವರೆಗೆ ನಡೆದ ತಪಾಸಣೆಯ ಸಂದರ್ಭ ಯಾರಿಗೂ ಸೋಂಕಿನ ಲಕ್ಷಣ ಕಂಡುಬಂದಿಲ್ಲ' ಎಂದು ಮಾಹಿತಿ ನೀಡಿದರು.

ಕೇರಳ: ವ್ಯಕ್ತಿ ಸಾವು

ತಿರುವನಂತಪುರ(ಪಿಟಿಐ): ಕೇರಳದಲ್ಲಿ ಸೋಮವಾರ ಕೋವಿಡ್–19ನ 111 ಹೊಸ ಪ್ರಕರಣಗಳು ವರದಿಯಾಗಿದ್ದು, ಒಬ್ಬ ವ್ಯಕ್ತಿ ಮೃತಪಟ್ಟಿದ್ದಾಗಿ ಆರೋಗ್ಯ ಸಚಿವಾಲಯ ತಿಳಿಸಿದೆ.

ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1,634ಕ್ಕೆ ಏರಿದಂತಾಗಿದೆ ಎಂದೂ ಸಚಿವಾಲಯದ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ

ಕೆನರಾ ಬ್ಯಾಂಕ್‌ನಲ್ಲಿ ಕನ್ನಡ ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಕೆನರಾ ಬ್ಯಾಂಕ್‌ನ ಪ್ರಧಾನ ಕಾರ್ಯಾಲಯದಲ್ಲಿ ಇತ್ತೀಚೆಗೆ ಕನ್ನಡ ರಾಜ್ಯೋತ್ಸವದ ಸುವರ್ಣ ಸಂಭ್ರಮಾಚರಣೆ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ. ಸತ್ಯನಾರಾಯಣ ರಾಜು ಮಾತನಾಡಿ, 'ಕನ್ನಡಿಗರು ಹೃದಯ ವೈಶಾಲ್ಯ ಹೊಂದಿದ್ದಾರೆ. ದೇಶದ ಪ್ರಗತಿಯಲ್ಲಿ ಕರ್ನಾಟಕದ ಪಾಲು ದೊಡ್ಡದಿದೆ' ಎಂದರು. ಕೆನರಾ ಬ್ಯಾಂಕ್‌ನ ಮುಖ್ಯ ಕಾರ್ಯಾಲಯವು ಬೆಂಗಳೂರಿನಲ್ಲಿದೆ. ಇಲ್ಲಿ ಕನ್ನಡೇತರರಿಗೆ ಕನ್ನಡ ಭಾಷೆಯ ಕಲಿಕೆಗೆ ಅನುಕೂಲವಾಗುವಂತಹ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಾಹಿತಿ ಡಾ.ಆರತಿ ವಿ.ಬಿ. ಮಾತನಾಡಿ, ಪ್ರಾದೇಶಿಕತೆಯ ಜೊತೆಗೆ ಭಾರತೀಯತೆಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯತೆ ಬಗ್ಗೆ ಒತ್ತಿ ಹೇಳಿದರು.

ಕನ್ನಡದ ರಾಜಮನೆತನಗಳು ಕಲೆ, ಸಂಸ್ಕೃತಿ ಮೂಲಕ ಭಾರತದಾದ್ಯಂತ ತಮ್ಮ ಅಸ್ಮಿತೆಯನ್ನು ಇಂದಿಗೂ ಉಳಿಸಿ ಹೋಗಿವೆ ಎಂದರು. ನಾವೆಲ್ಲರೂ ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಂಡು ಭಾರತೀಯತೆಯನ್ನು ವಿಶ್ವಮಟ್ಟದಲ್ಲಿ ಪ್ರಚುರ ಪಡಿಸಬೇಕಿದೆ ಎಂದು ಹೇಳಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು. ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕರಾದ ದೇಬಾಶಿಶ್ ಮುಖರ್ಜಿ, ಅಶೋಕ ಚಂದ್ರ, ಭವೇಂದ್ರ ಕುಮಾರ್ ಉಪಸ್ಥಿತರಿದ್ದರು. ಮುಖ್ಯ ಮಹಾ ಪ್ರಬಂಧಕ ಕೆ.ಜೆ. ಶ್ರೀಕಾಂತ ಸ್ವಾಗತಿಸಿದರು. ಶ್ರೀವಿದ್ಯಾ ನಿರೂಪಿಸಿದರು. ಮಹಾಪ್ರಬಂಧಕ ರಾಮನಾಯ್ಕ್ ವಂದಿಸಿದರು.

ಬೆಂಗಳೂರಿನ ಕೆನರಾ ಬ್ಯಾಂಕ್‌ನ ಪ್ರಧಾನ ಕಾರ್ಯಾಲಯದಲ್ಲಿ ಇತ್ತೀಚೆಗೆ ನಡೆದ ಕನ್ನಡ ರಾಜ್ಯೋತ್ಸವದ ಸುವರ್ಣ ಸಂಭ್ರಮಾಚರಣೆಯಲ್ಲಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ. ಸತ್ಯನಾರಾಯಣ ರಾಜು, ಸಾಹಿತಿ ಡಾ.ಆರತಿ ವಿ.ಬಿ, ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕರಾದ ದೇಬಾಶಿಶ್ ಮುಖರ್ಜಿ, ಅಶೋಕ ಚಂದ್ರ, ಭವೇಂದ್ರ ಕುಮಾರ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು

ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಘಟನೆ: ಮತ್ತೆ ಕಿಡಿಕಾರಿದ ಹೈಕೋರ್ಟ್

ಪುಂಡುಗಂದಾಯದಂಥ ಹೊಣೆ ಹೊರಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಗ್ರಾಮದ ಮಹಿಳೆಯನ್ನು ವಿವಸ್ತ್ರಗೊಳಿಸಿ ಥಳಿಸಲಾದ ಪ್ರಕರಣದಲ್ಲಿ ಘಟನೆಯನ್ನು ಮೂಕ ಪ್ರೇಕ್ಷಕರಾಗಿ ಗಮನಿಸಿದ ಗ್ರಾಮಸ್ಥರ ಮೇಲೆ ಪುಂಡುಗಂದಾಯದ (ಪುಂಡಾಟದ ಮೂಲಕ ಸಮಾಜದ ಶಾಂತಿಗೆ ಭಂಗ ತಂದವರ ಊರಿನ ಮೇಲೆ ಸರ್ಕಾರ ಹೇರುವ ಒತ್ತಾಯದ ತೆರಿಗೆ) ಮಾದರಿಯಲ್ಲಿ ಸಾಮೂಹಿಕ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

ಘಟನೆಯ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇದಕ್ಕೊಂದು ಸಂದೇಶ ರವಾನೆಯಾಗಲೇಬೇಕು. ಗ್ರಾಮದ ಎಲ್ಲರಿಗೂ, ನಿರ್ದಿಷ್ಟವಾಗಿ ತಪ್ಪು ಮಾಡಿದವರು ಹಣ ಪಾವತಿಸುವಂತೆ ಮಾಡಬೇಕು. ಬ್ರಿಟಿಷರ ಆಡಳಿತದಲ್ಲಿ ಬಂಗಾಳದ ಮೊದಲ ಗವರ್ನರ್ ಆಗಿದ್ದ ವಿಲಿಯಮ್ ಬೆಂಟಿಕ್, ಕಳ್ಳತನ ಮಾಡುವವರಿದ್ದ ಗ್ರಾಮಕ್ಕೆ ಪುಂಡ ದಂಡ ಎಂಬ ತೆರಿಗೆ ವಿಧಿಸುತ್ತಿದ್ದ. ಅದೇ ಮಾದರಿಯಲ್ಲಿ ಈ ಘಟನೆಯಲ್ಲೂ ತೆರಿಗೆ ವಿಧಿಸಿದ್ದೇ ಆದರೆ ಜನರಿಗೆ ಸ್ವಲ್ಪವಾದರೂ ಜವಾಬ್ದಾರಿ ಹೆಚ್ಚಾಗಲಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

'ನಾವು ನಾಗರಿಕ ಸಮಾಜ ಎಂದು ಹೇಳಿಕೊಳ್ಳುತ್ತೇವೆ. ಆದರೆ, ಇಂತಹ ಘಟನೆ ನಡೆದಾಗ ಗ್ರಾಮಸ್ಥರ ಪಾತ್ರ ಏನು? ಏಕೆ ಮೂಕ ಪ್ರೇಕ್ಷಕರಾಗಿದ್ದರು ಎಂಬುದಕ್ಕೆ ಕಾರಣ ಗಳಿವೆಯೇ? ಅವರು ಪೊಲೀಸ್, ನ್ಯಾಯಾಂಗ, ರಾಜಕೀಯ ವ್ಯಕ್ತಿಗಳಿಗೆ ಹೆದರಿದ್ದಾರೆಯೇ? ಗ್ರಾಮದ ಸಾಕ್ಷರತೆಯ ಪ್ರಮಾಣವೇನು? ಸರ್ಕಾರ ಯಾಕೆ ಯಾವಾಗಲೂ ಆಲಸಿಯಾಗಿ ವರ್ತಿಸುತ್ತದೆ? ಇಂತಹ ಘಟನೆ ನಡೆದಾಗ ಜನರ ಭಾಗೀದಾರಿಕೆ ಏಕಿಲ್ಲ? ಇಂತಹವುಗಳನ್ನು ನಿಯಂತ್ರಿಸುವುದಾದರೂ ಹೇಗೆ..' ಎಂದು ನ್ಯಾಯಪೀಠ, ಸರ್ಕಾರಕ್ಕೆ ಪ್ರಶ್ನೆಗಳನ್ನು ಕೇಳಿತು.

'ನಮ್ಮನ್ನು ನ್ಯಾಯಾಂಗ ಪ್ರಕ್ರಿಯೆಯಲ್ಲಿ ಸಿಲುಕಿಸಲಾಗುತ್ತದೆ. ನಮಗೆ ಸೂಕ್ತ ಗೌರವ ಸಿಗುವುದಿಲ್ಲ ಎಂದು ಸಾಕ್ಷಿಗಳು ಹೆದರುತ್ತಾರೆ. ಹೀಗಾಗಿ, ಸಾಮಾನ್ಯರು ಅಪರಾಧದ ಬಗ್ಗೆ ಮಾಹಿತಿ ನೀಡಲು ಮುಂದಾಗುವುದಿಲ್ಲ. ಈ ಸಾಮಾಜಿಕ ಆಯಾಮದ ಬಗ್ಗೆಯೂ ನಾವು ಗಮನಹರಿಸಬೇಕಿದೆ' ಎಂದ ನ್ಯಾಯಪೀಠ, 'ಬಹಳಷ್ಟು ಪ್ರಕರಣಗಳಲ್ಲಿ ಸಾಕ್ಷಿಗಳು ಮತ್ತು ಆರೋಪಿಗಳಿಗೆ ವ್ಯತ್ಯಾಸವೇ ಇರುವುದಿಲ್ಲ' ಎಂದು ಕಟುವಾಗಿ ನುಡಿಯಿತು.

ಕೋರ್ಟ್ ಹೇಳಿದ್ದು

- ಗ್ರಾಮಸ್ಥರು ಯಾರಿಗೆ ಹೆದರಿದ್ದಾರೆ..?
- ಎಲ್ಲರಿಗೂ ಸಂದೇಶ ರವಾನೆಯಾಗಬೇಕಿದೆ
- ರಕ್ಷಿಸಲು ಹೋದವನನ್ನೇ ಥಳಿಸಿದರಲ್ಲವೇ..?

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಡಿಐಜಿ ಸುನೀಲಕುಮಾರ್ ಮೀನಾ ವಿಚಾರಣೆಗಾಗಿ ಸೋಮವಾರ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದರು

'ಗಂಡು ಮಕ್ಕಳಿಗೆ ಕಲಿಸಿ'

'ಸಮಾಜದಲ್ಲಿ ಹೆಣ್ಣು ಮಗುವನ್ನು ರಕ್ಷಿಸಲು ಬೇಟಾ ಪಡಾವೋ ಆಗಬೇಕು, ಆ ಕುರಿತು ಗಂಡು ಮಗುವಿಗೆ ಮನದಟ್ಟು ಮಾಡಬೇಕು' ಎಂದ ನ್ಯಾಯಪೀಠ, 'ಮಹಿಳೆಯರೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ಪುರುಷರಿಗೆ ಕಲಿಸಬೇಕಾಗಿದೆ' ಎಂದು ಹೇಳಿತು.

'ವಂಟಮೂರಿ ಗ್ರಾಮದಲ್ಲಿ ಸುಮಾರು 800 ಜನರಿದ್ದಾರೆ. ಘಟನೆ ವೇಳೆ 13 ಮಂದಿ ಮಹಿಳೆಯ ಮೇಲೆ ಆಕ್ರಮಣ ನಡೆಸಿದ್ದಾರೆ. 60ಕ್ಕೂ ಹೆಚ್ಚು ಮಂದಿ ಘಟನೆಗೆ ಮೂಕ ಪ್ರೇಕ್ಷಕರಾಗಿದ್ದಾರೆ. ಅವರಲ್ಲಿ ಜಹಂಗೀರ್ ಎನ್ನುವ ವ್ಯಕ್ತಿ ಮಹಿಳೆಯ ರಕ್ಷಣೆಗೆ ಮುಂದಾಗಿ ಹಲ್ಲೆಗೊಳಗಾಗಿದ್ದಾರೆ. ಇನ್ನುಳಿದ ಜನ ಯಾವ ಕಾರಣಕ್ಕೆ ಮುಂದಾಗಲಿಲ್ಲ' ಎಂದು ನ್ಯಾಯಪೀಠ ಬೇಸರ ವ್ಯಕ್ತಪಡಿಸಿತು.

ರೋಮ್ ಸಾಮ್ರಾಜ್ಯವನ್ನು ಉಲ್ಲೇಖಿಸಿದ ನ್ಯಾಯಪೀಠ, 'ಉತ್ತಮ ಸಮಾಜವನ್ನು ನಿರ್ಮಿಸದ ಹೊರತು ಉತ್ತಮ ರಾಷ್ಟ್ರ ನಿರ್ಮಾಣ ಸಾಧ್ಯವಿಲ್ಲ' ಎಂದು ಹೇಳಿತು.

ಸಂತ್ರಸ್ತೆಗೆ ಪರಿಹಾರ:ಎ.ಜಿ

ವಿಚಾರಣೆ ವೇಳೆ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ಪ್ರಕರಣದಲ್ಲಿ ಇಬ್ಬರನ್ನು ಹೊರತುಪಡಿಸಿ ಉಳಿದ ಆರೋಪಿಗಳನ್ನು ಬಂಧಿಸಲಾಗಿದೆ. ಸಂತ್ರಸ್ತೆಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ ಮತ್ತು ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ₹ 5 ಲಕ್ಷ ಪರಿಹಾರ ಹಾಗೂ 2.5 ಎಕರೆ ಜಮೀನು ಒದಗಿಸಲಾಗುವುದು. ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ. ನಿರ್ಲಕ್ಷ್ಯ ತೋರಿದ ಪೊಲೀಸ್ ಅಧಿಕಾರಿಯನ್ನು ಈಗಾಗಲೇ ಅಮಾನತುಪಡಿಸಲಾಗಿದೆ' ಎಂದು ವಿವರಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ಸಂತ್ರಸ್ತ ಮಹಿಳೆಗೆ ಕಾನೂನು ಸೇವಾ ಪ್ರಾಧಿಕಾರದಿಂದ ನೀಡುವ ₹ 50 ಸಾವಿರ ಪರಿಹಾರದ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡುವಂತೆ ನಿರ್ದೇಶಿಸಿತು. ತನಿಖೆಯ ಪ್ರಗತಿಯ ವರದಿಯನ್ನು ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಜನವರಿ ಮೂರನೇ ವಾರಕ್ಕೆ ಮುಂದೂಡಿತು.

ಆಯೋಗದ ಮುಂದೆ ಸಂಪೂರ್ಣ ವರದಿ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಮಹಿಳೆಯನ್ನು ಬೆತ್ತಲೆಗೊಳಿಸಿ, ಹಲ್ಲೆ ಮಾಡಿದ ಪ್ರಕರಣದ ಬಗ್ಗೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಡಿಐಜಿ ಸುನೀಲಕುಮಾರ್ ಮೀನಾ ಅವರು ಸೋಮವಾರ ಇಡೀ ದಿನ ವಿಚಾರಣೆ ಮಾಡಿದರು.

ಇಲ್ಲಿನ ಜಿಲ್ಲಾಸ್ಪತ್ರೆಯ 'ಸಖಿ' ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂತ್ರಸ್ತೆಯನ್ನು ಭೇಟಿ ಮಾಡಿದ ಅವರು ಎರಡು ತಾಸು ಮಾಹಿತಿ ಕಲೆಹಾಕಿದರು. ಪೊಲೀಸ್ ತನಿಖೆ ವರದಿ, ವೈದ್ಯಕೀಯ ವರದಿ ಪಡೆದುಕೊಂಡು ಹೇಳಿಕೆಗಳನ್ನೂ ದಾಖಲಿಸಿಕೊಂಡರು.

ನಂತರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಸುನೀಲಕುಮಾರ್ ಮೀನಾ, 'ಈ ಪ್ರಕರಣದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾದ ಬಗ್ಗೆ ತನಿಖೆ ನಡೆಸಿದ್ದೇನೆ. ಸಂಪೂರ್ಣ ಮಾಹಿತಿ ಪಡೆದಿದ್ದು, ವರದಿ ಸಿದ್ಧಪಡಿಸಿ ಆಯೋಗದ ಮುಂದೆ ಇಡುತ್ತೇನೆ. ನಂತರದ ನಿರ್ಧಾರವನ್ನು ಆಯೋಗ ತೆಗೆದುಕೊಳ್ಳಲಿದೆ' ಎಂದರು.

ಇದಕ್ಕೂ ಮುನ್ನ ಅವರು ಘಟನೆ ನಡೆದ ಹೊಸ ವಂಟಮೂರಿ ಗ್ರಾಮಕ್ಕೆ ಭೇಟಿ ನೀಡಿದರು. ಸಂತ್ರಸ್ತೆಯ ಮನೆ, ಆರೋಪಿಗಳ ಮನೆ, ಮಹಿಳೆಯನ್ನು ಬೆತ್ತಲೆಯಾಗಿ ಕಟ್ಟಿಹಾಕಿದ ಸ್ಥಳ... ಪ್ರತಿಯೊಂದನ್ನೂ ಪರಿಶೀಲಿಸಿದರು.

ವರದಿ ಪಡೆದ ಸಿಐಡಿ: ಸಿಐಡಿಯ ಪ್ರಭಾರ ಡಿಐಜಿ ಸುಧೀರಕುಮಾರ ರೆಡ್ಡಿ ಅವರ ನೇತೃತ್ವದ ತಂಡ ಸೋಮವಾರ ಘಟನೆಯ ಕುರಿತು ಪೂರ್ಣ ಪ್ರಮಾಣದ ಮಾಹಿತಿ ಕಲೆಹಾಕಿತು.

ನಗರದ ಖಾಸಗಿ ಅತಿಥಿಗೃಹದಲ್ಲಿ ಅಧಿಕಾರಿಗಳ ಸಭೆ ನಡೆಸಿದ ಸುಧೀರಕುಮಾರ ರೆಡ್ಡಿ ಅವರು, ಸಂತ್ರಸ್ತೆ ಹಾಗೂ ಅವರ ಕುಟುಂಬದವರ ಮಾಹಿತಿ ಕಲೆಹಾಕಿದರು. ಘಟನಾವಳಿಯ ದಾಖಲೆಗಳನ್ನು ಪರಿಶೀಲಿಸಿದರು. ಈ ವೇಳೆ ಪೊಲೀಸ್ ಹಾಗೂ ನ್ಯಾಯಾಂಗ ಇಲಾಖೆಯ ಅಧಿಕಾರಿಗಳೂ ಹಾಜರಿದ್ದರು.

ಸಿಐಡಿ ಇಬ್ಬರು ಎಸ್‌ಪಿಗಳಾದ ಪೃಥ್ವಿಕ್, ರಶ್ಮಿ ಪರಡ್ಡಿ ಹಾಗೂ ಡಿವೈಎಸ್‌ಪಿ ಅಂಜುಮಾಲಾ ನಾಯಕ ಸೇರಿ 6 ಜನರ ತಂಡ ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡಿದೆ.

ಭಾನುವಾರವೇ ಬೆಳಗಾವಿಗೆ ಬಂದು ಬೀಡು ಬಿಟ್ಟಿರುವ ಈ ತಂಡ, ಮಂಗಳವಾರ (ಡಿ.19) ಹೊಸ ವಂಟಮೂರಿ ಗ್ರಾಮ ಹಾಗೂ ಜಿಲ್ಲಾಸ್ಪತ್ರೆಗೆ ತೆರಳಿ ಸಂತ್ರಸ್ತೆ ಹಾಗೂ ಅವರ ಕುಟುಂಬದವರಿಂದ ಮಾಹಿತಿ ಸಂಗ್ರಹಿಸಲಿದೆ ಎಂದು ಮೂಲಗಳು ತಿಳಿಸಿವೆ.

ಚಂಪಾ ಷಷ್ಠಿ ರಥೋತ್ಸವ

ಮಹತೋಭಾರ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಬೆಳಿಗ್ಗೆ ಧನುರ್ ಲಗ್ನ ಸುಮುಹೂರ್ತದಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವರ ಬ್ರಹ್ಮರಥೋತ್ಸವ ನಡೆಯಿತು. ಅಪಾರ ಭಕ್ತರು ಈ ಸಂಭ್ರಮಕ್ಕೆ ಸಾಕ್ಷಿಯಾದರು

ಪ್ರಜಾವಾಣಿ ಚಿತ್ರ: ಲೋಕೇಶ್ ಸುಬ್ರಹ್ಮಣ್ಯ

ಕುಕ್ಕೆ: 194 ಭಕ್ತರಿಂದ ಎಡೆಸ್ನಾನ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಚಂಪಾ ಷಷ್ಠಿಯ ದಿನವಾದ ಸೋಮವಾರ ಕುಕ್ಕೆ ಸುಬ್ರಹ್ಮಣ್ಯದಲ್ಲಿ 194 ಭಕ್ತರು ಎಡೆಸ್ನಾನ ಸೇವೆ ಸಲ್ಲಿಸಿದರು.

ಬಾಳೆ ಎಲೆಯಲ್ಲಿ ಬಡಿಸಿದ್ದ ದೇವರ ನೈವೇದ್ಯವನ್ನು ಗೋವುಗಳಿಗೆ ತಿನ್ನಿಸಿದ ಬಳಿಕ ಆ ಎಲೆಗಳ ಮೇಲೆ ಭಕ್ತರು ಉರುಳು ಸೇವೆ ನಡೆಸಿ ಹರಕೆ ಸಲ್ಲಿಸಿದರು.

118 ಪುರುಷರು ಮತ್ತು 76 ಮಹಿಳೆಯರು ಈ ಸೇವೆ ನೆರವೇರಿಸಿದರು. ಚಂಪಾಷಷ್ಠಿ ಜಾತ್ರೋತ್ಸವದ ಚೌತಿ, ಪಂಚಮಿ ಮತ್ತು ಷಷ್ಠಿಯ ದಿನ ಭಕ್ತರು ಸ್ವಯಂಪ್ರೇರಿತರಾಗಿ ಎಡೆಸ್ನಾನ ಸೇವೆ ಸಲ್ಲಿಸಿದ್ದರು.

ಧಾರ್ಮಿಕ ದತ್ತಿ ಇಲಾಖೆಯ ಆಗಮ ಪಂಡಿತ ರಾಜಗೋಪಾಲ್ ಅವರು ಎಡೆಸ್ನಾನದ ಕುರಿತು ಮಾರ್ಗದರ್ಶನ ನೀಡಿದರು. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಧ್ಯಾಹ್ನ ಮಹಾಪೂಜೆ ಬಳಿಕ ದೇವಳದ ಹೊರಾಂಗಣದ ಸುತ್ತಲೂ 432 ಬಾಳೆಎಲೆ ಹಾಕಿ ಅದರ ಮೇಲೆ ದೇವರ ನೈವೇದ್ಯ ಬಡಿಸಲಾಯಿತು. ಗೋವು ತಿಂದ ಎಲೆಯ ಮೇಲೆ ಉರುಳು ಸೇವೆ ಮಾಡುತ್ತಾ ಒಂದು ಸುತ್ತು ಪ್ರದಕ್ಷಿಣೆ ಹಾಕಿದ ಬಳಿಕ ಭಕ್ತರು ದರ್ಪಣ ತೀರ್ಥ ನದಿಯಲ್ಲಿ ಸ್ನಾನ ಮಾಡಿ ದೇವರ ಪ್ರಸಾದ ಸ್ವೀಕರಿಸಿದರು.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಕ್ತರು ಸೋಮವಾರ ಎಡೆಸ್ನಾನ ಸೇವೆ ನೆರವೇರಿಸಿದರು

ದೆಹಲಿ ಪೊಲೀಸರಿಂದ ವಿಚಾರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಲೋಕಸಭೆ ಕಲಾಪದ ವೇಳೆ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದಿದ್ದ ಆರೋಪಿ ಡಿ. ಮನೋರಂಜನ್ ಅವರ ಮನೆಯಲ್ಲಿ ದೆಹಲಿ ಪೊಲೀಸರು ಸೋಮವಾರ ತಪಾಸಣೆ ನಡೆಸಿದರು. ಪೋಷಕರನ್ನು ಸತತ ಏಳೂವರೆ ತಾಸು ವಿಚಾರಣೆಗೆ ಒಳಪಡಿಸಿದರು.

ವಿಜಯನಗರ 2ನೇ ಹಂತದಲ್ಲಿರುವ 'ಶ್ರೀ ರಂಗ' ಮನೆಗೆ ಸೋಮವಾರ ಬೆಳಿಗ್ಗೆ 11ಕ್ಕೆ ದೆಹಲಿ ಪೊಲೀಸ್ ಅಧಿಕಾರಿಗಳು (ಒಬ್ಬ ಮಹಿಳಾ ಅಧಿಕಾರಿ) ಹಾಗೂ ಒಬ್ಬ ರಾಜ್ಯ ಗುಪ್ತಚರ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಸಂಜೆ 6.30ರವರೆಗೆ ವಿಚಾರಣೆ ನಡೆಸಿದರು. ಆರಂಭದಲ್ಲಿ ಮನೆಯಲ್ಲಿದ್ದ ಕುಟುಂಬದವರನ್ನು ಹೊರಗೆ ಕಳಿಸಿ, ಮನೋರಂಜನ್ ಅವರ ತಾಯಿ ಹಾಗೂ ತಂಗಿಯ ಬಳಿ ಮಾಹಿತಿ ಪಡೆದರು.

ಈ ಹಿಂದೆ ದೆಹಲಿ ಪೊಲೀಸರ ಸೂಚನೆಯಂತೆ ಮನೆಯವರು 3ನೇ ಅಂತಸ್ತಿನಲ್ಲಿರುವ ಮನೋರಂಜನ್ ಕೋಣೆಗೆ ಬೀಗ ಹಾಕಿದ್ದರು. ಅಧಿಕಾರಿಗಳು ಬೀಗ ತೆಗೆಸಿ ಪರಿಶೀಲನೆ ನಡೆಸಿದರು. ಅಲ್ಲಿ ಐದು ತಾಸು ತಪಾಸಣೆ ನಡೆಸಿದರು. ಮನೋರಂಜನ್ ಓದುತ್ತಿದ್ದ ಪುಸ್ತಕಗಳು, ಬಳಸುತ್ತಿದ್ದ ವಸ್ತುಗಳನ್ನು ಪರೀಕ್ಷಿಸಿದರು. ಈ ನಡುವೆ ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ಸುರೇಶ್, ಎಸ್‌ಐ ವಿಶ್ವನಾಥ್ ಅವರನ್ನೂ ಕರೆಸಿಕೊಂಡು, ಮನೋರಂಜನ್‌ಗೆ ಅಪರಾಧ ಹಿನ್ನೆಲೆ ಇದೆಯೇ ಎಂಬುದನ್ನು ವಿಚಾರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸರು ಬಂದಾಗ ಮನೋರಂಜನ್ ತಂದೆ ದೇವರಾಜೇಗೌಡ ಮನೆಯಲ್ಲಿರಲಿಲ್ಲ. ಕೆಲ ಸಮಯದ ಬಳಿಕ ಬಂದ ಅವರನ್ನು ಅಧಿಕಾರಿಗಳು ಕೊಠಡಿಗೆ ಕರೆಸಿಕೊಂಡು ಮಾಹಿತಿ ಪಡೆದರು. ಮಗನ ಚಟುವಟಿಕೆ, ಹಣದ ಮೂಲ ಯಾವುದು, ಆತನ ಸ್ನೇಹಿತರು ಯಾರ್‍ಯಾರು, ಹವ್ಯಾಸಗಳೇನಿದ್ದವು ಎಂಬಿತ್ಯಾದಿ ವಿಚಾರಗಳನ್ನು ತಿಳಿದುಕೊಂಡರು. ಈ ವೇಳೆ ತಾಯಿ ಕಣ್ಣೀರಿಡುತ್ತಾ ಮಾಹಿತಿ ನೀಡಿದರು ಎಂಬ ಮಾಹಿತಿ ದೊರೆತಿದೆ.

ಭದ್ರತೆ: ಮನೋರಂಜನ್ ಮನೆಗೆ ಭದ್ರತೆ ಮುಂದುವರಿಸಲಾಗಿದ್ದು, 3 ಪಾಳಿಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಹೊರಗಡೆಯವರು ಮನೆಯ ಒಳಗಡೆ ತೆರಳದಂತೆ ಗೇಟ್‌ಗೆ ಬೀಗ ಹಾಕಲಾಗಿದ್ದು, ಸಿಬ್ಬಂದಿ ಅನುಮತಿ ಬಳಿಕ ಬೀಗ ತೆಗೆಯುವ ವ್ಯವಸ್ಥೆ ಮಾಡಲಾಗಿದೆ. ಮನೋರಂಜನ್ ಅವರನ್ನು ಮಂಗಳವಾರ ಮೈಸೂರಿಗೆ ಕರೆತರುವ ಸಾಧ್ಯತೆ ಇದೆ ಎನ್ನಲಾಗಿದೆ.

ಗುಡಿಬಂಡೆ ತಾಲ್ಲೂಕಿನ ದರ್ಪರ್ತಿ ಗ್ರಾಮದಲ್ಲಿ ಘಟನೆ • ಯುವತಿ ತಂದೆ ಸೇರಿ 6 ಮಂದಿ ವಶಕ್ಕೆ

ಯುವಕನ ಪೋಷಕರ ಮೇಲೆ ಅಮಾನುಷ ಹಲ್ಲೆ

ಪ್ರಜಾವಾಣಿ ವಾರ್ತೆ

ಗುಡಿಬಂಡೆ (ಚಿಕ್ಕಬಳ್ಳಾಪುರ): ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ದರ್ಪರ್ತಿ ಗ್ರಾಮದಲ್ಲಿ ಯುವತಿಯ ಮನೆಯವರು ಸೋಮವಾರ ಯುವಕನ ತಂದೆ, ತಾಯಿಯನ್ನು ಅಮಾನುಷವಾಗಿ ಥಳಿಸಿದ್ದಾರೆ.

ದರ್ಪರ್ತಿ ಗ್ರಾಮದ ಮನೋಜ್ (21) ಮತ್ತು ಅಂಕಿತಾ (19) ಪರಸ್ಪರ ಪ್ರೀತಿಸುತ್ತಿದ್ದರು. ಅಕ್ಕಪಕ್ಕದ ಮನೆಯಲ್ಲಿದ್ದ ಇಬ್ಬರೂ ಒಂದೇ ಸಮುದಾಯಕ್ಕೆ (ವಾಲ್ಮೀಕಿ ನಾಯಕ) ಸೇರಿದವರು. ಮದುವೆಗೆ ಪೋಷಕರು ವಿರೋಧ ವ್ಯಕ್ತಪಡಿಸಿದ ಕಾರಣ ಕಳೆದ ತಿಂಗಳು ಇಬ್ಬರೂ ಮನೆ ತೊರೆದು ಹೋಗಿ ಮದುವೆಯಾಗಿದ್ದರು.

ಯುವತಿಯನ್ನು ಪತ್ತೆ ಹಚ್ಚಿದ್ದ ಆಕೆಯ ಪೋಷಕರು ಮರಳಿ ಕರೆತಂದು ಮನೆಯಲ್ಲಿಯೇ ಕೂಡಿಹಾಕಿದ್ದರು. ಮಾಂಗಲ್ಯ ಸರವನ್ನೂ ಕಿತ್ತು ಹಾಕಿದ್ದರು. ಈ ವಿಷಯ ಕಿವಿಗೆ ಬೀಳುತ್ತಲೇ ಮನೋಜ್ ಭಾನುವಾರ ರಾತ್ರಿ ಅಂಕಿತಾಳನ್ನು ಕರೆದುಕೊಂಡು ಮತ್ತೆ ಮನೆ ತೊರೆದು ಹೋಗಿದ್ದಾರೆ.

ಇದರಿಂದ ಸಿಟ್ಟಿಗೆದ್ದ ಯುವತಿಯ ತಂದೆ ಶ್ರೀನಿವಾಸ್ (53) ತನ್ನ ತಮ್ಮಂದಿರು ಮತ್ತು ಸಂಬಂಧಿಕರನ್ನು ಕರೆದುಕೊಂಡು ಪಕ್ಕದಲ್ಲಿಯೇ ಇರುವ ಯುವಕನ ಮನೆ ಮೇಲೆ ದಾಳಿ ನಡೆಸಿದ್ದಾರೆ. ಕೈಗೆ ಸಿಕ್ಕ ಯುವಕನ ತಾಯಿ ವೆಂಕಟಲಕ್ಷ್ಮಮ್ಮ (43) ಮತ್ತು ತಂದೆ ಗಂಗರಾಜು (45) ಅವರನ್ನು ಮನೆಯಿಂದ ಹೊರಗೆ ಎಳೆದು ತಂದು ಥಳಿಸಿದ್ದಾರೆ.

ಹಲ್ಲೆಯಿಂದ ಗಂಗರಾಜು ಅವರ ಭುಜದ ಮೂಳೆ ಮುರಿದಿದೆ. ವೆಂಕಟಲಕ್ಷ್ಮಮ್ಮ ಅವರ ತಲೆ ಮತ್ತು ಹೊಟ್ಟೆ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿದೆ. ಸದ್ಯ ಇಬ್ಬರನ್ನೂ ಜಿಲ್ಲಾ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಲಾಗಿದೆ. ವೆಂಕಟಲಕ್ಷ್ಮಮ್ಮ ಅವರ ಸಹೋದರಿ ಶೋಭಾ, ಗುಡಿಬಂಡೆ ಪೊಲೀಸ್ ಠಾಣೆಗೆ ಘಟನೆಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಅವರ ಹೇಳಿಕೆ ಪಡೆದಿದ್ದಾರೆ.

ಈ ಘಟನೆಯ ನಂತರ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಶೋಭಾ ಹೇಳಿಕೆ ಆಧರಿಸಿ ಯುವತಿಯ ತಂದೆ ಶ್ರೀನಿವಾಸ್ ಮತ್ತು ಅವರ ಸಹೋದರರಾದ ವೆಂಕಟೇಶ, ಗೋವಿಂದ, ಆನಂದ ಹಾಗೂ ಚಿಕ್ಕಪ್ಪ ವೆಂಕಟೇಶ್, ಚಿಕ್ಕಪ್ಪನ ಮಗ ಹರೀಶ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಶ್ರೀನಿವಾಸ್ ಅವರ ದೊಡ್ಡಪ್ಪ ವೆಂಕಟರಾಯಪ್ಪ ಪರಾರಿಯಾಗಿದ್ದಾರೆ.

> ಇದು ಕೌಟುಂಬಿಕ ವಿಚಾರದಲ್ಲಿ ನಡೆದಿರುವ ಹಲ್ಲೆ ಪ್ರಕರಣವಾಗಿದೆ. ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು
>
> **ಡಿ.ಎಲ್.ನಾಗೇಶ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಚಿಕ್ಕಬಳ್ಳಾಪುರ

ಸಂಕ್ಷಿಪ್ತ ಸುದ್ದಿ

ಕಾನ್‌ಸ್ಟೆಬಲ್ ಅಮಾನತು

ಮಂಡ್ಯ: ರೈಲಿನ ಶೌಚಾಲಯದಲ್ಲೇ ಸರ್ವೀಸ್ ರಿವಾಲ್ವಾರ್ ಬಿಟ್ಟು ಬಂದಿದ್ದ ಜಿಲ್ಲಾ ಸಶಸ್ತ್ರ ಪೊಲೀಸ್ ಮೀಸಲು ಪಡೆಯ ಕಾನ್‌ಸ್ಟೆಬಲ್ ನಾಗರಾಜು ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ನಾಗರಾಜು ನಿವೃತ್ತ ವಿಶೇಷ ಸರ್ಕಾರಿ ಅಭಿಯೋಜಕರೊಬ್ಬರಿಗೆ ಗನ್‌ಮ್ಯಾನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಬೆಂಗಳೂರಿನಿಂದ ಮಂಡ್ಯಕ್ಕೆ ಭಾನುವಾರ ಮಧ್ಯಾಹ್ನ ಕಾಚಿಗುಡ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸಿದ್ದರು. ಆಗ, ರೈಲಿನ ಶೌಚಾಲಯಕ್ಕೆ ತೆರಳಿದ್ದು, ಸೊಂಟದ ಬೆಲ್ಟ್‌ನಲ್ಲಿದ್ದ ರಿವಾಲ್ವರ್ ಅನ್ನು ತೆಗೆದು ಅಲ್ಲಿನ ವಾಶ್‌ಬೇಸಿನ್ ಮೇಲಿಟ್ಟಿದ್ದರು. ಶೌಚ ಮುಗಿಸಿದ ನಂತರ ರಿವಾಲ್ವರ್ ಅನ್ನು ಅಲ್ಲೇ ಬಿಟ್ಟು ಕೆಳಗಿಳಿದಿದ್ದರು.

ರೈಲು ಮಂಡ್ಯ ನಿಲ್ದಾಣಕ್ಕೆ ಬಂದ ನಂತರ ಶೌಚಾಲಯದಲ್ಲಿ ರಿವಾಲ್ದಾರ್ ಗಮನಿಸಿ ಪ್ರಯಾಣಿಕರು ರೈಲ್ವೆ ಪೊಲೀಸರಿಗೆ ಮಾಹಿತಿ ನೀಡಿದರು. ರೈಲ್ವೆ ಪೊಲೀಸರು ತಪಾಸಣೆ ನಡೆಸಿ ರಿವಾಲ್ವರ್ ಅನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದರು. ರಿವಾಲ್ವಾರ್ ಮೇಲಿನ ಸಂಖ್ಯೆಯ ಆಧಾರದಲ್ಲಿ ತಪಾಸಣೆ ನಡೆಸಿದಾಗ ಇದು ಕಾನ್‌ಸ್ಟೆಬಲ್ ನಾಗರಾಜು ಅವರಿಗೆ ನೀಡಿದ್ದು, ಅವರು ನಿವೃತ್ತ ವಿಶೇಷ ಸರ್ಕಾರಿ ಅಭಿಯೋಜಕರ ಅಂಗರಕ್ಷಕರಾಗಿರುವುದು ತಿಳಿದುಬಂದಿತು.

ಕರ್ತವ್ಯಲೋಪದ ಆರೋಪದ ಮೇಲೆ ನಾಗರಾಜು ಅವರನ್ನು ಸೇವೆಯಿಂದ ಅಮಾನತುಗೊಳಿಸಿರುವುದಾಗಿ ಎಸ್‌ಪಿ ಎನ್. ಯತೀಶ್ ತಿಳಿಸಿದರು.

ಬಾಲಕಿ ಅಪಹರಣ: ನಾಲ್ವರ ಬಂಧನ

ಉಡುಪಿ: ಜಿಲ್ಲೆಯ ಪಟ್ಟಣವೊಂದರ ಗಣ್ಯ ದಂಪತಿಯ ದತ್ತು ಪುತ್ರಿಯ ಅಪಹರಣ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಪೊಲೀಸರು ಕಾಸರಗೋಡು ಜಿಲ್ಲೆ ಕುಂಬಳೆಯಲ್ಲಿ ಬಂಧಿಸಿದ್ದಾರೆ.

ಬಾಲಕಿಯ ಸ್ನೇಹಿತರಾದ ಶಿರ್ವ ನಿವಾಸಿ ಗಿರೀಶ್ (20), ರೂಪೇಶ್ (22), ಜಯಂತ್ (23) ಹಾಗೂ ಮಜೂರು ನಿವಾಸಿ ಮೊಹ್ಮದ್ ಅಜೀಜ್ ಬಂಧಿತರು.

ಪ್ರಮುಖ ಆರೋಪಿ ಗಿರೀಶ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಉಳಿದ ಮೂವರ ವಿರುದ್ಧ ಅಪಹರಣಕ್ಕೆ ನೆರವು ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಬಾಲಕಿಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಲಾಗಿದ್ದು ತಾತ್ಕಾಲಿಕವಾಗಿ ಪುನರ್ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಣ್ಯ ದಂಪತಿಯ ದತ್ತು ಪುತ್ರಿ ಡಿ.11ರಂದು ಮನೆಯಿಂದ ನಾಪತ್ತೆಯಾಗಿದ್ದಳು. ಮಗಳು ನಾಪತ್ತೆಯಾದ ಚಿಂತೆಯಲ್ಲಿ ಆ ದಂಪತಿ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪ್ರಕರಣ ಚರ್ಚೆಗೆ ಗ್ರಾಸವಾಗಿತ್ತು.

ಪಣಂಬೂರು ಬೀಚ್‌ನಲ್ಲಿ ತೇಲುವ ಸೇತುವೆ

ಪಣಂಬೂರು ಬೀಚ್: ತೇಲುವ ಸೇತುವೆ

ಸುರತ್ಕಲ್ (ದಕ್ಷಿಣ ಕನ್ನಡ): ಪಣಂಬೂರು ಬೀಚ್‌ನಲ್ಲಿ ತೇಲುವ ಸೇತುವೆ ಪ್ರವಾಸಿಗರಿಗೆ ಹೊಸ ಆಕರ್ಷಣೆಯಾಗಿದೆ.

ಉಡುಪಿಯ ಮಲ್ಪೆ ಬೀಚ್ ಬಳಿಕ ದಕ್ಷಿಣ ಕನ್ನಡ ಜಿಲ್ಲೆಯ ಬೀಚ್‌ನಲ್ಲಿ ನಿರ್ಮಿಸಲಾದ ಮೊದಲ ತೇಲುವ ಸೇತುವೆ ಇದಾಗಿದೆ. 150 ಮೀಟರ್ ಉದ್ದವಿದೆ. 50 ಪ್ರವಾಸಿಗರು ಏಕಕಾಲಕ್ಕೆ ಸೇತುವೆಯಲ್ಲಿ ನಿಂತು ಸೂರ್ಯಾಸ್ತ ನೋಡಬಹುದು.

ತೇಲುವ ಸೇತುವೆಯ ಉದ್ದಕ್ಕೂ 12 ಮಂದಿ ಜೀವ ರಕ್ಷಕರನ್ನು ಪ್ರವಾಸಿಗರ ಸುರಕ್ಷತೆಗಾಗಿ ನಿಯೋಜಿಸಲಾಗಿದೆ. ಲೈಫ್ ಜಾಕೆಟ್ ಕಡ್ಡಾಯ ಮಾಡಲಾಗಿದೆ. ಡಿ.27ರಂದು ಉದ್ಘಾಟನೆ ನಡೆಯಲಿದೆ. ಇಲ್ಲಿನ ಬೀಚ್ ಅನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ.

ಜೂಜು: ನಗರಸಭೆ ಸದಸ್ಯರ ವಿರುದ್ಧ ಎಫ್‌ಐಆರ್

ಹಿರಿಯೂರು (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನ ವಾಣಿವಿಲಾಸಪುರ ಸರ್ಕಾರಿ ಅತಿಥಿ ಗೃಹದಲ್ಲಿ ಜೂಜಾಡುತ್ತಿದ್ದ ಆರೋಪದ ಮೇಲೆ ಹಿರಿಯೂರು ನಗರಸಭೆಯ ಕಾಂಗ್ರೆಸ್‌ನ ಮೂವರು ಸದಸ್ಯರು ಸೇರಿ 16 ಜನರ ಮೇಲೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ಪೈಕಿ ನಗರಸಭಾ ಸದಸ್ಯ ಜಗದೀಶ್ ಸೇರಿ 14 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಸದಸ್ಯರಾದ ಅಜ್ಜಪ್ಪ ಹಾಗೂ ಅನಿಲ್‌ಕುಮಾರ್ ತಲೆಮರೆಸಿಕೊಂಡಿದ್ದಾರೆ. ಬಂಧಿತರಿಂದ ₹4.37 ಲಕ್ಷ ನಗದು ಜಪ್ತಿ ಮಾಡಲಾಗಿದೆ.

ಅತಿಥಿ ಗೃಹದಲ್ಲಿ ಭಾನುವಾರ ತಂಗಿದ್ದ ನಗರಸಭಾ ಸದಸ್ಯರು ಜೂಜಾಟದಲ್ಲಿ ತೊಡಗಿದ್ದರು. ಇದರಲ್ಲಿ ಅತಿಥಿ ಗೃಹ ನಿರ್ವಹಣೆ ಮಾಡುತ್ತಿದ್ದ ಮೇಟಿ ನಾಸಿರ್ ಕೂಡಾ ಶಾಮೀಲಾಗಿದ್ದಾರೆ. ಖಚಿತ ಮಾಹಿತಿ ಮೇರೆಗೆ ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ಕಾಳಿಕೃಷ್ಣ ನೇತೃತ್ವದಲ್ಲಿ ದಾಳಿ ನಡೆಸಲಾಗಿತ್ತು.

'ಹಿರಿಯೂರಿನ ರಾಜಪ್ಪ, ಟಿ. ಮಂಜುನಾಥ್, ಕೆ.ಎಂ. ಕೊಟ್ಟಿಗೆ ಬಾಬು, ಎಚ್.ಧನರಾಜ್, ಮಾರುತಿ, ಮುದಿಯಣ್ಣ, ಕಬಡ್ಡಿ ರವಿ, ಸಾಲುಮರದ ಹಟ್ಟಿಯ ಚಿತ್ರಲಿಂಗೇಶ್, ಚಿತ್ರದುರ್ಗ ತಾಲ್ಲೂಕಿನ ಜಾನುಕೊಂಡದ ಕೆ.ಮಂಜುನಾಥ್ ಯಾದವ್, ಶಿರಾ ತಾಲ್ಲೂಕಿನ ತಾವರೆಕೆರೆ ಗ್ರಾಮದ ಟಿ.ಕೆ.ಚಿಕ್ಕಣ್ಣ, ಚೆನ್ನಯ್ಯನಹಟ್ಟಿಯ ಓಂಕಾರೇಶ್ವರ, ಜವನಗೊಂಡನಹಳ್ಳಿಯ ಮಣಿಕಂಠ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಉತ್ತರ ಕರ್ನಾಟಕ: ರೈತರ ಆತ್ಮಹತ್ಯೆ ಹೆಚ್ಚು

ರಾಜ್ಯದಲ್ಲಿ ಬರದ ತೀವ್ರತೆ ಹೆಚ್ಚಳ, ಬೆಳೆ ಹಾನಿ; ಸಾಲಬಾಧೆಗೆ 8 ತಿಂಗಳಿನಲ್ಲಿ 456 ಅನ್ನದಾತರ ಬಲಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯದಲ್ಲಿ ಬರದ ತೀವ್ರತೆ ಹೆಚ್ಚಾಗಿದ್ದು, ಬೆಳೆ ಹಾನಿ, ಸಾಲಬಾಧೆ ಇತ್ಯಾದಿ ಕಾರಣಗಳಿಗಾಗಿ 456 ರೈತರು ಈ ವರ್ಷ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಾಜ್ಯದಲ್ಲಿ ಆಗಿರುವ ರೈತರ ಆತ್ಮಹತ್ಯೆ ಪ್ರಕರಣಗಳ ಪೈಕಿ ಉತ್ತರ ಕರ್ನಾಟಕದಲ್ಲಿ 259 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಿತ್ತೂರು ಕರ್ನಾಟಕದಲ್ಲಿ 179 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಒಟ್ಟು ಪ್ರಕರಣಗಳಲ್ಲಿ 406 ಪ್ರಕರಣಗಳ ದಾಖಲೆ ಪರಿಶೀಲಿಸಲಾಗಿದೆ. ಅವುಗಳಲ್ಲಿ 50 ಪ್ರಕರಣಗಳಲ್ಲಿ ಸೂಕ್ತ ದಾಖಲೆಗಳಿಲ್ಲದ ಕಾರಣ ಕೃಷಿ ಇಲಾಖೆ ಅಧಿಕಾರಿಗಳು ತಿರಸ್ಕರಿಸಿದ್ದಾರೆ. 'ದಾಖಲೆಗಳ ಪರಿಶೀಲನೆ ನಂತರ ಅರ್ಹವಾಗಿರುವ 354 ಪ್ರಕರಣಗಳಲ್ಲಿ, 321 ರೈತರ ಕುಟುಂಬದ ಸದಸ್ಯರಿಗೆ ₹5 ಲಕ್ಷ ಪರಿಹಾರ ವಿತರಣೆ ಮಾಡಲಾಗಿದೆ. 33 ರೈತರ ಕುಟುಂಬದವರಿಗೆ ಪರಿಹಾರ ವಿತರಿಸಬೇಕಿದೆ' ಎಂದು ಕೃಷಿ ಇಲಾಖೆ ತಿಳಿಸಿದೆ.

ಬಾಕಿ ಉಳಿದಿರುವ 52 ಪ್ರಕರಣಗಳಲ್ಲಿ 25 ಪ್ರಕರಣಗಳಲ್ಲಿ ಮರಣೋತ್ತರ ವರದಿ ಬರಬೇಕಿದೆ. ಉಳಿದ 27 ಪ್ರಕರಣಗಳಲ್ಲಿ ಕುಟುಂಬದ ಸದಸ್ಯರು ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಿದೆ.

ಬರದ ಬಾಧೆ: ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಲಾಗಿದೆ. ಅದರಲ್ಲಿ 196 ತಾಲ್ಲೂಕುಗಳು ತೀವ್ರ ಬರ ಪೀಡಿತವಾಗಿವೆ. ಬೆಳೆ ಹಾನಿಯಿಂದಾಗಿ ರಾಜ್ಯದಲ್ಲಿ ₹35,162 ಕೋಟಿಯಷ್ಟು ನಷ್ಟವಾಗಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ₹18,171 ಕೋಟಿ ಪರಿಹಾರವನ್ನು ಕೇಂದ್ರದಿಂದ ಕೋರಲಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಮಲಪ್ರಭಾ, ಘಟಪ್ರಭಾ, ಕೃಷ್ಣಾ ನದಿಗಳು ಹರಿಯುತ್ತವೆ. ಆದರೆ, ಮೂರು ನದಿಗಳಲ್ಲಿ ನೀರಿನ ಹರಿವು ನಿಂತಿದ್ದು, ಜಾನುವಾರುಗಳಿಗೆ, ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಗಳಿಗೂ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಎದುರಾಗಲಿದೆ.

'ಬಾಗಲಕೋಟೆ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ₹1,997 ಕೋಟಿಯಷ್ಟು ಮೌಲ್ಯದ ಬೆಳೆ ನಷ್ಟವಾಗಿದೆ. ಪರಿಹಾರಕ್ಕಾಗಿ ಜಿಲ್ಲೆಗೆ ಭೇಟಿ ನೀಡಿದ್ದ ಕೇಂದ್ರ ತಂಡಕ್ಕೆ ಮನವಿ ಸಲ್ಲಿಸಲಾಗಿದೆ' ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಲಕ್ಷ್ಮಣ ಕಳ್ಳೆನ್ನವರ ತಿಳಿಸಿದರು.

ಬಾಗಲಕೋಟೆ ಜಿಲ್ಲೆಯಲ್ಲಿ ಹರಿಯುವ ಮಲಪ್ರಭಾ ನದಿ ಬತ್ತಿರುವುದು

ಜಿಲ್ಲಾವಾರು ರೈತರ ಆತ್ಮಹತ್ಯೆ* (ಏಪ್ರಿಲ್–ನವೆಂಬರ್)

ಹಾವೇರಿ	62
ಬೆಳಗಾವಿ	56
ಚಿಕ್ಕಮಗಳೂರು	49
ಶಿವಮೊಗ್ಗ	32
ಮೈಸೂರು	30
ಧಾರವಾಡ	29
ವಿಜಯಪುರ	25
ವಿಜಯನಗರ	18
ಹಾಸನ	17
ಯಾದಗಿರಿ	16
ಕಲಬುರಗಿ	16
ಮಂಡ್ಯ	14
ಬೀದರ್	12
ತುಮಕೂರು	12
ಬಾಗಲಕೋಟೆ	11

(*10ಕ್ಕಿಂತ ಹೆಚ್ಚು ರೈತರ ಆತ್ಮಹತ್ಯೆ ಪ್ರಕರಣ ವರದಿಯಾಗಿರುವ ಜಿಲ್ಲೆಗಳು)

ಅಮೃತ ವಿಶ್ವ ವಿದ್ಯಾಪೀಠಮ್

2024ರ 2ನೇ ಹಂತದ ಪಿಎಚ್.ಡಿ ಪ್ರವೇಶ ಮುಕ್ತಾಯ ಘೋಷಣೆ

ನವದೆಹಲಿ: ಎನ್‌ಐಆರ್‌ಎಫ್ 2023ರಲ್ಲಿ ಭಾರತದ ಅಗ್ರ 10 ವಿಶ್ವವಿದ್ಯಾಲಯಗಳಲ್ಲಿ ಒಂದು ಎಂದು ಹೆಸರಾಗಿರುವ ಮತ್ತು 'ದ ಇಂಪ್ಯಾಕ್ಟ್ 2023' ರ್‍ಯಾಂಕಿಂಗ್ ನಲ್ಲಿ ವಿಶ್ವದ ಅಗ್ರ 50 ವಿಶ್ವವಿದ್ಯಾಲಯಗಳಲ್ಲಿ ಒಂದಾಗಿರುವ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆ 'ಅಮೃತ ವಿಶ್ವ ವಿದ್ಯಾಪೀಠಮ್' 2023 ಡಿಸೆಂಬರ್ 17ರಂದು 2ನೇ ಹಂತದ ಪಿಎಚ್.ಡಿ ಅಡ್ಮಿಶನ್‌ಗಳನ್ನು ಮುಕ್ತಾಯಗೊಳಿಸುವುದಾಗಿ ಘೋಷಿಸಿದೆ.

ಅಮೃತ ವಿಶ್ವ ವಿದ್ಯಾಪೀಠಮ್‌ನಲ್ಲಿ ಪಿಎಚ್.ಡಿ ವಿದ್ಯಾರ್ಥಿಗಳು, ತಮ್ಮ ಸಲಹೆಗಾರರನ್ನಾಗಿ ಜಾಗತಿಕ ಮಟ್ಟದ ಪ್ರಸಿದ್ಧ ವಿಜ್ಞಾನಿಗಳ ಮಾರ್ಗದರ್ಶನ ಪಡೆಯಬಹುದು. ಸಂಶೋಧನೆಗೆ ಬೇಕಿರುವ ವಿಶ್ವದರ್ಜೆಯ ಮೂಲಸೌಕರ್ಯ ಮತ್ತು ಸಂಪನ್ಮೂಲಗಳು ಲಭ್ಯವಿವೆ. ಜಾಗತಿಕ ಸವಾಲುಗಳನ್ನು ಪರಿಹರಿಸುವುದು, ಶೈಕ್ಷಣಿಕ ಮತ್ತು ಉದ್ಯಮ ವಲಯದಲ್ಲಿನ ಅಂತಾರಾಷ್ಟ್ರೀಯ ಮಟ್ಟದ ಪರಿಣಿತರ ಜೊತೆಗೆ ಸಹಭಾಗಿತ್ವ ಸಾಧಿಸುವುದು ಮತ್ತು ಸ್ಟೈಪೆಂಡ್‌ಗಳು ಮತ್ತು ಸಂಶೋಧನಾ ಚಟುವಟಿಕೆಗಳ ಮೂಲಕ ಗಮನಾರ್ಹ ಬೆಂಬಲವು ದೊರೆಯಲಿದೆ.

ವಿದ್ಯಾರ್ಥಿಗಳು ಒಟ್ಟಾರೆಯಾಗಿ ₹20 ಲಕ್ಷ ನೆರವು ಪಡೆಯಬಹುದಾಗಿದೆ. ಎಂಜಿನಿಯರಿಂಗ್, ಕೃತಕ ಬುದ್ಧಿಮತ್ತೆ ಮತ್ತು ಕಂಪ್ಯೂಟಿಂಗ್, ಕಲೆ, ಮಾನವಶಾಸ್ತ್ರ ಮತ್ತು ವಾಣಿಜ್ಯ, ಭೌತವಿಜ್ಞಾನ, ಸಾಮಾಜಿಕ ಮತ್ತು ವರ್ತನಾ ವಿಜ್ಞಾನ, ಆಡಳಿತ ಮತ್ತು ಜೀವವಿಜ್ಞಾನ ಹಾಗೂ ವೈದ್ಯಕೀಯ ವಿಜ್ಞಾನ ಸೇರಿದಂತೆ ವಿವಿಧ ಸಂಶೋಧನಾ ವಿಷಯಗಳನ್ನು ಸಂಸ್ಥೆ ಒದಗಿಸುತ್ತದೆ.

ಬಫೆಲೋ ವಿಶ್ವವಿದ್ಯಾಲಯ, ನ್ಯೂಯಾರ್ಕ್, ನ್ಯೂ ಮೆಕ್ಸಿಕೋ ವಿಶ್ವವಿದ್ಯಾಲಯ, ವ್ರಿಜೆ ವಿಶ್ವವಿದ್ಯಾಲಯ, ಆಮ್‌ಸ್ಟರ್‌ಡ್ಯಾಮ್, ಲಾಖಿಲಾ (ಇಟಲಿ) ಮತ್ತು ಬಾರ್ಸಿಲೋನಾಟೆಕ್ (ಯುಪಿಸಿ) ವಿಶ್ವವಿದ್ಯಾಲಯ, ಪೊಲಿಟೆಕ್ನಿಕ್ ಡಿಮಿಲಾನೋ, ಇಟಲಿ ಹಾಗೂ ಇತರ ಪ್ರತಿಷ್ಠಿತ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಜೊತೆಗೆ ಉತ್ತಮ ಸಹಭಾಗಿತ್ವವನ್ನು ವಿಶ್ವವಿದ್ಯಾಲಯವು ಹೊಂದಿದೆ.

ಶೈಕ್ಷಣಿಕ ಪ್ರಗತಿ ಮತ್ತು ಸಹಭಾಗಿತ್ವಕ್ಕೆ ಈ ಪಾಲುದಾರಿಕೆಯು ಅವಕಾಶ ನೀಡುತ್ತದೆ. ಎರಡು ಪಿಎಚ್.ಡಿ ಕಾರ್ಯಕ್ರಮಗಳು, ಜಂಟಿ ಪದವಿಗಳು ಮತ್ತು ಕ್ರೋಢೀಕೃತ ಪಿಎಚ್‌ಡಿ ಕಾರ್ಯಕ್ರಮಗಳನ್ನು ಒದಗಿಸುತ್ತದೆ.

ಆಸಕ್ತ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಅಮರಾವತಿ, ಅಮೃತಪುರಿ, ಬೆಂಗಳೂರು, ಕೊಯಮತ್ತೂರು, ಚೆನ್ನೈ, ಕೊಚ್ಚಿ, ಮೈಸೂರು ಮತ್ತು ಫರೀದಾಬಾದ್‌ನಲ್ಲಿರುವ ಯಾವುದೇ ಕ್ಯಾಂಪಸ್‌ಗಳಿಗೆ ಸೇರಿಕೊಳ್ಳಬಹುದು. ಸ್ನಾತಕೋತ್ತರ ಪದವಿಗಳಲ್ಲಿ ಕನಿಷ್ಠ ಶೇಕಡ 60 ಅಂಕವನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಆಯ್ಕೆ ಪ್ರಕ್ರಿಯೆಯಲ್ಲಿ ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಮೌಲ್ಯಮಾಪನ ಸೇರಿದೆ.

ಅಮೃತ ವಿಶ್ವವಿದ್ಯಾಪೀಠಮ್ ವಿಶ್ವವಿದ್ಯಾಲಯದ 2ನೇ ಹಂತದ ಪಿಎಚ್.ಡಿ ಪ್ರವೇಶ ಪ್ರಕ್ರಿಯೆಯನ್ನು 2023ನೇ ಡಿಸೆಂಬರ್ 17ರಂದು ಮುಕ್ತಾಯವಾಗಲಿವೆ. ವಿಶ್ವವಿದ್ಯಾಲಯದ ವೆಬ್‌ಸೈಟ್ https://amrita.edu/PhD@2023 ಮೂಲಕ ಆಸಕ್ತರು ಅರ್ಜಿ ಸಲ್ಲಿಸಬಹುದು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅಮೃತ ವಿಶ್ವ ವಿದ್ಯಾಪೀಠಮ್

ಅಮೃತ ವಿಶ್ವ ವಿದ್ಯಾಪೀಠಮ್ ಬಹುಹಂತದ ಕ್ಯಾಂಪಸ್, ಬಹುಶಿಕ್ಷಣ ವ್ಯವಸ್ಥೆ ಹೊಂದಿದೆ. ಎನ್‌ಐಆರ್‌ಎಫ್ 2023ರಲ್ಲಿ ಭಾರತದ ಅಗ್ರ 10 ವಿಶ್ವವಿದ್ಯಾಲಯಗಳಲ್ಲಿ ಒಂದು ಎಂದು ಹೆಸರಾಗಿದೆ. 'ದ ಇಂಪ್ಯಾಕ್ಟ್ 2023' ರ್‍ಯಾಂಕಿಂಗ್‌ನಲ್ಲಿ ವಿಶ್ವದ ಅಗ್ರ 50 ವಿಶ್ವವಿದ್ಯಾಲಯಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ವಿಶ್ವವಿದ್ಯಾಲಯದ ಪ್ರಧಾನ ಕಚೇರಿ ಕೊಯಮತ್ತೂರಿನಲ್ಲಿದೆ. 5 ರಾಜ್ಯಗಳಲ್ಲಿ 9 ಶಾಖೆ ಹೊಂದಿದೆ. ತಳಮಟ್ಟದ ಅಧ್ಯಯನಕ್ಕಾಗಿ ವಿಶ್ವಮಟ್ಟದ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಹೊಂದಿದೆ. ಸಂಸ್ಥಾಪಕರಾದ ಅಮ್ಮನವರ, ಶಿಕ್ಷಣ ಮತ್ತು ಸಂಶೋಧನೆಯ ಬಗೆಗಿನ ದೂರದೃಷ್ಟಿತ್ವವು ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯಾಗಿದೆ.

ಸಂಸ್ಥೆಯ ವೆಬ್‌ಸೈಟ್ ವಿಳಾಸ: **http://amrita.edu**

ರಾಜ್ಯ ದಕ್ಷಿಣ ಒಳನಾಡು ಕರಾವಳಿಯಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಭಾಗಗಳಲ್ಲಿ ಮಂಗಳವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ಕೆಲವು ಭಾಗಗಳಲ್ಲಿ ಬೆಳಗಿನ ಜಾವ ಮಂಜು ಮುಸುಕಿದ ವಾತಾವರಣ ಕಂಡುಬರಲಿದೆ.

ನಗರದಲ್ಲಿ ಗರಿಷ್ಠ ಉಷ್ಣಾಂಶ 24 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಬಿ16/21723/2021–22 ದಿನಾಂಕ: 18.12.2023

ಅಧಿಸೂಚನೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 01.02.2022 ರ ಉದ್ಯೋಗ ಪ್ರಕಟಣೆಗನುಗುಣವಾಗಿ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇರೆಗೆ **ಕಿರಿಯ ಇಂಜಿನಿಯರ್**(ಸಿವಿಲ್) (ಕೆ.ಕೆ/ಎನ್.ಕೆ.ಕೆ) ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್–ಆಫ್ (Cut-Off) ಅಂಕಗಳೊಂದಿಗೆ ಅಂತರ್ಜಾಲ **https://kptcl.karnataka.gov.in** ನಲ್ಲಿ ಪ್ರಕಟಿಸಲಾಗಿದೆ.

ಸಹಿ/– ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ ಗದಗ

ಸಂ/ಸಶಿಅ/ಕೆಜಿಬಿವಿ/ಸಿ.ಪೂ/ಹೊಗು/ನೇ.ಕು/2023–24 ದಿನಾಂಕ: 13–12–2023

ಮರು ಟೆಂಡರ್ ಪ್ರಕಟಣೆ

ಗದಗ ಜಿಲ್ಲೆಯ ಸಶಿಕ ಕಾರ್ಯಕ್ರಮದಡಿ ಬರುವ ಜಿಲ್ಲೆಯ 2 ಕೆ.ಜಿ.ಬಿ.ವಿ ವಸತಿ ನಿಲಯಗಳ ಕದಂಪೂರ ತಾ:ಮುಂಡರಗಿ ಮತ್ತು ಮುಶಿಗೇರಿ ತಾ:ರೋಣ ಇಲ್ಲಿಗೆ ಸಿಬ್ಬಂದಿ ಸೇವೆ ಪಡೆಯಲು ಅರ್ಹ ಸಂಸ್ಥೆಗಳಿಂದ ದ್ವಿ ಲಕೋಟೆ ಮಾದರಿಯಲ್ಲಿ ಇ–**ಪ್ರೋಕ್ಯುರಮೆಂಟ ಮೂಲಕ DPI/2023-24/SE0072/call-2** ಮೊತ್ತ ರೂ. **7,17,000/–** ಇರುತ್ತದೆ. ಟೆಂಡರಗಳನ್ನು ದಿನಾಂಕ : **13–12–2023** ರಿಂದ ಸಲ್ಲಿಸಬಹುದಾಗಿದ್ದು, ಅಂತಿಮ ದಿನಾಂಕ : **21–12–2023** ಸಂಜೆ 5.00 ಗಂಟೆ ಇರುತ್ತದೆ. ಈ ಕುರಿತು ಅಂತರ್ಜಾಲ ತಾಣದ ವಿಳಾಸ **http//:www.kppp.karnataka.gov.in** ನ ಮೂಲಕ ಟೆಂಡರ್ ಬುಕ್‌ಲೆಟ್‌ನ್ನು ಪಡೆಯಬಹುದಾಗಿದೆ.

ಸಹಿ/– ಉಪನಿರ್ದೇಶಕರು(ಆ),
ಪ.ನಿ.ಜಿ.ಯೋ. ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/388/2023–24

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ: ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು–560 038.
ದೂರವಾಣಿ:080–25196100, 25196124 ಫ್ಯಾಕ್ಸ್:080–25196110
ವೆಬ್‌ಸೈಟ್: www.kuidfc.com ಇ–ಮೇಲ್: info@kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲೂಎಮ್/03/2023–24 ದಿ: 19.12.2023

ಇ–ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು, **ಸ್ವಚ್ಛ ಭಾರತ್ ಅಭಿಯಾನ (ನಗರ)–2.0 ಹಾಗೂ N.G.T ಪರಿಹಾರ ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ "ಬಳಸಿದ ನೀರು ನಿರ್ವಹಣೆ ಯೋಜನೆಗೆ Project Development and Management Consultancy services"** ಗಾಗಿ ಅರ್ಹ ಸಮಾಲೋಚಕ ಸಂಸ್ಥೆಗಳಿಂದ ಎರಡು ಪ್ಯಾಕೇಜ್‌ಗಳಲ್ಲಿ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in)** ದಿನಾಂಕ:**21.12.2023** ರಿಂದ **06.01.2024**ರ ಸಂಜೆ **5.30** ರವರೆಗೆ ಲಭ್ಯವಿರುತ್ತದೆ. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಯುಐಡಿಎಫ್‌ಸಿ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಅಭಿಯಂತರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ.
ದೂ. : 080–2727 1259. ಇ–ಮೇಲ್ : eempdrmgm@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 08/2023–24 ದಿನಾಂಕ : 20–11–2023

ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ
ಸಂಖ್ಯೆ : 01/2023–24, ದಿನಾಂಕ : 16–12–2023

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಬಂಡವಾಳ ಹೂಡಿಕೆದಾರರು / ಡೆವಲಪರ್‌ರವರುಗಳಿಂದ : **https://kppp.karnataka.gov.in** ಮುಖಾಂತರ **"ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದ ಕೆಳ ಭಾಗದ ಉದ್ಯಾನವನದ ಸೌಂದರೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ಪ್ರವಾಸೋದ್ಯಮ ಸೌಲಭ್ಯಗಳನ್ನು ಡಿ.ಬಿ.ಎಫ್.ಒ.ಟಿ. ಮಾದರಿಯಲ್ಲಿ ಲಭ್ಯವಿರುವ 72 ಎಕರೆ ಜಾಗವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗೆ" Request for Expression of Interest** ಅನ್ನು ಆಹ್ವಾನಿಸಲಾಗಿರುತ್ತದೆ.

ಸದರಿ ಪ್ರಕಟಣೆಯನ್ನು ಕಾರಣಾಂತರದಿಂದ ವಿಸ್ತರಣೆ ಮಾಡಿ ಪ್ರಕಟಿಸಿದೆ. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : **08–01–2024 ರ ಸಂಜೆ 5.00 ಗಂಟೆಗೆ**, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **10–01–2024 ರ ಬೆಳಿಗ್ಗೆ 11.00 ಗಂಟೆಗೆ** ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ : **18–01–2024 ರ ಬೆಳಿಗ್ಗೆ 11.00 ಗಂಟೆಗೆ** ಉಳಿದಂತೆ ಮೂಲ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ.ಪಿ. ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/353/ಮಣಿಪಾಲ್/2023–24

ಆಯುಷ್ ಇಲಾಖೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ,
ಧನ್ವಂತರಿ ರಸ್ತೆ, ಬೆಂಗಳೂರು–560009.
ದೂರವಾಣಿ: 080–22872848/22341261, Email: principalgamc9@gmail.com

ಸಂಖ್ಯೆ: ಆವೈಮ/38/SCP&TSP/ಸರಬ/2023–24 ದಿನಾಂಕ: 18.12.2023

ಪತ್ರಿಕೆ ಪ್ರಕಟಣೆ

2023–24ನೇ ಸಾಲಿನಲ್ಲಿ ಆಯುಷ್ ಇಲಾಖೆ, ಬೆಂಗಳೂರು ವತಿಯಿಂದ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿ ಎಸ್‌ಸಿಪಿ / ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದ ಫಲಾನುಭವಿಗಳಿಗೆ 02 ತಿಂಗಳ ಅವಧಿಗೆ ಪಂಚಕರ್ಮ ಮಸಾಜಿಸ್ಟ್ ತರಬೇತಿ (ಸರ್ಟಿಫಿಕೇಟ್ ಕೋರ್ಸ್) ಆಯೋಜಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಕನಿಷ್ಠ 18 ಹಾಗೂ ಗರಿಷ್ಠ 40 ವರ್ಷ ವಯೋಮಿತಿಯ ಪರಿಶಿಷ್ಠ ಜಾತಿ–20 ಸಂಖ್ಯೆ ಮತ್ತು ಪರಿಶಿಷ್ಟ ಪಂಗಡ– 20 ಸಂಖ್ಯೆಯ ಫಲಾನುಭವಿಗಳಿಗೆ ಈ ತರಬೇತಿಯಲ್ಲಿ ಭಾಗವಹಿಸಲು ಅವಕಾಶವಿದೆ. ಫಲಾನುಭವಿಗಳಿಗೆ ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ. 5000/– ಗಳಂತೆ ಶಿಷ್ಯವೇತನ ನೀಡಲಾಗುವುದು. ಆಸಕ್ತರು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ ಬೆಂಗಳೂರು–560009 ಇಲ್ಲಿನ ಕಛೇರಿ ಸಮಯದಲ್ಲಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಯೊಂದಿಗೆ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋ, ಆಧಾರ್ ಕಾರ್ಡ್ ಪ್ರತಿ, ಜಾತಿ ಮತ್ತು ಆದಾಯ ದೃಢೀಕರಣ ಪತ್ರ ಹಾಗೂ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯನ್ನು ಲಗತ್ತಿಸಿ ದಿನಾಂಕ: 27–12–2023 ರ ಅಪರಾಹ್ನ 4:00 ಗಂಟೆಯೊಳಗಾಗಿ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವುದು. ನಿಗಧಿತ ಅವಧಿಯ ನಂತರ ಸ್ವೀಕೃತಗೊಳ್ಳುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

1. **ಡಾ. ಅನಂತ. ಎಸ್. ದೇಸಾಯಿ, ಪ್ರಾಧ್ಯಾಪಕರು : 9448185896**
2. **ಡಾ. ಸಂತೋಷ್. ಎಲ್. ಯಡಹಳ್ಳಿ, ಪ್ರಾಧ್ಯಾಪಕರು : 9902322355**
3. **ಡಾ. ಶೈಲಾ ಬೋರಣ್ಣವರ್, ಪ್ರಾಧ್ಯಾಪಕರು : 9449517770**

ಸಹಿ/–
ಪ್ರಾಚಾರ್ಯರು,
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ,
ಬೆಂಗಳೂರು–560 009.

ವಾ.ಸಾ.ಸಂ.ಇ/ವಾಪ್ರ/2624/ಅಕಾರ್/2023–24

ವಿಡಿಯೊ ಸಂವಾದದಲ್ಲಿ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ

ಜಮೀನು ವಿಸ್ತೀರ್ಣ ದಾಖಲು: ವಾರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ ಪರಿಹಾರ ವಿತರಣೆಗಾಗಿ 'ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿಗಳ ಮಾಹಿತಿ ವ್ಯವಸ್ಥೆ'ಯಲ್ಲಿ (ಫ್ರೂಟ್ಸ್) ಕೃಷಿ ಜಮೀನಿನ ವಿಸ್ತೀರ್ಣ ದಾಖಲಿಸಲು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ವಾರದ ಗಡುವು ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಜತೆ ಸೋಮವಾರ ವಿಡಿಯೊ ಸಂವಾದ ನಡೆಸಿದ ಅವರು, 'ರೈತರ ಜಮೀನಿನ ವಿಸ್ತೀರ್ಣಕ್ಕೆ ಸಂಬಂಧಿಸಿದ ದತ್ತಾಂಶವನ್ನು ಫ್ರೂಟ್ಸ್‌ನಲ್ಲಿ ದಾಖಲಿಸುವಂತೆ ಎರಡು ತಿಂಗಳ ಹಿಂದೆಯೇ ಸೂಚಿಸಲಾಗಿತ್ತು. ಈವರೆಗೆ ಒಟ್ಟು ವಿಸ್ತೀರ್ಣದ ಶೇಕಡ 70ರಷ್ಟನ್ನೂ ದಾಖಲಿಸಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೃಷ್ಣ ಬೈರೇಗೌಡ

ಬರಗಾಲದಿಂದ ಬೆಳೆ ನಷ್ಟಕ್ಕೀಡಾದ ರೈತರಿಗೆ ಪರಿಹಾರ ನೀಡಲು ರಾಜ್ಯ ಸರ್ಕಾರದ ಖಜಾನೆಯಲ್ಲಿ ಹಣವಿದೆ. ಆದರೆ, ಫ್ರೂಟ್ಸ್‌ನಲ್ಲಿ ಮಾಹಿತಿ ದಾಖಲಿಸದೇ ಇದ್ದರೆ ಅಂತಹ ರೈತರು ಪರಿಹಾರದಿಂದ ವಂಚಿತರಾಗುತ್ತಾರೆ. ಇದಕ್ಕೆ ಜಿಲ್ಲಾಧಿಕಾರಿಗಳೇ ಹೊಣೆ ಎಂದರು.

ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಜಮೀನು ವಿಸ್ತೀರ್ಣ ದಾಖಲಿಸುವಲ್ಲಿ ಹೆಚ್ಚು ಪ್ರಗತಿಯಾಗಿಲ್ಲ. ಜಿಲ್ಲಾಧಿಕಾರಿಗಳು ಮಾಡುವ ಸಣ್ಣ ತಪ್ಪು ಕೂಡ ರೈತರು ಪರಿಹಾರದಿಂದ ವಂಚಿತರಾಗಲು ಕಾರಣವಾಗಲಿದೆ. ಆಂದೋಲನದ ಮಾದರಿಯಲ್ಲಿ ಈ ಕೆಲಸ ಮಾಡಬೇಕು. ಹೋಬಳಿವಾರು ಅಧಿಕಾರಿಗಳ ಸಭೆ ನಡೆಸಿ, ಇದೇ ಶುಕ್ರವಾರದೊಳಗೆ ಎಲ್ಲ ರೈತರ ಜಮೀನುಗಳ ವಿಸ್ತೀರ್ಣವನ್ನು ದಾಖಲಿಸಬೇಕು ಎಂದು ತಾಕೀತು ಮಾಡಿದರು.

134 ತಾಲ್ಲೂಕುಗಳಲ್ಲಿ ಈವರೆಗೂ ಬರ ನಿರ್ವಹಣೆ ಕಾರ್ಯಪಡೆ ಸಭೆ ನಡೆದಿಲ್ಲ. ಜಿಲ್ಲಾಧಿಕಾರಿಗಳು ಈ ಬಗ್ಗೆ ತಕ್ಷಣ ಗಮನಹರಿಸಬೇಕು. ತ್ವರಿತವಾಗಿ ಸಭೆಗಳನ್ನು ನಡೆಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಹಕ್ಕುಪತ್ರ ವಿತರಣೆಗೆ ಸೂಚನೆ: ಹೊಸ ಕಂದಾಯ ಗ್ರಾಮಗಳ ಘೋಷಣೆಗೆ ನಿರೀಕ್ಷೆಗಿಂತಲೂ ಹೆಚ್ಚಿನ ಪ್ರಸ್ತಾವಗಳು ಬರುತ್ತಿವೆ. ಕಲಬುರಗಿ ಜಿಲ್ಲೆಯಲ್ಲಿ 174, ತುಮಕೂರು ಜಿಲ್ಲೆಯಲ್ಲಿ 40, ವಿಜಯನಗರ ಜಿಲ್ಲೆಯಲ್ಲಿ 29 ಪ್ರಸ್ತಾವಗಳು ಬಂದಿವೆ. ಬಾಕಿ ಇರುವ ಎಲ್ಲ ಪ್ರಸ್ತಾವಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಅಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಕಂದಾಯ ಗ್ರಾಮಗಳ ಪಟ್ಟಿಯಿಂದ ಕೆಲವು ಜನವಸತಿಗಳನ್ನು ಕೈಬಿಡುವಂತೆಯೂ ಪ್ರಸ್ತಾವಗಳು ಬಂದಿವೆ. ಕೆರೆ ಅಥವಾ ಅರಣ್ಯ ಜಮೀನುಗಳಲ್ಲಿ ಅಂತಹ ಜನವಸತಿಗಳಿದ್ದರೆ ಕಂದಾಯ ಗ್ರಾಮಗಳ ಪಟ್ಟಿಯಿಂದ ಕೈಬಿಡಬೇಕಾಗುತ್ತದೆ. ಆದರೆ, ಕೆಲವು ಜಿಲ್ಲೆಗಳಲ್ಲಿ ಅಸಂಬದ್ಧ ತಕರಾರುಗಳನ್ನು ಮುಂದಿಟ್ಟುಕೊಂಡು ಪ್ರಸ್ತಾವ ಸಲ್ಲಿಸಲಾಗಿದೆ. ಆ ರೀತಿ ಮಾಡಕೂಡದು ಎಂದು ಎಚ್ಚರಿಸಿದರು.

ಬಗರ್ ಹುಕುಂ ಆ್ಯಪ್‌ಗೆ ಚಾಲನೆ

ಸರ್ಕಾರಿ ಜಮೀನುಗಳಲ್ಲಿರುವ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು (ಬಗರ್ ಹುಕುಂ) ಖಚಿತ ಮಾಹಿತಿ ಸಂಗ್ರಹಿಸುವುದಕ್ಕಾಗಿ ರೂಪಿಸಿರುವ 'ಬಗರ್ ಹುಕುಂ ಆ್ಯಪ್'ಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೋಮವಾರ ಚಾಲನೆ ನೀಡಿದರು.

ನಮೂನೆ 50, 53 ಮತ್ತು 57ರ ಅಡಿಯಲ್ಲಿ ಜಮೀನು ಮಂಜೂರಾತಿ ಕೋರಿ ಲಕ್ಷಾಂತರ ಅರ್ಜಿಗಳು ಸಲ್ಲಿಕೆಯಾಗಿವೆ. ಈ ಅರ್ಜಿಗಳಿಗೆ ಸಂಬಂಧಿಸಿದಂತೆ ಉಪಗ್ರಹ ಚಿತ್ರ ಆಧಾರಿತ ಸ್ಥಳ ಪರಿಶೀಲನಾ ವರದಿ ಸಿದ್ಧಪಡಿಸಲು ಆ್ಯಪ್ ಬಳಸಲಾಗುತ್ತದೆ.

ಗ್ರಾಮ ಲೆಕ್ಕಿಗರು ನಿರ್ದಿಷ್ಟ ಅರ್ಜಿದಾರರು ಉಲ್ಲೇಖಿಸಿರುವ ಜಮೀನಿಗೆ ತೆರಳಿ ಆ್ಯಪ್ ಬಳಸಿ 'ಜಿಯೋ ಫೆನ್ಸಿಂಗ್' ಮೂಲಕ ಅಲ್ಲಿನ ಮಾಹಿತಿಯನ್ನು ಕಂದಾಯ ನಿರೀಕ್ಷಕರು ಮತ್ತು ಭೂಮಾಪನ ಇಲಾಖೆಯ ಲಾಗಿನ್‌ಗೆ ಕಳುಹಿಸುತ್ತಾರೆ. ಅದೇ ಮಾಹಿತಿಗಳನ್ನು ಬಳಸಿಕೊಂಡು ತಹಶೀಲ್ದಾರ್‌ಗಳು ಉಪಗ್ರಹ ಚಿತ್ರಗಳನ್ನು ಪಡೆದು ಸದರಿ ಜಮೀನಿನಲ್ಲಿ ಸಾಗುವಳಿಯ ಬಗ್ಗೆ ಪರಿಶೀಲಿಸುತ್ತಾರೆ.

ನಿಗದಿತ ಅವಧಿಯಿಂದ ಸಾಗುವಳಿ ಮಾಡುತ್ತಿರುವುದು ಕಂಡುಬಂದಲ್ಲಿ ಬಗರ್ ಹುಕುಂ ಸಮಿತಿ ಮುಂದೆ ಮಂಡಿಸಿ ಒಟಿಪಿ ಆಧಾರಿತ ಕೈವೈಸಿ ಮೂಲಕ ಮಂಜೂರಾತಿ ನೀಡಲಾಗುತ್ತದೆ. ನಂತರ ಫಲಾನುಭವಿಗಳಿಗೆ ಹೊಸ ಸರ್ವೆ ನಂಬರ್ ಹಾಗೂ ಡಿಜಿಟಲ್ ಸಾಗುವಳಿ ಚೀಟಿ ವಿತರಿಸಲಾಗುತ್ತದೆ.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001.

ಸಂಖ್ಯೆ: DPI-CPIOSATS(OTH-)/11/2023-SATS ದಿನಾಂಕ: 18.12.2023

ಟೆಂಡರ್ ಪ್ರಕಟಣೆ

ಶಾಲಾ ಶಿಕ್ಷಣ ಇಲಾಖೆ ಆಯುಕರು, ಬೆಂಗಳೂರು ರವರು **"Hiring of Service Provider for System study and preparation of Functional Requirements Specification (FRS), Effort and Timeline Estimation, for Design, development and implementation of Student Achievement Tracking System (SATS) 2.0 for Department of School Education"** ಗಾಗಿ ಅಲ್ಪಾವಧಿಯ ಇ–ಟೆಂಡರ್ ಅನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಿದೆ.

ಟೆಂಡರ್ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು

DIPR/CP/YC/2611/2023-24

ಹಾಸನ ಮಂಗಳೂರು ರೈಲು ಅಭಿವೃದ್ಧಿ ಕಂಪನಿ ನಿಯಮಿತ

(ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ ಜಂಟಿ ಉದ್ಯಮ)

ನೋಂದಾಯಿತ ಕಚೇರಿ: ಎಂಎಸ್‌ಐಎಲ್ ಹೌಸ್, 7ನೇ ಮಹಡಿ, #36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–52. ದೂ: 080–22370581, 080–23120582, +91 9945152469
ಇ–ಮೇಲ್: ceohmrdc@gmail.com CIN: U45203KA2003SGC032183

ಸಂಖ್ಯೆ: ಹೆಚ್‌ಎಂಆರ್‌ಡಿಸಿ/ಅಕೌಂಟ್ಸ್/14/ಇನ್‌ಶೂರೆನ್ಸ್ ಪಾಲಿಸಿ/2023 ದಿನಾಂಕ: 19.12.2023

ಇ–ಟೆಂಡರ್ ಸೂಚನೆ

ಕಾಮಗಾರಿಯ ಹೆಸರು: ಎಚ್‌ಎಂಆರ್‌ಡಿಸಿ 2023–24 ವರ್ಷಕ್ಕೆ ಈ ಕೆಳಗಿನ ವಿಮಾ ಪಾಲಿಸಿಗಳನ್ನು ನೀಡಲು ಹೆಸರಾಂತ ಮತ್ತು ಅನುಭವಿ ವಿಮಾ ಕಂಪನಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.

(1) ಸ್ಟ್ಯಾಂಡರ್ಡ್ ಫೈರ್ ಮತ್ತು ಸ್ಪೆಷಲ್ ಪೆರಿಲ್ಸ್ ಪಾಲಿಸಿ. (2) ಬೆಂಕಿ ಮತ್ತು ಲಾಭದ ನಷ್ಟ (FLOP). (3) ಮೆಷಿನರಿ ಬ್ರೇಕ್–ಡೌನ್ ಪಾಲಿಸಿ (4) ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿ.

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ **20.01.2024** ರಂದು ಮಧ್ಯಾಹ್ನ **2.30** ಗಂಟೆಗೆ.
ವಿವರಗಳಿಗಾಗಿ **https://kppp.karnataka.gov.in** ಮತ್ತು **www.hmrdc.com** ಗೆ ಭೇಟಿ ನೀಡಿ.

ವಾಸಾಸಂಇ/ಉನಿ–ಸಿ.ಪಿ/2604/ಕೆಎಸ್‌ಎಂಸಿಎ/2023–24 ಸಹಿ/– ಸಿಎಫ್‌ಓ/ಎಚ್‌ಎಂಆರ್‌ಡಿಸಿ

ಸಾರಿಗೆ ಇಲಾಖೆ

ಪ್ರಾದೇಶಿಕ ಸಾರಿಗೆ ಕಛೇರಿ,
ಬೆಂಗಳೂರು (ಪೂರ್ವ), ಕಸ್ತೂರಿನಗರ ಬೆಂಗಳೂರು – 560043.

ಸಂಖ್ಯೆ: ಪ್ರಾಸಾಅ/ಬೆಂ(ಪೂ)/ಸ್ವಚ್ಛತಾ/ಪಿಆರ್–1/2023–24 ದಿನಾಂಕ: 18–12–2022

ಇ–ಟೆಂಡರ್ ಪ್ರಕಟಣೆ

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು (ಪೂರ್ವ), ಕಸ್ತೂರಿನಗರ, ಕಛೇರಿಯ ನಂ. ಸಿಎ–15, ಎನ್‌ಜಿಇಎಫ್ (ಪೂರ್ವ) ಬಡಾವಣೆ, ಕಸ್ತೂರಿನಗರ, ವಿಜಿನಾಪುರ (ಅಂಚೆ), ಬೆಂಗಳೂರು – 560043 ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕಛೇರಿಗೆ **ಸ್ವಚ್ಛತಾ (House Keeping)** ನಿರ್ವಹಣೆಗೆ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್‌ಜಾಲ ಮೂಲಕ ವೆಬ್‌ಸೈಟ್ ವಿಳಾಸ: **www.kppp.karnataka.gov.in** ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: **080 – 46010000 / 080 – 68948777** ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03–01–2024 ರ ಸಂಜೆ 4.00 ಗಂಟೆ ಆಗಿರುತ್ತದೆ.**

ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: **080–29735190,** ಮೊಬೈಲ್ ಸಂಖ್ಯೆ: **9449864003** ಅನ್ನು ಸಂಪರ್ಕಿಸಬಹುದು.

"ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು ನಗರ ರವರ ಆದೇಶದ ಮೇರೆಗೆ"

ಸಹಿ/– ಪ್ರಾದೇಶಿಕ ಸಾರಿಗೆ ಅಧಿಕಾರಿಗಳು
ಬೆಂಗಳೂರು (ಪೂರ್ವ), ಕಸ್ತೂರಿನಗರ.

ವಾಸಾಸಂಇ/ವಾ.ಪ್ರ/2618/ಅಡ್ವಟೋರ್/2023–24

ಸಾರಿಗೆ ಇಲಾಖೆ

ಪ್ರಾದೇಶಿಕ ಸಾರಿಗೆ ಕಛೇರಿ,
ಬೆಂಗಳೂರು (ಪೂರ್ವ), ಕಸ್ತೂರಿನಗರ ಬೆಂಗಳೂರು – 560043.

ಸಂಖ್ಯೆ: ಪ್ರಾಸಾಅ/ಬೆಂ(ಪೂ)/ಭದ್ರತಾ ಸಿಬ್ಬಂದಿ/ಪಿಆರ್–2/2023–24 ದಿನಾಂಕ: 18–12–2022

ಇ–ಟೆಂಡರ್ ಪ್ರಕಟಣೆ

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು (ಪೂರ್ವ), ಕಸ್ತೂರಿನಗರ, ಕಛೇರಿಯ ನಂ. ಸಿಎ–15, ಎನ್‌ಜಿಇಎಫ್ (ಪೂರ್ವ) ಬಡಾವಣೆ, ಕಸ್ತೂರಿನಗರ, ವಿಜಿನಾಪುರ (ಅಂಚೆ), ಬೆಂಗಳೂರು – 560043 ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕಛೇರಿಗೆ **ಭದ್ರತಾ ಸಿಬ್ಬಂದಿ (Security Guard)** ನಿಯೋಜನೆ ನಿರ್ವಹಣೆಗೆ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್‌ಜಾಲ ಮೂಲಕ ವೆಬ್‌ಸೈಟ್ ವಿಳಾಸ: **www.kppp.karnataka.gov.in** ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: **080 – 46010000 / 080 – 68948777** ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03–01–2024 ರ ಸಂಜೆ 4.00 ಗಂಟೆ ಆಗಿರುತ್ತದೆ.**

ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: **080–29735190,** ಮೊಬೈಲ್ ಸಂಖ್ಯೆ: **9449864003** ಅನ್ನು ಸಂಪರ್ಕಿಸಬಹುದು.

"ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು ನಗರ ರವರ ಆದೇಶದ ಮೇರೆಗೆ"

ಸಹಿ/– ಪ್ರಾದೇಶಿಕ ಸಾರಿಗೆ ಅಧಿಕಾರಿಗಳು
ಬೆಂಗಳೂರು (ಪೂರ್ವ), ಕಸ್ತೂರಿನಗರ.

ವಾಸಾಸಂಇ/ವಾ.ಪ್ರ/2619/ಅಡ್ವಟೋರ್/2023–24

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರವರ ಕಛೇರಿ. ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್

ಸಂ:ಕಾನಿಅ/ಕನೀನಿನಿ/ಕಾವಿ.2/ತಾಶಾ/ಸಇಂ.1/2023–24/1242 ದಿನಾಂಕ:15–12–2023.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕಛೇರಿಯಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ **https://kppp.karnataka.gov.in** ಮುಖಾಂತರ ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕಾಲುವೆ ದುರಸ್ತಿ ಕಾಮಗಾರಿಯ ಟೆಂಡರನ್ನು ಒಂದು ಲಕೋಟೆಯಲ್ಲಿ ಆಹ್ವಾನಿಸಿದ್ದು, ಸದರಿ ಕಾಮಗಾರಿಗೆ ಟೆಂಡರಿಗಿಟ್ಟ ಮೊತ್ತ **(work no 1) ರೂ.49.98** ಲಕ್ಷಗಳು, **(work no 2) ರೂ.38.04** ಲಕ್ಷಗಳು ಇರುತ್ತದೆ, ಹಾಗೂ ಇಎಂ.ಡಿ ಮೊತ್ತ ಕ್ರಮವಾಗಿ **ರೂ.1,00,000.0** ಹಾಗೂ **ರೂ.77,000.00** ಗಳಿದ್ದು ಹೆಚ್ಚಿನ ವಿವರಗಳನ್ನು ಮೇಲೆ ತಿಳಿಸಿರುವ ವೆಬಸೈಟ್‌ನಿಂದ ಪಡೆಯಬಹುದು. ಕಾಮಗಾರಿಯ ಕಾಲಮಿತಿ–3 ತಿಂಗಳಿಗೆ ನಿಗಧಿಪಡಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:26–12–2023** ರ ಸಾಯಂಕಾಲ 4.20 ಘಂಟೆಯವರೆಗೆ, ಮತ್ತು ಟೆಂಡರನ್ನು ತೆರೆಯುವ **ದಿನಾಂಕ:27–12–2023** ರಂದು ಸಾಯಂಕಾಲ 04.30 ಘಂಟೆಗೆ ನಿಗದಿಪಡಿಸಲಾಗಿರುತ್ತದೆ. ಟೆಂಡರನ್ನು ಯಾವುದೆ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದುಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೆಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು. ದೂರವಾಣಿ ಸಂ:08533–271361.

ಸಹಿ/– ಕಾರ್ಯಪಾಲಕ ಅಭಿಯಂತರರು ಕನೀನಿನಿ
ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್.

ಡಿಐಪಿಆರ್/ಕೊಪ್ಪಳ/287/ಕೆಎಸ್‌ಎಂಸಿಎ/2023–24

'ಸಮುದಾಯದ ಸಮಾವೇಶದಲ್ಲಿ ಭಾಗವಹಿಸುವೆ'

ಬೆಂಗಳೂರು: 'ಈಡಿಗ ಸಮುದಾಯದ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುವ ಎಲ್ಲ ಸಮಾವೇಶಗಳಲ್ಲಿ ನಾವು ಭಾಗವಹಿಸುತ್ತೇವೆ' ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಅಧ್ಯಕ್ಷ ಎಂ. ತಿಮ್ಮೇಗೌಡ ಹೇಳಿದರು.

ಎಂ.ತಿಮ್ಮೇಗೌಡ

ಸೋಮವಾರ ಸುದ್ದಿಗೋಷ್ಠಿಯಲ್ಲಿ 'ವಿಧಾನ ಪರಿಷತ್ತಿನ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು 2024ರ ಜನವರಿಯಲ್ಲಿ ಹಮ್ಮಿಕೊಳ್ಳುವ ಸಮಾವೇಶದಲ್ಲಿ ಭಾಗವಹಿಸುತ್ತೀರಾ' ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, 'ಹರಿಪ್ರಸಾದ್ ಅವರು ನಮ್ಮ ಸಮುದಾಯ ಮುಖಂಡರು. ಸಮುದಾಯ ಸರ್ವತೋಮುಖ ಅಭಿವೃದ್ಧಿಗೆ ಆಯೋಜಿಸುವ ಸಮಾವೇಶ ಹಾಗೂ ಕಾರ್ಯಕ್ರಮಗಳಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಭಾಗವಹಿಸುತ್ತೇವೆ' ಎಂದರು.

'ಈಡಿಗ ಸಮುದಾಯದಲ್ಲಿ ಬಿಲ್ಲವ, ನಾಮಧಾರಿ ಸೇರಿ 26 ಪಂಗಡಗಳಿವೆ. ಸೋಲೂರಿನ ಆರ್ಯ ಈಡಿಗ ಮಹಾಸಂಸ್ಥಾನ ಮಠಕ್ಕೆ ವಿಖ್ಯಾತನಂದ ಸ್ವಾಮೀಜಿ ಅವರನ್ನು ಪೀಠಾಧಿಪತಿಗಳನ್ನಾಗಿ ಮಾಡಲಾಗಿದೆ. ಪ್ರಣವಾನಂದ ಸ್ವಾಮೀಜಿ ಅವರನ್ನು ನಮ್ಮ ಸಮುದಾಯ ಒಪ್ಪಿಲ್ಲ' ಎಂದರು.

'ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಸಮುದಾಯದ ಎಲ್ಲರಿಗೂ ಮುಕ್ತವಾಗಿದ್ದು, ಸದಸ್ಯರಾಗಬಹುದು. ಸಂಘಕ್ಕೆ ಸದಸ್ಯರಾಗುವಂತೆ ಈಗಾಗಲೇ ರಾಜ್ಯದಾದ್ಯಂತ ಪ್ರಚಾರ ಮಾಡಲಾಗುತ್ತಿದೆ. ದಿನದಿಂದ ದಿನಕ್ಕೆ ಸಂಘದ ಸದಸ್ಯರ ಸಂಖ್ಯೆ ಹೆಚ್ಚಳವಾಗುತ್ತಿದೆ' ಎಂದು ತಿಳಿಸಿದರು.

ಬಿಲ್ಲವ ಸಂಘದ ಅಧ್ಯಕ್ಷ ವೇದಕುಮಾರ್, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಜಂಟಿ ಕಾರ್ಯದರ್ಶಿ ಕೃಷ್ಣಬಾಬು, ಕೃಷ್ಣವೇಣಿ ಭಾಗವಹಿಸಿದ್ದರು.

ಕ್ರಿಸ್‌ಮಸ್‌ಗೆ ಸಿದ್ಧತೆ... ಬೆಂಗಳೂರಿನ ಸಂಜಯನಗರದಲ್ಲಿ ಸೋಮವಾರ ಜನರು ಕ್ರಿಸ್‌ಮಸ್ ಆಚರಣೆಗೆ ಬೇಕಾದ ವಸ್ತುಗಳ ಖರೀದಿ ನಡೆಸಿದರು

ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ

'ನಿರೀಕ್ಷೆ ಹುಸಿಗೊಳಿಸಿದ ಸರ್ಕಾರ'

ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ನೇತೃತ್ವದ ಸರ್ಕಾರವು ಹಳೆಯ ಯೋಜನೆಗಳನ್ನೇ ವಿಧಾನಮಂಡಲದ ಬೆಳಗಾವಿ ಅಧಿವೇಶನದಲ್ಲಿ ಮತ್ತೆ ಪ್ರಕಟಿಸುವ ಮೂಲಕ ಉತ್ತರ ಕರ್ನಾಟಕದ ಜನರ ನಿರೀಕ್ಷೆ ಹುಸಿಗೊಳಿಸಿದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಪತ್ರ ಬರೆದಿರುವ ಅವರು, 'ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬೆಳಗಾವಿಯಲ್ಲಿ ಮೊದಲ ಬಾರಿಗೆ ಅಧಿವೇಶನ ನಡೆದಿದೆ. ಉತ್ತರ ಕರ್ನಾಟಕ ಭಾಗದ ಜನರು ಬಹಳ ನಿರೀಕ್ಷೆ ಇರಿಸಿಕೊಂಡಿದ್ದರು. ಸರ್ಕಾರದ ನಡೆಯಿಂದ ಎಲ್ಲವೂ ಹುಸಿಯಾಗಿದೆ' ಎಂದಿದ್ದಾರೆ.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ 130 ಟಿಎಂಸಿ ಅಡಿ ನೀರಿನ ಬಳಕೆಗೆ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ ರೂಪಿಸಿದ್ದ ಯೋಜನೆಗೆ ಒಂದು ರೂಪಾಯಿ ಅನುದಾನವನ್ನೂ ಬಿಡುಗಡೆ ಮಾಡಿಲ್ಲ. ಇದು ಈಗಿನ ಸರ್ಕಾರವು ಉತ್ತರ ಕರ್ನಾಟಕದ ಜನರ ಕುರಿತು ಹೊಂದಿರುವ ಅಸಡ್ಡೆಗೆ ಸಾಕ್ಷಿ ಎಂದು ದೂರಿದ್ದಾರೆ.

ಮಹದಾಯಿ ಯೋಜನೆಯ ಭವಿಷ್ಯದ ಬಗ್ಗೆಯೂ ಸರ್ಕಾರ ಏನನ್ನೂ ಹೇಳಿಲ್ಲ. ಹುಬ್ಬಳ್ಳಿಯಲ್ಲಿ ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಉತ್ಪನ್ನಗಳ (ಎಫ್‌ಎಂಸಿಜಿ) ಕ್ಲಸ್ಟರ್ ನಿರ್ಮಾಣ, ಕಲಬುರಗಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಸೇರಿದಂತೆ ಉದ್ಯೋಗ ಸೃಜನೆಯ ವಿಚಾರದಲ್ಲಿ ಈ ಸರ್ಕಾರವು ಖಚಿತವಾದ ನಿಲುವು ಪ್ರಕಟಿಸಿಲ್ಲ ಎಂದಿದ್ದಾರೆ.

ಜಿಲ್ಲಾ ಖನಿಜ ನಿಧಿ ಬಳಕೆಯ ಬಗ್ಗೆಯೂ ಸರ್ಕಾರ ನಿರಾಸಕ್ತಿ ತೋರಿದೆ. ಹೊಸದಾಗಿ ಅಸ್ತಿತ್ವಕ್ಕೆ ತರಲಾಗಿದ್ದ ಏಳು ವಿಶ್ವವಿದ್ಯಾಲಯಗಳನ್ನು ಅನುದಾನದ ಕೊರತೆ ನೆಪದಲ್ಲಿ ಮುಚ್ಚಲು ಮುಂದಾಗಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದ್ದಾರೆ.

ಶಿಗ್ಗಾವಿಗೆ ಬೊಮ್ಮಾಯಿ: ಹೃದಯ ಶಸ್ತ್ರಚಿಕಿತ್ಸೆಯ ಬಳಿಕ ಇದೇ ಮೊದಲ ಬಾರಿಗೆ ಬೊಮ್ಮಾಯಿ ಸ್ವಕ್ಷೇತ್ರ ಶಿಗ್ಗಾವಿಗೆ ತೆರಳಿದ್ದಾರೆ. ಸೋಮವಾರ ವಿಮಾನದ ಮೂಲಕ ಹುಬ್ಬಳ್ಳಿಗೆ ಹೋಗಿದ್ದು, ಮಂಗಳವಾರ ಶಿಗ್ಗಾವಿಗೆ ಭೇಟಿ ನೀಡಲಿದ್ದಾರೆ. ಬೊಮ್ಮಾಯಿ ಅಕ್ಟೋಬರ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ - 584 115, ಲಿಂಗಸುಗೂರು–ತಾ., ರಾಯಚೂರು ಜಿಲ್ಲೆ, ಕರ್ನಾಟಕ ದೂ.: (08537) 275463/276339,
ಫ್ಯಾಕ್ಸ್: (08537) 275048, 275054, ಇ-ಮೇಲ್: material276339@gmail.com ವೆಬ್‌ಸೈಟ್: www.huttigold.karnataka.gov.in

ಟೆಂಡರ್ ಪ್ರಕಟಣೆ ನಂ. 24/23–24 ದಿನಾಂಕ: 19.12.2023 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು (ಸರಕು) ಇವರಿಂದ ಈ ಕೆಳಗಿನ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪರಿಗಣಿಸಲ್ಪಟ್ಟ ವಿತರಕರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಗ್ರಿ ವಿವರ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಕೈಗಾರಿಕಾ ಆಮ್ಲಜನಕದ ಪೂರೈಕೆ ಮತ್ತು ಡಿ. ಎ. ಅನಿಲ ಮತ್ತು ವೈದ್ಯಕೀಯ ಆಮ್ಲಜನಕ ಮತ್ತು ನೈಟ್ರಸ್ ಆಕ್ಸೈಟ್ ಅನಿಲ. **HGML/2023-24/IND0116/CALL-2.**	43.30	87,000/–
2	ಸಿಮೆಂಟ್ ಸಾಮಾನ್ಯ ಪೋರ್ಟ್ಲ್ಯಾಂಡ್ 43 ಗ್ರೇಡ್ ಪೂರೈಕೆ. **HGML/2023-24/IND0115/CALL-2.**	31.04	62,000/–
3	ಲೀಚಿಂಗ್ ಪ್ಲಾಂಟ್‌ನಲ್ಲಿ ಎಲೆಕ್ಟ್ರೋ ವಿಜೇತ ಘಟಕಕ್ಕಾಗಿ ಫ್ಯೂಮ್ ಸ್ಕ್ರಬ್ಬರ್‌ನ ವಿನ್ಯಾಸ, ತಯಾರಿಕೆ, ಸರಬರಾಜು ಮತ್ತು ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ. **HGML/2023-24/PM/WORK_INDENT47/CALL-2.**	25.00	50,000/–
4	ಫ್ಲೋಕ್ಯುಲಂಟ್ ಪೂರೈಕೆ. **HGML/2023-24/IND0140.**	22.92	46,000/–
5	ಸಾಗ್ ಮಿಲ್‌ಗೆ ರ್‍ಯಾಕ್ ಮತ್ತು ಪಿನಿಯನ್ ಗೇಟ್‌ಗಳ ಪೂರೈಕೆ. **HGML/2023-24/IND0137.**	16.29	41,000/–
6	ಎಲ್ಲಾ ಬಿಡಿಭಾಗಗಳೊಂದಿಗೆ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ನ (ಕನಿಷ್ಠ 6 ಅಡಿ x 12 ಅಡಿ) ಪೂರೈಕೆ, ಸ್ಥಾಪನೆ, ಕಾರ್ಯಾರಂಭ, ಕಾರ್ಯಕ್ಷಮತೆ ಪರೀಕ್ಷೆ ಮತ್ತು ತರಬೇತಿ. **HGML/2023- 24/EL/WORK_INDENT27/CALL-2.**	14.00	35,000/–
7	ಸಾಗ್ ಮಿಲ್‌ನಲ್ಲಿ ಸಹಾಯಕ ಡ್ರೈವ್‌ಗಾಗಿ SAHR ಬ್ರೇಕ್ ಸಿಸ್ಟಮ್‌ನ ವಿನ್ಯಾಸ, ತಯಾರಿಕೆ, ಪೂರೈಕೆ, ನಿರ್ಮಾಣ ಮತ್ತು ಕಾರ್ಯಾರಂಭ. **HGML/2023-24/OW/WORK_INDENT10/CALL-3**	13.00	32,500/–
8	ವಿದ್ಯುತ್ಕಾಂತೀಯ ಹರಿವಿನ ಮೀಟರ್‌ಗಳ ಪೂರೈಕೆ. **HGML/2023-24/IND0023/CALL-3.**	12.95	32,500/–
9	ಸಬ್‌ಮರ್ಸಿಬಲ್ ಆಂದೋಲಕ ಮರುಳು ಪಂಪ್‌ನ ಪೂರೈಕೆ. **HGML/2023-24/IND0039/CALL-3.**	11.71	29,000/–
10	ಒಂದು ಟನ್ ಸಿಂಗಲ್ ಗರ್ಡರ್ EOT ಕ್ರೇನ್‌ಚೈನ್ ಹೋಸ್ಟ್‌ನ ವಿನ್ಯಾಸ, ತಯಾರಿಕೆ, ಪೂರೈಕೆ, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ. **HGML/2023-24/PM/WORK_INDENT57/CALL-2.**	8.10	20,000/–
11	ವೆಂಟಿಲೇಟರ್ ಪೂರೈಕೆ. **HGML/2023-24 /IND0110/CALL-2.**	8.00	20,000/–
12	ಸಂಪೂರ್ಣ ಸ್ವಯಂಚಾಲಿತ CBC ಹೆಮಟಾಲಜಿಯ ಪೂರೈಕೆ 5 ಕೋಣೆಗಳೊಂದಿಗೆ ವಿಶ್ಲೇಷಕ. **HGML/2023-24/IND0111/CALL-2.**	7.50	19,000/–
13	ಮೋಟಾರೈಸ್ಡ್ ಟ್ರಾಲಿ 2 ಟನ್ ಸಾಮರ್ಥ್ಯದೊಂದಿಗೆ ಎಲೆಕ್ಟ್ರಿಕ್ ಚೈನ್ ಹೋಸ್ಟ್ ಪೂರೈಕೆ. **HGML/2023-24/IND0131.**	6.17	15,500/–
14	ಯುಜಿಎಂಜಿ ನಿರ್ವಹಣೆ ಬಳಕೆಗಾಗಿ ಹೈಡ್ರಾಲಿಕ್ ವೈರ್ ರೋಪ್ ಕ್ರಿಂಪಿಂಗ್ ಯಂತ್ರದ ಪೂರೈಕೆ. **HGML/2023-24/IND0054/CALL-3**	5.30	13,250/–

ವೇಳಾಪಟ್ಟಿ: 1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **02.01.2024 ಸಂಜೆ 4.00 ಗಂಟೆಗೆ. 2)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **04.01.2024 ಬೆಳಿಗ್ಗೆ 10.00 ಗಂಟೆಗೆ.**

ಆಸಕ್ತಿವುಳ್ಳವರು ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://www.kppp.karnataka.gov.in** ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಗೆ ನಮೂದಿಸಿದ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತರಾಗಿರಬೇಕು.

ಸಹಿ/– ಪ್ರಧಾನ ವ್ಯವಸ್ಥಾಪಕರು (ತಂತ್ರಜ್ಞಾನ)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕನಿಷ್ಠ ವೇತನ ಪರಿಷ್ಕರಣೆ: ಪ್ರಸ್ತಾವ ಸಲ್ಲಿಸಲು ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆ ಸಂಬಂಧ ವಿಸ್ತೃತವಾದ ಪ್ರಸ್ತಾವ ಸಲ್ಲಿಸುವಂತೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕನಿಷ್ಠ ವೇತನ ಪರಿಷ್ಕರಣೆ ಕುರಿತು ಸಚಿವರು, ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು. ವಿವಿಧ ಕ್ಷೇತ್ರಗಳಲ್ಲಿನ ಕಾರ್ಮಿಕರಿಗೆ ನಿಗದಿಪಡಿಸಿರುವ ಕನಿಷ್ಠ ವೇತನ ಮತ್ತು ಪರಿಷ್ಕರಣೆಯ ಪ್ರಕ್ರಿಯೆ ಕುರಿತು ಅಧಿಕಾರಿಗಳು ವಿವರ ನೀಡಿದರು. ಶೀಘ್ರವಾಗಿ ಪ್ರಸ್ತಾವ ಸಲ್ಲಿಸುವಂತೆ ಸಚಿವರು ಸೂಚಿಸಿದರು.

'ಜಾತಿ ಗಣತಿಗೆ ಶಾಸಕರ ವಿರೋಧ; ಕಾಂಗ್ರೆಸ್‌ಗೆ ನಷ್ಟವಿಲ್ಲ'

ದಾವಣಗೆರೆ: 'ಆಡಳಿತಾರೂಢ ಪಕ್ಷದಲ್ಲಿರುವ ವೀರಶೈವ–ಲಿಂಗಾಯತ ಸಮುದಾಯದ ಶಾಸಕರು, ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಗೆ (ಜಾತಿ ಗಣತಿ) ವಿರೋಧ ವ್ಯಕ್ತಪಡಿಸಿದ್ದಾರೆ. ಇದರಿಂದ ಕಾಂಗ್ರೆಸ್‌ಗೆ ಕೆಟ್ಟ ಹೆಸರು ಬರುವುದಿಲ್ಲ. ನಷ್ಟವೂ ಆಗುವುದಿಲ್ಲ. ನಾವೆಲ್ಲಾ ಪಕ್ಷದ ಬೆಂಬಲಕ್ಕೆ ಇರುತ್ತೇವೆ' ಎಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ, ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

'ಜಾತಿ ಗಣತಿಯನ್ನು ನಾವಷ್ಟೇ ವಿರೋಧಿಸುತ್ತಿಲ್ಲ. ಇತರ ಸಮುದಾಯದವರ ವಿರೋಧವೂ ಇದೆ. ದಾವಣಗೆರೆಯಲ್ಲಿ ಇದೇ 23, 24ರಂದು ಲಿಂಗಾಯತ ಮಹಾಧಿವೇಶನ ಹಮ್ಮಿಕೊಂಡಿದ್ದೇವೆ. ಇದು ನಮ್ಮ ಸಮುದಾಯಕ್ಕೆ ಸೀಮಿತವಾದ ಕಾರ್ಯಕ್ರಮ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಿಲ್ಲ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವುದು ಬೇಡ' ಎಂದು ಸೋಮವಾರ ಸುದ್ದಿಗಾರರಿಗೆ ಹೇಳಿದರು.

‘ರಾಜ್ಯ ಪಠ್ಯವಾಗಲಿದೆ ಕಲೆ, ಸಂಸ್ಕೃತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಭಾಗಗಳ ಪ್ರಮುಖ ಕಲೆ ಮತ್ತು ಸಂಸ್ಕೃತಿಯನ್ನು ರಾಜ್ಯ ಪಠ್ಯಕ್ರಮದ ಭಾಗವಾಗಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ.

ಚಿತ್ರಕಲೆ, ರಂಗಭೂಮಿ, ಸಂಗೀತ ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳ ಸಂಸ್ಕೃತಿ, ಕಲೆಗಳನ್ನು ಒಳಗೊಂಡ ಸಮಗ್ರ ಪಠ್ಯವನ್ನು ಶಾಲಾ ಶಿಕ್ಷಣ ನೀತಿಯ ಭಾಗವಾಗಿಸುವಂತೆ ಆಯೋಗಕ್ಕೂ ಸಲಹೆ ನೀಡಲಾಗಿದ್ದು, 2024-25ನೇ ಶೈಕ್ಷಣಿಕ ಸಾಲಿನಿಂದಲೇ ಅಳವಡಿಸಲಾಗುತ್ತಿದೆ.

‘ಕಲೆ ಮತ್ತು ಸಂಸ್ಕೃತಿ ಪಠ್ಯದ ಮುಖ್ಯ ಭಾಗವಾಗಬೇಕು. ಕರಕುಶಲತೆಯು ಕಾಗದ ಕತ್ತರಿಸುವುದು, ಕೆಲ ಕಲಾಕೃತಿಗಳನ್ನು ರಚಿಸುವುದಕಷ್ಟೇ ಸೀಮಿತ ಆಗಬಾರದು. ಕಲೆಯ ಹಲವು ರೂಪಗಳನ್ನು ಹಂತಹಂತವಾಗಿ ಮಕ್ಕಳಿಗೆ ಕಲಿಸಬೇಕು. ಮಲೆನಾಡಿನ ಸಂಸ್ಕೃತಿಯನ್ನು ಬಯಲುಸೀಮೆ, ಕರಾವಳಿ ವಿದ್ಯಾರ್ಥಿಗಳು, ಬಯಲು ಸೀಮೆಯ ಕಲೆ, ಸಂಸ್ಕೃತಿಯನ್ನು ಇತರೆ ಭಾಗಗಳ ವಿದ್ಯಾರ್ಥಿಗಳು ಕಲಿಯಬೇಕು. ಆಹಾರ ಸಂಸ್ಕೃತಿಯ ಪರಿಚಯವಾಗಬೇಕು. ಅದಕ್ಕಾಗಿ ಎಸ್‌ಇಪಿಯಲ್ಲಿ ಅಳವಡಿಸಲಾಗುತ್ತಿದೆ’ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಪ್ರಸ್ತುತ ಶಾಲೆಗಳಲ್ಲಿ ಕಲೆ ಮತ್ತು ಕರಕುಶಲ ವಿಷಯ ಬೋಧಿಸಲಾಗುತ್ತಿದ್ದರೂ, ಸಮಗ್ರವಾಗಿಲ್ಲ. ಹೊಸ ಪಠ್ಯಕ್ರಮ ಪ್ರಾಯೋಗಿಕ ಮತ್ತು ಥಿಯರಿ ಎರಡನ್ನೂ ಒಳಗೊಂಡಿರುತ್ತದೆ ಎಂದು ಮಾಹಿತಿ ನೀಡಿದರು.

ಶಾಲಾಬ್ಯಾಗ್ ಭಾರ ತಗ್ಗಿಸಲು ಪಠ್ಯಪುಸ್ತಕ ವಿಂಗಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳ ಬ್ಯಾಗ್ ಹೊರೆ ತಗ್ಗಿಸುವುದಕ್ಕಾಗಿ ಪ್ರತಿ ಪಠ್ಯಪುಸ್ತಕವನ್ನೂ ಎರಡು ಭಾಗಗಳಾಗಿ ವಿಂಗಡಿಸಿ, ಮುದ್ರಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ.

ಸಚಿವ ಮಧು ಬಂಗಾರಪ್ಪ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ನಂತರ ಕರ್ನಾಟಕ ಪಠ್ಯಪುಸ್ತಕ ಸಂಘ ಈ ಕುರಿತು ಆದೇಶ ಹೊರಡಿಸಿದ್ದು, ಇನ್ನು ಮುಂದೆ ಪ್ರತಿ ವಿಷಯದ ಪಠ್ಯಪುಸ್ತಕವೂ ಸೆಮಿಸ್ಟರ್–1, ಸೆಮಿಸ್ಟರ್–2 ಎಂದು ಮುದ್ರಣವಾಗಲಿದೆ ಎಂದು ಹೇಳಿದೆ.

ಶಾಲಾ ಆಡಳಿತ ಮಂಡಳಿಗಳ ವಿರೋಧ: ಕರ್ನಾಟಕ ಪಠ್ಯಪುಸ್ತಕ ಸಂಘ ಆದೇಶಕ್ಕೆ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಪಠ್ಯಪುಸ್ತಕಗಳ ಖರೀದಿಗೆ ಹೆಚ್ಚಿನ ಹಣ ವಿನಿಯೋಗಿಸಬೇಕಾಗುತ್ತದೆ. ನೋಟ್‌ಪುಸ್ತಕಗಳ ಸಂಖ್ಯೆಯಲ್ಲೂ ಹೆಚ್ಚಳವಾಗುತ್ತದೆ. ಪುಸ್ತಕಗಳನ್ನು ವಿಭಜಿಸುವುದು ಬ್ಯಾಗ್ ಭಾರದ ಸಮಸ್ಯೆಗೆ ಪರಿಹಾರವಲ್ಲ’ ಎಂದು ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಪ್ರತಿಕ್ರಿಯಿಸಿದ್ದಾರೆ.

ರಥೋತ್ಸವ...

ಸುಬ್ರಹ್ಮಣ್ಯ ಷಷ್ಠಿಯ ಅಂಗವಾಗಿ ಬೆಂಗಳೂರಿನ ವಿಶ್ವೇಶ್ವರಪುರದ ಸಜ್ಜನ್‌ರಾವ್ ವೃತ್ತದಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ನಡೆದ ಸ್ವಾಮಿಯ ರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡರು
ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

‘ಪಿಡಿಒ ನೇಮಕಾತಿ ಪರೀಕ್ಷೆಗೆ ಹಳೆ ಪಠ್ಯಕ್ರಮ ಅಳವಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹುದ್ದೆಗಳಿಗೆ ನೇಮಕಾತಿಗೆ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗೆ ‘ಕರ್ನಾಟಕ ಗ್ರಾಮ ಸ್ವರಾಜ್ ಕಾಯ್ದೆ–1993’ ಉಳಿಸಿಕೊಳ್ಳಬೇಕು ಮತ್ತು ಹಳೆಯ ಪಠ್ಯಕ್ರಮದ ಮಾದರಿಯಲ್ಲಿ ಪರೀಕ್ಷೆ ನಡೆಸಬೇಕು’ ಎಂದು ಹುದ್ದೆ ಆಕಾಂಕ್ಷಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮನವಿಗೆ ಸ್ಪಂದಿಸಿರುವ ಸಚಿವರು, ‘ಈ ಬಗ್ಗೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜೊತೆ ತುರ್ತಾಗಿ ಚರ್ಚಿಸುತ್ತೇನೆ’ ಎಂದು ಭರವಸೆ ನೀಡಿದ್ದಾರೆ

ಪಿಡಿಒ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಿದೆ. ಈ ಹಿಂದೆ ನಡೆದ ಪರೀಕ್ಷೆಗಳಲ್ಲಿ ‘ಕರ್ನಾಟಕ ಗ್ರಾಮ ಸ್ವರಾಜ್ ಕಾಯ್ದೆ–1993 ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ವಿಷಯಗಳು ಪಠ್ಯ ಆಗಿದ್ದವು. ಆದರೆ, ಅದನ್ನು ಕೈಬಿಟ್ಟು, ಗ್ರೂಪ್ ‘ಸಿ’ ಹುದ್ದೆಗಳಿಗೆ ನಿಗದಿಯಾಗಿರುವ ಸಾಮಾನ್ಯ ಪಠ್ಯಕ್ರಮ ಮಾದರಿಯಲ್ಲಿ ಪರೀಕ್ಷೆ ನಡೆಸಲು ಉದ್ದೇಶಿಸಲಾಗಿದೆ.

‘ಪಿಡಿಒ ಹುದ್ದೆಗಳಿಗೆ ಆಯ್ಕೆ ಆಗುವವರಿಗೆ ಪಂಚಾಯತ್‌ರಾಜ್ ವ್ಯವಸ್ಥೆಯ ಅರಿವು ಇರಬೇಕಾಗಿದೆ. ಪ್ರಸ್ತುತ ಅಳವಡಿಸಲು ಉದ್ದೇಶಿಸಿರುವ ಪಠ್ಯಕ್ರಮ ಅವೈಜ್ಞಾನಿಕವಾಗಿದೆ. ಪರೀಕ್ಷಾ ಹಂತದಲ್ಲಿಯೇ ಜನವಸತಿ ಸಭೆ, ವಾರ್ಡ್ ಸಭೆ, ಗ್ರಾಮಸಭೆ, ಸಾಮಾನ್ಯ ಸಭೆ, ಪಂಚಾಯಿತಿ ಕಾರ್ಯಕ್ರಮಗಳಾದ ನರೇಗಾ, ಗ್ರಾಮ ವಿಕಾಸ ಯೋಜನೆ, ವಸತಿ ಯೋಜನೆಗಳನ್ನು ಕಲಿಯಬೇಕು. ಈ ಹಿಂದೆ ಮೂರು ಬಾರಿ ನಡೆದ ಪರೀಕ್ಷೆಗಳಲ್ಲಿ (2009, 2013, 2017) ಕರ್ನಾಟಕ ಗ್ರಾಮ ಸ್ವರಾಜ್ ಕಾಯ್ದೆ ಮತ್ತು ಪಂಚಾಯತ್‌ರಾಜ್ ಕಾರ್ಯಕ್ರಮಗಳ ವಿಷಯ ಪಠ್ಯವಾಗಿತ್ತು. ಹೊಸ ಪಠ್ಯ ಅಳವಡಿಸಿದರೆ, ಹಳೆ ಪಠ್ಯಕ್ರಮದಲ್ಲಿ ಈಗಾಗಲೇ ತಯಾರಿ ನಡೆಸಿರುವ ಲಕ್ಷಾಂತರ ಅಭ್ಯರ್ಥಿಗಳಿಗೆ ಪರೀಕ್ಷೆ ಎದುರಿಸುವುದು ಸಮಸ್ಯೆ ಆಗಲಿದೆ’ ಎಂದು ಶ್ರೀನಿವಾಸ್ ಟಿ. ತಿಳಿಸಿದ್ದಾರೆ. ಈ ಬಗ್ಗೆ ಸಚಿವರ ಗಮನಕ್ಕೂ ತರಲಾಗಿದೆ ಎಂದಿದ್ದಾರೆ.

‘ಉಪಜಾತಿಗಳಿಗೆ ಸಿಗದ ಮೀಸಲು ಸೌಲಭ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು (ವೀರಶೈವ–ಲಿಂಗಾಯತ ಸಮುದಾಯ) ಜಾತಿ ಗಣತಿಗೆ ವಿರೋಧ ವ್ಯಕ್ತಪಡಿಸಿಲ್ಲ. ಒಂದೇ ಜಾತಿಗೆ ಸೇರಿದ ಉಪ ಜಾತಿಗಳಿಗೆ ಮೀಸಲು ಸೌಲಭ್ಯ ಸಿಗುವುದಕ್ಕೆ ಸಂಬಂಧಿಸಿದಂತೆ ಗೊಂದಲಗಳಿವೆ. ಇದನ್ನು ಸರಿಪಡಿಸಿ ಎಂದಷ್ಟೇ ಮುಖ್ಯಮಂತ್ರಿ ಬಳಿ ಮನವಿ ಮಾಡಿದ್ದೇವೆ’ ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಸ್ಪಷ್ಟಪಡಿಸಿದರು.

ವೈಜ್ಞಾನಿಕವಾಗಿ ಜಾತಿ ಗಣತಿ ನಡೆಸುವಂತೆ ಆಗ್ರಹಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಮುಖ್ಯಮಂತ್ರಿಗೆ ಸಲ್ಲಿಸಿದ ಮನವಿಗೆ ಸಹಿ ಮಾಡಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ಇರುವ ಸಮಸ್ಯೆಗಳನ್ನು ಗಮನಕ್ಕೆ ತರುವುದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ಲಿಂಗಾಯತರಲ್ಲಿ ಗಾಣಿಗ, ಸಾದರ ಹೀಗೆ 50ಕ್ಕೂ ಹೆಚ್ಚು ಉಪಜಾತಿಗಳಿವೆ. ಅವರಿಗೆ ಲಿಂಗಾಯತ-ಗಾಣಿಗ, ಲಿಂಗಾಯತ-ಸಾದರ ಎಂದು ನಮೂದಿಸಿದ್ದರೆ ‘2ಎ’ ಪ್ರವರ್ಗದಡಿ ಮೀಸಲಾತಿ ಸಿಗುವುದಿಲ್ಲ. ಈ ಕಾರಣಕ್ಕೆ ಅವರೆಲ್ಲ ಹಿಂದೂ ಗಾಣಿಗ ಹಿಂದೂ ಸಾದರ ಎಂದು ನಮೂದಿಸಿಕೊಳ್ಳುತ್ತಾರೆ. ಇಂತಹ ಸಮಸ್ಯೆಯನ್ನು ಸರಿಪಡಿಸಲು ಮುಖ್ಯಮಂತ್ರಿಯನ್ನು ನಾವು ಕೋರಿದ್ದೇವೆ. ಈ ತೊಂದರೆಗಳ ಬಗ್ಗೆ ಅವರಿಗೂ ಗೊತ್ತಿದೆ’ ಎಂದು ವಿವರಿಸಿದರು.

‘ಇಂತಹ ತೊಡಕುಗಳು ಒಕ್ಕಲಿಗ ಜನಾಂಗ ಸೇರಿದಂತೆ ಬೇರೆ ಸಮುದಾಯಗಳಿಗೂ ಇರಬಹುದು. ಇದ್ದರೆ, ಅದನ್ನು ಕೂಡ ಸರಿಪಡಿಸುವುದರಲ್ಲಿ ತಪ್ಪೇನಿಲ್ಲ’ ಎಂದು ಸಚಿವರು ಅಭಿಪ್ರಾಯಪಟ್ಟರು.

ಕಾಂಗ್ರೆಸಿನಲ್ಲಿ 'ಒಬ್ಬ ವ್ಯಕ್ತಿ, ಒಂದು ಹುದ್ದೆ' ನೀತಿ ಅನುಸರಿಸುವ ಸಾಧ್ಯತೆಯ ಬಗ್ಗೆ ಕೇಳಿದಾಗ, ‘ಪಕ್ಷದ ವರಿಷ್ಠರು ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ಬೇರೆಯವರಿಗೂ ಅವಕಾಶ ಸಿಗಲಿ ಎಂಬ ಕಾರಣಕ್ಕೆ ವರಿಷ್ಠರು ತೀರ್ಮಾನ ತೆಗೆದುಕೊಂಡಾಗ ಅದಕ್ಕೆ ತಕ್ಕಂತೆ ನಾವು ನಡೆದುಕೊಳ್ಳಬೇಕಾಗುತ್ತದೆ’ ಎಂದರು.

ಲೋಕಸಭೆ ಚುನಾವಣೆಯಲ್ಲಿ ಸಚಿವರ ಸ್ಪರ್ಧೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ‘ಪಕ್ಷ ನಿರ್ಧರಿಸಿದರೆ ಸಚಿವರು ಕೂಡಾ ಸ್ಪರ್ಧೆ ಮಾಡಬೇಕಾಗುತ್ತದೆ. ಅದರಲ್ಲಿ ತಪ್ಪೇನಿದೆ’ ಎಂದೂ ಕೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ (ಪೂರ್ವ) ಕಛೇರಿ,
17ನೇ ಮಹಡಿ, ಪಿ.ಯು. ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು – 560001.

ಸಂಖ್ಯೆ: ಎಸ್‌ಎಡಿಹೆಚ್(ಪೂರ್ವ)/ಟೆಂಡರ್/ಪಿಆರ್/01/2023–24 ದಿನಾಂಕ: 18–12–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ದ್ವಿ–ಲಕೋಟೆ ಪದ್ಧತಿ) (ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ಪೂರ್ವ), ಬಿಬಿಎಂಪಿ, ಬೆಂಗಳೂರು (ಈ ದಸ್ತಾವೇಜುಗಳಲ್ಲಿ ಉದ್ಯೋಗದಾತರು ಎಂದು ಉಲ್ಲೇಖಿಸಲಾಗಿದೆ) ಇವರು ಉದ್ಯಾನವನಗಳ ನಿರ್ವಹಣೆಗೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಮತ್ತು ಅನುಭವವುಳ್ಳ ವ್ಯಕ್ತಿ / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಸ್ತಾವೇಜುಗಳಲ್ಲಿ ಟೆಂಡರುದಾರರು ಎಂದು ಉಲ್ಲೇಖಿಸಲಾಗಿದೆ) ಕೆಟಿಪಿಪಿ ನಿಯಮಗಳು 2000 ಅನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–1, ಕೆಡಬ್ಲ್ಯೂ–2 ಮತ್ತು ಕೆಡಬ್ಲ್ಯೂ–3)

ಕ್ರ ಸಂ.	ಕಾಮಗಾರಿಯ ಹೆಸರು / ಪ್ರವರ್ಗ	ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ರಾಧಾಕೃಷ್ಣ ಟೆಂಪಲ್ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 61) – (ಇತರೆ)	7582050.00	151641.00
2	ಸಂಜಯನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 62) – (ಎಸ್.ಸಿ)	3720150.00	37202.00
3	ಹೆಬ್ಬಾಳ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 63) – (ಇತರೆ)	3220050.00	64401.00
4	ಮನೋರಾಯನಪಾಳ್ಯ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 65) – (ಇತರೆ)	1430400.00	35760.00
5	ಚಾಮುಂಡಿನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 66) – (ಇತರೆ)	358050.00	8951.00
6	ಗಂಗಾನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 67) – (ಇತರೆ)	1162000.00	29050.00
7	ಜಯಚಾಮರಾಜೇಂದ್ರನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 68) – (ಎಸ್.ಸಿ)	1742075.00	21776.00
8	ಕಾವಲ್ ಭೈರಸಂದ್ರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 69) – (ಇತರೆ)	2740050.00	54801.00
9	ಕುಶಾಲ್ ನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 70) – (ಇತರೆ)	122250.00	3056.00
10	ದೇವರ ಜೀವನಹಳ್ಳಿ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 72) – (ಇತರೆ)	831400.00	20785.00
11	ಎಸ್.ಕೆ. ಗಾರ್ಡನ್ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 73) – (ಇತರೆ)	760962.00	19024.00
12	ಸಗಾಯಪುರಂ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 74) – (ಇತರೆ)	1286087.00	32152.00
13	ಪುಲಿಕೇಶಿನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 75) – (ಎಸ್.ಸಿ)	4167000.00	41670.00
14	ಹೆಚ್‌ಆರ್‌ಬಿಆರ್ ಲೇಔಟ್ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 78) – (ಇತರೆ)	3435625.00	68713.00
15	ಕಾಡುಗೊಂಡನಹಳ್ಳಿ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 79) – (ಇತರೆ)	414600.00	10365.00
16	ಕಾಚಾರಕನಹಳ್ಳಿ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 80) – (ಇತರೆ)	1626150.00	40654.00
17	ಕಮ್ಮನಹಳ್ಳಿ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 81) – (ಇತರೆ)	699600.00	17490.00
18	ಬಾಣಸವಾಡಿ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 82) – (ಎಸ್.ಸಿ)	6783083.00	67831.00
19	ಲಿಂಗರಾಜಪುರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 84) – (ಎಸ್.ಸಿ)	450450.00	5631.00
20	ಮಾರುತಿ ಸೇವಾ ನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 85) – (ಇತರೆ)	1551150.00	38779.00
21	ಬೆನ್ನಿಗಾನಹಳ್ಳಿ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 109) – (ಇತರೆ)	4692100.00	93842.00
22	ಸಿ.ವಿ. ರಾಮನ್‌ನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 110) – (ಎಸ್.ಸಿ)	190650.00	2383.00
23	ಕಗ್ಗದಾಸನಪುರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 111) – (ಇತರೆ)	2714050.00	54281.00
24	ನ್ಯೂ ತಿಪ್ಪಸಂದ್ರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 112) – (ಎಸ್.ಸಿ)	624300.00	7804.00
25	ಹೊಯ್ಸಳನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 113) – (ಇತರೆ)	8444590.00	168892.00
26	ಜೀವನ್‌ಭೀಮನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 114) – (ಇತರೆ)	2751450.00	55029.00
27	ಕೋನ್ನೇನ ಅಗ್ರಹಾರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 115) – (ಇತರೆ)	620400.00	15510.00
28	ರಾಮಸ್ವಾಮಿಪಾಳ್ಯ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 116) – (ಇತರೆ)	640500.00	16013.00
29	ವಸಂತನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 117) – (ಇತರೆ)	4138000.00	82760.00
30	ಸಂಪಂಗಿರಾಮನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 118) – (ಇತರೆ)	6965300.00	139306.00
31	ಶಿವಾಜಿನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 119) – (ಇತರೆ)	64500.00	1613.00
32	ಭಾರತಿನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 120) – (ಇತರೆ)	94800.00	2370.00
33	ಹಲಸೂರು ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 121) – (ಎಸ್.ಟಿ)	216270.00	2703.00
34	ಶಾಂತಿನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 166) – (ಇತರೆ)	463500.00	11588.00
35	ಅಶೋಕನಗರ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 167) – (ಇತರೆ)	5682215.00	113744.00
36	ವನ್ನಾರ್‌ಪೇಟೆ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 169) – (ಎಸ್.ಸಿ)	3443705.00	34437.00
37	ಜೋಗುಪಾಳ್ಯ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 170) – (ಇತರೆ)	817800.00	20445.00
38	ದೊಮ್ಮಲೂರು ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 171) – (ಎಸ್.ಟಿ)	8952920.00	89529.00
39	ಅಗರಂ ವಾರ್ಡ್ ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (ವಾರ್ಡ್ ಸಂಖ್ಯೆ. 172) – (ಇತರೆ)	1396050.00	34901.00
40	ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳು, ಮೀಡಿಯನ್ಸ್ ಮತ್ತು ಸರ್ಕಲ್‌ಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. – (ಇತರೆ)	558000.00	13950.00
41	ಸಿ.ವಿ. ರಾಮನ್‌ನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳು, ಮೀಡಿಯನ್ಸ್ ಮತ್ತು ಸರ್ಕಲ್‌ಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. – (ಇತರೆ)	558000.00	13950.00
42	ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳು, ಮೀಡಿಯನ್ಸ್ ಮತ್ತು ಸರ್ಕಲ್‌ಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. – (ಇತರೆ)	1673000.00	41825.00
43	ಶಾಂತಿನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳು, ಮೀಡಿಯನ್ಸ್ ಮತ್ತು ಸರ್ಕಲ್‌ಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. – (ಇತರೆ)	1115000.00	27875.00
44	ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ. – (ಇತರೆ)	1290000.00	32250.00
45	ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ. – (ಎಸ್.ಸಿ)	665000.00	8313.00
46	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ. – (ಎಸ್.ಸಿ)	1920000.00	24000.00
47	ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ. – (ಎಸ್.ಟಿ)	220000.00	2750.00
48	ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ. – (ಇತರೆ)	220000.00	5500.00
49	ಶಾಂತಿನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ. – (ಎಸ್.ಟಿ)	910000.00	11375.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **22–12–2023 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಮುಕ್ತಾಯ ದಿನಾಂಕ: **07–01–2024 ರಂದು ಸಂಜೆ 4.30 ಗಂಟೆವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **09–01–2024 ರಂದು ಬೆಳಿಗ್ಗೆ 11.30 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು (ಪೂರ್ವ ವಲಯ), ಬಿಬಿಎಂಪಿ.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- 09122023-250531
CG-DL-E- 09122023-250531
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 4980] NEW DELHI, FRIDAY, DECEMBER 08, 2023/ AGRAHAYANA 17,1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ನವದೆಹಲಿ

ನವದೆಹಲಿ ದಿನಾಂಕ 8ನೇ ಡಿಸೆಂಬರ್,2023

ಅಧಿಸೂಚನೆ

ಸಂ.ವಿ.ಭೂ.ಸ್ವಾ.ಅ/ರಾಹೆ/ವಿ. ವಿ/

ವಿಶೇಷ ಭೂ–ಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ –367 (ಬಾಣಾಪೂರ– ಗದ್ದನಕೇರಿ ಸೆಕ್ಷನ್)
ಕಿ.ಮೀ 71.50 ರಿಂದ ಕಿ.ಮೀ 104.00 ರವರೆಗೆ, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ ಧಾರವಾಡ.

ಸಾರ್ವಜನಿಕ ಪ್ರಕಟಣೆ

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಡಿ(1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರಕಾರವು ಕರ್ನಾಟಕ ರಾಜ್ಯದ ಬಾಗಲಕೋಟ ಜಿಲ್ಲೆಯ ಈ ಕೆಳಗೆ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 367ರಲ್ಲಿ (ಬಾಣಾಪೂರ– ಗದ್ದನಕೇರಿ ಸೆಕ್ಷನ್) ಕಿ.ಮೀ 71.50 ರಿಂದ ಕಿ.ಮೀ 104.00 ರವರೆಗೆ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್‌ಇತ್ಯಾದಿ) ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳಲು 3ಡಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಅಧಿಸೂಚನೆಯು ಭಾರತ ರಾಜಪತ್ರದ ಅಸಾಧಾರಣ, ಭಾಗ– 2, ಸೆಕ್ಷನ್ 3, ಸಬ್‌ಸೆಕ್ಷನ್ (2) ರಲ್ಲಿ ಎಸ್.ಓ.ಸಂ 1940 (ಇ) ದಿನಾಂಕ:27–04–2023 ರಂದು ಪ್ರಕಟವಾಗಿರುತ್ತದೆ.

ಆದಕಾರಣ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಜಿ ಉಪಕಲಂ (1) (2) (3) ಮತ್ತು (4) ಹಾಗೂ 1997ರ ತಿದ್ದುಪಡಿಯಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ನಮೂದಿಸಿದ ಭೂಮಿಯ ಮಾಲೀಕರು ಹಾಗೂ ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿಗಧಿಪಡಿಸಿ ಪಾವತಿಸಲು ಜಮೀನಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ಅಂದರೆ (1) ಮೂಲ ದಾಖಲೆ ಪತ್ರಗಳು (2) ಕ್ರಯಪತ್ರ, ವಿಭಾಗ ಪತ್ರ, ಇತರೆ ಹಕ್ಕು ಪತ್ರಗಳು, (3) ಪಹಣಿ ಪತ್ರಿಕೆಗಳು (ಆರ್.ಟಿ.ಸಿ) (4) ಹಕ್ಕು ಬದಲಾವಣೆ ದಾಖಲೆ (ಮ್ಯುಟೇಶನ್) (5) ಕಂದಾಯ ಪಾವತಿಸಿದ ರಶೀದಿ (6) ಋಣಭಾರ ರಹಿತ ದೃಢೀಕರಣ ಪತ್ರ (ಇ.ಸಿ) (7) ಗ್ರಾಮ ಪಂಚಾಯತಿ ಸ್ವತ್ತಿಗೆ ಸಂಬಂದಿಸಿದಂತೆ ಇ–ಸ್ವತ್ತು ದಾಖಲೆ (ನಿವೇಶನಗಳಿಗೆ), ಇತರ ಅನ್ವಯವಾಗುವ ದಾಖಲೆಗಳು ಹಾಗೂ ಅಪೇಕ್ಷಿಸುವ ಪರಿಹಾರಧನ (ಸೂಕ್ತ ಸಮರ್ಥನೆಗಳೊಂದಿಗೆ) ದಾಖಲೆಗಳನ್ನು ಪ್ರಕಟಣೆಗೊಂಡ ದಿನಾಂಕದಿಂದ 21 ದಿನಗಳೊಳಗಾಗಿ ಕಛೇರಿ ವೇಳೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ ಇವರಿಗೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಪರಿಹಾರ ಧನ ನಿಗದಿಪಡಿಸಿ ವಿತರಿಸಲಾಗುವುದು.

ಎಸ್.ಓ. 5209(ಇ) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಮೂಲಕ ಪ್ರಕಟಿಸಲಾದ ಅಧಿಸೂಚನೆ ಸಂಖ್ಯೆ ಎಸ್.ಓ1940 (ಇ) ದಿನಾಂಕ 27ನೇ ಏಪ್ರಿಲ್ 2023ರಂದು ಭಾರತ ರಾಜಪತ್ರದ ಅಸಾಧಾರಣ, ಭಾಗ–2, ಸೆಕ್ಷನ್3, ಸಬ್‌ಸೆಕ್ಷನ್ (2) ರಾಷ್ಟ್ರೀಯ ಹೆದ್ದಾರಿಕಾಯ್ದೆ 1956 (1956ರ 48) ಪ್ರಕಾರ ಸೆಕ್ಷನ್ 3(ಎ)ರ ಸಬ್ ಸೆಕ್ಷನ್(1)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಇದರೊಂದಿಗೆ ಲಗತ್ತಿಸಿರುವ ಅನುಸೂಚಿ (ಶೆಡ್ಯೂಲ್)ಯಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಬಾಗಲಕೋಟ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ.367ರ (ಬಾಣಾಪೂರ– ಗದ್ದನಕೇರಿ ಸೆಕ್ಷನ್) ರಸ್ತೆಯ ಕಿಮೀ.71.50ರಿಂದ ಕಿಮೀ 104.00ರವರೆಗೆ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್ ಇತ್ಯಾದಿ) ಸಂರಕ್ಷಣೆ ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದೆ.

ಸದರಿ ಅಧಿಸೂಚನೆಯನ್ನು“ಪ್ರಜಾವಾಣಿ” ಮತ್ತು “ಕನ್ನಡ ಪ್ರಭ” ದಿನಪತ್ರಿಕೆಗಳಲ್ಲಿ ದಿನಾಂಕ: 24–05–2023ರಂದು ಪ್ರಚಾರ ಪಡಿಸಿ, ರಾಷ್ಟ್ರೀಯ ಹೆದ್ದಾರಿ ಕಾಯ್ದೆ ಸೆಕ್ಷನ್ 3(ಎ)ರ ಸಬ್‌ಸೆಕ್ಷನ್ (3) ರ ಪ್ರಕಾರ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಮತ್ತು ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರಿಯವರು ಅಂಗೀಕರಿಸಿರುತ್ತಾರೆ /ತಿರಸ್ಕರಿಸಿರುತ್ತಾರೆ. ಅಂತಹ ಆಕ್ಷೇಪಣೆಗಳಿಗೆ ಕಾಯಿದೆಯ ಸೆಕ್ಷನ್ 3(ಡಿ)ರ ಸಬ್–ಸೆಕ್ಷನ್ (1) ರ ಪ್ರಕಾರ ಸಕ್ಷಮ ಪ್ರಾಧಿಕಾರವು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ.

ಆದ್ದರಿಂದ ಈಗ ಸಕ್ಷಮ ಪ್ರಾಧಿಕಾರಿಯವರಿಂದ ಬಂದ ವರದಿ ಪ್ರಕಾರ ಮತ್ತು ಸೆಕ್ಷನ್ 3(ಡಿ) ರ ಸಬ್‌ಸೆಕ್ಷನ್ (1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ತೋರಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉಪಯೋಗಕ್ಕಾಗಿ ಸ್ವಾಧೀನ ಮಾಡಿಕೊಳ್ಳಲು ಕೇಂದ್ರ ಸರಕಾರವು ಘೋಷಿಸುತ್ತದೆ ಮತ್ತು ಈಗ ಸೆಕ್ಷನ್ 3(ಡಿ)ರ ಸಬ್‌ಸೆಕ್ಷನ್ (2) ರ ಅನುಸಾರ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಣೆಗೊಂಡ ಮೇಲೆ ಅನುಸೂಚಿಯಲ್ಲಿ ವಿವರಿಸಿರುವ ಭೂಮಿಯು ಯಾವುದೇ ಋಣಭಾರವಿಲ್ಲದೇ ಕೇಂದ್ರ ಸರಕಾರದ ಸಂಪೂರ್ಣ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರ್ಕಾರವು ಘೋಷಿಸಿದೆ.

ಅನುಸೂಚಿ

ಕರ್ನಾಟಕ ರಾಜ್ಯದಲ್ಲಿರುವ ಬಾಗಲಕೋಟ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ.367 (ಬಾಣಾಪೂರ– ಗದ್ದನಕೇರಿ ಸೆಕ್ಷನ್) ರಸ್ತೆಯ ಕಿ.ಮೀ 71.50 ರಿಂದ ಕಿ.ಮೀ 104.00 ರವರೆಗೆ ಕಟ್ಟಡಗಳು ಹಾಗೂ ಕಟ್ಟಡಗಳ ರಹಿತ ಭೂಸ್ವಾಧೀನಗೊಳ್ಳಲಿರುವ ಜಮೀನುಗಳ ಸಂಕ್ಷಿಪ್ತ ವಿವರ.

ಅ.ನಂ.	ಸರ್ವೇನಂ. / ಪ್ಲಾಟ್‌ನಂ.	ಜಮೀನಿನ ಪ್ರಕಾರ (ಟೈಪ್ ಆಫ್ ಲ್ಯಾಂಡ)	ಜಮೀನಿನ ತರಹೆ	ಜಮೀನಿನ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಭೂಮಾಲಿಕರ/ಹಿತಾಸಕ್ತಿವುಳ್ಳವರ ಹೆಸರು ಸರ್ವೇ ನಂಬರಿನ ಭಾಗ
1	2	3	4	5	6
ತಾಲ್ಲೂಕ: ಬದಾಮಿ					**ಗ್ರಾಮ: ನಂದಿಕೇಶ್ವರ**
1	10	ಖಾಸಗಿ	ಖುಷ್ಕಿ	0.408194	ಮಾಂತಗೌಡ ಮಲ್ಲನಗೌಡ ಬಡಸಿದ್ದಣ್ಣವರ, ಸುರೇಶಗೌಡ ಮಲ್ಲನಗೌಡ ಬಡಸಿದ್ದಣ್ಣವರ, ಚಂದ್ರಗೌಡ ಮಲ್ಲನಗೌಡ ಬಡಸಿದ್ದಣ್ಣವರ, ನಿಂಗನಗೌಡ ಮಲ್ಲನಗೌಡ ಬಡಸಿದ್ದಣ್ಣವರ, ಶರಣಪ್ಪಗೌಡ ಮಲ್ಲನಗೌಡ ಬಡಸಿದ್ದಣ್ಣವರ (10/6+7)
2	11	ಖಾಸಗಿ	ಖುಷ್ಕಿ	0.585212	1) ಮಲ್ಲಪ್ಪ ನಾಗಪ್ಪ ಗಡಗೋಳಿ 2) ಕುಮಾರಪ್ಪ ನಾಗಪ್ಪ ಗಡಗೋಳಿ 3) ಬಸವರಾಜ ನಾಗಪ್ಪ ಗಡಗೋಳಿ (11/1,2,3)
3	12	ಖಾಸಗಿ	ಖುಷ್ಕಿ	0.231013	ಮುಚಕಂಡಯ್ಯ ಹೊಸಗೌಡ್ರ (12/1)
4	12	ಖಾಸಗಿ	ಖುಷ್ಕಿ	0.001932	ಮಾಗುಂಡಯ್ಯ ರುದ್ರಯ್ಯ ಬ್ಯಾಳಿ, ವೀರವ್ವ ಅಯ್ಯಪ್ಪ ಕಪ್ಪರದ್ (12/2)
5	12	ಖಾಸಗಿ	ಖುಷ್ಕಿ	0.245337	1) ಮಲ್ಲವ್ವ ಮಲ್ಲನಗೌಡ ದೇವರಮನಿ, 2) ಶಾಂತಾ ವೀರಯ್ಯ ಹಿರೇಮಠ, ಸರೋಜಾ ಅಶೋಕ ಹಿರೇಮಠ, ಸಂಗಯ್ಯ ಶಿವಬಸಯ್ಯ ಕೊರಡ್ಯಾನಮಠ, ಶಿವಯೋಗಿ ಸಂಗಯ್ಯ ಕೊರಡ್ಯಾನಮಠ, ಸೌಜನ್ಯ ಸಂಗಯ್ಯ ಕೊರಡ್ಯಾನಮಠ ಎ.ಪಿ. ತಂದೆ ಸಂಗಯ್ಯ, ಸಂತೋಷ ಸಂಗಯ್ಯ ಕೊರಡ್ಯಾನಮಠ ಎ.ಪಿ. ತಂದೆ ಸಂಗಯ್ಯ (12/4,9)
6	12	ಖಾಸಗಿ	ಖುಷ್ಕಿ	0.136588	ಮಾನಗೌಡ ನಿಂಗಬಸಪ್ಪ ಅಳಗುಂಡಿ (12/5)
7	12	ಖಾಸಗಿ	ಖುಷ್ಕಿ	0.075883	ನಾಗವ್ವ ಮಾನಗೌಡ ಅಳಗುಂಡಿ, ರಾಚವ್ವ ಮುಚಖಂಡಯ್ಯ ಹಂಗರಗಿ, ಗುರವ್ವ ರಾಚಯ್ಯ ಗುಳೇದಗುಡ್ಡ,ರುದ್ರಯ್ಯ ಮಾನಗೌಡ ಅಳಗುಂಡಿ, ಭಾರತಿ ಮಹಾರುದ್ರಯ್ಯ ಗೊಡಚಿ (12/6)
8	12	ಖಾಸಗಿ	ಖುಷ್ಕಿ	0.2056	ಕಾಶಿಂಸಾಬ ದಾವಲಸಾಬ ಯಾವಗಲ್ಲಿ (12/7ಎ+7ಬಿ)
9	12	ಖಾಸಗಿ	ಖುಷ್ಕಿ	0.099523	ಬಸವ್ವ ಮಾನಗೌಡ ಗೌಡ್ರ ಉರ್ಫ್ ಪಾಟೀಲ್, ವೀರನಗೌಡ ಮಾನಗೌಡ ಗೌಡ್ರ ಉರ್ಫ್ ಪಾಟೀಲ್, ಅಶೋಕ ಮಾನಗೌಡ ಗೌಡ್ರ ಉರ್ಫ್ ಪಾಟೀಲ್, (12/7ಡಿ)
10	12	ಖಾಸಗಿ	ಖುಷ್ಕಿ	0.2811	ಬಸಯ್ಯ ಬೈರಪ್ಪ ಕರವೀರಣ್ಣವರ್ (12/8ಎ)
11	13	ಖಾಸಗಿ	ಖುಷ್ಕಿ	0.2108	1) ಕಾಶಪ್ಪ ಬಸವಣ್ಣೆಪ್ಪ ಧೂಪದ್, ಮಾಗುಂಡಪ್ಪ ಬಸವಪ್ರಭಪ್ಪ ದೂಪದ್, ವಿರೂಪಾಕ್ಷಪ್ಪ ರಾಚಪ್ಪ ದೂಪದ್, ಶಿವಪ್ಪ ರಾಚಪ್ಪ ದೂಪದ್, ಮಲಕಜಪ್ಪ ರಾಚಪ್ಪ ದೂಪದ್, ಮಾಗುಂಡಪ್ಪ ರಾಚಪ್ಪ ದೂಪದ್, 2) ವೀರಯ್ಯ ಬಸವಂತಯ್ಯ ಭಿಕ್ಷಾವತಿ, ಚನ್ನವ್ವ ರುದ್ರಗೌಡ ಕೋಟಿ, ಮಡಿವಾಳಯ್ಯ ಬಸವಂತಯ್ಯ ಭಿಕ್ಷಾವತಿ, ನಿಂಗಯ್ಯ ಬಸವಂತಯ್ಯ ಭಿಕ್ಷಾವತಿ. (13/1,2)
12	144	ಖಾಸಗಿ	ಖುಷ್ಕಿ	0.02406	ಮಾಗುಂಡಪ್ಪ ಪಾಂಡಪ್ಪ ಕುಚಲ, ಬೈರಪ್ಪ ಪಾಂಡಪ್ಪ ಕುಚಲ (144/2ಬಿ)
13	144	ಖಾಸಗಿ	ಖುಷ್ಕಿ	0.0489	ಗೋವಿಂದಪ್ಪ ಹನಮಪ್ಪ ಕುಚಲ, ತಿಪ್ಪಣ್ಣ ಹನಮಪ್ಪ ಕುಚಲ್, ಶಿದ್ದವ್ವ ಹನಮಪ್ಪ ಕುಚಲ್ (144/2ಡಿ)
14	145	ಖಾಸಗಿ	ಖುಷ್ಕಿ	0.932338	1) ಮುದಕಪ್ಪ ಬಸಪ್ಪ ಹೊಸಗೌಡ್ರ, ಶಂಕ್ರಯ್ಯ ಬಸಪ್ಪ ಹೊಸಗೌಡ್ರ, ಮಲ್ಲವ್ವ ಶರಣಯ್ಯ ಭಾವಿಕಟ್ಟಿ ಉರ್ಫ್ ಲಿಂಗನಗೌಡ್ರ, 2) ಸಿದ್ದವ್ವ ಈರನಗೌಡ ಹಾದಿಮನಿ,3) ಹಾಲಯ್ಯ ಶಿವಯ್ಯ ಗಾರವಾಡ, 4) ಮಹಾಂತಗೌಡ ಮಲ್ಲನಗೌಡ ಬಡಸಿದ್ದಣ್ಣವರ, ಸುರೇಶಗೌಡ ಮಲ್ಲನಗೌಡ ಬಡಸಿದ್ದಣ್ಣವರ, ಚಂದ್ರಗೌಡ ಮಲ್ಲನಗೌಡ ಬಡಸಿದ್ದಣ್ಣವರ, ನಿಂಗನಗೌಡ ಮಲ್ಲನಗೌಡ ಬಡಸಿದ್ದಣ್ಣವರ, ಶರಣಪ್ಪಗೌಡ ಮಲ್ಲನಗೌಡ ಬಡಸಿದ್ದಣ್ಣವರ, 5) ಬಸಯ್ಯ ಬೈರಪ್ಪ ಕರವೀರಣ್ಣವರ್, 6) ಕಳಕಪ್ಪ ಉರ್ಫ್ ಕಳಕಯ್ಯ ಮಾಗುಂಡಯ್ಯ ಉರ್ಫ್ ಮಹಾಗುಂಡಯ್ಯ ಕರಿವೀರಣ್ಣವರ ಉರ್ಫ್ ಕರಿಯಣ್ಣವರ, 7) ನಾಗವ್ವ ಮಾನಗೌಡ ಅಳಗುಂಡಿ, ರಾಚವ್ವ ಮುಚಖಂಡಯ್ಯ ಹಂಗರಗಿ, ಗುರವ್ವ ರಾಚಯ್ಯ ಗುಳೇದಗುಡ್ಡ, ರುದ್ರಯ್ಯ ಮಾನಗೌಡ ಅಳಗುಂಡಿ, ಭಾರತಿ ಮಹಾರುದ್ರಯ್ಯ ಗೊಡಚಿ, 8) ಮಾನಗೌಡ ನಿಂಗಬಸಪ್ಪ ಅಳಗುಂಡಿ, 9) ಗುರುನಗೌಡ ಬಸನಗೌಡ ರಾಚನಗೌಡ್ರ ಉರ್ಫ್ ಅಳಗುಂಡಿ, ಮಲ್ಲನಗೌಡ ಬಸನಗೌಡ ರಾಚನಗೌಡ್ರ ಉರ್ಫ್ ಅಳಗುಂಡಿ, 10) ಸಿದ್ದಲಿಂಗಯ್ಯ ಬೈರೇಗೌಡ ಕಪ್ಪರದ, ನಾಗವ್ವ ಮಾನಗೌಡ ಅಳಗುಂಡಿ, ರಾಚವ್ವ ಮುಚಕಂಡಯ್ಯ ಹಂಗರಗಿ, ಗುರವ್ವ ರಾಚಯ್ಯ ಗುಳೇದಗುಡ್ಡ, ರುದ್ರಯ್ಯ ಮಾನಗೌಡ ಅಳಗುಂಡಿ, ಭಾರತಿ ಮಹಾರುದ್ರಯ್ಯ ಗೊಡಚಿ, (145/*)
15	146	ಖಾಸಗಿ	ಖುಷ್ಕಿ	0.110187	ಬಸನಗೌಡ ಮಾಗುಂಡಗೌಡ ಗೋವನಕಿ, ನೀಲವ್ವ ಶಿವಪುತ್ರಯ್ಯ ಗುಡಿಸಾಗರ, ಶಿವಭಾವಿ ಗಂಗಯ್ಯ ಮುಚಖಂಡಿ, ಬಸವ್ವ ಕುಮಾರಯ್ಯ ಪೂಜಾರ್, ವೀರನಗೌಡ ಮಾನಗೌಡ ಗೋವನಕಿ, ನಂದನಗೌಡ ಮಾನಗೌಡ ಗೋವನಕಿ, ಅಕ್ಕಮ್ಮ ಶರಣಯ್ಯ ಯಡಳ್ಳಿ, ರೇಶಂ ಸಂಗಯ್ಯ ಸಂಕಿನಮಠ, ಶಂಕರಗೌಡ ಮಾನಗೌಡ ಗೋವನಕಿ (146/2ಎ)
16	146	ಖಾಸಗಿ	ಖುಷ್ಕಿ	0.065162	ನೀಲವ್ವ ಶಿವಪುತ್ರಯ್ಯ ಗುಡಿಸಾಗರ, ಶಿವಭಾವಿ ಗಂಗಯ್ಯ ಮುಚಖಂಡಿ, ಬಸವ್ವ ಕುಮಾರಯ್ಯ ಪೂಜಾರ್, ವೀರನಗೌಡ ಮಾನಗೌಡ ಗೋವನಕಿ, ನಂದನಗೌಡ ಮಾನಗೌಡ ಗೋವನಕಿ, ಅಕ್ಕಮ್ಮ ಶರಣಯ್ಯ ಯಡಳ್ಳಿ, ರೇಶಂ ಸಂಗಯ್ಯ ಸಂಕಿನಮಠ, ಶಂಕರಗೌಡ ಮಾನಗೌಡ ಗೋವನಕಿ(146/2ಬಿ)
17	146	ಖಾಸಗಿ	ಖುಷ್ಕಿ	0.013842	ಫಕೀರಪ್ಪ ಮಾಗುಂಡಪ್ಪ ಕೆರಿಹೊಲದ, ಮಲ್ಲಪ್ಪ ಮಾಗುಂಡಪ್ಪ ಕೆರಿಹೊಲದ, ಅಧ್ಯಕ್ಷ ವಿ.ಪಿ.ಸಿ. ನಂದಿಕೇಶ್ವರ (146/3)
18	9	ಖಾಸಗಿ	ಖುಷ್ಕಿ	0.708163	ಪಾರ್ವತೆವ್ವ ಬಸಯ್ಯ ಮುಚಖಂಡಿ, ಕುಮಾರಯ್ಯ ಬಸಯ್ಯ ಮುಚಖಂಡಿ, ಗುರುದೇವಿ ಮರಿಗೌಡ ಪಾಟೀಲ, ಸಿದ್ದಲಿಂಗಯ್ಯ ಬಸಯ್ಯ ಮುಚಖಂಡಿ,
			ಒಟ್ಟು	4.38383	

[F.No. RW/NH/367/KNT/2022/3D 2]
ABHAY JAIN, Dy. Secy.

ಸಹಿ/–ಇಸ್ಮಾಯಿಲ್‌ಸಾಹೇಬ ಶಿರಹಟ್ಟಿ (ಕ.ಆ.ಸೇ)
ವಿಶೇಷ ಭೂ–ಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ರಾಷ್ಟ್ರೀಯ ಹೆದ್ದಾರಿಗಳು,ಮಿನಿ ವಿಧಾನಸೌಧ, ಧಾರವಾಡ – 580 001

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಿರ್ಧಾರ ಕೈಗೊಳ್ಳುವ ಮುನ್ನ ಆಂತರ್ಯದ ಮಾರ್ಗದರ್ಶನ ಕೇಳಿ. ಉತ್ತರಕ್ಕಾಗಿ ಸಹನೆಯಿಂದ ಕಾಯಿರಿ. ಶಾಂತವಾಗಿ ಇದ್ದೇನೆ ಮತ್ತು ಖಚಿತ ತೀರ್ಮಾನಕ್ಕೆ ಬಂದಿದ್ದೇನೆ ಅನ್ನಿಸಿದಾಗಷ್ಟೇ ಮುಂದಡಿ ಇಡಿ.

–ದೀಪಕ್ ಚೋಪ್ರಾ

ಮಕ್ಕಳಿಂದ ಮಲದ ಗುಂಡಿ ಸ್ವಚ್ಛತೆ ರೋಗಗ್ರಸ್ತ ಮನಃಸ್ಥಿತಿಗೆ ಬೇಕಿದೆ ಮದ್ದು

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಲದ ಗುಂಡಿಯನ್ನು ಸ್ವಚ್ಛಗೊಳಿಸಲು ಪರಿಶಿಷ್ಟ ಸಮುದಾಯಕ್ಕೆ ಸೇರಿದ ಮಕ್ಕಳನ್ನು ಬಳಸಿಕೊಂಡಿರುವ ಅಮಾನವೀಯ ಘಟನೆಯು ಜಾತಿ ತಾರತಮ್ಯದ ಜೀವಂತಿಕೆಗೆ ಹೊಸತೊಂದು ಉದಾಹರಣೆ. ಪ್ರಾಂಶುಪಾಲರು ಹಾಗೂ ಶಿಕ್ಷಕರೊಬ್ಬರ ಸಮ್ಮುಖದಲ್ಲೇ ಏಳರಿಂದ ಒಂಬತ್ತನೇ ತರಗತಿಯ ಐದಾರು ಮಕ್ಕಳನ್ನು ಮಲದ ಗುಂಡಿ ಸ್ವಚ್ಛಗೊಳಿಸಲು ಇಳಿಸಲಾಗಿದೆ. ಜಾತಿಯ ಕಾರಣದಿಂದಾಗಿ ಎಸಗುವ ತರತಮಗಳಿಗೆ ಶಿಕ್ಷಣವನ್ನು ಪರಿಹಾರದ ರೂಪದಲ್ಲಿ ನೋಡಲಾಗುತ್ತದೆ. ದುರದೃಷ್ಟವಶಾತ್, ಬೆಳಕು ಹಂಚಬೇಕಾದ ಕಲಿಕಾ ಕೇಂದ್ರಗಳಲ್ಲೇ ಅಸಮಾನತೆಯ ಕತ್ತಲೆ ಕಾಣಿಸಿಕೊಂಡಿದೆ. ನಿರ್ದಿಷ್ಟ ಜಾತಿಯ ಮಕ್ಕಳನ್ನು ಗುರುತಿಸಿ ಅವರನ್ನು ಕೊಳಕು ಬಳಿಯಲು ಗುಂಡಿಗೆ ಇಳಿಸಿರುವ ಗಲೀಜು ಮನಃಸ್ಥಿತಿಯುಳ್ಳವರು ಜಾತ್ಯತೀತ ಸಮಾಜವನ್ನು ಕಟ್ಟುವ ವ್ಯಕ್ತಿತ್ವಗಳನ್ನು ರೂಪಿಸುತ್ತಾರೆಂದು ನಿರೀಕ್ಷಿಸುವುದು ಸಾಧ್ಯವೇ? ಗಲೀಜು ಬಳಿಯಲು ಮಕ್ಕಳನ್ನು ಬಳಸಿಕೊಂಡಿರುವುದು, ಅದರಲ್ಲೂ ಪರಿಶಿಷ್ಟ ಜಾತಿಯ ಮಕ್ಕಳನ್ನೇ ಬಳಸಿಕೊಂಡಿರುವುದು ಜಾತೀಯತೆ ಪ್ರದರ್ಶನದ ಸ್ಪಷ್ಟ ನಿದರ್ಶನ. ವಸತಿ ಶಾಲೆಯಲ್ಲಿ ನಡೆದಿರುವ ಈ ಕೃತ್ಯವನ್ನು ನೋಡಿದರೆ, ಮಕ್ಕಳು ಯಾಕಾಗಿ ಶಾಲೆಗಳಿಗೆ ಬರುತ್ತಾರೆ ಎನ್ನುವುದನ್ನೇ ಘಟನೆಗೆ ಕಾರಣರಾದವರು ಮರೆತಿರುವಂತಿದೆ. ಪ್ರಕರಣ ವರದಿಯಾದ ನಂತರವೂ 'ಇದು ಮಲದ ಗುಂಡಿ ಅಲ್ಲ; ಸ್ವಚ್ಛತಾ ಆಂದೋಲನದ ಅಂಗವಾಗಿ ಚೇಂಬರ್‌ನೊಳಗೆ ಮಕ್ಕಳನ್ನು ಇಳಿಸಿ ಸ್ವಚ್ಛಗೊಳಿಸಲಾಗಿದೆಯಷ್ಟೇ' ಎಂದು ಕೆಲವು ಅಧಿಕಾರಿಗಳು ನೀಡಿರುವ ಸಮಜಾಯಿಷಿ ತಪ್ಪನ್ನು ಮರೆಮಾಚುವ ಪ್ರಯತ್ನವಾಗಿದೆ. ಮಲದ ಗುಂಡಿಯಾದರೂ ಆಗಿರಲಿ, ಚೇಂಬರ್ ಆದರೂ ಆಗಿರಲಿ, ಕೊಳಕು ಬಳಿಯುವ ಕೆಲಸಕ್ಕೆ ಮಕ್ಕಳನ್ನು ಬಳಸಿಕೊಳ್ಳುವ ಯೋಚನೆಯೇ ಅಸಹನೀಯ. ವಸತಿ ಶಾಲೆಯಲ್ಲಿನ ಸಿಬ್ಬಂದಿಯು ಮಕ್ಕಳಿಗೆ ಕಿರುಕುಳ ನೀಡುತ್ತಿರುವ ದೂರುಗಳೂ ಇವೆ. ರಾತ್ರಿ ವೇಳೆಯಲ್ಲಿ ಲೈಟ್‌ಗಳನ್ನೆಲ್ಲ ಆರಿಸಿ ಹಾಸ್ಟೆಲ್ ಹೊರಗಡೆ ಮಂಡಿಯೂರಿ ಕೂರಿಸಲಾಗುತ್ತಿದೆ ಎಂದು ಕೆಲವು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ. ಮಕ್ಕಳನ್ನು ಶಾಲೆಯಲ್ಲಿ ಹೊಡೆಯುತ್ತಿರುವ ದೃಶ್ಯಗಳು ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ದಾಖಲಾಗಿವೆ. ಈ ಹಿಂಸೆಯನ್ನು ಸಹಿಸಿಕೊಳ್ಳಲಾಗದೆ ಕೆಲವು ವಿದ್ಯಾರ್ಥಿಗಳು ವರ್ಗಾವಣೆ ಪತ್ರ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಲಾಗುತ್ತಿದೆ.

ಯಲುವಹಳ್ಳಿ ಪ್ರಕರಣವು ರಾಜ್ಯದ ಎಲ್ಲ ವಸತಿ ಶಾಲೆಗಳ ವ್ಯವಸ್ಥೆಯ ಅವಲೋಕನಕ್ಕೆ ಕಾರಣವಾಗಬೇಕು

ಯಲುವಹಳ್ಳಿಯಲ್ಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯ ಪ್ರಾಂಶುಪಾಲರು ಹಾಗೂ ಒಬ್ಬ ಶಿಕ್ಷಕರನ್ನು ಪೊಲೀಸರು ಬಂಧಿಸಿದ್ದಾರೆ. ಇಷ್ಟು ಮಾತ್ರಕ್ಕೆ ಶೋಷಣೆಗೊಳಗಾದ ಮಕ್ಕಳಿಗೆ ನ್ಯಾಯ ದೊರೆಯುವುದಿಲ್ಲ. ಘಟನೆಯ ನಂತರ ನಾಪತ್ತೆಯಾಗಿರುವ ಶಾಲೆಯ ಇತರ ಸಿಬ್ಬಂದಿಯನ್ನೂ ಪತ್ತೆ ಹಚ್ಚಿ ಕ್ರಮ ಜರುಗಿಸಬೇಕು. ಇದರ ಜೊತೆಗೆ, ವಸತಿ ಶಾಲೆಯಲ್ಲಿ ಮಕ್ಕಳ ಮೇಲೆ ನಡೆಯುತ್ತಿದೆ ಎನ್ನಲಾದ ಕಿರುಕುಳದ ಕುರಿತೂ ವಿಚಾರಣೆ ನಡೆಯಬೇಕು. ಯಲುವಹಳ್ಳಿಯ ಘಟನೆ ರಾಜ್ಯದ ಎಲ್ಲ ವಸತಿ ಶಾಲೆಗಳ ವ್ಯವಸ್ಥೆಯ ಅವಲೋಕನಕ್ಕೆ ಕಾರಣವಾಗಬೇಕು. ಮಕ್ಕಳನ್ನು ವಿವಿಧ ರೀತಿಯಲ್ಲಿ ಶೋಷಿಸುವವರು ಹಾಗೂ ಅವರನ್ನು ತಾರತಮ್ಯ ಮನೋಭಾವದಿಂದ ನಡೆಸಿಕೊಳ್ಳುವವರ ಸಂಖ್ಯೆ ಕಡಿಮೆಯೇನೂ ಇಲ್ಲ. ಶಾಲೆ ಮತ್ತು ವಸತಿ ಕೇಂದ್ರಗಳಲ್ಲಿ ಮಕ್ಕಳಿಗೆ ಆರೋಗ್ಯಕರ ಪರಿಸರವನ್ನು ರೂಪಿಸಿಕೊಡುವುದು ಸರ್ಕಾರದ ಕರ್ತವ್ಯ. ನಿರಂತರ ನಿಗಾ ವಹಿಸುವಿಕೆಯ ಮೂಲಕ ವಸತಿ ಶಾಲೆಗಳನ್ನು ಜೀವಪರವಾಗಿ ಇರಿಸುವ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕು. ಕಲಿಕೆಯ ಹಂಬಲದಿಂದಾಗಿ ಮನೆ ಹಾಗೂ ಪೋಷಕರನ್ನು ಬಿಟ್ಟು ಬಂದಿರುವ ಮಕ್ಕಳನ್ನು ಕಾಳಜಿ ಹಾಗೂ ಸಹಾನುಭೂತಿಯಿಂದ ನೋಡಿಕೊಳ್ಳಬೇಕಾದುದು ಅಲ್ಲಿನ ಸಿಬ್ಬಂದಿಯ ಕರ್ತವ್ಯ ಹಾಗೂ ಅವರಿಗೆ ಎಲ್ಲ ಸವಲತ್ತುಗಳನ್ನು ಒದಗಿಸಿಕೊಡಬೇಕಾದುದು ಸರ್ಕಾರದ ಹೊಣೆಗಾರಿಕೆ. ಆದರೆ, ಕೆಲವು ವಸತಿ ಶಾಲೆಗಳು ಮಕ್ಕಳ ಪಾಲಿಗೆ ಶಿಕ್ಷಾಕೇಂದ್ರಗಳಾಗಿ ಪರಿಣಮಿಸಿರುವ ವರದಿಗಳು ಮಾಧ್ಯಮಗಳಲ್ಲಿ ಆಗಾಗ್ಗೆ ಪ್ರಕಟಗೊಳ್ಳುತ್ತಲೇ ಇರುತ್ತವೆ. ಕೊಳೆತ ತರಕಾರಿ ಹಾಗೂ ಹುಳು ಬಿದ್ದ ಪದಾರ್ಥಗಳನ್ನು ಬಳಸಿ ತಯಾರಿಸುವ ಅಡುಗೆಯನ್ನು ಮಕ್ಕಳಿಗೆ ನೀಡಿರುವ ಬಗ್ಗೆ ದೂರುಗಳಿವೆ. ಕಳಪೆ ಊಟ ಹಾಗೂ ಸೌಲಭ್ಯಗಳ ಕೊರತೆಯಿಂದಾಗಿ ವಸತಿ ಶಾಲೆಗಳು ಮಕ್ಕಳ ಪಾಲಿಗೆ ಜೈಲುಗಳಾಗಿ ಪರಿಣಮಿಸುತ್ತವೆ. ಶೌಚಾಲಯಗಳ ಕೊರತೆ, ಮಂಚಗಳ ಕೊರತೆಯೂ ಮಕ್ಕಳನ್ನು ಬಾಧಿಸುತ್ತದೆ. ಸೂಕ್ತ ನಿಗಾ ಇಲ್ಲದೆ ಹೋದಾಗ ವಸತಿ ಶಾಲೆಗಳು ಮಕ್ಕಳ ಶೋಷಣೆಯ ಕೇಂದ್ರಗಳೂ ಆಗಬಲ್ಲವು ಎನ್ನುವುದಕ್ಕೆ ಯಲುವಹಳ್ಳಿಯ ಪ್ರಕರಣವೇ ನಿದರ್ಶನ. ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿ ಪ್ರಕರಣ ದಾಖಲಿಸಿರುವುದು ಸ್ವಾಗತಾರ್ಹ. ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸುವ ಸಂವೇದನೆ ಹಾಗೂ ಇಚ್ಛಾಶಕ್ತಿಯ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು.

ದೇಶಿ ಕ್ರಿಕೆಟ್: ಅಂತಿಮ ಹಂತದಲ್ಲಿ ಎಡವುತ್ತಿರುವ ರಾಜ್ಯ ತಂಡದ ಸಮಸ್ಯೆಗಿಲ್ಲವೇ ಪರಿಹಾರ?

ಕರ್ನಾಟಕ ಕ್ರಿಕೆಟ್‌ಗೆ 'ನಾಕೌಟ್' ಗುಮ್ಮ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಇನ್ನು ಹದಿನೈದು ದಿನಗಳ ನಂತರ ರಣಜಿ ಟ್ರೋಫಿ ಕ್ರಿಕೆಟ್ ಋತು ಆರಂಭವಾಗಲಿದೆ. ಹೊಸ ವರ್ಷದಲ್ಲಿ ಕರ್ನಾಟಕ ತಂಡ ತನ್ನ ಅಭಿಮಾನಿಗಳಿಗೆ ಪ್ರಶಸ್ತಿ ಗೆಲುವಿನ ಸಿಹಿ ಹಂಚುವುದೇ ಎಂಬ ಕುತೂಹಲ ಗರಿಗೆದರಿದೆ. ಒಂದೊಮ್ಮೆ ರಾಜ್ಯ ತಂಡವು ಈ ಸಾಧನೆ ಮಾಡಿದರೆ ಅತ್ಯಂತ ಅರ್ಥಪೂರ್ಣವಾಗುವುದರಲ್ಲಿ ಸಂದೇಹವಿಲ್ಲ.

ಏಕೆಂದರೆ, ಕರ್ನಾಟಕ ತಂಡವು ಮೊದಲ ರಣಜಿ ಟ್ರೋಫಿ ಜಯಿಸಿದ ಸಾಧನೆಗೆ ಮುಂದಿನ ವರ್ಷದ ಮಾರ್ಚ್‌ನಲ್ಲಿ 50 ವರ್ಷ ತುಂಬಲಿದೆ. ಅದೇ ತಿಂಗಳು ಈ ಬಾರಿಯ ರಣಜಿ ಫೈನಲ್ ಕೂಡ ನಡೆಯಲಿದೆ. ಆದ್ದರಿಂದ ಈಗಿರುವ ತಂಡಕ್ಕೆ ಪ್ರಶಸ್ತಿ ಗೆಲ್ಲಲು ಇದಕ್ಕಿಂತ ದೊಡ್ಡ ಪ್ರೇರಣೆ ಮತ್ತೊಂದಿಲ್ಲ. ಆದರೆ ಎಂಟು ವರ್ಷಗಳಿಂದ ಆಡಿರುವ ಏಳು ರಣಜಿ ಟ್ರೋಫಿ ಟೂರ್ನಿಗಳಲ್ಲಿ ಪ್ರಶಸ್ತಿ ಸನಿಹ ಬಂದು ಎಡವಿರುವ ತಂಡದ ಆಟವನ್ನು ನೋಡಿದವರಿಗೆ ಸಣ್ಣ ಆತಂಕವೂ ಇದೆ. 'ಈ ಸಲವೂ ಕ್ವಾರ್ಟರೋ... ಸೆಮಿನಲ್ಲೋ ಮುಗ್ಗರಿಸ್ತಾರೆ ಬಿಡಿ...' ಎಂಬ ಮಾತುಗಳೂ ಕ್ರಿಕೆಟ್ ವಲಯದಲ್ಲಿ ಕೇಳಿಬರುತ್ತಿವೆ.

ಇತ್ತೀಚೆಗೆ ವಿಜಯ್ ಹಜಾರೆ ಟ್ರೋಫಿ (ಏಕದಿನ) ಟೂರ್ನಿಯಲ್ಲಿಯೂ ಸೆಮಿಫೈನಲ್‌ನಲ್ಲಿಯೇ ಮಯಂಕ್ ಅಗರವಾಲ್ ನಾಯಕತ್ವದ ಬಳಗವು ಸೋತಿತು. ಈ ಪಂದ್ಯದಲ್ಲಿ ಬೌಲರ್‌ಗಳು ರಾಜಸ್ಥಾನದ ದೀಪಕ್ ಹೂಡಾ ಅವರ ಆರ್ಭಟಕ್ಕೆ ತಡೆಯೊಡ್ಡುವಲ್ಲಿ ವಿಫಲರಾದರು. ಹಾಗೆ ನೋಡಿದರೆ, ಟೂರ್ನಿಯುದ್ದಕ್ಕೂ ಪಂದ್ಯಗಳ ಗೆಲುವಿಗೆ ಹೆಚ್ಚಿನ ಕಾಣಿಕೆ ಕೊಟ್ಟವರು ಬೌಲರ್‌ಗಳೇ. ನಾಲ್ಕರ ಘಟ್ಟದಲ್ಲಿಯೂ ಅವರ ಮೇಲೆಯೇ ಹೆಚ್ಚು ನಿರೀಕ್ಷೆ ಇತ್ತು. ಈ ಬಾರಿಯ ಸೈಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲೂ ತಂಡ ಮುಗ್ಗರಿಸಿತ್ತು.

ಈ ದೇಶಿ ಋತುವಿನಲ್ಲಿ ಕರ್ನಾಟಕಕ್ಕೆ ಸಂಭ್ರಮಿಸಲು ಅವಕಾಶ ಉಳಿದಿರುವುದು ಮುಂಬರುವ ರಣಜಿ ಟೂರ್ನಿಯಲ್ಲಿ ಮಾತ್ರ. ಆದ್ದರಿಂದ ಹಿಂದಿನ ಎಲ್ಲ ಲೋಪಗಳನ್ನೂ ಸರಿಪಡಿಸಿಕೊಂಡು ಕಿರೀಟ ಧರಿಸುವತ್ತ ಚಿತ್ತ ಹರಿಸಬೇಕಿದೆ. ತಂಡವು 2015ರಿಂದ ಈಚೆಗೆ ನಾಲ್ಕು ಬಾರಿ ಸೆಮಿಫೈನಲ್‌ನಲ್ಲಿ ಮತ್ತು ಎರಡು ಸಲ ಕ್ವಾರ್ಟರ್‌ಫೈನಲ್‌ನಲ್ಲಿ ಸೋತಿದೆ. ಒಂದು ಬಾರಿ ಗುಂಪು ಹಂತದಲ್ಲಿಯೇ ನಿರ್ಗಮಿಸಿತ್ತು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ನಾಕೌಟ್ ಹಂತದಲ್ಲಿ ಸೋಲುವ ಮುನ್ನ ಆಡಿದ ಎಲ್ಲ ಪಂದ್ಯಗಳಲ್ಲೂ ರಾಜ್ಯದ ಆಟಗಾರರ ಸಾಧನೆ ಉತ್ತಮ ಆಗಿತ್ತು. 2015ರಿಂದ 2023ರವರೆಗೂ ಆಡಿದ 58 ಪಂದ್ಯಗಳಲ್ಲಿ 28ರಲ್ಲಿ ಜಯಿಸಿದೆ. ಸೋತಿದ್ದು ಹತ್ತರಲ್ಲಿ ಮಾತ್ರ. ಉಳಿದ ಪಂದ್ಯಗಳು ಡ್ರಾ ಆಗಿವೆ.

ನಾಕೌಟ್ ಹಂತಕ್ಕೆ ತಲುಪುವ ಸಾಮರ್ಥ್ಯವಿರುವ ತಂಡಕ್ಕೆ ಆ ಸವಾಲನ್ನು ಮೀರಿ ನಿಲ್ಲಲು ಏಕೆ ಸಾಧ್ಯ ಆಗುತ್ತಿಲ್ಲ? ಈ ಹಂತದಲ್ಲಿ ಅನುಸರಿಸಬೇಕಾದ ವಿಭಿನ್ನ ತಂತ್ರಗಾರಿಕೆಯನ್ನು ಹೆಣೆಯುವಲ್ಲಿ ತರಬೇತಿ ಸಿಬ್ಬಂದಿ ಎಡವುತ್ತಿದೆಯೇ? ಸಿದ್ಧಗೊಂಡ ಯೋಜನೆಯನ್ನು ಜಾರಿಗೆ ತರುವಲ್ಲಿ ನಾಯಕ ಮತ್ತು ಆಟಗಾರರು ಯಶಸ್ವಿಯಾಗುತ್ತಿಲ್ಲವೇ? ತಂಡದಲ್ಲಿ ಸಮನ್ವಯತೆಯ ಕೊರತೆ ಇದೆಯೇ? ಆಯ್ಕೆ ಪ್ರಕ್ರಿಯೆ ಮತ್ತು ಪ್ರತಿಭಾಶೋಧದಲ್ಲಿ ಲೋಪಗಳಿವೆಯೇ? ಒಂದೇ ತರಹದ ಲೋಪ ಮರುಕಳಿಸುತ್ತಿರುವುದರ ಹಿಂದೆ ಮಾನಸಿಕ ದೃಢತೆಯ ಕೊರತೆ ಇದೆಯೇ? ಈ ಸಮಸ್ಯೆಗಳನ್ನು ಮೀರಿ ನಿಲ್ಲುವಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚಿಂತಕರ ಚಾವಡಿ ಏನು ಕ್ರಮಗಳನ್ನು ಕೈಗೊಂಡಿದೆ ಎಂಬ ಪ್ರಶ್ನೆಗಳು ಮೂಡುತ್ತವೆ.

'ಕ್ರಿಕೆಟ್ ಆಟವೇ ಹಾಗೆ. ಚೆನ್ನಾಗಿ ಆಡುವುದರ ಜೊತೆಗೆ ಅದೃಷ್ಟವೂ ಇರಬೇಕು. ಎಲ್ಲ ರೀತಿಯಿಂದಲೂ ತಂಡ ಚೆನ್ನಾಗಿದೆ. ಯಾವುದೇ ಕೊರತೆ ಇಲ್ಲ. ಸೋಲುಗಳ ಹಿಂದಿನ ಕಾರಣಗಳನ್ನು ಸರಿಪಡಿಸಲು ಆಯ್ಕೆ ಸಮಿತಿ ಕ್ರಮ ಕೈಗೊಳ್ಳಲಿದೆ. ಅದಕ್ಕೆ ಬೇಕಾದ ಪರಿಣತರು ಇದ್ದಾರೆ. ಅಂತಿಮವಾಗಿ ಇದು ಕ್ರಿಕೆಟ್. ಪಂದ್ಯದ ಕೊನೆಯವರೆಗೂ ಏನೂ ಹೇಳಲಾಗದು. ನಮಗಿಂತಲೂ ಚೆನ್ನಾಗಿ ಆಡಿದವರು ಗೆಲ್ಲುತ್ತಾರೆ. ಬೇರೆ ಯಾವುದೇ ತೊಂದರೆ ಇಲ್ಲ' ಎಂದು ಎಲ್ಲ ಪ್ರಶ್ನೆಗಳಿಗೂ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ತೆರೆ ಎಳೆಯುತ್ತಾರೆ.

ತಂಡದಲ್ಲಿ ಪ್ರತಿಭಾವಂತರು ಇದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಾಲಕಾಲಕ್ಕೆ ಕೆಲವು ಪ್ರಯೋಗಗಳು ನಡೆದಿರುವುದೂ ಹೌದು. ಆದರೆ ನಿರೀಕ್ಷಿತ ಫಲಿತಾಂಶ ಮಾತ್ರ ದೊರೆತಿಲ್ಲವೆಂಬುದೂ ಸತ್ಯ.

2015ರಿಂದ ಈಚೆಗೆ ತಂಡವು ನಾಯಕತ್ವದಲ್ಲಿ ಬದಲಾವಣೆ ಕಂಡಿದೆ. ವಿನಯ್ ನಂತರ ಕೆಲಕಾಲ ಕರುಣ್ ನಾಯರ್, ಆರ್. ಸಮರ್ಥ್ ನಾಯಕರಾಗಿದ್ದರು. ನಂತರ ಮನೀಷ್ ಪಾಂಡೆ ಒಂದೆರಡು ಋತು ಮತ್ತು ಎರಡು ವರ್ಷಗಳಿಂದ ಮಯಂಕ್ ಅಗರವಾಲ್ ನಾಯಕರಾಗಿದ್ದಾರೆ. ತರಬೇತುದಾರರು ಮತ್ತು ನೆರವು ಸಿಬ್ಬಂದಿಯು ಎರಡು ಸಲ ಬದಲಾಗಿದ್ದಾರೆ. ಕೆ.ಎಲ್. ರಾಹುಲ್ ಹಾಗೂ ಪ್ರಸಿದ್ಧಕೃಷ್ಣ ಅವರು ಭಾರತ ತಂಡದಲ್ಲಿ ಆಡುತ್ತಿರುವುದರಿಂದ ಇಲ್ಲಿ ಕೆಲವು ಯುವ ಆಟಗಾರರಿಗೆ ಅವಕಾಶಗಳೂ ಸಿಗುತ್ತಿವೆ.

ಕರ್ನಾಟಕದಲ್ಲಿ ಮೊದಲಿನಿಂದಲೂ ಇರುವ ವೇಗಿಗಳ ಪರಂಪರೆಯನ್ನು ವಿದ್ವತ್, ವೈಶಾಖ ವಿಜಯಕುಮಾರ್ ಮತ್ತು ವಿ. ಕೌಶಿಕ್ ಅವರು ಮುಂದುವರಿಸಿದ್ದಾರೆನ್ನುವುದು ಸಮಾಧಾನಕರ. ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ದೊಡ್ಡಗಣೇಶ್, ಡೇವಿಡ್ ಜಾನ್ಸನ್, ವಿನಯಕುಮಾರ್, ಅಭಿಮನ್ಯು ಮಿಥುನ್, ಶ್ರೀನಾಥ್ ಅರವಿಂದ್ ತೋರಿಸಿಕೊಟ್ಟ ಹಾದಿಯಲ್ಲಿ ಈಗಿನ ಮೂವರೂ ಇದ್ದಾರೆ.

ಆದರೆ, ರಾಜ್ಯದ ಪ್ರಮುಖ 'ಬ್ರ್ಯಾಂಡ್' ಆಗಿರುವ ಸ್ಪಿನ್ ವಿಭಾಗದಲ್ಲಿ ಮಾತ್ರ ಗಟ್ಟಿತನ ಕಂಡುಬರುತ್ತಿಲ್ಲ. ಬಿ.ಎಸ್. ಚಂದ್ರಶೇಖರ್, ಪ್ರಸನ್ನ, ರಘುರಾಮ್ ಭಟ್, ಸುನಿಲ್ ಜೋಶಿ, ಬಿ. ವಿಜಯಕೃಷ್ಣ, ಆನಂದ್ ಕಟ್ಟಿ ಮತ್ತು ಆರ್. ಅನಂತ್ ಅವರಂತಹ ಪಂದ್ಯ ಗೆಲ್ಲಿಸಿಕೊಡಬಲ್ಲ ಸ್ಪಿನ್ನರ್‌ಗಳ ಕೊರತೆ ಎದ್ದುಕಾಣುತ್ತಿದೆ.

ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಈಗ ಕರ್ನಾಟಕ ತೊರೆದಿದ್ದಾರೆ. ಕೆ. ಗೌತಮ್ ಆಲ್‌ರೌಂಡ್ ಆಟಗಾರನಾಗುವ ಒತ್ತಡದಲ್ಲಿ ತಮ್ಮ ಆಫ್‌ಸ್ಪಿನ್ ಅಸ್ತ್ರಗಳಿಗೆ ಸಾಣೆ ಹಿಡಿಯುತ್ತಿಲ್ಲವೆಂಬ ಟೀಕೆಗಳಿಗೆ ಗುರಿಯಾಗುತ್ತಿದ್ದಾರೆ. ಹೊಸ ಸ್ಪಿನ್ ಬೌಲರ್‌ಗಳಿಗೆ ಅನುಭವದ ಕೊರತೆ ಇದೆ. ಬ್ಯಾಟಿಂಗ್ ವಿಭಾಗದಲ್ಲಿಯೂ ಸ್ಥಿರತೆಯ ಕೊರತೆ ಇದೆ. ಆರಂಭಿಕ ಪಂದ್ಯಗಳಲ್ಲಿ ಮಿಂಚುವ ಅನುಭವಿಗಳು ನಾಕೌಟ್ ಹಂತದಲ್ಲಿ ಎಡವುತ್ತಿದ್ದಾರೆ. ನಿಕಿನ್ ಜೋಸ್, ದೇವದತ್ತ ಪಡಿಕ್ಕಲ್, ಮನೀಷ್ ಪಾಂಡೆ ಅವರ ಮೇಲೆಯೇ ಹೆಚ್ಚು ಅವಲಂಬಿತವಾಗಬೇಕಿದೆ. ವಿಕೆಟ್‌ಕೀಪಿಂಗ್‌ನಲ್ಲಿಯೂ ಕೊರಗು ನೀಗಿಲ್ಲ.

ವಿನಯ್ ನಾಯಕತ್ವದಲ್ಲಿ ಎರಡು ಬಾರಿ ಪ್ರಶಸ್ತಿ ಗೆದ್ದ ತಂಡದಲ್ಲಿದ್ದ ಕೆಲವು ಆಟಗಾರರು ಈಗಲೂ ಇದ್ದಾರೆ. ಅವರ ಅನುಭವ ಇಲ್ಲಿ ಅಮೂಲ್ಯ. ತಮ್ಮ ಮುಂದಿನ ಪೀಳಿಗೆಗೆ ಮಾದರಿಯನ್ನು ಹಾಕಿಕೊಟ್ಟು ಹೋಗುವ ಹೊಣೆ ಅವರ ಮೇಲಿದೆ. ನಾಕೌಟ್ ಹಂತದಲ್ಲಿ ಗೆದ್ದ ಅನುಭವವನ್ನು ಇಲ್ಲಿ ಧಾರೆಯೆರೆಯುವ ಕಾರ್ಯ ಅವರಿಂದ ಆಗಬೇಕಿದೆ.

ಭಾರತ ತಂಡದಲ್ಲಿ ಸ್ಥಾನ ಪಡೆಯುವುದು ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫ್ರ್ಯಾಂಚೈಸಿಗಳ ಗಮನ ಸೆಳೆದು ಕೋಟಿ ಕೋಟಿ ಹಣ ಗಳಿಸುವುದು ಇಂದಿನ ಯುವ ಕ್ರಿಕೆಟಿಗರ ಮುಂದಿರುವ ಪ್ರಮುಖ ಗುರಿಗಳು. ಅದರಲ್ಲಿ ಐಪಿಎಲ್ ಆಕರ್ಷಣೆ ಒಂದು ಹೆಜ್ಜೆ ಮುಂದಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಈ ಗುರಿ ಸಾಧನೆಗಾಗಿ ಹಲವಾರು ಯುವ ಪ್ರತಿಭೆಗಳು ಶಕ್ತಿಮೀರಿ ಶ್ರಮಿಸುತ್ತಿವೆ. ಆದ್ದರಿಂದ ಸ್ಪರ್ಧೆ ಮುಗಿಲುಮುಟ್ಟಿದೆ. ಇಂತಹ ಕಠಿಣ ಪೈಪೋಟಿಯನ್ನು ಮೀರಿ ನಿಲ್ಲಲು ಕರ್ನಾಟಕದ ಕ್ರಿಕೆಟ್‌ಗೆ ಭವ್ಯ ಇತಿಹಾಸದ ಬಲವೂ ಇದೆ. ಭವಿಷ್ಯದಲ್ಲಿ ದೊಡ್ಡ ಕ್ರಿಕೆಟ್ ಶಕ್ತಿಯಾಗಿ ಬೆಳೆಯುವ ಅವಕಾಶವೂ ಇದೆ.

ಅದಕ್ಕಾಗಿ ದೇಶಿ ಕ್ರಿಕೆಟ್ ಟೂರ್ನಿಗಳನ್ನು ಏಣಿಯಾಗಿ ಬಳಸಿಕೊಳ್ಳುವ ಜಾಣ್ಮೆ ತೋರಬೇಕು. ತಮ್ಮ ರಾಜ್ಯ ತಂಡಕ್ಕೆ ಪ್ರಶಸ್ತಿ ಕಾಣಿಕೆ ನೀಡಿದಾಗಲೇ ಎಲ್ಲರ ಗಮನ ಸೆಳೆಯಲು ಸಾಧ್ಯವಾಗುತ್ತದೆಂಬುದನ್ನು ಅರಿಯಬೇಕು. ಸೌರಾಷ್ಟ್ರದ ಜಯದೇವ್ ಉನದ್ಕತ್ ಅವರು 12 ವರ್ಷಗಳ ನಂತರ ಭಾರತ ತಂಡಕ್ಕೆ ಮರಳಲು ಸಾಧ್ಯವಾಗಿದ್ದು ದೇಶಿ ಕ್ರಿಕೆಟ್ ಸಾಧನೆಯಿಂದಲೇ ಅಲ್ಲವೆ?

ಅಷ್ಟೇ ಅಲ್ಲ, ಕನ್ನಡ ನಾಡಿನಿಂದ ವಿಶ್ವದರ್ಜೆಯ ಕ್ರಿಕೆಟಿಗರಾಗಿ ಬೆಳೆದ ಬಹುತೇಕ ಎಲ್ಲರಿಗೂ ಮೂಲ ನೆಲೆಯಾಗಿದ್ದು ದೇಶಿ ಕ್ರಿಕೆಟ್‌ನ ಯಶಸ್ಸು ಎನ್ನುವ ಅರಿವು ಈಗಿನ ಪೀಳಿಗೆಗೆ ಮುಟ್ಟಿಸುವ ಕಾರ್ಯವಾದರೆ ಚಿತ್ರಣ ಬದಲಾಗುವುದರಲ್ಲಿ ಸಂದೇಹವಿಲ್ಲ.

ಚುರುಮುರಿ

ಪೇಸ್ಟ್ ಕಲಹ!

• ತುರುವೇಕೆರೆ ಪ್ರಸಾದ್

'ರೀ ವಿಷಯ ಗೊತ್ತಾಯ್ತಾ? ಗಂಡ ಹೆಂಡತಿ ಇಬ್ರೂ ಹಲ್ಲುಜ್ಜೋ ಪೇಸ್ಟ್ ವಿಷಯಕ್ಕೆ ಜಗಳ ಆಡ್ಕೊಂಡು ಡೈವೋರ್ಸ್‌ಗೆ ಹಾಕಿದ್ರಂತೆ' ಪದ್ದಮ್ಮ ಪೀಠಿಕೆ ಹಾಕಿದರು.

'ಅಯ್ಯೋ, ಇದೇನ್ ಮಹಾ ಬಿಡೇ! ಗಂಡ ಹಲ್ಲೇ ಉಜ್ಜಲ್ಲ ಅಂತ ಒಬ್ಬಾಕೆ ವಿಚ್ಛೇದನ ಕೇಳಿದ್ಲಂತೆ' ಫ್ಲ್ಯಾಷ್‌ಬ್ಯಾಕ್‌ಗೆ ಹೋದ ಪರ್ಮೇಶಿ.

'ಮತ್ತೆ ಬಿಡ್ತಾರಾ? ಹಲ್ ಇರೋತನಕ, ಹೆಂಡತಿ ಉದುರಿಸೋತನಕ ಉಜ್ಜಲೇಬೇಕು. ಉಜ್ಜಲ್ಲ ಅಂದ್ರೆ ಹೇಗೆ? ಇದು ಹಾಗಲ್ಲ, ಒಂಥರಾ ವಿಚಿತ್ರ ಕೇಸು. ಗಂಡ ಪೇಸ್ಟ್ ಟ್ಯೂಬ್ ಕೆಳಗಿನಿಂದ ಹಿಸುಕ್ತಾನೆ ಅಂತ ಹೆಂಡ್ತಿ, ಹೆಂಡ್ತಿ ಟ್ಯೂಬ್‌ನ ಕುತ್ತಿಗೆ ಹಿಸುಕ್ತಾಳೆ ಅಂತ ಗಂಡ ಒಬ್ರಿಗೊಬ್ರು ಕಿತ್ತಾಡ್ಕೊಂಡು ಕಟಕಟೇಲಿ ಹೋಗಿ ನಿಂತಿದಾರೆ'.

'ಆದರೆ ಪೇಸ್ಟ್ ಟ್ಯೂಬ್‌ನ ಕೆಳಗಿಂದ ಹಿಸುಕೋದೇ ನ್ಯಾಯ ತಾನೆ?'

'ಅದು ಹೇಗ್ರೀ ನ್ಯಾಯ ಆಗುತ್ತೆ? ಕೆಳಗಿಂದ ಒತ್ತುದ್ರೆ ಪೇಸ್ಟೆಲ್ಲಾ ಸೊಯ್ ಅಂತ ಈಚೆ ಬಂದು ವೇಸ್ಟ್ ಆಗಲ್ವಾ?'

'ಹಾಗಂತ, ಮದುವೆ ಆದಾಗಿಂದ ಕುತ್ತಿಗೆ ಹಿಸುಕಿ ಅಭ್ಯಾಸ ಅಂತ ಅದನ್ನೇ ಗಂಡನ ಮೇಲೂ ಹೇರುದ್ರೆ ಹೇಗೆ? ಅದಕ್ಕೆ ಈ ಪೇಸ್ಟಿನ ತಂಟೆನೇ ಬೇಡ ಅಂತ ದೇಸೀ ಪದ್ಧತೀಲಿ ಮಾವಿನ ಕಡ್ಡಿಲೋ ಬೇವಿನ ಕಡ್ಡಿಲೋ ಉಜ್ಜಿಕೊಳ್ಳೋದೇ ಸರಿ'.

'ರೀ, ನೀವು ವಿಷಯಾಂತರ ಮಾಡಬೇಡಿ. ಕಡ್ಡಿ ಗುಡ್ಡ ಮಾಡೋ ಗಂಡ ಇದ್ರೆ ಯಾವ ಕಡ್ಡೀಲಿ ಉಜ್ಜುದ್ರೂ ಪ್ರಯೋಜನ ಇಲ್ಲ'.

'ನೋಡೇ, ವ್ಯವಸ್ಥೇನೇ ಒಂದು ಟೂತ್‌ಪೇಸ್ಟ್ ಟ್ಯೂಬ್ ಇದ್ದ ಹಾಗೆ. ಕಾಲ್ ಒತ್ತಿ ಕಿತ್ಕೊಬೇಕು, ಹೊಟ್ಟೆ ಒತ್ತಿ ಕಕ್ಕುಸ್ಬೇಕು. ಸರಿ, ಈ ದಂಪತಿ ಜಗಳಕ್ಕೆ ಏನು ಪರಿಹಾರ ಸಿಕ್ತಂತೆ?'.

'ಬೇರೆ ಬೇರೆ ಟೂತ್‌ಪೇಸ್ಟ್ ಟ್ಯೂಬ್ ಬಳಸಿ ಅಂತ ಇಬ್ರೂ ನ್ಯಾಯಾಧೀಶರು ಹೇಳಿದಾರಂತೆ'.

'ಹಾಗೂ ಜಗಳ ಆಡುದ್ರೆ ಇಬ್ರಿಗೂ ಒಂದೊಂದು ಫೆವಿಕಾಲ್ ಟ್ಯೂಬ್ ಬಳಸಿ ಅಂತ ಹೇಳ್ಬೇಕು. ಅವಾಗ ಬಾಯ್ ಮುಚ್ಕೊಂಡಿರ್ತಾರೆ' ಎಂದು ನಕ್ಕ ಪರ್ಮೇಶಿ. ಪದ್ದಮ್ಮ ಮುಖ ಊದಿಸಿಕೊಂಡರು.

ದಿನದ ಟ್ವೀಟ್

ನಮಗೆ ಸಾಧ್ಯವಾಗಲಿಲ್ಲವೇಕೆ?

ದಾವೂದ್ ಇಬ್ರಾಹಿಂ 'ಸಾವಿನ' ಕುರಿತ ಕತೆಯು ಹುಡುಗನೊಬ್ಬ ತೋಳ ಬಂತು ತೋಳ ಎಂದು ಹೇಳಿದ ಕತೆಯಂತೆಯೇ ಇದೆ. ಆತನನ್ನು ಈಗಾಗಲೇ ನಾವು ಹಲವು ಬಾರಿ ಸಾಯಿಸಿದ್ದೇವೆ: ಏಡ್ಸ್, ಟೈಫಾಯಿಡ್, ಕೋವಿಡ್... ಹೀಗಾಗಿ ಯಾವುದನ್ನು ನಂಬಬೇಕು ಅಥವಾ ನಂಬಬಾರದು ಎಂದು ನಮಗೆ ಗೊತ್ತಾಗುತ್ತಿಲ್ಲ. ಆತ ಪಾಕಿಸ್ತಾನದಲ್ಲಿ ವಾಸಿಸುತ್ತಿದ್ದಾನೆ ಎಂಬುದನ್ನು ಒಪ್ಪಿಕೊಳ್ಳುವುದಕ್ಕೇ ಸಿದ್ಧವಿಲ್ಲದ ಆ ದೇಶವು ವಿಷಯವನ್ನು ಖಚಿತಪಡಿಸುವುದಿಲ್ಲ. ಸೂಕ್ತ ದಾಖಲೆಗಳಿಲ್ಲದೆ ಭಾರತದ ಸಂಸ್ಥೆಗಳು ಸಹ ಅದನ್ನು ಸ್ಪಷ್ಟಪಡಿಸುವುದಿಲ್ಲ. ನಿಜವಾಗಿ ಕೇಳಬೇಕಾದ ಪ್ರಶ್ನೆ: ಆತನ ಚಲನವಲನದ ಬಗೆಗಿನ ಎಲ್ಲ ಮಾಹಿತಿಗಳನ್ನು ನಾವು ಹೊಂದಿದ್ದರೂ ಈ 30 ವರ್ಷಗಳಲ್ಲಿ ಅವನನ್ನು ಭಾರತಕ್ಕೆ ಕರೆತರುವುದಕ್ಕಾಗಲೀ 'ಮುಗಿಸಿಹಾಕುವುದಕ್ಕಾಗಲೀ' ನಮಗೆ ಸಾಧ್ಯವಾಗಲಿಲ್ಲವೇಕೆ? ಈ ಅವಧಿಯಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ 13 ವರ್ಷ, ಬಿಜೆಪಿ ನೇತೃತ್ವದ ಸರ್ಕಾರ 15 ವರ್ಷ, ಕಾಂಗ್ರೆಸ್ಸೇತರ ಹಾಗೂ ಬಿಜೆಪಿಯೇತರ ಪಕ್ಷಗಳು 2 ವರ್ಷ ದೆಹಲಿಯಲ್ಲಿ ಆಡಳಿತ ನಡೆಸಿವೆ. ಯೋಚಿಸಿ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಸಂಸತ್ತಿನ ಭದ್ರತಾ ಲೋಪವು ಮೋದಿ ಅವರಿಗೆ, 'ಸಂದರ್ಶನ'ವೊಂದರಲ್ಲಿ ಅದರ ಬಗ್ಗೆ ಮಾತನಾಡುವಷ್ಟು ಗಂಭೀರ ವಿಚಾರ. ಆದರೆ ಮೋದಿ ಅವರಾಗಲೀ, ಅಮಿತ್ ಶಾ ಅವರಾಗಲೀ, ಈ ವಿಚಾರವನ್ನು ತಾವು ಸಂಸತ್ತಿನಲ್ಲಿ ಇದರ ಬಗ್ಗೆ ಮಾತನಾಡಬೇಕಿರುವಷ್ಟು ಗಂಭೀರ ಎಂದು ಭಾವಿಸಿಲ್ಲ.

ಸಿದ್ಧಾರ್ಥ್ ವರದರಾಜನ್, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 19-12-1998

• ಇರಾಕ್ ವಿರುದ್ಧ ನಿಲ್ಲದ ದಾಳಿ, ರಷ್ಯಾ ರಾಯಭಾರಿ ಹಿಂದಕ್ಕೆ

ಬಾಗ್ದಾದ್, ಡಿ. 18 (ಪಿಟಿಐ, ಎಪಿ)– ಇರಾಕ್ ವಿರುದ್ಧ ಅಮೆರಿಕ ಮತ್ತು ಬ್ರಿಟನ್ನಿನ ಜಂಟಿ ದಾಳಿ ಎರಡನೇ ದಿನವಾದ ಇಂದೂ ಮುಂದುವರೆದಿದ್ದರಿಂದ ಕ್ಷಿಪಣಿ ಹಾಗೂ ಬಾಂಬ್ ಸ್ಫೋಟಗಳ ಸದ್ದು ರಾಜಧಾನಿ ಬಾಗ್ದಾದನ್ನು ಆವರಿಸಿತ್ತು.

ಆದರೆ, ಸಾವು, ನೋವಿನ ಬಗ್ಗೆ ಈವರೆಗೆ ಖಚಿತವಾಗಿ ತಿಳಿದುಬಂದಿಲ್ಲ. ಎರಡನೇ ದಾಳಿಯಲ್ಲಿ ಕನಿಷ್ಠ 25 ಜನರು ಮೃತಪಟ್ಟಿದ್ದು, 75 ಜನರು ಗಾಯಗೊಂಡಿದ್ದಾರೆ ಎಂದು ಇರಾಕಿನ ಆರೋಗ್ಯ ಸಚಿವ ಒಮೇದ್ ಮೆಹ್ವತ್ ಮುಬಾರಕ್ ತಿಳಿಸಿದ್ದಾರೆ.

• ಅಂಚೆಯಲ್ಲಿ ಬಂದ ಸ್ಫೋಟ ಸಿಡಿದು 9 ಜನರಿಗೆ ಗಾಯ

ಹೈದರಾಬಾದ್, ಡಿ. 18 (ಪಿಟಿಐ)– ಪಾರ್ಸೆಲ್ ರೂಪದಲ್ಲಿ ಬಂದ ಅಂಚೆಯನ್ನು ತೆರೆದಾಗ ಬಾಂಬ್ ಸ್ಫೋಟಗೊಂಡ ನಾಲ್ಕು ಪ್ರತ್ಯೇಕ ಘಟನೆಗಳಲ್ಲಿ ನಾಲ್ಕು ಮಂದಿ ಗಾಯಗೊಂಡ ವರದಿ ಬಂದಿದೆ.

ಹೈದರಾಬಾದಿನ ಜನನಿಬಿಡ ಚಿಕ್ಕಪಲ್ಲಿಯಲ್ಲಿ ವಾಸಿಸುವ ಒಬ್ಬ ಅಂಚೆ ಪೇದೆ ಮತ್ತು ಹಣಕಾಸು ವ್ಯವಹಾರ ನಡೆಸುತ್ತಿದ್ದ ವ್ಯಕ್ತಿಯೊಬ್ಬರಿಗೆ ಬಂದ ಅಂಚೆ ಪಾರ್ಸೆಲ್ ತೆರೆದಾಗ ಈ ಘಟನೆ ನಡೆದಿದೆ.

50 ವರ್ಷಗಳ ಹಿಂದೆ

ಬುಧವಾರ, 19-12-1973

• ಅರಸು ಮಂತ್ರಿಮಂಡಲದ ಎರಡನೇ ಕಂತು: ಸಚಿವರಾಗಿ ಎನ್. ರಾಚಯ್ಯ, ಯಾಹ್ಯಾ, ಸಿ.ಎನ್. ಪಾಟೀಲ್

ಬೆಂಗಳೂರು, ಡಿ.18– ಅರಸು ಅವರ ಮಂತ್ರಿಮಂಡಲ ಪುನರ್ ರಚನೆಯಾಗಿದ್ದು, ಈಗಾಗಲೇ ಪ್ರಕಟವಾಗಿರುವ ಸಚಿವರು ಮತ್ತು ರಾಜ್ಯ ಸಚಿವರ ಜೊತೆಗೆ ವಿಧಾನ ಪರಿಷತ್ತಿನ ಸದಸ್ಯ ಎನ್. ರಾಚಯ್ಯ, ಭಟ್ಕಳ ಕ್ಷೇತ್ರದ ವಿಧಾನಸಭಾ ಸದಸ್ಯ ಎಸ್.ಎಂ. ಯಾಹ್ಯಾ ಹಾಗೂ ರಾಯಚೂರು ಜಿಲ್ಲೆಯ ಚಂದ್ರಶೇಖರ ನಾಗನಗೌಡ ಪಾಟೀಲ್ ಅವರು ಬುಧವಾರ ಬೆಳಿಗ್ಗೆ ಸಚಿವರುಗಳಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಮಂತ್ರಿಮಂಡಲದ ಪುನರ್ ರಚನೆಯ ಎರಡನೇ ಹಂತದಲ್ಲಿ ಹೊಸದಾಗಿ ರಾಜ್ಯ ಸಚಿವರನ್ನು ನೇಮಿಸುವ ಬಗ್ಗೆ ಮುಖ್ಯಮಂತ್ರಿ ಅರಸು ಅವರು ನಿರ್ಧಾರ ಕೈಗೊಂಡಿಲ್ಲ.

ಹೊಸ ರಾಜ್ಯ ಸಚಿವರುಗಳ ಬಗ್ಗೆ ಮುಖ್ಯಮಂತ್ರಿಗಳು ಇನ್ನು 8-10 ದಿನಗಳಲ್ಲಿ ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ. ಅರಸು ಅವರು ರಾಜ್ಯಪಾಲರನ್ನು ಭೇಟಿ ಮಾಡಿ, ಈ ಕುರಿತು ಚರ್ಚೆ ನಡೆಸಿದರು.

ಚರ್ಚೆ

ಲಯ ತಪ್ಪಿದ ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯಗಳನ್ನು ಆವರಿಸಿರುವ ಜಡತ್ವ ನಿವಾರಣೆಗೆ ತುರ್ತು ಕ್ರಮ ಅಗತ್ಯ. ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟ ಎತ್ತರಿಸಬೇಕಿದೆ

• ರಾಜಕುಮಾರ ಕುಲಕರ್ಣಿ

'ಪ್ರಪಾತಕ್ಕೆ ಸರ್ಕಾರಿ ವಿ.ವಿಗಳು' ಎಂಬ ವಿಶೇಷ ವರದಿ (ಪ್ರ.ವಾ., ಒಳನೋಟ, ಡಿ.10)ರಾಜ್ಯದ ವಿಶ್ವವಿದ್ಯಾಲಯಗಳ ದುಃಸ್ಥಿತಿಗೆ ಕನ್ನಡಿ ಹಿಡಿದಂತಿದೆ. ಅನುದಾನದ ಕೊರತೆ, ಹಣಕಾಸಿನ ದುರ್ಬಳಕೆ, ಸರ್ಕಾರದ ಹಸ್ತಕ್ಷೇಪದಂತಹ ಸಮಸ್ಯೆಗಳು ವಿಶ್ವವಿದ್ಯಾಲಯಗಳನ್ನು ಪ್ರಪಾತಕ್ಕೆ ತಳ್ಳಿವೆ. ಇಂಥ ಸನ್ನಿವೇಶದಲ್ಲಿ ಗುಣಮಟ್ಟದ ಸಂಶೋಧನೆ ಮತ್ತು ದಕ್ಷ, ಪ್ರಾಮಾಣಿಕ, ಸಾಮಾಜಿಕ ಕಾಳಜಿಯುಳ್ಳ ಭವಿಷ್ಯದ ನೇತಾರರನ್ನು ರೂಪಿಸುವಂತಹ ಮಹತ್ವದ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಗಳು ನಿರ್ವಹಿಸುವುದಾದರೂ ಹೇಗೆ?

ಈ ಎರಡು ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ವಿಶ್ವವಿದ್ಯಾಲಯ ಸಹಜವಾಗಿಯೇ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಛಾಪು ಮೂಡಿಸುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಶ್ರೇಷ್ಠ ಎಂದು ಆಯ್ಕೆಯಾಗುವ ಬಹುತೇಕ ವಿಶ್ವವಿದ್ಯಾಲಯಗಳು ಸಂಶೋಧನೆ ಮತ್ತು ಭವಿಷ್ಯದ ನೇತಾರರ ತಯಾರಿಗೆ ಹೆಚ್ಚು ಒತ್ತು ಕೊಡುವುದನ್ನು ಕಾಣಬಹುದು.

ನಾನು ಸ್ನಾತಕೋತ್ತರ ಪದವಿ ಪಡೆದ ವಿಶ್ವವಿದ್ಯಾಲಯದ ವಿಭಾಗಕ್ಕೆ ಕೆಲವು ದಿನಗಳ ಹಿಂದೆ ಭೇಟಿ ನೀಡುವ ಸಂದರ್ಭ ಎದುರಾಯಿತು. ಒಂದು ಕಾಲದಲ್ಲಿ ಏಳೆಂಟು ಜನ ಪೂರ್ಣಕಾಲಿಕ ಬೋಧಕರನ್ನು ಒಳಗೊಂಡಿದ್ದ ವಿಭಾಗದಲ್ಲಿ ಇಂದು ಪೂರ್ಣಕಾಲಿಕ ಬೋಧಕರೇ ಇಲ್ಲ. ಅರೆಕಾಲಿಕ ಉಪನ್ಯಾಸಕರಿಂದ ಸ್ನಾತಕೋತ್ತರ ಕೋರ್ಸಿನ ಎರಡು ತರಗತಿಗಳ ಪಾಠ ಪ್ರವಚನ ನಿರ್ವಹಿಸಬೇಕಾದ ಸನ್ನಿವೇಶ ಎದುರಾಗಿದೆ. ಪೂರ್ಣಕಾಲಿಕ ಬೋಧಕರಿಲ್ಲದ ಕಾರಣ, ಸಂಶೋಧನೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆ.

ಇದು ಬರೀ ಒಂದು ವಿಶ್ವವಿದ್ಯಾಲಯದ ಚಿತ್ರಣವಲ್ಲ. ರಾಜ್ಯದ ಬಹಳಷ್ಟು ವಿಶ್ವವಿದ್ಯಾಲಯಗಳು ಇಂದು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊರತೆಯನ್ನು ಎದುರಿಸುತ್ತಿವೆ. ವಿಶ್ವವಿದ್ಯಾಲಯಗಳ ಸಿಬ್ಬಂದಿಗೆ ನಿಯಮಿತವಾಗಿ ವೇತನ ಪಾವತಿಯಾಗುತ್ತಿಲ್ಲ ಎನ್ನುವ ದೂರು ಸಾಮಾನ್ಯವಾಗಿದೆ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳಲ್ಲಿನ ಸಮಸ್ಯೆಗಳೇ ಬೆಟ್ಟದಷ್ಟಿರುವಾಗ ಇನ್ನು ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸಲು ಹೊರಡುವುದು ಆತುರದ ನಿರ್ಧಾರವಾಗುತ್ತದೆ.

ವೃತ್ತಿಪರ ಕೋರ್ಸುಗಳಿಗೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯುತ್ತಿರುವುದರಿಂದ ವಿಜ್ಞಾನ ಮತ್ತು ಸಮಾಜವಿಜ್ಞಾನ ಕೋರ್ಸುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸುವುದು ವಿವೇಚನೆಯ ನಡೆಯಲ್ಲ. ಅದರ ಬದಲು, ಈಗ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳನ್ನು ಬಲಪಡಿಸಬೇಕಾದದ್ದು ಅಗತ್ಯ. ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ ಸದ್ಯಕ್ಕಿಲ್ಲ ಎಂದಿರುವ ಉನ್ನತ ಶಿಕ್ಷಣ ಸಚಿವರ ನಿರ್ಧಾರ ಸ್ವಾಗತಾರ್ಹ.

ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನೆಯಲ್ಲಿ ಗುಣಮಟ್ಟದ ಕೊರತೆ ಎದ್ದು ಕಾಣುತ್ತಿದೆ. ರಾಷ್ಟ್ರೀಯ ವೈದ್ಯಕೀಯ ಆಯೋಗ ಇತ್ತೀಚೆಗೆ ಸ್ನಾತಕೋತ್ತರ ಸಂಶೋಧನಾ ಪ್ರಬಂಧದ ಬರವಣಿಗೆ ಸಂಬಂಧಿತ ಶೀರ್ಷಿಕೆಗಳ ಪಟ್ಟಿಯನ್ನು ತಯಾರಿಸಿದೆ. 24 ವೈದ್ಯಕೀಯ ವಿಷಯಗಳಿಗೆ ಸಂಬಂಧಿಸಿದ ಸುಮಾರು 1,400ಕ್ಕಿಂತ ಹೆಚ್ಚು ಶೀರ್ಷಿಕೆಗಳು ಈ ಪಟ್ಟಿಯಲ್ಲಿವೆ. ಪ್ರಸ್ತುತ ವೈದ್ಯಕೀಯ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿರುವ ಸಂಶೋಧನಾ ಶೀರ್ಷಿಕೆಗಳು ಗುಣಮಟ್ಟದವಾಗಿಲ್ಲ ಎನ್ನುವ ಕಾರಣದಿಂದ ಆಯೋಗವೇ ಈ ಕಾರ್ಯಕ್ಕೆ ಮುಂದಾಗಿದೆ. ಈ ಮಾತು ವೈದ್ಯಕೀಯ ಕ್ಷೇತ್ರದಲ್ಲಿನ ಸಂಶೋಧನೆಗೆ ಮಾತ್ರವಲ್ಲ ಎಲ್ಲ ವಿಷಯಗಳಿಗೂ ಅನ್ವಯಿಸುತ್ತದೆ. ಒಟ್ಟಾರೆ ವೇತನ ಬಡ್ತಿ ಮತ್ತು ಉದ್ಯೋಗ ಬಡ್ತಿಯು ಸಂಶೋಧನೆಯ ಮೊದಲ ಆದ್ಯತೆಯಾಗಿವೆ. ಡಾಕ್ಟರೇಟ್ ಪದವಿ ಪಡೆದವರು ಮತ್ತೆ ಸಂಶೋಧನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ವಿರಳ.

ಸಂವಾದ, ಚರ್ಚೆ, ಗೋಷ್ಠಿಗಳಿಗೆ ಮುಕ್ತ ವೇದಿಕೆಯಾಗಬೇಕಾದ ವಿಶ್ವವಿದ್ಯಾಲಯಗಳು ಆಳುವ ಸರ್ಕಾರಗಳ ಕೈಗೊಂಬೆಗಳಂತೆ ವರ್ತಿಸುತ್ತಾ, ಆಡಳಿತಾರೂಢರ ಮುಖಸ್ತುತಿಗೆ ಸೀಮಿತವಾಗುತ್ತಿವೆ. ಕಾಲಕಾಲಕ್ಕೆ ಆಡಳಿತದ ಚುಕ್ಕಾಣಿ ಹಿಡಿಯುವ ರಾಜಕೀಯ ಪಕ್ಷಗಳ ಚಹರೆ ವಿಶ್ವವಿದ್ಯಾಲಯಗಳಲ್ಲಿ ಪ್ರತಿಷ್ಠಾಪನೆಗೊಳ್ಳುತ್ತಿದೆ. ಆಯಾ ಅವಧಿಯ ಸರ್ಕಾರಗಳು ತಮ್ಮ ಸೈದ್ಧಾಂತಿಕ ನೆಲೆಯನ್ನು ವಿಸ್ತರಿಸಲು ವಿಶ್ವವಿದ್ಯಾಲಯಗಳನ್ನು ವೇದಿಕೆಯಾಗಿ ಬಳಸಿಕೊಳ್ಳುತ್ತಿವೆ. ಇದಕ್ಕೆ ಅನುಗುಣವಾಗಿ ವಿಶ್ವವಿದ್ಯಾಲಯಗಳ ಆಯಕಟ್ಟಿನ ಸ್ಥಾನಗಳನ್ನು ರಾಜಕೀಯ ಪಕ್ಷಗಳ ಹಿಂಬಾಲಕರು ಆಕ್ರಮಿಸಿಕೊಳ್ಳುತ್ತಿದ್ದಾರೆ. ಕೆಲವು ರಾಜ್ಯಗಳಲ್ಲಿ ವಿಶ್ವವಿದ್ಯಾಲಯಗಳ ಮೇಲೆ ನಿಯಂತ್ರಣ ಸಾಧಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಪೈಪೋಟಿ ಏರ್ಪಟ್ಟಿದೆ. ಇದು ಆರೋಗ್ಯಕರ ಬೆಳವಣಿಗೆಯಲ್ಲ.

ವಿಶ್ವವಿದ್ಯಾಲಯಗಳನ್ನು ಆವರಿಸಿಕೊಂಡಿರುವ ಜಡತ್ವದಲ್ಲಿ ಬೋಧಕರ ಪಾತ್ರವನ್ನು ಕೂಡ ಕಡೆಗಣಿಸುವಂತಿಲ್ಲ. ಪಾಠ ಮತ್ತು ಸಂಶೋಧನೆಗಿಂತ 'ರಾಜಕೀಯ' ಮತ್ತು ಉನ್ನತ ಹುದ್ದೆಗಳಿಗಾಗಿ ನಡೆಸುವ ಲಾಬಿಗೇ ಬೋಧಕರ ಹೆಚ್ಚಿನ ಸಮಯ ವಿನಿಯೋಗ ಆಗುತ್ತಿದೆ. ಜಾತಿ, ಧರ್ಮವು ವಿಶ್ವವಿದ್ಯಾಲಯದ ಬೋಧಕ, ವಿದ್ಯಾರ್ಥಿ ಗಣವನ್ನು ವ್ಯವಸ್ಥಿತವಾಗಿ ವಿಭಾಗಿಸುತ್ತಿವೆ.

ಪ್ರಸ್ತುತ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳನ್ನು ಆರ್ಥಿಕವಾಗಿ ಸದೃಢಗೊಳಿಸುವುದು, ಭ್ರಷ್ಟಾಚಾರ ಮುಕ್ತಗೊಳಿಸುವುದು, ಆವರಿಸಿಕೊಂಡಿರುವ ಪ್ರಭುತ್ವದ ಚಹರೆಯನ್ನು ತೆಗೆದುಹಾಕುವುದು, ಬೋಧಕ ಗಣವನ್ನು ಜಾತಿ-ಧರ್ಮದ ಸಂಕೋಲೆಯಿಂದ ಹೊರತರುವುದು, ಬೋಧನೆ ಹಾಗೂ ಸಂಶೋಧನೆಯ ಗುಣಮಟ್ಟವನ್ನು ಹೆಚ್ಚಿಸುವುದು ತುರ್ತು ಅಗತ್ಯವಾಗಿದೆ. ವಿಶ್ವವಿದ್ಯಾಲಯಗಳು ಮುಕ್ತವಾಗಿ ಕಾರ್ಯನಿರ್ವಹಿಸಲು ತೊಡಗಿದಾಗ ಸಂಶೋಧನೆಯ ಗುಣಮಟ್ಟ ಹೆಚ್ಚುತ್ತದೆ ಮತ್ತು ಭವಿಷ್ಯದ ಪ್ರಜ್ಞಾವಂತ ನೇತಾರರು ರೂಪುಗೊಳ್ಳುತ್ತಾರೆ.

ವಾಚಕರ ವಾಣಿ

ಕಠಿಣ ಸಂದೇಶ ರವಾನೆಯಾಗಲಿ

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳನ್ನು ಮಲದ ಗುಂಡಿ ಸ್ವಚ್ಛಗೊಳಿಸಲು ಬಳಸಿಕೊಂಡಿದ್ದು ಅಕ್ಷಮ್ಯ. ಈ ಕಾರ್ಯಕ್ಕಾಗಿ ಯಂತ್ರಗಳು ಲಭ್ಯವಿದ್ದರೂ ಅದನ್ನು ಬಳಸದಿರುವುದು ಸರಿಯಲ್ಲ. ಮಕ್ಕಳಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಹೊಣೆ ಇರುವ ವಿದ್ಯಾಸಂಸ್ಥೆಗಳೇ ಹೀಗೆ ನಡೆದುಕೊಂಡರೆ ಹೇಗೆ?

ಅದೇ ರೀತಿ, ಮಂಗಳೂರಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳ ತಪಾಸಣೆಗೆ ವಿದ್ಯಾರ್ಥಿಗಳನ್ನು ಬಳಕೆ ಮಾಡಿಕೊಂಡಿರುವುದು (ಪ್ರ.ವಾ., ಡಿ. 18) ಆಶ್ಚರ್ಯ ಉಂಟುಮಾಡುತ್ತದೆ. ಈ ಕೆಲಸಕ್ಕೆ ಚಿಕ್ಕ ಮಕ್ಕಳನ್ನು ಬಳಸಿಕೊಂಡಿದ್ದರ ಹಿಂದೆ ಹಣ ಉಳಿಸುವ ಕುಟಿಲೋಪಾಯ ಇದ್ದಿರಬಹುದು. ಈ ಎರಡೂ ಪ್ರಕರಣಗಳಲ್ಲಿ ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಬೇಕು. ಇದರಿಂದ, ಮುಂದಿನ ದಿನಗಳಲ್ಲಿ ಇಂತಹ ಕೆಲಸಗಳಿಗೆ ಮಕ್ಕಳನ್ನು ಬಳಸಲು ಮುಂದಾಗುವವರಿಗೆ ಎಚ್ಚರಿಕೆಯ ಪಾಠ ಕಲಿಸಿದಂತೆ ಆಗುತ್ತದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಹೇಳಿಕೆಗೆ ಇರಲಿ ಆಧಾರ

60 ಕೋಟಿ ಬಡವರ ಜೀವನದ ಗುಣಮಟ್ಟದಲ್ಲಿ ಸುಧಾರಣೆ ತಂದಿರುವುದು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅತಿದೊಡ್ಡ ಸಾಧನೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯ ಸಭೆಯೊಂದರಲ್ಲಿ ಹೇಳಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. 60 ಕೋಟಿ ಅಂದರೆ ಭಾರತದ ಜನಸಂಖ್ಯೆಯ ಸರಿಸುಮಾರು ಶೇ 43ರಷ್ಟು! ಆ ಪ್ರಕಾರ, ಕರ್ನಾಟಕದಲ್ಲಿ ಸುಮಾರು ಮೂರು ಕೋಟಿ ಬಡವರು ಈ ಒಂಬತ್ತು ವರ್ಷಗಳಲ್ಲಿ (ಕೇಂದ್ರ ಸರ್ಕಾರದ ಪ್ರಯತ್ನ ಮಾತ್ರದಿಂದಾಗಿಯೇ) ಉದ್ಧಾರವಾಗಿಬಿಟ್ಟಿದ್ದಾರೆಯೇ?!

ತಮ್ಮ ಈ ಹೇಳಿಕೆಗೆ ಶಾ ಅವರು ಸೂಕ್ತ ಆಧಾರ ನೀಡಲಿ. ಕರ್ನಾಟಕದಲ್ಲಿ ಎಷ್ಟು ಮಂದಿ ಬಡಜನರ ಜೀವನದ ಗುಣಮಟ್ಟವು ಮೋದಿ ನೇತೃತ್ವದ ಸರ್ಕಾರದಿಂದಾಗಿ ಸುಧಾರಣೆ ಕಂಡಿದೆ ಎಂಬುದನ್ನು ರಾಜ್ಯ ಸರ್ಕಾರ ಮತ್ತು ಬಿಜೆಪಿ ರಾಜ್ಯ ಘಟಕ ಎರಡೂ ಪ್ರತ್ಯೇಕವಾಗಿ ಆಧಾರಸಮೇತ ಜನರ ಮುಂದಿಡಲಿ. ಶೌಚಾಲಯ, ವಿದ್ಯುತ್, ಅಡುಗೆ ಅನಿಲದಂತಹ ವಿಷಯಗಳಲ್ಲೂ ಕೇಂದ್ರದ ಕೆಲವು ಸಚಿವರು ಹುಸಿಗುಂಡು ಹಾರಿಸಿದ್ದನ್ನು ನಾವು ಕಂಡಿದ್ದೇವೆ.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಪ್ರಾಥಮಿಕ ಶಿಕ್ಷಣ ರಾಷ್ಟ್ರೀಕರಣಗೊಳ್ಳಲಿ

'ಗ್ಯಾರಂಟಿ ಪಟ್ಟಿಗೆ ಸೇರಲಿ ಶಿಕ್ಷಣ' ಎಂಬ ಲೇಖನದಲ್ಲಿ (ಪ್ರ.ವಾ., ಡಿ. 16) ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಪ್ರತಿಪಾದಿಸಿರುವಂತೆ 'ಶೈಕ್ಷಣಿಕ ಸಮಾನತೆಯ ಅನುಷ್ಠಾನ' ಸರ್ಕಾರದ ಆದ್ಯತೆಯಾಗಬೇಕು. ಎಲ್ಲ ಜಾಗೃತ ಕನ್ನಡಿಗರ ಧ್ವನಿಯಾಗಬೇಕು. ಕರ್ನಾಟಕ ಸರ್ಕಾರವು ಪಬ್ಲಿಕ್ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಲು ಹೊರಟಿರುವುದರ ಅಪಾಯವನ್ನು ಸ್ಪಷ್ಟವಾಗಿ ಹೇಳಿರುವುದು ಸರಿಯಿದೆ. ಎಳೆಯ ಮಕ್ಕಳನ್ನು ದೇವರು ಅನ್ನುವ ಸಮಾಜದಲ್ಲಿ ಮಕ್ಕಳ ನಡುವೆ ಭೇದಭಾವ ಮಾಡುವುದು ಪಾಪದ ಕೆಲಸ. ಕನಿಷ್ಠ ಪ್ರಾಥಮಿಕ ಹಂತದ ಶಿಕ್ಷಣದಲ್ಲಾದರೂ ಎಲ್ಲ ಮಕ್ಕಳಿಗೂ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡುವ ನೀತಿ ಜಾರಿಯಾಗಬೇಕು. ಇದಕ್ಕೆ ಶಾಶ್ವತ ಪರಿಹಾರವೆಂದರೆ, ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣ. ಎಲ್ಲ ಪಕ್ಷಗಳಲ್ಲೂ 'ಶಿಕ್ಷಣೋದ್ಯಮಿ'ಗಳು ಇರುವುದರಿಂದ, ಶಿಕ್ಷಣವನ್ನು ಸರ್ಕಾರವೇ ನೀಡುವುದು ಸುಲಭವಲ್ಲ. ಸರ್ಕಾರವನ್ನು ಮಣಿಸಲು ಬೃಹತ್ ಜನಾಂದೋಲನದ ಅಗತ್ಯವಿದೆ.

ರಾ.ನಂ.ಚಂದ್ರಶೇಖರ, ಬೆಂಗಳೂರು

ಕೊರೊನಾ: ಮುನ್ನೆಚ್ಚರಿಕೆ ಅಗತ್ಯ

ಕೊರೊನಾ ವೈರಾಣುವಿನ ಉಪತಳಿಯೊಂದು ಕೇರಳದ ಮಹಿಳೆಯೊಬ್ಬರಲ್ಲಿ ಪತ್ತೆಯಾಗಿದೆ ಹಾಗೂ ಆ ರಾಜ್ಯದಲ್ಲಿ ಕೋವಿಡ್‌ನಿಂದ ಇಬ್ಬರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಅಲ್ಲದೆ, ದೇಶದ ಕೆಲವೆಡೆ ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಈ ಬೆಳವಣಿಗೆಗಳು ನಮ್ಮ ರಾಜ್ಯದಲ್ಲಿಯೂ ಮುನ್ನೆಚ್ಚರಿಕೆ ವಹಿಸಬೇಕಾದ ಅಗತ್ಯವನ್ನು ಸಾರುತ್ತಿವೆ.

ಈ ಸೋಂಕು ಕಾಲಿಡದಂತೆ ಸರ್ಕಾರವು ಈಗಿನಿಂದಲೇ ಕಟ್ಟೆಚ್ಚರ ವಹಿಸಬೇಕು. ಜನರು ಕೂಡ ಜವಾಬ್ದಾರಿ ಅರಿತು ನಡೆದುಕೊಳ್ಳಬೇಕು. ಭಯಪಡುವ ಅಗತ್ಯವಿಲ್ಲದೇ ಇದ್ದರೂ ಮುನ್ನೆಚ್ಚರಿಕೆಯಂತೂ ಬೇಕೇಬೇಕು. ಪರಿಸ್ಥಿತಿ ನಿಭಾಯಿಸಲು ಬೇಕಾದ ಎಲ್ಲ ಬಗೆಯ ಸಿದ್ಧತೆಯೊಂದಿಗೆ ಜನರಲ್ಲಿ ಅರಿವು ಮೂಡಿಸುವ ಕೆಲಸವೂ ನಡೆಯಬೇಕು.

ಬಿ.ಎಸ್.ಅನುಪಮಾ, ಬಾಗೇಪಲ್ಲಿ

ನ್ಯಾಯಾಧೀಶೆಗೇ ಸಿಗದ ನ್ಯಾಯ!

ಉತ್ತರಪ್ರದೇಶದ ಬಾಂದಾ ಜಿಲ್ಲೆಯ ಮಹಿಳಾ ನ್ಯಾಯಾಧೀಶರೊಬ್ಬರು ಜಿಲ್ಲಾ ನ್ಯಾಯಾಧೀಶರೊಬ್ಬರ ವಿರುದ್ಧ ತಾವು ದಾಖಲಿಸಿದ್ದ ಲೈಂಗಿಕ ದೌರ್ಜನ್ಯ ದೂರಿಗೆ ಸಂಬಂಧಿಸಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ, ಘನತೆಯಿಂದ ಜೀವ ಕಳೆದುಕೊಳ್ಳಲು ಅನುಮತಿ ನೀಡುವಂತೆ ಭಾರತದ ಮುಖ್ಯ ನ್ಯಾಯಮೂರ್ತಿಗೆ (ಸಿಜೆಐ) ಪತ್ರ ಬರೆದು ಬಿನ್ನವಿಸಿಕೊಂಡಿರುವುದು (ಪ್ರ.ವಾ., ಡಿ. 16) ದುರದೃಷ್ಟಕರ. ನ್ಯಾಯಾಧೀಶೆಯಂತಹ ದೊಡ್ಡ ಹುದ್ದೆಯಲ್ಲಿದ್ದವರ ಮೇಲೂ ಲೈಂಗಿಕ ದೌರ್ಜನ್ಯವೆಂದರೆ, ಇನ್ನು ಸಾಮಾನ್ಯ ಹೆಣ್ಣುಮಕ್ಕಳ ಪಾಡೇನು ಎಂದು ಅಚ್ಚರಿಯಾಗುತ್ತದೆ.

ಮಧ್ಯರಾತ್ರಿ ಸಮಯದಲ್ಲಿ ಮಹಿಳೆಯು ಸುರಕ್ಷಿತವಾಗಿ ರಸ್ತೆಯಲ್ಲಿ ನಡೆದುಕೊಂಡು ಹೋಗುವಂಥ ರಾಮ ರಾಜ್ಯದ ಕನಸನ್ನು ಮಹಾತ್ಮ ಗಾಂಧಿ ಅಪೇಕ್ಷಿಸಿದ್ದರು. ಸ್ವಾತಂತ್ರ್ಯ ದೊರೆತ ಏಳು ದಶಕಗಳ ನಂತರವೂ ಭಾರತವು ಆ ಕನಸನ್ನು ಕಾಣುತ್ತಲೇ ಇದೆ. ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ದೊರಕಿಸಿಕೊಡುವಲ್ಲಿ ಈಗಲಾದರೂ ಯಶಸ್ಸು ಕಾಣಬೇಕಿದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇಂದ್ರದ ಬಿಜೆಪಿ ಸರ್ಕಾರವು 'ದೂರಸಂಪರ್ಕ ಮಸೂದೆ–2023' ಅನ್ನು ಲೋಕಸಭೆಯಲ್ಲಿ ಸೋಮವಾರವಷ್ಟೇ ಮಂಡನೆ ಮಾಡಿದೆ. ದೂರಸಂಪರ್ಕ ಕಂಪನಿಗಳು ಮತ್ತು ಅವುಗಳ ಕಾರ್ಯಾಚರಣೆ ಮೇಲೆ ಸರ್ಕಾರಕ್ಕೆ ಹೆಚ್ಚಿನ ನಿಯಂತ್ರಣವನ್ನು ಸಾಧಿಸಲು ಈ ಮಸೂದೆ ಅನುವು ಮಾಡಿಕೊಡುತ್ತದೆ. ಆದರೆ ಅದಕ್ಕಿಂತಲೂ ಮುಖ್ಯವಾಗಿ ದೇಶದಲ್ಲಿ ರವಾನೆಯಾಗುವ ಪ್ರತಿ ಸಂದೇಶ, ಕರೆ, ಅವುಗಳಿಗೆ ಸಂಬಂಧಿಸಿದ ಎಲ್ಲಾ ದತ್ತಾಂಶಗಳನ್ನು ಪರಿಶೀಲಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಈ ಮಸೂದೆ ನೀಡುತ್ತದೆ. ಸಾಮಾನ್ಯ ಬಳಕೆದಾರನೊಬ್ಬ ಕಳುಹಿಸುವ ಸಂದೇಶವನ್ನು ತಡೆಹಿಡಿಯುವಷ್ಟರ ಮಟ್ಟಿಗೆ ಕಣ್ಗಾವಲು ನಡೆಸುವ ಅಧಿಕಾರ ಸರ್ಕಾರಕ್ಕೆ ದೊರೆಯುತ್ತದೆ

ದೂರಸಂಪರ್ಕ: ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ, ನಿಯಂತ್ರಣ

ಪ್ರಜಾವಾಣಿ ವಾರ್ತೆ

'ದೂರಸಂಪರ್ಕ ಮಸೂದೆ–2023' ಅನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು. ಅದರ ಮೇಲಿನ ಚರ್ಚೆ ನಡೆಯುವಾಗ ವಿರೋಧ ಪಕ್ಷಗಳ ಸಂಸದರು, 'ಈ ಮಸೂದೆಯು ಬಳಕೆದಾರರ ಖಾಸಗಿತನಕ್ಕೆ ಧಕ್ಕೆಯನ್ನುಂಟು ಮಾಡುತ್ತದೆ. ಹೀಗಾಗಿ ಇದನ್ನು ಸಂಸದೀಯ ಸ್ಥಾಯಿ ಸಮಿತಿಯ ಪರಿಶೀಲನೆಗೆ ಕಳುಹಿಸಬೇಕು' ಎಂದು ಆಗ್ರಹಿಸಿದರು. ಆದರೆ ಅವರ ಆಗ್ರಹ ಮತ್ತು ಕಳವಳವನ್ನು ಬದಿಗೊತ್ತಿದ ದೂರಸಂಪರ್ಕ ಸಚಿವರು, ಮಸೂದೆಯನ್ನು ಪರಿಗಣಿಸುವಂತೆ ಗೊತ್ತುವಳಿ ಮಂಡಿಸಿದರು. ಸಾಮಾನ್ಯ ವ್ಯಕ್ತಿಗಳ ಖಾಸಗಿತನಕ್ಕೆ ಧಕ್ಕೆ ತರುವಂತಹ ಹಲವು ಅಧಿಕಾರಗಳನ್ನು ಈ ಮಸೂದೆಯು ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರಗಳಿಗೂ ಇಂತಹ ಅಧಿಕಾರವನ್ನು ಮಸೂದೆ ನೀಡುತ್ತದೆ.

ದೂರಸಂಪರ್ಕ ಸಚಿವಾಲಯ ಅಥವಾ ಅದರ ಅಧೀನ ಸಂಸ್ಥೆ ಅಥವಾ ಸಚಿವಾಲಯವು ನೇಮಕ ಮಾಡಿದ ಪ್ರಾಧಿಕಾರ ಅಥವಾ ಅಧಿಕಾರಿಯು ಈ ಮಸೂದೆ ನೀಡುವ ಅಧಿಕಾರಗಳನ್ನು ಚಲಾಯಿಸುವ ಹೊಣೆಗಾರಿಕೆ ಹೊಂದಿರುತ್ತದೆ/ಹೊಂದಿರುತ್ತಾರೆ. 'ದೇಶದ ಭದ್ರತೆಗೆ ಧಕ್ಕೆಯಾಗಿದೆ' ಎಂದು ಈ ಸಂಸ್ಥೆಗಳು ಅಥವಾ ಅಧಿಕಾರಿಗೆ ಭಾಸವಾದರೆ ಸಾಕು, ಅವರು ದೇಶದಾದ್ಯಂತ ರವಾನೆಯಾದ ಮತ್ತು ಆಗುತ್ತಿರುವ ಎಲ್ಲಾ ಸಂದೇಶಗಳು/ಕರೆಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ಪರಿಶೀಲಿಸಬಹುದು.

ದೂರಸಂಪರ್ಕ ಕಂಪನಿಗಳ ಸಂಪೂರ್ಣ ದತ್ತಾಂಶವನ್ನು ಪರಿಶೀಲಿಸುವ, ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಒದಗುತ್ತದೆ. ಸಂದೇಶಗಳು ಮತ್ತು ಕಂಪನಿಗಳಿಗೆ ಸಂಬಂಧಿಸಿದ ದತ್ತಾಂಶಗಳಿಗೆ ಮಾತ್ರ ಇದು ಅನ್ವಯವಾಗುತ್ತದೆ ಎಂದು ಇದನ್ನು ಕಡೆಗಣಿಸುವಂತಿಲ್ಲ. ಏಕೆಂದರೆ ಸಂದೇಶ ಎಂಬುದು ಕೇವಲ ಎಸ್‌ಎಂಎಸ್ ಅಲ್ಲ. ಬದಲಿಗೆ ಜನರು ಕಳುಹಿಸುವ ಇ–ಮೇಲ್, ಇಂಟರ್‌ನೆಟ್ ಸಂದೇಶಗಳನ್ನೂ ಇದು ಒಳಗೊಳ್ಳುತ್ತದೆ. ಅದೇ ರೀತಿ ದೂರಸಂಪರ್ಕ ಕಂಪನಿಗಳ ದತ್ತಾಂಶಗಳು ಎಂಬುದು ಕರೆ ವಿವರಗಳು, ಕರೆ ದಾಖಲೆಗಳು, ಇಂಟರ್‌ನೆಟ್ ಪ್ರೋಟೊಕಾಲ್ (ಐ.ಪಿ) ದತ್ತಾಂಶ ವಿವರಗಳು, ಬಳಕೆದಾರರ ವಿವರಗಳು, ಬಳಕೆದಾರರ ಚಂದಾದಾರಿಕೆಯ ವಿವರಗಳನ್ನು ಒಳಗೊಳ್ಳುತ್ತದೆ. ಹೀಗಾಗಿ ಜನರ ಫೋನ್ ಬಳಕೆಯ ಮೇಲೆ ಕೇಂದ್ರವು ಸಂಪೂರ್ಣ ನಿಗಾ ಇಡಲು ಸಾಧ್ಯವಾಗುತ್ತದೆ.

ಲೋಕಸಭೆಯಲ್ಲಿ ಮಸೂದೆ ಮಂಡನೆ

ವ್ಯಕ್ತಿಗಳ ಖಾಸಗಿತನದ ಹಕ್ಕನ್ನು ಮೊಟಕು ಮಾಡಿ, ಸರ್ಕಾರವು ನಡೆಸುವ ಕಣ್ಗಾವಲನ್ನು ಕಾನೂನುಬದ್ಧಗೊಳಿಸುವ ಮಸೂದೆ ಇದು ಎಂದು ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸಂಸದರು ಕಳವಳ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿನ ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ದೂರಸಂಪರ್ಕ ಕಂಪನಿಗಳನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವ ಅಧಿಕಾರಗಳನ್ನೂ ಈ ಮಸೂದೆಯು ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ತುರ್ತು ಸಂದರ್ಭದಲ್ಲಿ, ಪ್ರಾಕೃತಿಕ ವಿಕೋಪಗಳ ವೇಳೆ ದೂರಸಂಪರ್ಕ ಕಂಪನಿಗಳನ್ನು ಹಾಗೂ ಅವುಗಳ ಕಾರ್ಯಾಚರಣೆಯನ್ನು ಕೇಂದ್ರವು ತನ್ನ ಸುಪರ್ದಿಗೆ ತೆಗೆದುಕೊಳ್ಳಬಹುದು ಎಂದು ಈ ಮಸೂದೆಯ 20(ಎ) ಸೆಕ್ಷನ್ ಹೇಳುತ್ತದೆ.

ದೇಶದ ಭದ್ರತೆಗೆ ಧಕ್ಕೆಯಾಗಿದೆ ಅಥವಾ ಭಾರತವು ಬೇರೊಂದು ದೇಶದೊಂದಿಗೆ ಹೊಂದಿರುವ ಸ್ನೇಹ ಸಂಬಂಧಕ್ಕೆ ಧಕ್ಕೆಯಾಗುತ್ತಿದೆ ಎಂದು ಸರ್ಕಾರಕ್ಕೆ ಅನಿಸಿದರೂ ಅದು ದೂರಸಂಪರ್ಕ ಕಂಪನಿಯೊಂದನ್ನು ಅಥವಾ ಎಲ್ಲಾ ಕಂಪನಿಗಳನ್ನು ಅನಿರ್ದಿಷ್ಟಾವಧಿಯವರೆಗೆ ತನ್ನ ಸುಪರ್ದಿಗೆ ತೆಗೆದುಕೊಳ್ಳಬಹುದು. ಅವುಗಳ ಸೇವೆಗಳನ್ನು ನಿಯಂತ್ರಿಸಬಹುದು. ಕರೆ/ಸಂದೇಶ ಸೇವೆಗಳನ್ನು ನಿರ್ಬಂಧಿಸಬಹುದು. ಎಲ್ಲಕ್ಕಿಂತ ಮುಖ್ಯವಾಗಿ ತನಗೆ ಅಗತ್ಯವಿರುವ ಸಂದೇಶವನ್ನು ದೇಶದ ಎಲ್ಲಾ ಜನರಿಗೆ ಕಳುಹಿಸಲು ಆ ಕಂಪನಿಗಳನ್ನು ಬಳಸಿಕೊಳ್ಳಬಹುದು.



ಸಂದೇಶಗಳ ರವಾನೆಯನ್ನು ನಿರ್ಬಂಧಿಸುವ ಆದೇಶ ಜಾರಿಯಲ್ಲಿದ್ದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾನ್ಯತೆ ಪಡೆದ ಪತ್ರಕರ್ತರು ಅಂತಹ ಸಂದೇಶಗಳನ್ನು (ಎಸ್‌ಎಂಎಸ್/ವಿಡಿಯೊ/ಚಿತ್ರ/ಇ–ಮೇಲ್ ಇತ್ಯಾದಿ) ರವಾನೆ ಮಾಡಲು ಈ ನಿರ್ಬಂಧ ಅನ್ವಯವಾಗುವುದಿಲ್ಲ.

ಇದರಿಂದ ಸರ್ಕಾರಕ್ಕೆ ಬೇಕಾದಂತಹ ವಿವರಗಳಷ್ಟೇ ಜನಸಾಮಾನ್ಯರಿಗೆ ಲಭ್ಯವಾಗುತ್ತವೆ. ಸರ್ಕಾರಕ್ಕೆ ವಿರುದ್ಧವಾದ ಮಾಹಿತಿಗಳು ಯಾವ ರೀತಿಯಲ್ಲೂ ಒಬ್ಬರಿಂದ ಇನ್ನೊಬ್ಬರಿಗೆ ತಲುಪುವುದೇ ಇಲ್ಲ. ಉದಾಹರಣೆಗೆ: ಮಣಿಪುರದಲ್ಲಿ ನಡೆದಿದ್ದಂತಹ ಗಲಭೆ ಬೇರೆ ರಾಜ್ಯದಲ್ಲಿ ನಡೆಯಿತು ಎಂದಿಟ್ಟುಕೊಳ್ಳಿ. ಸಂದೇಶಗಳ ರವಾನೆ ಮೇಲೆ ಸರ್ಕಾರ ನಿರ್ಬಂಧ ಹೇರುತ್ತದೆ. ದೂರಸಂಪರ್ಕ ಕಂಪನಿಗಳ ಮಟ್ಟದಲ್ಲೇ ಸಂದೇಶಗಳನ್ನು ತಡೆಹಿಡಿಯುವುದರಿಂದ, ಒಂದು ಸಂದೇಶವೂ ರವಾನೆಯಾಗುವುದಿಲ್ಲ. ಆಗ ಸರ್ಕಾರ ನೀಡುವ ಮಾಹಿತಿಯನ್ನು ಮಾನ್ಯತೆ ಪಡೆದ ಕೆಲವೇ ಪತ್ರಕರ್ತರು ರವಾನಿಸಬೇಕಾಗುತ್ತದೆ. ಸರ್ಕಾರಕ್ಕೆ ಅನುಕೂಲಕರವಾಗಿರುವ ಮಾಹಿತಿಯಷ್ಟೇ ಜನರಿಗೆ ತಲುಪುತ್ತದೆ ಮತ್ತು ಸರ್ಕಾರದ ವೈಫಲ್ಯವನ್ನು ತೋರುವ ಮಾಹಿತಿಗಳು ಯಾರಿಗೂ ತಲುಪುವುದೇ ಇಲ್ಲ. ಕೆಲವೇ ಪತ್ರಕರ್ತರನ್ನು ಹೀಗೆ ಬಳಸಿಕೊಳ್ಳುವಂತಹ ಅಧಿಕಾರವನ್ನು ಈ ಮಸೂದೆಯ 20(3)ನೇ ಸೆಕ್ಷನ್ ಸರ್ಕಾರಕ್ಕೆ ನೀಡುತ್ತದೆ.

ಹೀಗೆ ಈ ಎಲ್ಲಾ ಸೆಕ್ಷನ್‌ಗಳು ದೇಶದಲ್ಲಿನ ದೂರಸಂಪರ್ಕ ಕಂಪನಿಗಳು ಮತ್ತು ಎಲ್ಲಾ ಬಳಕೆದಾರರ ಮೇಲೆ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ನಿಯಂತ್ರಣವನ್ನು ತಂದುಕೊಡುತ್ತವೆ. ಈ ಮಸೂದೆಯ ಅಡಿಯಲ್ಲಿ ಸರ್ಕಾರವು ತೆಗೆದುಕೊಂಡ ಯಾವ ಕ್ರಮವನ್ನೂ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. 'ಈ ಮಸೂದೆಯ ಸೆಕ್ಷನ್‌ಗಳ ಅಡಿಯಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳು ಸದುದ್ದೇಶದಿಂದ ಕೂಡಿದ್ದರೆ, ಅವುಗಳನ್ನು ಪ್ರಶ್ನಿಸುವಂತಿಲ್ಲ' ಎಂದು ಮಸೂದೆಯ 51ನೇ ಸೆಕ್ಷನ್ ಹೇಳುತ್ತದೆ. ಹೀಗಾಗಿ ಈ ಮಸೂದೆಯು ಸಂಸತ್ತಿನಲ್ಲಿ ಅಂಗೀಕಾರವಾಗಿ, ರಾಷ್ಟ್ರಪತಿಯ ಅಂಕಿತ ಪಡೆದು ಕಾಯ್ದೆಯಾಗಿ ಜಾರಿಯಾದರೆ ಜನಸಾಮಾನ್ಯ ಇರಲಿ ಅಥವಾ ಯಾವುದೇ ವ್ಯಕ್ತಿ ಇರಲಿ ತನ್ನ ಖಾಸಗಿತನಕ್ಕೆ ಧಕ್ಕೆಯಾಗಿದೆ ಅಥವಾ ಸರ್ಕಾರ ನನ್ನ ಮೇಲೆ ಕಣ್ಗಾವಲು ನಡೆಸುತ್ತಿದೆ ಎಂದು ನ್ಯಾಯಾಲಯದ ಮೊರೆ ಹೋಗಲೂ ಅವಕಾಶವಿರುವುದಿಲ್ಲ.

ಆಧಾರ: ದೂರಸಂಪರ್ಕ ಮಸೂದೆ–2023, ಪಿಟಿಐ

ಕಂಪನಿಗಳ ಸಾಲಕ್ಕೆ ಸರ್ಕಾರದ ಖಾತರಿ

- ಇನ್ನು ಮುಂದೆ ದೂರಸಂಪರ್ಕ ಕಂಪನಿಗಳು ಸಾಲ ಪಡೆಯಬೇಕಿದ್ದರೆ ಅವುಗಳೇ ಖಾತರಿಯನ್ನೂ ಒದಗಿಸಬೇಕು ಎಂದಿಲ್ಲ. ಕೇಂದ್ರ ಸರ್ಕಾರವು ತಾನೇ ಅಂತಹ ಖಾತರಿಯನ್ನು ಒದಗಿಸುತ್ತದೆ ಎಂಬುದನ್ನು ಮಸೂದೆಯ 45ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ
- ಉಪಗ್ರಹ ಆಧಾರಿತ ಸೇವೆಗಳನ್ನು ಒದಗಿಸುವ ಕಂಪೆನಿಗಳಿಗೆ ತರಂಗಾಂತರಗಳನ್ನು ಸರ್ಕಾರವೇ ನೇರವಾಗಿ ನಿಯೋಜಿಸಲು ಈ ಮಸೂದೆ ಅನುವು ಮಾಡಿಕೊಡುತ್ತದೆ. ಹರಾಜಿನ ಮೂಲಕವೇ ತರಂಗಾಂತರಗಳನ್ನು ಹಂಚಿಕೆ ಮಾಡಬೇಕಿದ್ದ ಅನಿವಾರ್ಯವನ್ನು ಈ ಮಸೂದೆ ತೊಡೆದು ಹಾಕಿದೆ

ಸಂದೇಶ ಎಂದರೇನು...

ಜನಸಾಮಾನ್ಯರು ಯಾರಿಗೆ ಯಾವ ಸಂದೇಶ ಕಳುಹಿಸುತ್ತಾರೆ ಎನ್ನುವುದರ ಮೇಲೆಯೂ ಇನ್ನು ಮುಂದೆ ಕೇಂದ್ರ ಸರ್ಕಾರವು ಕಣ್ಣಿಡಲಿದೆ. ಜನಸಾಮಾನ್ಯರು ಮೊಬೈಲ್‌ಗಳ ಮೂಲಕ ಕಳುಹಿಸುವ ಸಂದೇಶಗಳನ್ನು ರಾಷ್ಟ್ರೀಯ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆಯ ಹೆಸರಿನಲ್ಲಿ ಕೇಂದ್ರ ಸರ್ಕಾರವು ತಡೆಹಿಡಿಯುವ ಅಧಿಕಾರವನ್ನು ಈ ಮಸೂದೆ ನೀಡುತ್ತದೆ. ಈ ಬಗ್ಗೆ ಈ ಮಸೂದೆಯ ನಾಲ್ಕನೇ ಭಾಗದಲ್ಲಿ ವಿವರಿಸಲಾಗಿದೆ. ಜೊತೆಗೆ, ಇಂಥ ವಿಷಯಗಳಿಗೆ ಸಂಬಂಧಿಸಿದಂತೆ ವಿಸ್ತೃತವಾದ ಮಾಹಿತಿಯುಳ್ಳ ಆದೇಶವನ್ನು ಟ್ರಾಯ್ (ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ) ಮೂಲಕ ಮುಂದಿನ ದಿನಗಳಲ್ಲಿ ನೀಡಲಾಗುವುದು ಎಂದೂ ಮಸೂದೆಯಲ್ಲಿ ಹೇಳಲಾಗಿದೆ.

ಕೇಂದ್ರ ಸರ್ಕಾರವು ಮಸೂದೆಯಲ್ಲಿ 'ಸಂದೇಶ' ಎಂದರೇನು ಎನ್ನುವುದನ್ನು ವಿವರಿಸಿದೆ. 'ದೂರಸಂಪರ್ಕದ ಮೂಲಕ ಕಳುಹಿಸಲಾಗುವ ಸಂಜ್ಞೆ, ಸಂಕೇತ, ಪಠ್ಯ, ಚಿತ್ರ, ಶಬ್ದ, ವಿಡಿಯೊ, ಡಿಜಿಟಲ್ ದತ್ತಾಂಶ, ಗೂಢ ಸಂದೇಶ ಅಥವಾ ಇತರ ಮಾಹಿತಿ'ಗಳನ್ನು ಸಂದೇಶ ಎಂದೇ ಮಸೂದೆಯಲ್ಲಿ ವ್ಯಾಖ್ಯಾನಿಸಲಾಗಿದೆ.

ಹಾಗಾದರೆ, ಯಾವ ಯಾವ ಸಂದರ್ಭದಲ್ಲಿ ಜನಸಾಮಾನ್ಯರ ಸಂದೇಶವನ್ನು ಸರ್ಕಾರ ತಡೆಹಿಡಿಯಬಹುದು?: ಸಾರ್ವಜನಿಕ ತುರ್ತಿನ ವೇಳೆ, ಸಾರ್ವಜನಿಕರ ಭದ್ರತೆ ದೃಷ್ಟಿಯಲ್ಲಿ, ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಧಕ್ಕೆ ಬಂದಾಗ, ರಕ್ಷಣೆ ಅಥವಾ ದೇಶದ ಭದ್ರತೆ ವಿಷಯಗಳಲ್ಲಿ ಮತ್ತು ಸ್ನೇಹ ಬಾಂಧವ್ಯ ಹೊಂದಿದ ಇತರ ದೇಶದ ಕುರಿತಂತೆ ನಿರ್ದಿಷ್ಟ ಸ್ವರೂಪದ ಸಂದೇಶ ರವಾನಿಸಿದ್ದಲ್ಲಿ, ಸರ್ಕಾರವು ಇಂಥ ಸಂದೇಶಗಳನ್ನು ತಡೆಹಿಡಿಯಬಹುದು. ಈ ಕೆಲಸವನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರ ಅಥವಾ ಈ ಸರ್ಕಾರಗಳು ನೇಮಿಸುವ ಅಧಿಕಾರಿಯು ಮಾಡಬಹುದಾಗಿದೆ.

ಜನಸಾಮಾನ್ಯರು ಎಂದರೆ ಕೇವಲ ವ್ಯಕ್ತಿಗಳಲ್ಲ. ಸಂಘಟನೆ ಇರಬಹುದು, ಯಾವುದಾದರೂ ಪಕ್ಷವೇ ಆಗಿರಬಹುದು, ಯಾವುದೋ ಒಂದು ನಿರ್ದಿಷ್ಟ ಗುಂಪಿನ ಜನರು ಇರಬಹುದು. ಹೀಗೆ ಯಾರೇ ನಿರ್ದಿಷ್ಟ ಸ್ವರೂಪದ ಸಂದೇಶಗಳನ್ನು ಕಳುಹಿಸಿದರೂ ಅದು ಸರ್ಕಾರದ ಕಣ್ಗಾವಲಿನ ವ್ಯಾಪ್ತಿಗೆ ಬರಲಿದೆ. ಜೊತೆಗೆ, ಸಂದೇಶ ರವಾನಿಸುವ ಅಥವಾ ಸ್ವೀಕರಿಸುವ ಮೊಬೈಲ್‌ಗಳು, ಕಂಪ್ಯೂಟರ್‌ಗಳು ಅಥವಾ ಯಾವುದೇ ದೂರಸಂಪರ್ಕ ಸಾಧನವನ್ನೂ ಸರ್ಕಾರ ವಶಕ್ಕೆ ಪಡೆಯಬಹುದಾಗಿದೆ ಎಂದು ಮಸೂದೆ ವಿವರಿಸಿದೆ. ಜೊತೆಗೆ, ರಾಷ್ಟ್ರೀಯ ಭದ್ರತೆ ಅಥವಾ ಸರ್ಕಾರ ವಿವರಿಸಿರುವ ಸಂದರ್ಭಗಳಲ್ಲಿ ಇಂಥ ನಿರ್ದಿಷ್ಟ ಸ್ವರೂಪದ ಸಂದೇಶಗಳನ್ನು ಸರ್ಕಾರವೇ ನೇಮಿಸುವ ಅಧಿಕಾರಿಯು ಪರಿಶೀಲಿಸಬಹುದಾಗಿದೆ.

ಜೊತೆಗೆ, ಇಂಥ ನಿರ್ದಿಷ್ಟ ಸ್ವರೂಪದ ಸಂದೇಶಗಳನ್ನು ಯಾವ ದೂರಸಂಪರ್ಕ ಸೇವೆಯಿಂದ ಅಥವಾ ದೂರಸಂಪರ್ಕ ಜಾಲದಿಂದ ಸ್ವೀಕರಿಸಲಾಗಿದೆ ಅಥವಾ ಕಳುಹಿಸಲಾಗಿದೆಯೋ ಅಂಥ ಸೇವೆ ಅಥವಾ ಜಾಲವನ್ನು ಸರ್ಕಾರವು ಸ್ಥಗಿತ ಮಾಡಬಹುದಾಗಿದೆ.

ಮೆಕ್ಸಿಕೋಗೆ ಹೊರಟ ಡಾಲಿ

ಧನಂಜಯ ಹಾಗೂ ಶಂಕರ್

'ಬಡವ ರಾಸ್ಕಲ್' ಬಳಗ ಮತ್ತೊಮ್ಮೆ ತೆರೆ ಮೇಲೆ ಬರಲು ಸಜ್ಜಾಗುತ್ತಿದೆ. ನಿರ್ದೇಶಕ ಶಂಕರ್ ಗುರು ನಿರ್ದೇಶಿಸಲಿರುವ ಹೊಸ ಸಿನಿಮಾ 'ಅಣ್ಣ from Mexico' ಸೆಟ್ಟೇರಿದ್ದು, ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು.

ಈ ಹಿಂದೆ ನಟ 'ಡಾಲಿ' ಧನಂಜಯ ಅವರ ಜನ್ಮದಿನದಂದು ಚಿತ್ರದ ಟೈಟಲ್ ಪೋಸ್ಟರ್ ಬಿಡುಗಡೆ ಮಾಡಿದ್ದ ಚಿತ್ರತಂಡವು, ಈಗ ಸದ್ದಿಲ್ಲದೇ ಮುಹೂರ್ತ ಮುಗಿಸಿ ಶೂಟಿಂಗ್ ಅಖಾಡಕ್ಕೆ ಹೆಜ್ಜೆ ಇಡಲು ಸನ್ನದ್ಧವಾಗಿದೆ. ಇತ್ತೀಚೆಗೆ ಬೆಂಗಳೂರಿನ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಮುಹೂರ್ತ ನಡೆಯಿತು. 2021ರಲ್ಲಿ ತೆರೆಗೆ ಬಂದ 'ಬಡವ ರಾಸ್ಕಲ್' ಚಿತ್ರದ ಮೂಲಕ ಧನಂಜಯ ಸಿನಿಮಾ ನಿರ್ಮಾಣ ಕ್ಷೇತ್ರಕ್ಕೂ ಕಾಲಿಟ್ಟಿದ್ದರು. ಡಾಲಿ ಪಿಕ್ಚರ್ಸ್‌ನಡಿ ನಿರ್ಮಾಣವಾಗಿದ್ದ ಈ ಸಿನಿಮಾವನ್ನು ಶಂಕರ್ ಗುರು ನಿರ್ದೇಶಿಸಿದ್ದರು. ಚಿತ್ರವು ಚಂದನವನದಲ್ಲಿ ಕೊಂಚ ಸದ್ದು ಮಾಡಿತ್ತು. ಇದೀಗ ಮತ್ತೊಮ್ಮೆ ಡಾಲಿ ಜೊತೆ ಶಂಕರ್ ಜೊತೆಯಾಗಿದ್ದಾರೆ. ಪಕ್ಕಾ ಆ್ಯಕ್ಷನ್ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರ ಇದಾಗಿದೆ ಎಂದಿದೆ ಚಿತ್ರತಂಡ. ದಿ ರಾಯಲ ಸ್ಟುಡಿಯೋಸ್ ಅಡಿಯಲ್ಲಿ ಸತ್ಯ ರಾಯಲ ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಐರಾ ಫಿಲ್ಮ್ಸ್ ಕೂಡ ಕೈಜೋಡಿಸಿದೆ. ಸಿನಿಮಾಗೆ ವಾಸುಕಿ ವೈಭವ್ ಸಂಗೀತ ನಿರ್ದೇಶನವಿದ್ದು, ಜನವರಿ ತಿಂಗಳಿನಿಂದ ಶೂಟಿಂಗ್ ಶುರುವಾಗಲಿದೆ. ಮೆಕ್ಸಿಕೋ ಸೇರಿದಂತೆ ಹಲವೆಡೆ ಚಿತ್ರೀಕರಣ ಮಾಡಲು ಚಿತ್ರತಂಡ ನಿರ್ಧರಿಸಿದೆ.

ತೆಲುಗಿನ 'ಪುಷ್ಪ–2' ಚಿತ್ರದ ಚಿತ್ರೀಕರಣ ಪೂರ್ಣಗೊಳಿಸಿರುವ ಧನಂಜಯ, ಸದ್ಯ 'ಉತ್ತರಕಾಂಡ' ಸಿನಿಮಾದ ಜೊತೆಗೆ ಈ ಸಿನಿಮಾದ ಚಿತ್ರೀಕರಣದಲ್ಲೂ ತೊಡಗಿಸಿಕೊಳ್ಳಲಿದ್ದಾರೆ. ❖

ಪರಾಕ್

'ಪರಾಕ್' ಎಂದ ರೋರಿಂಗ್ ಸ್ಟಾರ್

'ಬಘೀರ' ಚಿತ್ರದ ಟೀಸರ್ ಬಿಡುಗಡೆ ದಿನದಂದೇ ರೋರಿಂಗ್ ಸ್ಟಾರ್ ಶ್ರೀಮುರಳಿಯ ಹೊಸ ಪ್ರಾಜೆಕ್ಟ್ ಘೋಷಣೆಯಾಗಿದೆ. ಹೊಸಬರ ಜೊತೆ ಶ್ರೀಮುರಳಿ ಕೈಜೋಡಿಸಿದ್ದು, ಟೈಟಲ್ ಪೋಸ್ಟರ್ ರಿಲೀಸ್ ಆಗಿದೆ.

ರೋರಿಂಗ್ ಸ್ಟಾರ್ ಜನ್ಮದಿನದಂದು 'ಪರಾಕ್' ಚಿತ್ರದ ಶೀರ್ಷಿಕೆ ಘೋಷಣೆಯಾಗಿದ್ದು, ಹಾಲೇಶ್ ಕೋಗುಂಡಿ ಸಾರಥ್ಯ ಚಿತ್ರಕ್ಕಿದೆ. ಒಂದಷ್ಟು ಕಿರು ಚಿತ್ರಗಳನ್ನು ನಿರ್ದೇಶಿಸಿ ಅನುಭವವಿರುವ ಹಾಲೇಶ್‌ಗೆ 'ಪರಾಕ್' ಚೊಚ್ಚಲ ಸಿನಿಮಾ. ಹಾಲೇಶ್‌ಗೆ ಮಂಜುನಾಥ್ ಬರವಣಿಗೆಯಲ್ಲಿ ಜೊತೆಯಾಗಿದ್ದಾರೆ. ಆ್ಯಕ್ಷನ್ ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾವನ್ನು ಬ್ರ್ಯಾಂಡ್ ಕೋಆಪರೇಟ್ಸ್ ಪ್ರೊಡಕ್ಷನ್ ಪ್ರೈವೇಟ್ ಲಿಮಿಟೆಡ್ ನಿರ್ಮಾಣ ಮಾಡುತ್ತಿದೆ. ಕೋಗುಂಡಿ ಅಖಿಲೇಶ್ ಹಾಗೂ ಆಶಿಕ್ ಮಾಡಾಳು ಸಹ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ದಾವಣಗೆರೆ ಪ್ರತಿಭೆಗಳೇ ಒಂದಾಗಿ ಮಾಡುತ್ತಿರುವ 'ಪರಾಕ್' ಚಿತ್ರದ ಟೈಟಲ್ ಪೋಸ್ಟರ್ ಕುತೂಹಲ ಮೂಡಿಸುತ್ತಿದ್ದು, ಹೊಸ ಅವತಾರದಲ್ಲಿ ಶ್ರೀಮುರಳಿ ಕಾಣಿಸಿಕೊಳ್ಳಲಿದ್ದಾರೆ. 'ಪರಾಕ್' ಚಿತ್ರತಂಡ 2024ರ ಮೇ ಅಥವಾ ಜೂನ್ ತಿಂಗಳಿನಿಂದ ಶೂಟಿಂಗ್ ಅಖಾಡಕ್ಕೆ ಇಳಿಯಲಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಕೇರಳದಲ್ಲಿ ಹಿಂದೂಗಳ ಸ್ಥಿತಿಯು ದಯನೀಯವಾಗಿದೆ. ಅವರು ಹಿಂದೂ ಮಕ್ಕಳನ್ನೂ ಬಿಡುತ್ತಿಲ್ಲ'. 'ಕೇರಳದ ಹಿಂದೂಗಳ ಗೋಳನ್ನು ನೋಡಿ, ಭಕ್ತರನ್ನು ಪೊಲೀಸರು ತಮ್ಮ ವಾಹನದಲ್ಲಿ ತುಂಬುತ್ತಿದ್ದಾರೆ. ಅವರು ಹಿಂದೂ ಮಕ್ಕಳನ್ನೂ ಬಿಡದೆ ವಶಕ್ಕೆ ಪಡೆದುಕೊಳ್ಳುತ್ತಿದ್ದಾರೆ' ಎಂಬಂಥ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಬಾಲಕನೊಬ್ಬ ವಾಹನದ ಒಳಗೆ ಇರುವ ಮತ್ತು ಆತ ಅಳುತ್ತಿರುವ ಫೋಟೊವನ್ನು ಪೋಸ್ಟ್‌ನೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ತಪ್ಪು ಮಾಹಿತಿಗಳೊಂದಿಗೆ ಹಂಚಿಕೆಯಾಗುತ್ತಿರುವ ಸುದ್ದಿಯಾಗಿದೆ.



ಇತ್ತೀಚೆಗೆ ಕೇರಳದ ಶಬರಿಮಲೆಗೆ ಭೇಟಿ ನೀಡುವ ಭಕ್ತರ ಸಂಖ್ಯೆಯಲ್ಲಿ ತೀವ್ರ ಏರಿಕೆ ಕಂಡಿತ್ತು. ಒಬ್ಬ ಬಾಲಕ ಉಸಿರುಗಟ್ಟಿ ಮೃತಪಟ್ಟ ಘಟನೆಯೂ ನಡೆಯಿತು. ಫೋಟೊದಲ್ಲಿ ಇರುವ ಬಾಲಕ ತನ್ನ ತಂದೆಯೊಂದಿಗೆ ಶಬರಿಮಲೆಗೆ ಭೇಟಿ ನೀಡಿದ್ದ. ಜನಸಂದಣಿಯಲ್ಲಿ ತಂದೆಯಿಂದ ಆತ ತಪ್ಪಿಸಿಕೊಂಡು ಕೇರಳ ಸಾರಿಗೆ ವಾಹನ ಹತ್ತಿದ್ದ. ಈ ವೇಳೆ ಆತ ಪೊಲೀಸರಿಗೆ ಕೈಮುಗಿದು ತಂದೆಯೊಂದಿಗೆ ಕಳುಹಿಸಿಕೊಡಲು ಬೇಡಿಕೊಂಡಿದ್ದ. ನಂತರ, ತಂದೆಯೊಂದಿಗೆ ಬಾಲಕನ್ನು ಪೊಲೀಸರು ಸೇರಿಸಿದ್ದಾರೆ. ಈ ಬಗ್ಗೆ ಹಲವು ಸುದ್ದಿ ಸಂಸ್ಥೆಗಳು ವಿಡಿಯೊ ಸಹಿತ ವರದಿ ಮಾಡಿದ್ದವು. ಜೊತೆಗೆ, ಕೇರಳ ಪೊಲೀಸರು ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಬಾಲಕನನ್ನು ನಾವು ವಶಕ್ಕೆ ಪಡೆದಿರಲಿಲ್ಲ ಎಂದಿದ್ದಾರೆ. ಆದ್ದರಿಂದ, ಹಿಂದೂ ಬಾಲಕರನ್ನೂ ಕೇರಳ ಪೊಲೀಸರು ವಶಕ್ಕೆ ಪಡೆದುಕೊಳ್ಳುತ್ತಿದ್ದಾರೆ ಎನ್ನುವುದು ಸುಳ್ಳು ಸುದ್ದಿ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಮಂಗಳವಾರ ಡಿಸೆಂಬರ್ 19, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಸಪ್ತಮಿ ಗಂ. 13-07 **ನಕ್ಷತ್ರ:** ಪೂರ್ವಾಭಾದ್ರ ಗಂ. 24-02 **ಯೋಗ:** ಸಿದ್ಧಿ (ಅಸ್ರಿಕ್) ಗಂ 18-38 **ಕರಣ:** ವಣಿಜ ಗಂ. 13-07, ಧನು ಮಾಸದ 03 ನೇ ದಿನ, **ಮಳೆನಕ್ಷತ್ರ:** ಮೂಲಾ 1.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-51 **ಸೂರ್ಯಾಸ್ತ:** 06-04
ಮುಸ್ಲಿಂ ದಿನಾಂಕ: 05 ಜುಮಾದುಸ್ಸಾನಿ, **ದಿನ ವಿಶೇಷ:** ಮಿತ್ರ ಸಪ್ತಮಿ
ಅದೃಷ್ಟ ಸಂಖ್ಯೆ: 9, 5

ಮೇಷ: ಇಂದು ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿಯೂ ಯಶಸ್ಸು ಪಡೆಯುವಿರಿ. ಗಿಡಗಳ ನರ್ಸರಿ ಮಾಡುವವರಿಗೆ ಕೀಟ ಬಾಧೆ ಬಹಳ ಪ್ರಮಾಣದಲ್ಲಿ ಉಂಟಾಗುವುದು.

ವೃಷಭ: ದಿನಾಂತ್ಯದಲ್ಲಿ ಆಭರಣ ಅಥವಾ ಕಲಾವಸ್ತುಗಳನ್ನು ಖರೀದಿಸುವ ಮನಸ್ಸು ಬರಲಿದೆ. ನೆಮ್ಮದಿಯ ವಿಷಯವೇನೆಂದರೆ ಧನಾಗಮದಲ್ಲಿ ಚಿಂತೆ ಇರದು. ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ಸೌಲಭ್ಯವಿರಲಿದೆ.

ಮಿಥುನ: ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಕೆಲಸದಲ್ಲಿ ತೊಡಗಿಸಿಕೊಂಡಲ್ಲಿ ಯಶಸ್ಸು ಪ್ರಾಪ್ತಿಯಾಗುವುದು. ತೀರ್ಥಯಾತ್ರೆ ಕೈಗೊಳ್ಳುವ ಬಗ್ಗೆ ಮನೆಯವರೊಡನೆ ಸಮಾಲೋಚನೆ ನಡೆಸಿ. ಆತ್ಮೀಯರ ಸಮಾಗಮವಾಗಲಿದೆ.

ಕರ್ಕಾಟಕ: ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಹವರ್ತಿಗಳ ಅಭಿಪ್ರಾಯ ಪಡೆದುಕೊಳ್ಳಿ. ಎಲ್ಲ ಕಷ್ಟಗಳೂ ನಿವಾರಣೆಯಾಗಲಿವೆ. ಮನರಂಜನೆಗಾಗಿ ಕೆಲ ಸಮಯವನ್ನು ಕಳೆಯುವಂತಾಗಲಿದೆ.

ಸಿಂಹ: ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಆ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಎದುರಾಗುವುದು. ವ್ಯವಹಾರ ರಂಗದಲ್ಲಿ ಆತ್ಮೀಯರ ಸಲಹೆ ಸ್ವೀಕರಿಸಿ ನಷ್ಟವು ತೋರಿ ಬರುವುದು.

ಕನ್ಯಾ: ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೂ ಸುಲಭವಾಗಿ ಪರಿಹಾರ ಸಿಗಲಿದೆ. ಮಾನಸಿಕ ಸ್ಥಿತಿ ಏರುಪೇರಾದ ಸಮಯದಲ್ಲಿ ಹಿರಿಯರ ಸಲಹೆ ಸಮಾಧಾನ ತರಲಿದೆ.

ತುಲಾ: ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಜನೆಯನ್ನು ಈ ದಿನ ಕಾರ್ಯರೂಪಕ್ಕೆ ತರಬಹುದು. ಹಣಕಾಸಿನ ವ್ಯವಹಾರ ನಡೆಸುವವರು ನೂತನ ಯೋಜನೆಗಳನ್ನು ವಿಸ್ತರಿಸಬಹುದು. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ವೃಶ್ಚಿಕ: ಸಹೋದ್ಯೋಗಿಗಳಲ್ಲಿ ಪ್ರೀತಿಯಿಂದ ವರ್ತಿಸುವುದರಿಂದ ನಿಮ್ಮ ಕೆಲಸ ಸರಾಗವಾಗಿ ಸಾಗಲಿದೆ. ದೇಹಾರೋಗ್ಯದ ಸಲುವಾಗಿ ಎಲ್ಲ ಕೆಲಸ ಬಿಟ್ಟು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ನಿಮಗೆ ಅನಿಸಲಿದೆ.

ಧನು: ನಿಮ್ಮ ಮೇಲುಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಸಹವರ್ತಿಗಳೊಡನೆ ಸಂಯಮದಿಂದ ವರ್ತಿಸಿ. ಬಂದ ಸಮಸ್ಯೆಗಳು ಆಂಜನೇಯನ ಅನುಗ್ರಹದಿಂದ ಸರಾಗವಾಗಿ ದೂರಾಗಲಿವೆ.

ಮಕರ: ಏರುಪೇರಾಗಿದ್ದ ನಿಮ್ಮ ವ್ಯಾಪಾರ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿಕೊಳ್ಳಲು ಅವಕಾಶ ಸಿಗಲಿದೆ. ಹಣಕಾಸು ಸಂಸ್ಥೆಗಳ ನೆರವಿನಿಂದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು.

ಕುಂಭ: ಆರ್ಥಿಕವಾಗಿ ಲಾಭ ಪಡೆಯುವುದಕ್ಕೆ ಹೋರಾಟ ನಡೆಸಬೇಕಾಗುವ ಪರಿಸ್ಥಿತಿ ಎದುರಾಗಬಹುದು. ಈ ದಿನ ಯಾರಲ್ಲಿಯೂ ಯಾವ ವಿಚಾರವನ್ನೂ ಮುಚ್ಚಿಡಬೇಡಿ. ಕುಟುಂಬದವರ ಹೆಚ್ಚಿನ ಜವಾಬ್ದಾರಿ ನಿಮ್ಮ ಮೇಲಿರುತ್ತದೆ.

ಮೀನ: ನೀವಿಂದು ಇನ್ನೊಬ್ಬರ ಅಧೀನದಿಂದ ಹೊರಬಂದು ಸ್ವತಂತ್ರ ಮನೋಭಾವದಿಂದ ಜೀವನವನ್ನು ನಡೆಸುವಂತಾಗಲಿದೆ. ನಿಮಗೆ ಒದಗಿಬರಲಿರುವ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ.

ಹೇಳುವ ಯೋಗ್ಯತೆ

ನುಡಿ ಬೆಳಗು



ಪಿ. ಚಂದ್ರಿಕಾ

ಆ ಹುಡುಗನಿಗೆ ಬೆಲ್ಲ ತಿನ್ನುವ ಹುಚ್ಚು. ಬೇಡವೆಂದು ಹೇಳಿ ಹೇಳಿ ಸುಸ್ತಾದ ತಾಯಿ ಕೊನೆಗೆ ದಾರಿಕಾಣದೆ ಹಿರಿಯರ ಮೂಲಕ ಹೇಳಿಸುವ ಉದ್ದೇಶದಿಂದ ಮಗನನ್ನು ಗಾಂಧೀಜಿಯ ಹತ್ತಿರ ಕರೆತಂದಿದ್ದಳು. ಎಲ್ಲವನ್ನೂ ಕೇಳಿಸಿಕೊಂಡ ಗಾಂಧೀಜಿಯು ಆಕೆಗೆ ಒಂದು ವಾರ ಬಿಟ್ಟು ಬರಲಿಕ್ಕೆ ಹೇಳಿದರು. ಆಕೆಗೆ ಮಾತ್ರವಲ್ಲ ಸುತ್ತ ಇರುವ ಎಲ್ಲರಿಗೂ ಇದು ಅಚ್ಚರಿ, 'ಬೆಲ್ಲವನ್ನು ತಿನ್ನಬೇಡ' ಎಂದು ಹೇಳಲಿಕ್ಕೆ ಗಾಂಧೀಜಿಗೆ ವಾರ ಬೇಕೇ ಎಂದು.

ಗಾಂಧೀಜಿಯವರು ಕಸ್ತೂರಿ ಬಾ ಅವರನ್ನು ಕರೆದು 'ಇನ್ನೊಂದು ವಾರ ಬೆಲ್ಲ ನಮ್ಮ ಕಣ್ಣಿಗೆ ಕಾಣದಿರುವಂತೆ ಮಾಡಬೇಕು' ಎಂದು ತಾಕೀತು ಮಾಡಿದರು. ಹುಡುಗನಿಗೆ ಬುದ್ಧಿ ಹೇಳುವುದಕ್ಕೂ ತಮ್ಮ ಕಣ್ಣಿಗೆ ಬೆಲ್ಲ ಕಾಣದಿರುವಂತೆ ಇಡುವುದಕ್ಕೂ ಕಾರಣ ಕಸ್ತೂರಿ ಬಾಗೆ ತಿಳಿಯಲಿಲ್ಲ. ಆದರೆ ಗಾಂಧೀಜಿಯವರನ್ನು ಕೇಳಲಿಕ್ಕೆ ಯಾರಿಗೂ ಧೈರ್ಯ ಬರಲಿಲ್ಲ.

ವಾರ ಕಳೆದ ನಂತರ ತಾಯಿ ಅದೇ ಮಗುವಿನ ಜೊತೆ ಬಂದಳು. ಗಾಂಧೀಜಿ ಮಗುವನ್ನು ಕೂರಿಸಿಕೊಂಡು ಬೆಲ್ಲ ತಿನ್ನದಿರುವಂತೆ ಅದರ ಪರಿಣಾಮಗಳ ಜೊತೆ ವಿವರಿಸಿದರು. ಜೊತೆಗೆ 'ಮಗೂ ನಿನ್ನ ತಾಯಿ ಇದರಿಂದ ಕಂಗಾಲಾಗಿದ್ದಾಳೆ. ಅವಳ ನೆಮ್ಮದಿಗಾಗಿ ಬೆಲ್ಲ ತಿನ್ನುವುದನ್ನು ನಿಲ್ಲಿಸು' ಎಂದರು. ಆ ಹುಡುಗ 'ಆಯ್ತು ಇನ್ನು ಬೆಲ್ಲ ತಿನ್ನುವುದಿಲ್ಲ' ಎಂದು ಮಾತುಕೊಟ್ಟ.

ಹೊರಡುವ ಮುನ್ನ ಮನಸ್ಸು ತಡೆಯದ ಆ ತಾಯಿ 'ಇದನ್ನು ವಾರದ ಮುಂಚೆ ಹೇಳಬಹುದಿತ್ತಲ್ಲ' ಎಂದು ಕೇಳಿಬಿಡುತ್ತಾಳೆ.

ಸುತ್ತ ಇದ್ದವರು ಗಾಂಧೀಜಿಯವರು ಏನು ಹೇಳುತ್ತಾರೆ ಎನ್ನುವ ತವಕದಲ್ಲಿ ನೋಡುತ್ತಿದ್ದಾರೆ. ಆಗ ಗಾಂಧೀಜಿಯವರು 'ಆಗಲೇ ಹೇಳಬಹುದಿತ್ತು. ಆದರೆ ವಾರದ ಹಿಂದೆ ನಾನು ಈ ಮಾತನ್ನು ಹೇಳುವ ಹಾಗಿರಲಿಲ್ಲ. ಯಾಕೆಂದರೆ ನಾನೇ ಸ್ವತಃ ಬೆಲ್ಲ ತಿನ್ನುತ್ತಿದ್ದೆ ಅದೂ ವಿಪರೀತವಾಗಿ. ಈ ವಾರದಲ್ಲಿ ಕಷ್ಟಪಟ್ಟು ಅದನ್ನು ಬಿಟ್ಟೆ. ನಾನೇ ಆ ಕೆಲಸವನ್ನು ಮಾಡುತ್ತಾ ಇನ್ನೊಬ್ಬರಿಗೆ ಮಾಡಬೇಡಿ ಎಂದು ಹೇಳಲು ಸಾಧ್ಯವೇ' ಎಂದರು.

ಯಾರಿಗಾದರೂ ಬುದ್ಧಿ ಹೇಳುವುದು ಸುಲಭ. ಆದರೆ ಹೇಳುವವರಿಗೆ ತಾವೇನು ಮಾಡುತ್ತಿದ್ದೇವೆ ಎನ್ನುವ ಅರಿವಿರಬೇಕು ಅಲ್ಲವೇ? ❖

ಪದಬಂಧ 5534

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈ ಮೋಹ ಅತಿಶಯವಾದುದು (3)
3.ಶ್ವಾಸವಿರುವಾಗಲೇ ನಂಬಿಕೆ ದ್ರೋಹ (5)
6.ಸಂಧಿಗೆ ನುಗ್ಗಲು ಒಳ್ಳೆ ಅವಕಾಶ! (3)
7.ಕಾದಲನ ಹತ್ತಿರ ಕಳೆದ ಸಮಯ (2)
8.ಒಳ್ಳೆಯ ಸ್ವಭಾವವಿಲ್ಲಿ ತಿರುವುಮುರುವಾಗಿದೆ (3)
9.ಪಡುವಣದ ವಿರುದ್ಧ ದಿಕ್ಕು (3)
10.ಅಜವನ್ನು ಹಿಡಿದಿರುವ ಕಿರಿ ಸಹೋದರ (3)
13.ದಿನಂಪ್ರತಿಯಲ್ಲಿರುವ ನಕಲು (2)
14.ಇದು ತೀಕ್ಷ್ಣವಾದುದು (3)
15.ವರನಿಗೆ ನೀಡುವ ಹಣ (5)
16.ಬಗೆಹರಿಯದ ಸಮಸ್ಯೆ (3)

ಮೇಲಿಂದ ಕೆಳಕ್ಕೆ

1.ಭಾಷೆಯ ನಿಯಮಗಳನ್ನು ತಿಳಿಸುವ ಶಾಸ್ತ್ರ (4)
2.ಹಸುವಿನ ಹತ್ತಿರವಿರುವ ಮಗು (4)
3.ವೀಧಿಯಲ್ಲಿ ಪರೀಕ್ಷಿಸಿಕೊಂಡಿರುವ ಅದೃಷ್ಟ (2)
4.ಇದು ಒಳ್ಳೆ ಸಮಯ! (3)
5.ತಬ್ಬಿಕೊಂಡಾಗಲೇ ಕಕ್ಕಾಬಿಕ್ಕಿ! (3)
7.ಕಾರಣಿಕ ನುಡಿದಿಹ ಉದ್ದೇಶ! (3)
9.ವಿರಳವಾಗಿರುವ ಮೂರ್ತಿ (3)
10.ಅವನು ಈ ತರ ತೋರಿದ ಗಡಿಬಿಡಿ! (4)
11.ಎಡಬಿಡದೆ ಸುರಿಯುತ್ತಿರುವ ಮಳೆ (4)
12.ಗಡಕ್ಕನೆ ಬಂದೆರಗಿದ ಕೋತಿ (3)
13. ದೇವರಿಗೆ ಅರ್ಪಿಸಿ ಪಡೆದುದು (3)
14.ಹಣೆಗೆಗೆ ತಾಕುತ್ತಿರುವ ನೊಸಲು (2)



5533ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಒಸಗೆ 3.ಸಾಹಸ
5.ಧನಿಯ 6.ಹೊಸತನ
8.ಕಸ 10.ಬೆಸುಗೆ
11.ಸೆದ 13.ಪರಹಿತ
15.ಜವಳಿ 16.ಎಣಿಕೆ
17.ಸಂಕಲ್ಪ

ಮೇಲಿಂದ ಕೆಳಕ್ಕೆ:
2.ಸಮಯ 4.ಹರಿತ
5.ಧನಿಕ 6.ಹೊಲಸುನಾತ
7.ನಕಾಸೆ 9.ಸಲ್ಲಾಪ
12.ದಲ್ಲಾಳಿ 14.ರಮಣಿ
15.ಜಟಕ

ಸುಡೊಕು 5920

5			9		2	1		6
1		6						
	8	2		6			4	5
7								
	5		7	1	4	2		8
4					6			7
2		5		7			6	
						8		
8		1	6		3		2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5919 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,456
ಇಂದಿನ ಅಂತ್ಯ	21,418
▼	38
ದಿನದ ಕನಿಷ್ಠ	21,365

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹600
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹604

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1630)
ಸೋಯಾ (ರಿಫೈನ್ಡ್)	₹900 (905)
ಸೂರ್ಯಕಾಂತಿ (ರಿಫೈನ್ಡ್)	₹915 (920)
ಪಾಮೋಲಿನ್	₹824 (820)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹230-458
ದ್ವಿತಳಿ (ಬಿ.ವಿ)	₹277-569

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.10
£ ಪೌಂಡ್	105.20
€ ಯುರೊ	90.69
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8250-8250
ತಿಪಟೂರು	₹7000-8150
ತುರುವೇಕೆರೆ	₹8100-8100

ಮಳೆ ಕೊರತೆ: ಮಾವಿಗೆ ವರದಾನ

ಅಕಾಲಿಕ ಮಳೆ ಸುರಿಯದಿದ್ದರೆ ಉತ್ತಮ ಫಸಲು ನಿರೀಕ್ಷೆ

• ನೃಪತುಂಗ ಎಸ್.ಕೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ನಾಗೇನಹಳ್ಳಿಯ ಬಸವರಾಜಪ್ಪ ನಂಜುಂಡಪ್ಪ ಅವರ ತೋಟದಲ್ಲಿ ಹೂವು ಬಿಟ್ಟಿರುವ ಮಾವಿನ ಮರ

ದಾವಣಗೆರೆ: ಮಳೆ ಕೊರತೆಯಿಂದಾಗಿ ಈ ವರ್ಷ ರಾಜ್ಯದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಆಹಾರದ ಬೆಳೆಗಳನ್ನು ಬೆಳೆಯಲಾಗಿಲ್ಲ. ಆದರೆ, ಹೆಚ್ಚು ಮಳೆ ಬೀಳದಿರುವುದು ಮಾವಿನ ಫಸಲಿಗೆ ವರವಾಗಿ ಪರಿಣಮಿಸಿದೆ. ಈ ವರ್ಷ ನಿಗದಿಗಿಂತಲೂ ಮುನ್ನವೇ ಮಾವು ಹೂಬಿಡಲು ಸಹಕಾರಿಯಾಗಿದೆ.

ಸಾಮಾನ್ಯವಾಗಿ ಏಪ್ರಿಲ್, ಮೇ ತಿಂಗಳಲ್ಲಿ ಮಾರುಕಟ್ಟೆ ಪ್ರವೇಶಿಸುತ್ತಿದ್ದ ಮಾವು, ಈ ಬಾರಿ ಮುಂದಿನ ವರ್ಷದ ಮಾರ್ಚ್‌ನಲ್ಲಿಯೇ ಗ್ರಾಹಕರ ಕೈ ಸೇರುವ ಸಾಧ್ಯತೆ ಇದೆ. ಅಕಾಲಿಕವಾಗಿ ಮಳೆ ಸುರಿಯದಿದ್ದರೆ, ಉತ್ತಮ ಫಸಲು ಸಿಗುವ ನಿರೀಕ್ಷೆಯೂ ಇದೆ.

ರಾಜ್ಯದಲ್ಲಿ 1.60 ಲಕ್ಷ ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ವಾರ್ಷಿಕ ಸರಾಸರಿ 10 ರಿಂದ 14 ಲಕ್ಷ ಮೆಟ್ರಿಕ್ ಟನ್ ಮಾವಿನ ಇಳುವರಿ ಸಿಗುತ್ತದೆ. ಆದರೆ, ಅಧಿಕ ಮಳೆಯಿಂದಾಗಿ ಕಳೆದ ಕೆಲವು ವರ್ಷಗಳಿಂದ 7 ರಿಂದ 8 ಲಕ್ಷ ಟನ್ ಮಾತ್ರವೇ ಇಳುವರಿ ದೊರೆತಿದೆ. ಈ ವರ್ಷ ಹೆಚ್ಚಿನ ಮಳೆಯಾಗಿಲ್ಲವಾದ್ದರಿಂದ 15 ಲಕ್ಷ ಟನ್ ಇಳುವರಿ ಸಿಗಬಹುದೆಂದು ಅಂದಾಜಿಸಲಾಗಿದೆ.

ರಾಜ್ಯದ ಮಟ್ಟಿಗೆ ಕೋಲಾರ ಜಿಲ್ಲೆಯಲ್ಲಿ ಅತಿಹೆಚ್ಚು ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಆ ಜಿಲ್ಲೆಯಲ್ಲಿ ಈ ವರ್ಷ 46,000 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ. ರಾಮನಗರ, ಧಾರವಾಡ, ದಾವಣಗೆರೆ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲೂ ಹೆಚ್ಚಾಗಿ ಮಾವು ಬೆಳೆಯಲಾಗುತ್ತಿದೆ.

‘ದಾವಣಗೆರೆ ಜಿಲ್ಲೆಯಲ್ಲಿ 1,500 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಭಾಗದಲ್ಲೇ 1,200 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯುತ್ತಿದ್ದಾರೆ. ಅಲ್ಫಾನ್ಸೋ ತಳಿಯನ್ನೇ ಬೆಳೆಗಾರರು ಹೆಚ್ಚಾಗಿ ನೆಚ್ಚಿಕೊಂಡಿದ್ದಾರೆ. ಜಿಲ್ಲೆಯ ಮಾವಿನ ಹಣ್ಣುಗಳನ್ನು ಪುಣೆ, ದೆಹಲಿಗೆ ರಫ್ತು ಮಾಡಲಾಗುತ್ತದೆ’ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಘವೇಂದ್ರ ಪ್ರಸಾದ್ ಹೇಳಿದರು.

‘ಮೋಡಕವಿದ ವಾತಾವರಣದಿಂದ ಆತಂಕ’

‘ಈಚೆಗೆ ಕೆಲ ದಿನಗಳಿಂದ ಮೋಡಕವಿದ ವಾತಾವರಣ ಇದೆ. ಇದರಿಂದ ಹೂವು ಬಿಡುವುದು ಅಲ್ಪ ವಿಳಂಬವಾಗಬಹುದು. ಮುಂದಿನ ಎರಡು ತಿಂಗಳು ಬಿಸಿಲಿನ ವಾತಾವರಣ ಹೆಚ್ಚಾಗಿರಲಿದ್ದು, ಮಾವು ಬೆಳೆಗೆ ಅನುಕೂಲವಾಗಿರಲಿದೆ’ ಎಂದು ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ನಾಗೇನಹಳ್ಳಿಯ ಬಸವರಾಜಪ್ಪ ನಂಜುಂಡಪ್ಪ ವಿಶ್ವಾಸ ವ್ಯಕ್ತಪಡಿಸಿದರು.

‘ನಮ್ಮ ಭಾಗದ ಮಣ್ಣಿಗೆ ಅಲ್ಫಾನ್ಸೋ ಹಾಗೂ ಬಾದಾಮಿ ತಳಿಗಳೇ ಸೂಕ್ತವಾಗಿದ್ದು, ಅವುಗಳನ್ನೇ ಹೆಚ್ಚಾಗಿ ಬೆಳೆಯುತ್ತಿದ್ದೇವೆ’ ಎಂದು ಅವರು ಹೇಳುತ್ತಾರೆ.

ಮಹಾರಾಷ್ಟ್ರ, ಕರ್ನಾಟಕದಲ್ಲಿ ಕಬ್ಬು ಅರೆಯುವಿಕೆ ವಿಳಂಬ: ಸಕ್ಕರೆ ಕಾರ್ಖಾನೆಗಳ ಸಂಸ್ಥೆ ಮಾಹಿತಿ

ಸಕ್ಕರೆ ಉತ್ಪಾದನೆ ಶೇ 11ರಷ್ಟು ಕುಸಿತ

ನವದೆಹಲಿ (ಪಿಟಿಐ): ದೇಶದಲ್ಲಿ 2023–24ನೇ ಸಾಲಿನ ಮಾರುಕಟ್ಟೆ ವರ್ಷದ ಎರಡೂವರೆ ತಿಂಗಳಲ್ಲಿ (ಅಕ್ಟೋಬರ್‌ನಿಂದ ಡಿಸೆಂಬರ್ 15ರ ವರೆಗೆ) ಸಕ್ಕರೆ ಉತ್ಪಾದನೆಯು ಶೇ 11ರಷ್ಟು ಕುಸಿತವಾಗಿದೆ.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿನ ಸಕ್ಕರೆ ಕಾರ್ಖಾನೆಗಳು ಈ ವರ್ಷ ಕಬ್ಬು ಅರೆಯುವಿಕೆಯನ್ನು 10ರಿಂದ 15 ದಿನಗಳ ಕಾಲ ತಡವಾಗಿ ಪ್ರಾರಂಭಿಸಿರುವುದೇ ಉತ್ಪಾದನೆ ಕಡಿಮೆಯಾಗಲು ಕಾರಣವಾಗಿದೆ. ಒಟ್ಟಾರೆ 8.9 ಲಕ್ಷ ಟನ್‌ನಷ್ಟು ಉತ್ಪಾದನೆ ಕುಸಿದಿದೆ ಎಂದು ಭಾರತೀಯ ಸಕ್ಕರೆ ಕಾರ್ಖಾನೆಗಳ ಸಂಸ್ಥೆ (ಐಎಸ್‌ಎಂಎ) ತಿಳಿಸಿದೆ.

ಸರಕಿನ ಉತ್ಪಾದನೆ, ಮಾರುಕಟ್ಟೆ ಸೇರಿದಂತೆ ಆಹಾರಕ್ಕೆ ಬಳಕೆ, ಕಬ್ಬು ಬಿತ್ತನೆ, ರಫ್ತು ಆಧಾರದ ಮೇಲೆ ಮಾರುಕಟ್ಟೆ ವರ್ಷವನ್ನು ನಿಗದಿಪಡಿಸಲಾಗುತ್ತದೆ. ಇದರ ಅನ್ವಯ

ಅಕ್ಟೋಬರ್‌ನಿಂದ ಸೆಪ್ಟೆಂಬರ್‌ವರೆಗೆ ಸಕ್ಕರೆಯ ಮಾರುಕಟ್ಟೆ ವರ್ಷವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದೆ.

ಉತ್ಪಾದನೆ ಎಷ್ಟು?: ಅಕ್ಟೋಬರ್‌ನಿಂದ ಡಿಸೆಂಬರ್ 15ರವರೆಗೆ ಸಕ್ಕರೆ ಉತ್ಪಾದನೆಯು 74.05 ಲಕ್ಷ ಟನ್‌ಗೆ ತಲುಪಿದೆ. ಹಿಂದಿನ ವರ್ಷ ಈ ಅವಧಿಯಲ್ಲಿ 82.95 ಲಕ್ಷ ಟನ್ ಉತ್ಪಾದನೆಯಾಗಿತ್ತು ಎಂದು ಐಎಸ್‌ಎಂಎ ಹೇಳಿದೆ.

ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಕಬ್ಬು ಅರೆಯುವಿಕೆ ಸ್ಥಗಿತಗೊಳಿಸುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಹೆಚ್ಚುತ್ತಿದೆ. ಒಟ್ಟು 497 ಕಾರ್ಖಾನೆಗಳು ಸ್ಥಗಿತಗೊಂಡಿವೆ ಎಂದು ತಿಳಿಸಿದೆ.

ಎಥೆನಾಲ್ ಉತ್ಪಾದನೆಗೆ ಸಕ್ಕರೆ ಬಳಕೆಯ ಮಿತಿ ಹೊರತುಪಡಿಸಿ ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ ದೇಶದಲ್ಲಿ 325 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಲಿದೆ ಎಂದು ಕಳೆದ ವಾರದ ಐಎಸ್‌ಎಂಎ ಅಂದಾಜಿಸಿತ್ತು. ಅಲ್ಲದೇ, ಕಳೆದ ವರ್ಷ ಕಾರ್ಖಾನೆಗಳ ಬಳಿ ಮಾರಾಟವಾಗದ 56 ಲಕ್ಷ ಟನ್‌ನಷ್ಟು ಸಕ್ಕರೆ ದಾಸ್ತಾನಿದೆ. ಈ ವರ್ಷದ ಒಟ್ಟು 285 ಲಕ್ಷ ಟನ್‌ನಷ್ಟು ಬೇಡಿಕೆ ಇದೆ ಎಂದು ಅಂದಾಜಿಸಿದೆ.

ಮತ್ತೊಂದೆಡೆ ದೇಶೀಯ ಮಾರುಕಟ್ಟೆಯಲ್ಲಿ ಪೂರೈಕೆ ಹೆಚ್ಚಳ ಮತ್ತು ಬೆಲೆ ನಿಯಂತ್ರಿಸಲು ಪ್ರಸಕ್ತ ವರ್ಷದಲ್ಲಿ ಸಕ್ಕರೆ ರಫ್ತಿಗೂ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ. 2022–23ನೇ ಸಾಲಿನಲ್ಲಿ 64 ಲಕ್ಷ ಟನ್‌ನಷ್ಟು ಸಕ್ಕರೆ ರಫ್ತು ಮಾಡಲಾಗಿದೆ.

ಅಂಕಿಅಂಶಗಳು

325 ಲಕ್ಷ ಟನ್
ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿನ ಸಕ್ಕರೆ ಉತ್ಪಾದನೆ ನಿರೀಕ್ಷೆ

64 ಲಕ್ಷ ಟನ್
ಹಿಂದಿನ ಸಾಲಿನಡಿ ರಫ್ತು ಮಾಡಿದ ಸಕ್ಕರೆ

17 ಲಕ್ಷ ಟನ್
ಎಥೆನಾಲ್ ತಯಾರಿಕೆಗೆ ನಿಗದಿಪಡಿಸಿರುವ ಸಕ್ಕರೆ ಮಿತಿ

ಉತ್ತರಪ್ರದೇಶದಲ್ಲಿ ಉತ್ಪಾದನೆ ಹೆಚ್ಚಳ

ಮಹಾರಾಷ್ಟ್ರ ಮತ್ತು ಕರ್ನಾಟಕಕ್ಕೆ ಹೋಲಿಸಿದರೆ ಉತ್ತರಪ್ರದೇಶದಲ್ಲಿ ಸಕ್ಕರೆ ಉತ್ಪಾದನೆ ಹೆಚ್ಚಳವಾಗಿದೆ. ಎರಡೂವರೆ ತಿಂಗಳಿನಲ್ಲಿ 22.11 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 20.26 ಲಕ್ಷ ಟನ್ ಉತ್ಪಾದನೆಯಾಗಿತ್ತು ಎಂದು ಐಎಸ್‌ಎಂಎ ವಿವರಿಸಿದೆ.

ಮಹಾರಾಷ್ಟ್ರದಲ್ಲಿ ಹಿಂದಿನ ವರ್ಷ (ಎರಡೂವರೆ ತಿಂಗಳಲ್ಲಿ) 33.02 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾದರೆ, ಈ ವರ್ಷ 24.45 ಲಕ್ಷ ಟನ್‌ನಷ್ಟು ಉತ್ಪಾದನೆಯಾಗಿದೆ. ಕರ್ನಾಟಕದಲ್ಲಿ ಕಳೆದ ಬಾರಿ ಈ ಅವಧಿಯಲ್ಲಿ 19.20 ಲಕ್ಷ ಟನ್ ಉತ್ಪಾದನೆಯಾಗಿತ್ತು. ಈ ವರ್ಷ 16.95 ಲಕ್ಷ ಟನ್ ಉತ್ಪಾದನೆಯಾಗಿದೆ ಎಂದು ವಿವರಿಸಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13400
ಎಸಿ	₹7690
ಆರ್‌ಪಿ	₹10200
ಆರ್‌ಸಿ	₹6360

ನೇರ ತೆರಿಗೆ ಸಂಗ್ರಹ ಶೇ 21 ಹೆಚ್ಚಳ

ಡಿಸೆಂಬರ್ 17ರವರೆಗೆ ₹13.70 ಲಕ್ಷ ಕೋಟಿ ಸಂಗ್ರಹ: ಐ.ಟಿ ಇಲಾಖೆ

ನವದೆಹಲಿ (ಪಿಟಿಐ): ದೇಶದಲ್ಲಿ 2023–24ನೇ ಆರ್ಥಿಕ ಸಾಲಿನಡಿ ನೇರ ತೆರಿಗೆಯ ನಿವ್ವಳ ಸಂಗ್ರಹವು ಒಟ್ಟು 13.70 ಲಕ್ಷ ಕೋಟಿಯಷ್ಟಾಗಿದೆ ಎಂದು ಕೇಂದ್ರ ಆದಾಯ ತೆರಿಗೆ ಇಲಾಖೆಯು ಸೋಮವಾರ ತಿಳಿಸಿದೆ.

ಕಳೆದ ಸಾಲಿಗೆ ಹೋಲಿಸಿದರೆ ಶೇ 21ರಷ್ಟು ತೆರಿಗೆ ಸಂಗ್ರಹ ಹಿಗ್ಗಿದೆ. ಕಂಪನಿಗಳ ವರಮಾನ ತೆರಿಗೆ (ಸಿಐಟಿ) ಹಾಗೂ ವೈಯಕ್ತಿಕ ಆದಾಯ ತೆರಿಗೆ (ಪಿಐಟಿ) ಮೂಲಕ ಈ ವರ್ಷ ₹18.23 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಈ ಪೈಕಿ ಶೇ 75ರಷ್ಟು ಸಂಗ್ರಹವಾಗಿದೆ ಎಂದು ಹೇಳಿದೆ.

ಒಟ್ಟು 13,70,388 ಕೋಟಿ (ಡಿಸೆಂಬರ್ 17ರ ವರೆಗೆ) ತೆರಿಗೆ ಸಂಗ್ರಹಿಸಲಾಗಿದೆ. ಈ ಪೈಕಿ ಕಂಪನಿಗಳ ವರಮಾನ ತೆರಿಗೆ ಮೊತ್ತ ₹6.95 ಲಕ್ಷ ಕೋಟಿ ಆಗಿದೆ. ವೈಯಕ್ತಿಕ ಆದಾಯ ತೆರಿಗೆ ಹಾಗೂ ಹೊಸ ಷೇರುಗಳ ವಹಿವಾಟಿನ ಮೇಲಿನ ತೆರಿಗೆಯಿಂದ ₹6.73 ಲಕ್ಷ ಕೋಟಿ ಸಂಗ್ರಹಿಸಲಾಗಿದೆ ಎಂದು ವಿವರಿಸಿದೆ. ಅಲ್ಲದೇ, ಡಿಸೆಂಬರ್ 17ರ ವರೆಗೆ ತೆರಿಗೆದಾರರಿಗೆ ₹2.25 ಲಕ್ಷ ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ ಎಂದು ತಿಳಿಸಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ ₹11,35,554 ಕೋಟಿ ತೆರಿಗೆ ಸಂಗ್ರಹವಾಗಿತ್ತು.

₹5,095 ಕೋಟಿ ಮೌಲ್ಯದ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು (ಐ.ಟಿ) 2019–20ರಿಂದ 2022-23ರವರೆಗೆ ನಡೆಸಿದ ಒಟ್ಟು 2,980 ದಾಳಿ ಪ್ರಕರಣಗಳಲ್ಲಿ ₹5,095 ಕೋಟಿ ಮೌಲ್ಯದ ಆಸ್ತಿಯನ್ನು ವಶಕ್ಕೆ ಪಡೆದಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ತಿಳಿಸಿದ್ದಾರೆ.

ಸೋಮವಾರ ಲೋಕಸಭೆಗೆ ಅವರು ಈ ಮಾಹಿತಿ ನೀಡಿದ್ದಾರೆ.

2019–20ರಲ್ಲಿ ಒಟ್ಟು 984 ದಾಳಿ ನಡೆಸಿದ್ದು, ₹1,289 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. 365 ಜನರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ ಎಂದು ತಿಳಿಸಿದ್ದಾರೆ.

2020–21ರಲ್ಲಿ 569 ದಾಳಿ ನಡೆಸಿದ್ದು, ₹881 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. 2021–22ರಲ್ಲಿ 689 ದಾಳಿ ನಡೆಸಿದ್ದು, ₹1,159 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಲಾಗಿದೆ. 2022–23ರಲ್ಲಿ 741 ದಾಳಿ ನಡೆಸಿದ್ದು, ₹1,765 ಕೋಟಿ ಮೌಲ್ಯದ ಆಸ್ತಿ ವಶಕ್ಕೆ ಪಡೆಯಲಾಗಿದೆ ಎಂದು ವಿವರಿಸಿದ್ದಾರೆ.

7.40 ಕೋಟಿ ಐಟಿಆರ್ ಸಲ್ಲಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ 2022-23ನೇ ಹಣಕಾಸು ವರ್ಷದಲ್ಲಿ 7.40 ಕೋಟಿ ಜನರು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಾರೆ. ಈ ಪೈಕಿ 5.16 ಕೋಟಿ ಶೂನ್ಯ ಆದಾಯ ತೆರಿಗೆದಾರರೆಂದು ಘೋಷಿಸಿದ್ದಾರೆ ಎಂದು ಕೇಂದ್ರ ಸರ್ಕಾರವು ಸೋಮವಾರ ಲೋಕಸಭೆಗೆ ತಿಳಿಸಿದೆ.

ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಈ ಕುರಿತು ಕೆಳಮನೆಗೆ ಮಾಹಿತಿ ನೀಡಿದ್ದು, ‘ಕಳೆದ ಐದು ವರ್ಷಗಳಲ್ಲಿ ರಿಟರ್ನ್ಸ್ ಸಲ್ಲಿಸುವವರ ಸಂಖ್ಯೆ ಹೆಚ್ಚಳವಾಗಿದೆ’ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

20th Year Remembrance

Dr. A.N. Raja Venkata Reddy
Expired on 19-12-2003
You will always live in our Hearts & Memories
Guiding & Inspiring us at all times
Inserted By-
Wife:- Y.P. Hemamalini Reddy
Late. A.V. Narasimha Reddy Family



ನಿಗಾ ವಹಿಸಿ, ಪರೀಕ್ಷೆ ಹೆಚ್ಚಿಸಿ

ಒಂದನೇ ಪುಟದಿಂದ...

ಕೇರಳ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಆಗಿದೆ. ಕೊರೊನಾ ವೈರಾಣುವಿನ ಜೆಎನ್.1 ಉಪತಳಿಯ ಮೊದಲ ಪ್ರಕರಣ ಕೇರಳದಲ್ಲಿ ಡಿಸೆಂಬರ್ 8ರಂದು ವರದಿಯಾಗಿತ್ತು. ಇದರ ಬೆನ್ನಲ್ಲೇ ಕೇಂದ್ರ ಆರೋಗ್ಯ ಕಾರ್ಯದರ್ಶಿ ಸುಧಾಂಶ್ ಪಂತ್ ಅವರು ಸೋಮವಾರ ಎಲ್ಲ ರಾಜ್ಯಗಳಿಗೆ ಪತ್ರ ಬರೆದಿದ್ದಾರೆ.

ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆ ಹತ್ತಿರ ಬರುತ್ತಿರುವುದರಿಂದ ಸೋಂಕು ಪ್ರಸರಣ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸನ್ನದ್ಧತೆಯ ಬಗ್ಗೆ ಪರಿಶೀಲಿಸಬೇಕು ಎಂದು ಪತ್ರದಲ್ಲಿ ಹೇಳಲಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯವು ಕೋವಿಡ್–19 ಸಂಬಂಧ ಈ ಹಿಂದೆ ಹೊರಡಿಸಿದ್ದ ಪರಿಷ್ಕೃತ ಕಣ್ಗಾವಲು ಮತ್ತು ಕಾರ್ಯತಂತ್ರದ ಮಾರ್ಗಸೂಚಿಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಮನ್ವಯದ ಕ್ರಮಗಳಿಂದಾಗಿ, ಕೋವಿಡ್ ಪ್ರಸರಣವನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗಿದೆ. ಆದರೂ ಕಳೆದ ಕೆಲವು ದಿನಗಳಿಂದ ಪ್ರಕರಣಗಳಲ್ಲಿ ಏರಿಕೆಯಾಗಿರುವುದರಿಂದ ಹೆಚ್ಚಿನ ನಿಗಾ ಅಗತ್ಯ ಎಂದು ಪಂತ್ ಹೇಳಿದ್ದಾರೆ.

ಜೆಎನ್.1 ಉಪತಳಿಯ ಪ್ರಕರಣಗಳು ಭಾರತ ಅಲ್ಲದೆ ಅಮೆರಿಕ, ಚೀನಾ, ಸಿಂಗಪುರದಲ್ಲಿ ಕೂಡ ಪತ್ತೆಯಾಗಿವೆ.

260 ಹೊಸ ಪ್ರಕರಣ: ದೇಶದಲ್ಲಿ ಕೋವಿಡ್‌ನ 260 ಹೊಸ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 1,828ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಪ್ರಮುಖ ಸಲಹೆಗಳು...

- ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುವುದನ್ನು ಮುಂಚಿತವಾಗಿಯೇ ಗುರುತಿಸಲು ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಮತ್ತು ತೀವ್ರ ಉಸಿರಾಟದ ಸಮಸ್ಯೆ (ಎಸ್‌ಎಆರ್‌ಐ) ಪ್ರಕರಣಗಳ ಜಿಲ್ಲಾವಾರು ಮಾಹಿತಿಯನ್ನು ನಿಯಮಿತವಾಗಿ ವರದಿ ಮಾಡಬೇಕು.
- ಕೋವಿಡ್-19 ಪರೀಕ್ಷಾ ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಬೇಕು.
- ಆರ್‌ಟಿಪಿಸಿಆರ್ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಿ, ಪಾಸಿಟಿವ್ ಕಂಡುಬಂದ ಮಾದರಿಯನ್ನು ‘ಜೆನೋಮ್ ಸೀಕ್ವೆನ್ಸಿಂಗ್’ ಪ್ರಯೋಗಾಲಯಗಳಿಗೆ ಕಳುಹಿಸಬೇಕು.
- ಸಮುದಾಯ ಜಾಗೃತಿ ಕಾರ್ಯಕ್ರಮಗಳ ಮೂಲಕ ಕೋವಿಡ್ ನಿಯಂತ್ರಣಕ್ಕೆ ಜನರ ನಿರಂತರ ಬೆಂಬಲ ಖಾತರಿಪಡಿಸಬೇಕು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಸಾಗರ**		**ಶಿರಸಿ**	
ಬಂಟ್ವಾಳ		ಬಿಳಿಗೋಟು	23989-34699	ಬೆಟ್ಟೆ	42699-45169
ಕೋಕ	15000-27500	ಚಾಲಿ	35599-38699	ಬಿಳಿಗೋಟು	30000-36099
ಹೊಸತು	27500-36000	ಕೋಕ	21219-36099	ಚಾಲಿ	37018-39461
ಹಳತು	42500-45500	ಕೆಂಪುಗೋಟು	30899-36899	ಕೆಂಪುಗೋಟು	30599-33999
ಚಿತ್ರದುರ್ಗ		ರಾಶಿ	42899-48410	ರಾಶಿ	45699-47489
ಅಪಿ	46939-47369	ಸಿಪ್ಪೆಗೋಟು	12231-21089	**ಯಲ್ಲಾಪುರ**	
ಬೆಟ್ಟೆ	36619-37079	**ಶಿವಮೊಗ್ಗ**		ಅಪಿ	57899-57899
ಕೆಂಪುಗೋಟು	30200-30600	ಬೆಟ್ಟೆ	46519-53577	ಬಿಳಿಗೋಟು	24899-34899
ರಾಶಿ	46429-46889	ಗೊರಬಲು	25014-39119	ಚಾಲಿ	35940-39605
ಹೊನ್ನಾವರ		ಹೊಸತು	45009-48015	ಕೋಕ	18109-31669
ಹಳೆಚಾಲಿ	36000-38000	ರಾಶಿ	44859-48099	ಕೆಂಪುಗೋಟು	24099-32719
		ಸರಕು	55109-77569	ರಾಶಿ	46109-54099
				ತಟ್ಟಬೆಟ್ಟೆ	36619-44419

ಟಿವಿಎಸ್ ಗ್ರೀನ್‌ರೈಡ್ ಅಭಿಯಾನ ಮುಕ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಮಿಲಿಂದ್ ಸೋಮನ್ ಅವರ ಸಹಯೋಗದಡಿ ಹಮ್ಮಿಕೊಂಡಿದ್ದ ಟಿವಿಎಸ್ ಮೋಟಾರ್ ಕಂಪನಿಯ ಚೊಚ್ಚಲ ಎಲೆಕ್ಟ್ರಿಕ್ ಸ್ಕೂಟರ್ ಆದ ಟಿವಿಎಸ್ ಐಕ್ಯೂಬ್‌ನ ಗ್ರೀನ್‌ರೈಡ್ ಅಭಿಯಾನವು ಸೋಮವಾರ ನಗರದಲ್ಲಿ ಮುಕ್ತಾಯವಾಯಿತು.

ಪುಣೆಯಲ್ಲಿ ವಾರದ ಹಿಂದೆ ಈ ಅಭಿಯಾನ ಆರಂಭವಾಗಿತ್ತು. ಪರಿಸರ ಸ್ನೇಹಿ ಆಶಯದಡಿ ಸುಸ್ಥಿರ ಸಾರಿಗೆ ವಿಧಾನ ಕುರಿತು ಜಾಗೃತಿ ಮೂಡಿಸುವುದು ಈ ಅಭಿಯಾನದ ಗುರಿಯಾಗಿದೆ.

ಟಿವಿಎಸ್ ಐಕ್ಯೂಬ್‌ನಲ್ಲಿ ಪ್ರಯಾಣ ಆರಂಭಿಸಿದ ಮಿಲಿಂದ್ ಅವರು, ಒಟ್ಟು 200 ಕಿ.ಮೀ. ದೂರವನ್ನು ಕ್ರಮಿಸಿದ್ದಾರೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಟಿವಿಎಸ್ ಗ್ರೀನ್‌ರೈಡ್ ಅಭಿಯಾನದಲ್ಲಿ ಪಾಲ್ಗೊಂಡಿದ್ದ ನಟ ಮಿಲಿಂದ್ ಸೋಮನ್ – ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ 81 ಮಂದಿಗೆ ಕೋವಿಡ್ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲೂ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿದ್ದು, ಕಳೆದ ಒಂದು ವಾರದಲ್ಲಿ 81 ಪ್ರಕರಣಗಳು ದೃಢಪಟ್ಟಿವೆ. ಒಂದು ವಾರದಲ್ಲಿ 2,619 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆ ಪರೀಕ್ಷೆಯಲ್ಲಿ ಕೋವಿಡ್ ತಗುಲಿರುವುದು ಪತ್ತೆಯಾಗಿದೆ.

ರಾಜ್ಯದಲ್ಲಿ ಜನವರಿ 1ರಿಂದ ಇದುವರೆಗೆ 15,60,681 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದರಲ್ಲಿ 17,044 ಮಂದಿಗೆ ಕೋವಿಡ್ ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇದೇ ಅವಧಿಯಲ್ಲಿ ತೀವ್ರ ಉಸಿರಾಟದ ಸಮಸ್ಯೆ (ಸಾರಿ)ಯಿಂದ ಬಳುತ್ತಿರುವ 156 ರೋಗಿಗಳು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ರಾಜ್ಯದಲ್ಲಿ ಈವರೆಗೂ ಕೋವಿಡ್‌ನ ಹೊಸ ರೂಪಾಂತರ ತಳಿ ಪತ್ತೆಯಾಗಿಲ್ಲ ಎಂದು ಇಲಾಖೆ ತಿಳಿಸಿದೆ. ಒಂದು ವಾರದಲ್ಲಿ ಡೆಂಗಿ 416, ಚಿಕೂನ್‌ಗುನ್ಯ 25, ಮಲೇರಿಯಾ 24 ಪ್ರಕರಣಗಳು ಪತ್ತೆಯಾಗಿವೆ.

ಜೆಎಸ್‌ಡಬ್ಲ್ಯು ಷೇರು ಶೇ 5ರಷ್ಟು ಇಳಿಕೆ

ಬೆಂಗಳೂರು (ರಾಯಿಟರ್ಸ್): ಉದ್ಯಮಿ ಸಜ್ಜನ್ ಜಿಂದಾಲ್ ಅವರ ಮೇಲೆ ಅತ್ಯಾಚಾರ ಪ್ರಕರಣ ದಾಖಲಾದ ಬಳಿಕ ಜೆಎಸ್‌ಡಬ್ಲ್ಯು ಸಮೂಹದ ಷೇರುಗಳು ಸೋಮವಾರ ಶೇ5ರಷ್ಟು ಇಳಿಕೆ ಆಗಿವೆ.

ಜೆಎಸ್‌ಡಬ್ಲ್ಯು ಸ್ಟೀಲ್ ಶೇ 1.8ರಷ್ಟು ಇಳಿಕೆಯಾಗಿದೆ. ಆದರೆ, ಜೆಎಸ್‌ಡಬ್ಲ್ಯು ಎನರ್ಜಿ ಮತ್ತು ಜೆಎಸ್‌ಡಬ್ಲ್ಯು ಇನ್ಫ್ರಾಸ್ಟ್ರಕ್ಚರ್ ಕ್ರಮವಾಗಿ ಶೇ 0.1 ಮತ್ತು ಶೇ 1.7ರಷ್ಟು ಏರಿಕೆಯಾಗಿವೆ.

ಮುಂಬೈ ಪೊಲೀಸ್ ಠಾಣೆಯಲ್ಲಿ ಸಜ್ಜನ್ ಜಿಂದಾಲ್ ವಿರುದ್ಧ 30 ವರ್ಷದ ಮಹಿಳೆಯೊಬ್ಬರು ಅತ್ಯಾಚಾರ ಪ್ರಕರಣ ದಾಖಲಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

18-12-2023

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1640)
ಒಂದು ವಾರದ ಡೆಲಿವರಿ	1625 (1635)
ಸೋಯಾ ಕಚ್ಚಾ	860 (860)
ಪಾಮ್ ವಾರದ ಡೆಲಿವರಿ	822 (822)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
61,650 (61,650)
ಬೆಳ್ಳಿ ಕೆ.ಜಿ 73,550 (73,375)

ಆವರಣದಲ್ಲಿ ಶನಿವಾರದ ಧಾರಣೆ

14 ಭಾರತೀಯ ಮೀನುಗಾರರ ಸೆರೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ಸಮುದ್ರ ವ್ಯಾಪ್ತಿಯಲ್ಲಿ ಮೀನುಗಾರಿಕೆ ಮಾಡುತ್ತಿದ್ದ ಆರೋಪದ ಮೇಲೆ ಅಲ್ಲಿನ ನೌಕಾ ಸಿಬ್ಬಂದಿಯ 14 ಭಾರತೀಯ ಮೀನುಗಾರರನ್ನು ಭಾನುವಾರ ಬಂಧಿಸಿದ್ದಾರೆ.

‘ಉತ್ತರ ಜಾಫ್ನಾ ದ್ವೀಪದ ಕರೈನಗರ್ ಕರಾವಳಿ ತೀರದಲ್ಲಿ ಇವರನ್ನು ಬಂಧಿಸಲಾಗಿದೆ. ಅವರ ದೋಣಿಗಳನ್ನೂ ಜಪ್ತಿ ಮಾಡಲಾಗಿದೆ. ಶ್ರೀಲಂಕಾದಲ್ಲಿ ಈ ವರ್ಷ ಬಂಧಿತರಾದ ಭಾರತೀಯ ಮೀನುಗಾರರ ಸಂಖ್ಯೆ ಸುಮಾರು 240ಕ್ಕೆ ಏರಿದೆ’ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266, 8050198999

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC, Degree,ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ವ್ಯಾಪಾರ

Business to Business

Business

ಮಹಿಳೆಯರಿಗೆ ಹಾಗೂ ಮಹಿಳಾ ಸಂಘ ಸಂಸ್ಥೆಗಳಿಗೆ ವ್ಯಾಪಾರ ಮಾಡುವುದಕ್ಕೆ ರೇಷ್ಮೆ ಸೀರೆಗಳನ್ನು, ಎಲ್ಲಾ ತರಹದ ಸೀರೆಗಳನ್ನು ಕೊಡಲಾಗುತ್ತದೆ. 8892501007/ 9606701007

ಪ್ರವಾಸ

Travel

★ಆರ್.ಗಾಂಧಿ ಟೂರ್ಸ್★ ವಿಮಾನದಲ್ಲಿ 05.02.2024, 10.02.2024, 15.02.2024 6 ದಿನಗಳ ಕಾಶಿ, ಗಯಾ ಪ್ರಯಾಗ ಅಯೋಧ್ಯೆ ಪ್ಯಾಕೇಜ್. 9945445809/ 9902433500

Pilgrimage Tours

ಶಿರಿಡಿ ವಿಮಾನ ಪ್ರವಾಸ 4ದಿನಗಳು 110124. ಪೂರಿ, ಕೊನಾರ್ಕ್, ಭುವನೇಶ್ವರ ಪ್ರವಾಸ 4ದಿನಗಳು 120124. ಮೈತ್ರಿ ಟ್ರಾವೆಲ್ಸ್ 6360422209

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ವಂಚನೆ: 2,500 ಸಾಲದ ಆ್ಯಪ್‌ಗಳಿಗೆ ಗೂಗಲ್ ಕೊಕ್

ನವದೆಹಲಿ (ಪಿಟಿಐ): ಜನರಿಗೆ ಸಾಲದ ಆಮಿಷವೊಡ್ಡಿ ಹಣ ವಂಚಿಸುತ್ತಿದ್ದ ಆರೋಪದ ಮೇಲೆ 2,500 ಮೊಬೈಲ್ ಆ್ಯಪ್‌ಗಳನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ತೆಗೆದು ಹಾಕಲಾಗಿದೆ ಎಂದು ಕೇಂದ್ರ ಸರ್ಕಾರವು, ಸೋಮವಾರ ಲೋಕಸಭೆಗೆ ತಿಳಿಸಿದೆ.

2021ರ ಏಪ್ರಿಲ್‌ನಿಂದ 2022ರ ಜುಲೈವರೆಗೆ ನಡೆಸಿದ ಪರಿಶೀಲನೆಯಲ್ಲಿ ಡಿಜಿಟಲ್ ವಂಚನೆಯಲ್ಲಿ ತೊಡಗಿದ್ದ ಇಷ್ಟು ಸಂಖ್ಯೆಯ ಆ್ಯಪ್‌ಗಳನ್ನು ತೆಗೆದು ಹಾಕಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಈ ಅವಧಿಯಲ್ಲಿ ಸಾಲ ನೀಡುವ ಹೆಸರಿನಲ್ಲಿ ಪ್ಲೇ ಸ್ಟೋರ್‌ನಲ್ಲಿದ್ದ 3,500ರಿಂದ 4,000 ಆ್ಯಪ್‌ಗಳನ್ನು ಗೂಗಲ್ ಪರಿಶೀಲನೆ ನಡೆಸಿದೆ. ಬಳಿಕ ವಂಚನೆಯ ಆ್ಯಪ್‌ಗಳ ವಿರುದ್ಧ ಕ್ರಮವಹಿಸಿದೆ ಎಂದು ಹೇಳಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಮಧ್ಯಸ್ಥಿಕೆ ದಾರರ ಮನವಿ ಮೇರೆಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರವು ವಂಚನೆ ಆ್ಯಪ್‌ಗಳ ವಿರುದ್ಧ ಕ್ರಮಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಹಮಾಸ್ ಸುರಂಗ ಪತ್ತೆ: ಇಸ್ರೇಲ್ ಸೇನೆ

ಗಾಜಾ ಪಟ್ಟಿ (ಪ್ಯಾಲೆಸ್ಟೀನ್) (ಎಫ್‌ಪಿ): ಕದನ ವಿರಾಮ ಘೋಷಿಸಲು ಹೆಚ್ಚುತ್ತಿರುವ ಅಂತರರಾಷ್ಟ್ರೀಯ ಒತ್ತಡ ಮತ್ತು ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗೆ ಕುಟುಂಬಗಳ ಬೇಡಿಕೆ ಹೆಚ್ಚುತ್ತಿರುವ ಬೆನ್ನಲ್ಲೇ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಸೇನೆ ತನ್ನ ಆಕ್ರಮಣ ತೀವ್ರಗೊಳಿಸುತ್ತಿದೆ. ಅಲ್ಲದೆ, ಹಮಾಸ್ ಬಂಡುಕೋರರ ಅತಿ ದೊಡ್ಡ ಸುರಂಗವನ್ನು ಗಡಿ ಭಾಗದಲ್ಲಿ ಭಾನುವಾರ ಪತ್ತೆಮಾಡಿದ್ದು, ಇದು ನಾಲ್ಕು ಕಿ.ಮೀ ಉದ್ದವಿದೆ ಎಂದು ಇಸ್ರೇಲ್ ಹೇಳಿದೆ.

ಎರೆಜ್ ಪ್ರದೇಶದ ಗಡಿ ಸಮೀಪ ಪತ್ತೆಯಾಗಿರುವ ಈ ಸುರಂಗ 4 ಕಿ.ಮೀನಷ್ಟು ಉದ್ದವಿದೆ. ಸಣ್ಣ ವಾಹನಗಳು ಸಂಚರಿಸುವಷ್ಟು ದೊಡ್ಡದು. ಹಳಿಗಳು, ವಿದ್ಯುತ್, ಒಳಚರಂಡಿ ಮತ್ತು ಸಂವಹನ ಜಾಲವನ್ನು ಇದು ಒಳಗೊಂಡಿದೆ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

2ನೇ ಕೇಸರಿ ಬಣ್ಣದ 'ವಂದೇ ಭಾರತ್'ಗೆ ಚಾಲನೆ

ವಾರಾಣಸಿ (ಪಿಟಿಐ): ವಾರಾಣಸಿ–ನವದೆಹಲಿ ನಡುವಿನ 2ನೇ 'ವಂದೇ ಭಾರತ್' ರೈಲು ಸೇವೆಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಇಲ್ಲಿ ಹಸಿರುನಿಶಾನೆ ತೋರಿದರು. ಈ ರೈಲು ವಿವಿಧ ಆಧುನಿಕ ಸೌಲಭ್ಯಗಳನ್ನು ಹೊಂದಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ವೈ–ಫೈ ಇನ್ಫೋಟೇನ್‌ಮೆಂಟ್, ಜಿಪಿಎಸ್ ಆಧಾರಿತ ಪ್ರಯಾಣಿಕರ ಮಾಹಿತಿ ವ್ಯವಸ್ಥೆ, ಆಕರ್ಷಕ ಒಳಾಂಗಣ, ಜೈವಿಕ ಶೌಚಾಲಯಗಳು, ಎಲ್‌ಇಡಿ ಲೈಟಿಂಗ್, ಪ್ರತಿ ಆಸನದ ಬಳಿ ಪ್ರತ್ಯೇಕ ಚಾರ್ಜಿಂಗ್ ಸೌಲಭ್ಯ, ಓದಲು ವಿದ್ಯುತ್ ದೀಪದ ಸೌಲಭ್ಯಗಳಿವೆ.

ಸಹಜ ಗಾಳಿ, ತಂಪನೆಯ ವಾತಾವರಣ ಇರುವಂತೆ ಆಧುನಿಕ ವ್ಯವಸ್ಥೆ ಇದ್ದು, ಹೊರಗಿನ ತಾಪಮಾನಕ್ಕೆ ಅನುಗುಣವಾಗಿ ಹೊಂದಿಕೆ ಆಗಲಿದೆ ಎಂದು ಇಲಾಖೆಯು ತಿಳಿಸಿದೆ. ಮಂಗಳವಾರ ಹೊರತುಪಡಿಸಿ ವಾರಕ್ಕೆ ಆರು ದಿನ ಉಭಯ ನಗರಗಳ ನಡುವೆ ರೈಲು ಸೇವೆ ಇರಲಿದೆ.

ಕೇಜ್ರಿವಾಲ್‌ಗೆ ಮತ್ತೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಅಬಕಾರಿ ನೀತಿಯ ಹಗರಣದ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಇದೇ 21ರಂದು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಸೋಮವಾರ ಎರಡನೇ ಸಮನ್ಸ್ ಜಾರಿ ಮಾಡಿದೆ.

ನವೆಂಬರ್ 2ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ ಮೊದಲ ಸಮನ್ಸ್ ಜಾರಿ ಮಾಡಿತ್ತು. ಆದರೆ, ಕೇಜ್ರಿವಾಲ್ ಅವರು ವಿಚಾರಣೆಗೆ ಹಾಜ ರಾಗಿರಲಿಲ್ಲ.

ಕೇಜ್ರಿವಾಲ್ ಅವರು ಡಿಸೆಂಬರ್ 19ರಿಂದ 10 ದಿನಗಳ ವಿಪಶ್ಯನ ಧ್ಯಾನದಲ್ಲಿ ಭಾಗವಹಿಸಲು ರಜೆ ಹಾಕಿದ್ದಾರೆ ಎಂದು ಶನಿವಾರ ತಿಳಿಸಿರುವ ದೆಹಲಿ ಸರ್ಕಾರದ ಅಧಿಕಾರಿಗಳು, ವಿಪಶ್ಯನ ಧ್ಯಾನ ನಡೆಯುವ ಸ್ಥಳವನ್ನು ಬಹಿರಂಗ ಪಡಿಸಲಿಲ್ಲ.

ಪುದುಚೇರಿ, ಜಮ್ಮು–ಕಾಶ್ಮೀರಕ್ಕೆ ಮಹಿಳಾ ಮೀಸಲು

ನವದೆಹಲಿ (ಪಿಟಿಐ): ಮಹಿಳಾ ಮೀಸಲಾತಿ ಕಾನೂನನ್ನು ಪುದುಚೇರಿ ಹಾಗೂ ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಗಳಿಗೆ ವಿಸ್ತರಿಸಲು ಅವಕಾಶ ಕಲ್ಪಿಸುವ ಎರಡು ಮಸೂದೆಗಳಿಗೆ ರಾಜ್ಯಸಭೆಯು ಸೋಮವಾರ ಧ್ವನಿಮತದ ಮೂಲಕ ಅಂಗೀಕಾರ ನೀಡಿದೆ. ಈ ಮಸೂದೆಗಳಿಗೆ ಲೋಕಸಭೆಯ ಅಂಗೀಕಾರ ಡಿ. 12ರಂದು ದೊರೆತಿದೆ.

ಡಿಸೆಂಬರ್ 13ರಂದು ಸಂಸತ್ತಿನಲ್ಲಿ ನಡೆದ ಭದ್ರತಾ ಲೋಪದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿಕೆ ನೀಡಬೇಕು ಎಂಬ ಬೇಡಿಕೆಯೊಂದಿಗೆ ವಿರೋಧ ಪಕ್ಷಗಳ ಸದಸ್ಯರು ರಾಜ್ಯಸಭೆಯ ಸಭಾಪತಿಯ ಎದುರಿನ ಅಂಗಳಕ್ಕೆ ನುಗ್ಗಿ ಘೋಷಣೆ ಕೂಗುತ್ತಿದ್ದರು.

ಈ ಸಂದರ್ಭದಲ್ಲಿ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ (ತಿದ್ದುಪಡಿ) ಮಸೂದೆ, ಜಮ್ಮು ಮತ್ತು ಕಾಶ್ಮೀರ ಮರುವಿಂಗಡಣೆ (ಎರಡನೆಯ ತಿದ್ದುಪಡಿ) ಮಸೂದೆಗೆ ಧ್ವನಿಮತದ ಮೂಲಕ ಅಂಗೀಕಾರ ನೀಡಲಾಯಿತು.

ನಾಲ್ಕು ಜಿಲ್ಲೆಗಳಲ್ಲಿ ಭಾರಿ ಮಳೆ– ಹೈ ಅಲರ್ಟ್ • ತಗ್ಗು ಪ್ರದೇಶ, ಭತ್ತದ ಗದ್ದೆಗಳು ಜಲಾವೃತ

ದಕ್ಷಿಣ ತಮಿಳುನಾಡಿನಲ್ಲಿ ಪ್ರವಾಹ

ಚೆನ್ನೈ/ಕನ್ಯಾಕುಮಾರಿ (ಪಿಟಿಐ/ಎಎನ್‌ಐ): ದಕ್ಷಿಣ ತಮಿಳುನಾಡಿನ ವಿವಿಧೆಡೆ ಭಾನುವಾರ ತಡರಾತ್ರಿ ಭಾರಿ ಮಳೆಯಾಗಿದ್ದು, ಸೋಮವಾರವೂ ವರುಣನ ಆರ್ಭಟ ಮುಂದುವರಿದಿದೆ. ನದಿಗಳು ಉಕ್ಕಿ ಹರಿಯುತ್ತಿದ್ದು, ನಾಲ್ಕು ಜಿಲ್ಲೆಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಬಿರುಸಿನ ವರ್ಷಧಾರೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ.

ಕನ್ಯಾಕುಮಾರಿ, ತಿರುನಲ್ವೇಲಿ, ತೂತುಕುಡಿ ಹಾಗೂ ತೆಂಕಾಸಿ ಜಿಲ್ಲೆಗಳ ಎಲ್ಲಾ ಶಾಲೆ- ಕಾಲೇಜು, ಬ್ಯಾಂಕುಗಳಿಗೆ ಸೋಮವಾರ ರಜೆ ಘೋಷಿಸಲಾಗಿತ್ತು. ಈ ಭಾಗದಲ್ಲಿ ಹಲವು ರೈಲುಗಳ ಸಂಚಾರವನ್ನು ರದ್ದುಪಡಿಸಲಾಗಿದೆ. ಭತ್ತದ ಗದ್ದೆಗಳು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ರಸ್ತೆಗಳಲ್ಲಿ ಮಳೆ ನೀರು ಹೊಳೆಯಂತೆ ಹರಿದಿದ್ದು, ಸೇತುವೆಗಳು ಮುಳುಗಡೆಯಾಗಿವೆ. ಜಲಾವೃತಗೊಂಡ ಪ್ರದೇಶಗಳ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ತೂತುಕುಡಿಯ ಕಾಯಲ್ಪಟ್ಟಿಣಂ ಪಟ್ಟಣದಲ್ಲಿ 95 ಸೆಂ.ಮೀ ಭಾರಿ ಮಳೆಯಾಗಿದೆ. ಇದರಿಂದ ತೂತುಕುಡಿ ಜಿಲ್ಲೆಯ ಕೋವಿಲ್‌ಪಟ್ಟಿ ಪ್ರದೇಶದ 40 ಕೆರೆಗಳು ತುಂಬಿ, ಕೋಡಿ ಹರಿದಿವೆ. ಜಿಲ್ಲೆಯ ಹಲವು ಪ್ರದೇಶಗಳು ಜಲಾವೃತಗೊಂಡಿವೆ. ಕೂಸಲಿಪಟ್ಟಿ ಹಾಗೂ ಇನಾಮ್ ಮನಿಯಾಚಿ ಪ್ರದೇಶದಲ್ಲಿ ನದಿ ಉಕ್ಕಿ ಹರಿದಿದ್ದು, ರಸ್ತೆಗಳಲ್ಲಿ ನೀರು ತುಂಬಿ ಸಂಚಾರ ಅಸ್ತವ್ಯಸ್ಥಗೊಂಡಿದೆ. ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿವೆ.

ತಿರುನಲ್ವೇಲಿಯ ಸೀವಲಪೇರಿ-ಯಲ್ಲಿನ ಕೆಲ ನಿವಾಸಿಗಳು ಎರಡು ಅಂತಸ್ತಿನ ಮನೆಗಳ ಮಹಡಿ ಮೇಲೆ ಆಶ್ರಯ ಪಡೆದಿದ್ದರು. ಇಲ್ಲಿನ ಮೀನಾಕ್ಷಿಪುರಂನಲ್ಲೂ ಇದೇ ದೃಶ್ಯ ಕಂಡುಬಂತು. ನಾಗರಕೋಯಿಲ್‌ನ ನೆಸಾವಲರ್ ಕಾಲೊನಿಯಲ್ಲಿ 100ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ಮೀನಾಕ್ಷಿ ಗಾರ್ಡನ್, ರೈಲ್ವೆ ಕಾಲೊನಿ ಪ್ರವಾಹ ಪೀಡಿತವಾಗಿವೆ. ಮದುರೈಗೆ ಸಂಪರ್ಕ ಕಲ್ಪಿಸುವ ರಸ್ತೆ ಒಟ್ಟಪಿದರಂ ಬಳಿ ಕಡಿತಗೊಂಡಿದೆ.

ತೂತುಕುಡಿ–ತಿರುಚೆಂದೂರ್ ಹೆದ್ದಾರಿಯಲ್ಲಿ ಪ್ರವಾಹದ ಚಿತ್ರಣ —ಪಿಟಿಐ ಚಿತ್ರ

ಕನ್ಯಾಕುಮಾರಿಯಲ್ಲಿ ಎದೆಮಟ್ಟದ ನೀರಿನಲ್ಲೇ ಸುರಕ್ಷಿತ ಸ್ಥಳಕ್ಕೆ ತೆರಳಿದ ಜನ —ಪಿಟಿಐ ಚಿತ್ರ

ವೃದ್ಧೆ ಸಾವು: ರಾಜಪಾಳ್ಯಂ ಬಳಿಯ ವಸತಿ ಕಾಲೊನಿಯಲ್ಲಿ, ಮಳೆ ಸಂಬಂಧಿತ ಘಟನೆಯಲ್ಲಿ ವೃದ್ಧೆಯೊಬ್ಬರು ಮೃತಪಟ್ಟಿದ್ದಾರೆ. ತಾಮಿರಬರಣಿ ಸೇರಿದಂತೆ ಹಲವು ನದಿಗಳು ಉಕ್ಕಿ ಹರಿಯುತ್ತಿವೆ. ರಸ್ತೆಗಳ ಮೇಲೆ ನೀರು ಹರಿಯುತ್ತಿರುವುದರಿಂದ ಹಲವು ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿದೆ.

ಕೋವಿಲ್‌ಪಟ್ಟಿ-ಕಯತಾರು-ತೇವ-ರ್ಕುಲಂ ರಸ್ತೆ ಜಲಾವೃತಗೊಂಡಿದೆ. ಕನ್ಯಾಕುಮಾರಿಯ ಇರವಿಪುದೂರು ಸೇರಿದಂತೆ ಹಲವು ಪ್ರದೇಶಗಳಲ್ಲಿ ಕೆರೆ ಕಟ್ಟೆಗಳು ಒಡೆದು ಪ್ರವಾಹದ ಸಂಕಷ್ಟವನ್ನು ಹೆಚ್ಚಿಸಿವೆ. ಪ್ರವಾಹದಲ್ಲಿ ಸಿಲುಕಿರುವ ಜನರನ್ನು ಅಗ್ನಿಶಾಮಕ ದಳ ಹಾಗೂ ವಿಪತ್ತು ನಿರ್ವಹಣಾ ತಂಡಗಳು ರಕ್ಷಿಸಿ ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಿವೆ.

'ಇಂತಹ ಮಳೆ ಮತ್ತು ಪ್ರವಾಹವನ್ನು ನಾವು ಹಿಂದೆಂದೂ ನೋಡಿಲ್ಲ' ಎಂದು ಸ್ಥಳೀಯ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ. 'ಶ್ರೀವೈಕುಂಡಂ ಮತ್ತು ಸೇಡುಂಗನಲ್ಲೂರು ನಡುವಿನ ರೈಲ್ವೆ ಹಳಿಗಳ ಮೇಲೆ ನೀರು ಹರಿಯುತ್ತಿರುವುದರಿಂದ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ' ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

ಜನರ ಸುರಕ್ಷತೆಗೆ ಕ್ರಮ: 'ಮಳೆ ಪೀಡಿತ ಜಿಲ್ಲೆಗಳಲ್ಲಿ ಜನರ ಸುರಕ್ಷತೆಗೆ ಸರ್ಕಾರ ಅಗತ್ಯ ಕ್ರಮ ತೆಗೆದುಕೊಂಡಿದೆ. ಸಚಿವರು ಹಾಗೂ ಇಬ್ಬರು ಐಎಎಸ್ ಅಧಿಕಾರಿಗಳನ್ನು ಉಸ್ತುವಾರಿಗಳನ್ನಾಗಿ ನೇಮಿಸಲಾಗಿದೆ. ಅವರು ಪರಿಸ್ಥಿತಿಯನ್ನು ಅವಲೋಕಿಸಿ, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ಧರಿಸಲಿದ್ದಾರೆ' ಎಂದು ರಾಜ್ಯದ ಕಂದಾಯ ಹಾಗೂ ವಿಕೋಪ ನಿರ್ವಹಣಾ ಸಚಿವ ಕೆ.ಕೆ.ಎಸ್.ಎಸ್.ಆರ್ ರಾಮಚಂದ್ರನ್ ತಿಳಿಸಿದ್ದಾರೆ.

'ಮುನ್ನೆಚ್ಚರಿಕೆ ಕ್ರಮವಾಗಿ ಈ ಜಿಲ್ಲೆಗಳಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ 250 ತುಕಡಿಗಳನ್ನು ನಿಯೋಜಿಸಲಾಗಿದ್ದು, ಸಂತ್ರಸ್ತರಿಗಾಗಿ 26 ಕಡೆ ಶಿಬಿರಗಳನ್ನು ತೆರೆಯಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಮೋದಿಗೆ ಸ್ಟಾಲಿನ್ ಪತ್ರ

'ತಮಿಳುನಾಡಿನ ದಕ್ಷಿಣ ಭಾಗದಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆ ಮತ್ತು ಪ್ರವಾಹ ಪರಿಸ್ಥಿತಿಯ ಕುರಿತು ಚರ್ಚಿಸಲು ಮಂಗಳವಾರ ಸಮಯಾವಕಾಶ ಕೊಡಿ' ಎಂದು ಕೋರಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸೋಮವಾರ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ.

ಕಾಂಗ್ರೆಸ್‌ನಿಂದ ದೇಣಿಗೆ ಸಂಗ್ರಹ ಅಭಿಯಾನ ಆರಂಭ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಸಂಪನ್ಮೂಲ ಕ್ರೋಡೀಕರಣದ ಉದ್ದೇಶದಿಂದ ಆರಂಭಿಸಿರುವ 'ದೇಶಕ್ಕಾಗಿ ದೇಣಿಗೆ ನೀಡಿ' (ಡೊನೇಟ್ ಫಾರ್ ದೇಶ್) ಅಭಿಯಾನಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಚಾಲನೆ ನೀಡಿದರು.

'ನಿರುದ್ಯೋಗ ಹಾಗೂ ಬೆಲೆ ಏರಿಕೆಯ ವಿರುದ್ಧ ಹೋರಾಡಲು ನಮ್ಮೊಂದಿಗೆ ಸೇರಿಕೊಳ್ಳಿ' ಎಂದು ಮನವಿ ಮಾಡಿದ ಖರ್ಗೆ, ಅಭಿಯಾನಕ್ಕೆ ತಮ್ಮ ವೇತನದಿಂದ ₹ 1.38ಲಕ್ಷ ದೇಣಿಗೆ ನೀಡಿದರು. 'ಕಾಂಗ್ರೆಸ್ ಪಕ್ಷವು ದೇಶದ ಪ್ರಗತಿಗಾಗಿ ಇದೇ ಮೊದಲ ಬಾರಿಗೆ ಸಾಮಾನ್ಯ ಜನರಿಂದ ಸಹಾಯ ಕೇಳುತ್ತಿದೆ. ಅಭಿಯಾನದ ಭಾಗವಾಗಿ ಸಣ್ಣ ಮೊತ್ತದ ದೇಣಿಗೆಯನ್ನು ಸ್ವೀಕರಿಸುತ್ತದೆ. ನೀವು ಶ್ರೀಮಂತರಿಗಾಗಿ ಕೆಲಸ ಮಾಡುತ್ತಲೇ ಇದ್ದರೆ, ಮುಂದೊಂದು ದಿನ ಅವರ ನೀತಿಗಳನ್ನು ಮಾತ್ರ ಒಪ್ಪಿ-ಕೊಳ್ಳಬೇಕಾಗುತ್ತದೆ' ಎಂದರು.

'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 138 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪಕ್ಷದ ಬೆಂಬಲಿಗರು ಕನಿಷ್ಠ ₹ 138 ನೀಡಬಹುದು ಅಥವಾ ₹ 1,380, ₹ 1,38,000... ಹೀಗೆ ದೇಣಿಗೆ ನೀಡಬಹುದು' ಎಂದು ಕಾಂಗ್ರೆಸ್ ಖಜಾಂಚಿ ಅಜಯ್ ಮಾಕೆನ್ ಹೇಳಿದರು.

ಡೊಮೇನ್ ಹೆಸರಿನಲ್ಲಿ ಗೊಂದಲ

ನವದೆಹಲಿ: ಕಾಂಗ್ರೆಸ್ ಪಕ್ಷವು 'ಡೊನೇಟ್ ಫಾರ್ ದೇಶ್' ಹೆಸರಿನಲ್ಲಿ ದೇಣಿಗೆ ಸಂಗ್ರಹಕ್ಕೆ ಅಭಿಯಾನ ಆರಂಭಿಸಿದೆ. ಆದರೆ, ಆನ್‌ಲೈನ್ ಮೂಲಕ ದೇಣಿಗೆ ನೀಡಲು ಮುಂದಾಗುವವರು ಎಚ್ಚರಿಕೆ ವಹಿಸದೆ ಇದ್ದಲ್ಲಿ, ದೇಣಿಗೆಯು ಬಿಜೆಪಿಗೆ ಅಥವಾ ಮಾಧ್ಯಮ ಸಂಸ್ಥೆಯೊಂದರ ವೆಬ್‌ಸೈಟ್‌ಗೆ ಹೋಗುವ ಸಾಧ್ಯತೆ ಇದೆ!

ಅಭಿಯಾನಕ್ಕೆ ಸಂಬಂಧಿಸಿದ ಎರಡು ಡೊಮೇನ್‌ಗಳು (donatefordesh.org ಮತ್ತು donatefordesh.com) ಬಿಜೆಪಿ ಹಾಗೂ ಒಪ್‌ಇಂಡಿಯಾ ಮಾಧ್ಯಮ ಸಂಸ್ಥೆಯ ಹೆಸರಿನಲ್ಲಿ ನೋಂದಣಿ ಆಗಿವೆ ಎಂಬುದು ಕಾಂಗ್ರೆಸ್ ಅಭಿಯಾನ ಆರಂಭಿಸಿದ ನಂತರ ಬೆಳಕಿಗೆ ಬಂದಿದೆ.

'ಡೊನೇಟ್ ಫಾರ್ ದೇಶ್' ಹೆಸರಿನಲ್ಲಿ ಡೊಮೇನ್‌ಅನ್ನು ಕಾಂಗ್ರೆಸ್ ಪಕ್ಷವು ನೋಂದಣಿ ಮಾಡಿಸಿರಲಿಲ್ಲ. ಹೆಸರಿನ ವಿಚಾರವಾಗಿ ಕಾಂಗ್ರೆಸ್‌ನ ಕಾಲೆಳೆದಿರುವ ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ 'ಡೊಮೇನ್ ಹೆಸರು ಬದಿಗಿರಲಿ, ಕಾಂಗ್ರೆಸ್ ಪಕ್ಷವು ಕೆಲವು ಜಾಲತಾಣ ಖಾತೆಗಳನ್ನು ಕೂಡ ಬ್ಲಾಕ್ ಮಾಡಿಸಿರಲಿಲ್ಲ. ಉದಾಹರಣೆಗೆ @donatefordesh ಹೆಸರನ್ನು ಬೇಕಿದ್ದರೆ ಪರಿಶೀಲಿಸಬಹುದು. ಇವರು ದೇಶವನ್ನು ಮುನ್ನಡೆಸಲು ಬಯಸುತ್ತಿದ್ದಾರೆ' ಎಂದು ಮಾಳವೀಯ ಎಕ್ಸ್‌ನಲ್ಲಿ ಬರೆದಿದ್ದಾರೆ.

ಇದಕ್ಕೆ ಪ್ರತಿಯಾಗಿ 'ಕಾಂಗ್ರೆಸ್ ಪಕ್ಷವು ಅಭಿಯಾನ ಶುರು ಮಾಡಿದ ನಂತರ ಬಿಜೆಪಿಯು ಭೀತಿಗೆ ಒಳಗಾಗಿದ್ದಷ್ಟೇ ಅಲ್ಲದೆ, ಬಿಜೆಪಿ ಕಡೆಯವರು ನಕಲಿ ಡೊಮೇನ್ ಹೆಸರು ಬಳಸಿ ಗೊಂದಲ ಸೃಷ್ಟಿಸುತ್ತಿದ್ದಾರೆ' ಎಂದು ಕಾಂಗ್ರೆಸ್‌ನ ಜಾಲತಾಣ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತ್ ದೂರಿದ್ದಾರೆ. ಅಭಿಯಾನದ ಅಡಿಯಲ್ಲಿ donateinc.in ವೆಬ್‌ಸೈಟ್ ಮೂಲಕ ಮಾತ್ರವೇ ದೇಣಿಗೆ ನೀಡಬಹುದು ಎಂದು ಸುಪ್ರಿಯಾ ತಿಳಿಸಿದ್ದಾರೆ.

ಸಂಸತ್ ಭದ್ರತಾ ಲೋಪ: ಆರೋಪಿಗಳ ಜಾಲತಾಣ ಖಾತೆಗಳ ವಿವರಕ್ಕೆ ಮನವಿ

ಮೆಟಾಗೆ ಪೊಲೀಸರಿಂದ ಪತ್ರ

ನವದೆಹಲಿ (ಪಿಟಿಐ): ಸಂಸತ್ ಭದ್ರತಾ ಲೋಪ ಪ್ರಕರಣದ ಆರು ಆರೋಪಿಗಳು ಸಾಮಾಜಿಕ ಮಾಧ್ಯಮ-ಗಳಲ್ಲಿ ಹೊಂದಿರುವ ಖಾತೆಗಳ ವಿವರ ಒದಗಿಸುವಂತೆ ದೆಹಲಿ ಪೊಲೀಸರು ಮೆಟಾ ಕಂಪನಿಗೆ ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಮುಖ ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತು ವಾಟ್ಸ್‌ಆ್ಯಪ್‌ನ ಒಡೆತನವನ್ನು ಮೆಟಾ ಹೊಂದಿದೆ. ಆರೋಪಿಗಳು ಸಾಮಾಜಿಕ ಜಾಲತಾಣಗಳ ಮೂಲಕ ಪರಸ್ಪರ ಪರಿಚಿತರಾಗಿ, ಸಂಚು ರೂಪಿಸಿದ್ದರು. ಇದಕ್ಕಾಗಿ ಫೇಸ್‌ಬುಕ್‌ನಲ್ಲಿ 'ಭಗತ್ ಸಿಂಗ್ ಅಭಿಮಾನಿಗಳ ಪುಟ' ಆರಂಭಿಸಿದ್ದರಲ್ಲದೆ, ಬಳಿಕ ಆ ಪುಟವನ್ನು ಅಳಿಸಿ ಹಾಕಿದ್ದರು.

ಆರೋಪಿಗಳ ಖಾತೆಗಳಲ್ಲಿ-ರುವ ವಿವರಗಳು ಹಾಗೂ ಭಗತ್ ಸಿಂಗ್ ಅಭಿಮಾನಿಗಳ ಪುಟದ ಮಾಹಿತಿ ನೀಡುವಂತೆ ಪೊಲೀಸರು ಮೆಟಾ ಕಂಪನಿಯನ್ನು ಕೇಳಿಕೊಂಡಿದ್ದಾರೆ ಎಂದು ಮೂಲಗಳು ಸೋಮವಾರ ಹೇಳಿವೆ. ವಾಟ್ಸ್‌ಆ್ಯಪ್ ಚಾಟ್‌ನ ವಿವರಗಳನ್ನು ನೀಡುವಂತೆಯೂ ಕೋರಿದ್ದಾರೆ.

ಪ್ರಮುಖ ಸಂಚುಕೋರ ಲಲಿತ್ ಝಾ, ತನ್ನ ಹಾಗೂ ಇತರ ಆರೋಪಿಗಳ ಮೊಬೈಲ್ ಫೋನ್‌ಗಳನ್ನು ರಾಜಸ್ಥಾನದ ನಾಗೌರ್‌ನಲ್ಲಿ ಸುಟ್ಟುಹಾಕಿರುವುದಾಗಿ ಪೊಲೀಸರು ಹೇಳಿದ್ದಾರೆ. ಮೊಬೈಲ್ ಫೋನ್‌ಗಳ ಕೆಲವು ಭಾಗಗಳನ್ನು ಪತ್ತೆಹಚ್ಚಲಾಗಿದ್ದು, ಅವುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಪೊಲೀಸ್ ಸುಪರ್ದಿಗೆ ಬ್ಯಾಂಕ್ ಪಾಸ್ ಬುಕ್: ಡಿಸೆಂಬರ್ 13ರ ಸಂಚನ್ನು ಕಾರ್ಯಗತಗೊಳಿಸಲು ಯಾರಿಂದಾದರೂ ಹಣ ಪಡೆದಿದ್ದಾರೆಯೇ ಎಂಬ ಮಾಹಿತಿ ಕಲೆಹಾಕಲು ಪೊಲೀಸರು ಎಲ್ಲಾ ಆರೋಪಿಗಳ ಬ್ಯಾಂಕ್ ಖಾತೆ ವಿವರಗಳನ್ನು ಕಲೆಹಾಕಿದ್ದಾರೆ.

ದೆಹಲಿ ಪೊಲೀಸ್ ವಿಶೇಷ ಘಟಕದ ಪ್ರತ್ಯೇಕ ತಂಡಗಳು, ಆರೋಪಿಗಳ ಕುಟುಂಬ ಸದಸ್ಯರನ್ನು ಭಾನುವಾರ ಭೇಟಿಯಾಗಿ ಬ್ಯಾಂಕ್ ಖಾತೆ ವಿವರಗಳನ್ನು ಪಡೆದಿವೆ. ನೀಲಂ ದೇವಿ ಮತ್ತು ಸಾಗರ್ ಶರ್ಮಾ ಅವರ ಬ್ಯಾಂಕ್ ಪಾಸ್ ಬುಕ್‌ಅನ್ನು ಕ್ರಮವಾಗಿ ಹರಿಯಾಣದ ಜೀಂದ್ ಮತ್ತು ಉತ್ತರ ಪ್ರದೇಶದ ಲಖನೌನಲ್ಲಿ-ರುವ ಮನೆಗಳಿಂದ ಪೊಲೀಸರು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದಾರೆ.

ನ್ಯಾಯಾಂಗ ತನಿಖೆಗೆ ಕೋರಿ ಅರ್ಜಿ

ನವದೆಹಲಿ: ಸಂಸತ್ತಿನ ಭದ್ರತಾ ಲೋಪ ಪ್ರಕರಣದ ಬಗ್ಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯಿಂದ ತನಿಖೆಗೆ ಆದೇಶಿಸಬೇಕು ಎಂದು ಕೋರಿ ವಕೀಲರೊಬ್ಬರು ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ಭದ್ರತಾ ಲೋಪವು ಬಹಳ ಯೋಜನಾಬದ್ಧವಾಗಿ, ಸಮನ್ವಯದಿಂದ ನಡೆಸಿದ ಕೃತ್ಯ ಎಂದು ವಕೀಲ ಅಬು ಸೊಹೇಲ್ ಅವರು ಅರ್ಜಿಯಲ್ಲಿ ಹೇಳಿದ್ದಾರೆ. 'ಭದ್ರತೆಯ ಸಂಪೂರ್ಣ ವೈಫಲ್ಯ ಇಲ್ಲಿ ಆಗಿದೆ. ಸಂಸತ್ತಿನ ಒಳಗೆ ಅಕ್ರಮವಾಗಿ ಪ್ರವೇಶಿಸಿದವರು ಅಲ್ಲಿ ವಿಷಾನಿಲ ಪ್ರಯೋಗಿಸುವ ಸಾಧ್ಯತೆ ಇತ್ತು. ಅಥವಾ ಅವರು ಜೀವ ತೆಗೆಯುವ ಸಾಮರ್ಥ್ಯದ ಶಸ್ತ್ರಾಸ್ತ್ರ ಕೊಂಡೊಯ್ಯುವ ಅಪಾಯವೂ ಇತ್ತು' ಎಂದು ಹೇಳಿದ್ದಾರೆ. ದೇಶದ ಅತ್ಯಂತ ಮಹತ್ವದ ಸಂಸ್ಥೆಯ (ಸಂಸತ್ತು) ಕಟ್ಟಡಕ್ಕೆ ನೀಡಿರುವ ಭದ್ರತೆಯು ಸೂಕ್ತ ರೀತಿಯಲ್ಲಿ ಇಲ್ಲ ಎಂದಾದರೆ, ದೇಶದ ಜನರ ಜೀವ ಮತ್ತು ಆಸ್ತಿಗೆ ಕೂಡ ರಕ್ಷಣೆ ಇಲ್ಲದಂತೆ ಆಗುತ್ತದೆ ಎಂದು ಸೊಹೇಲ್ ಅವರು ವಾದಿಸಿದ್ದಾರೆ.

ಕೇರಳ: ರಾಜ್ಯಪಾಲ, ಸಿ.ಎಂ ಜಟಾಪಟಿ ತೀವ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹಾಗೂ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ನಡುವಿನ ಜಟಾಪಟಿ ಮುಂದುವರಿದಿದೆ.

ರಾಜ್ಯಪಾಲ ಖಾನ್ ಅವರು, ಕೋಯಿಕ್ಕೋಡ್ ನಗರದಲ್ಲಿ ಸೋಮವಾರ ಸಂಚಾರ ಕೈಗೊಂಡಿದ್ದರು. ತಮ್ಮ ವಿರುದ್ಧ ಪ್ರತಿಭಟನೆ ನಡೆಸುವಂತೆ ವಿದ್ಯಾರ್ಥಿಗಳನ್ನು ಮುಖ್ಯಮಂತ್ರಿ ಪ್ರಚೋದಿಸುತ್ತಿದ್ದಾರೆ ಎಂಬ ತಮ್ಮ ಆರೋಪವನ್ನು ಪುನರುಚ್ಚರಿಸಿದ್ದಾರೆ.

ಸಿಪಿಎಂ ಪಕ್ಷದ ವಿದ್ಯಾರ್ಥಿ ಘಟಕವಾದ ಎಸ್‌ಎಫ್‌ಐನ ಕಾರ್ಯಕರ್ತರು ವಿದ್ಯಾರ್ಥಿಗಳಲ್ಲ, ಪುಂಡರು ಎಂದು ಟೀಕಿಸಿದ್ದಾರೆ. 'ಕಣ್ಣೂರಿನಲ್ಲಿ ರಾಜಕೀಯ ದ್ವೇಷದಿಂದ ನಡೆದಿರುವ ಹಲವು ಕೊಲೆಗಳಲ್ಲಿ ವಿಜಯನ್ ಶಾಮೀಲಾಗಿದ್ದಾರೆ' ಎಂಬ ಗಂಭೀರ ಆರೋಪ ಮಾಡಿದ್ದಾರೆ.

'ಎಲ್ಲ ವಿದ್ಯಾರ್ಥಿಗಳು ಎಸ್‌ಎಫ್‌ಐ ಜೊತೆಗೆ ಗುರುತಿಸಿಕೊಂಡಿದ್ದಾರಾ? ಏಕೆ ಬೇರೆ ವಿದ್ಯಾರ್ಥಿಗಳು ಪ್ರತಿಭಟಿಸುತ್ತಿಲ್ಲ? ಏಕೆಂದರೆ, ಸುಪ್ರೀಂ ಕೋರ್ಟ್ ತೀರ್ಪಿನ ನಂತರ ತಾವು ವಿ.ವಿ ಮೇಲೆ ನಿಯಂತ್ರಣ ಹೊಂದಲಾಗದು ಎಂಬುದು ಅವರಿಗೆ ಅರ್ಥವಾಗಿದೆ' ಎಂದು ಹೇಳಿದ್ದಾರೆ.

ವಿ.ವಿಗಳಿಗೆ ಸಂಬಂಧಿಸಿ ಆಡಳಿತ ಪಕ್ಷವು ಅಧಿಕಾರ ದುರ್ಬಳಕೆ ಮಾಡಿಕೊಂಡಿದೆ ಎಂದ ಅವರು, 'ಕ್ಯಾಲಿಕಟ್ ವಿಶ್ವವಿದ್ಯಾಲಯದಲ್ಲಿ ಆರು ಮಂದಿ ಮರಗೆಲಸದವರನ್ನು ನೇಮಿಸಲಾಗಿದೆ. ಅಲ್ಲಿ ಇದ್ದದ್ದು ಒಂದು ಹುದ್ದೆ ಮಾತ್ರ' ಎಂದರು.

'ಸಿಪಿಎಂನವರನ್ನು ಸೆನೆಟ್‌ಗೆ ನಾಮಕರಣ ಮಾಡಿದರೆ ಸರಿಯಾಗುತ್ತದಾ' ಎಂದೂ ಪ್ರಶ್ನಿಸಿದ್ದಾರೆ.

ಪಿಣರಾಯಿ ವಿಜಯನ್ ವಾಗ್ದಾಳಿ

ಕೊಲ್ಲಂ: ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೂಡ ರಾಜ್ಯಪಾಲರ ವಿರುದ್ಧ ತಮ್ಮ ವಾಗ್ದಾಳಿ ಮುಂದುವರಿಸಿದ್ದಾರೆ.

ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಕೋರಿಕೆ ಸಲ್ಲಿಸುವುದನ್ನು ತಮ್ಮ ಸರ್ಕಾರ ಪರಿಗಣಿಸಬಹುದು' ಎಂದು ಹೇಳಿದ್ದಾರೆ. 'ವಿಶ್ವವಿದ್ಯಾಲಯ ಕಳಿಸಿಕೊಡುವ ಪಟ್ಟಿಗೆ ಅನುಮೋದನೆ ನೀಡುವ ಮೂಲಕ ರಾಜ್ಯಪಾಲರು ಸೆನೆಟ್ ಸದಸ್ಯರನ್ನು ನಾಮನಿರ್ದೇಶನಗೊಳಿಸುವುದು ಸಹಜ ಪ್ರಕ್ರಿಯೆ. ಆದರೆ ಸಂಘ ಪರಿವಾರದ ಕಾರ್ಯಕರ್ತರನ್ನು ನಾಮನಿರ್ದೇಶನ ಮಾಡಿದ್ದಾರೆ' ಎಂದರು.

ಕಲಾಪಕ್ಕೆ ಅಡ್ಡಿ: 78 ಸಂಸದರ ಅಮಾನತು

ಒಂದನೇ ಪುಟದಿಂದ...

ದಿನದ ಬೆಳವಣಿಗೆ: ಲೋಕಸಭೆಯ ಕಲಾಪ ಬೆಳಿಗ್ಗೆ 11ಕ್ಕೆ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗುತ್ತಾ ಧರಣಿ ಆರಂಭಿಸಿದರು. ಘೋಷಣೆಗಳನ್ನು ಕೂಗದಂತೆ ಸ್ಪೀಕರ್ ಓಂ ಬಿರ್ಲಾ ಮನವಿ ಮಾಡಿದರು.

ಜೊತೆಗೆ, ಸಂಸತ್ ಭವನದ ಭದ್ರತೆಗೆ ಕೈಗೊಂಡ ಹೆಚ್ಚುವರಿ ಕ್ರಮಗಳ ಕುರಿತು ಮಾಹಿತಿ ನೀಡಿದರು. ಸುಗಮ ಕಲಾಪ ನಡೆಸಲು ಎಲ್ಲ ಸದಸ್ಯರು ಸಹಕಾರ ನೀಡಬೇಕು ಎಂದು ಅವರು ವಿನಂತಿಸಿದರು. 'ಭಿತ್ತಿಪತ್ರ ಹಿಡಿದು ಪ್ರತಿಭಟನೆ ನಡೆಸುವುದು ಸರಿಯಲ್ಲ. ಇದು ಸದನದ ಘನತೆಯನ್ನು ಕಡಿಮೆ ಮಾಡುತ್ತದೆ' ಎಂದೂ ಹೇಳಿದರು.

ಆದರೆ ವಿಪಕ್ಷಗಳ ಸದಸ್ಯರು ಪಟ್ಟು ಬಿಡಲಿಲ್ಲ. 'ಪ್ರತಿಭಟನೆ ಕೈ ಬಿಡುವಂತೆ ಕೈ ಮುಗಿದು ಕೇಳಿ-ಕೊಳ್ಳುತ್ತೇನೆ' ಎಂದು ಪ್ರಲ್ಹಾದ ಜೋಶಿ ಮನವಿ ಮಾಡಿದರು. ಆದರೂ ವಿಪಕ್ಷಗಳ ಸದಸ್ಯರು ಘೋಷಣೆ ಕೂಗುವುದನ್ನು ಮುಂದುವರಿಸಿದರು. ಗಲಾಟೆಯ ನಡುವೆಯೇ ಕೆಲಕಾಲ ಪ್ರಶ್ನೋತ್ತರದ 'ಶಾಸ್ತ್ರ' ನಡೆಸಲಾಯಿತು.

ತಮ್ಮ ವರ್ತನೆ ಮೂಲಕ ಕಾಂಗ್ರೆಸ್, ಮಿತ್ರಪಕ್ಷಗಳ ಸದಸ್ಯರು ಲೋಕಸಭಾಧ್ಯಕ್ಷರು ಹಾಗೂ ರಾಜ್ಯಸಭೆಯ ಸಭಾಪತಿ ಅವರನ್ನು ಅವಮಾನಿಸಿದ್ದಾರೆ

ಪೀಯೂಷ್ ಗೋಯಲ್
ರಾಜ್ಯಸಭೆಯ ಸಭಾನಾಯಕ

ಮಧ್ಯಾಹ್ನ 2ಕ್ಕೆ ಕಲಾಪ ಆರಂಭವಾದಾಗ ನಂತರ ಕಲಾಪವನ್ನು ಮಧ್ಯಾಹ್ನ 12ಕ್ಕೆ ಮುಂದೂಡಲಾಯಿತು. 12ಕ್ಕೆ ಕಲಾಪ ಮತ್ತೆ ಶುರುವಾದಾಗ ವಿರೋಧ ಪಕ್ಷಗಳ ಸದಸ್ಯರ ಧರಣಿ ಮುಂದುವರಿಯಿತು. ಗದ್ದಲದ ನಡುವೆ ಕಾಗದ ಪತ್ರಗಳನ್ನು ಮಂಡಿಸಲಾಯಿತು.

ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಅವರು 'ದೂರಸಂಪರ್ಕ ಮಸೂದೆ–2023' ಅನ್ನು ಮಂಡಿಸಿದರು. ಈ ನಡುವೆ, ತಮ್ಮ ಸ್ಥಾನಗಳಿಗೆ ಹಿಂತಿರುಗುವಂತೆ ವಿಪಕ್ಷಗಳ ಸದಸ್ಯರಿಗೆ ಸಭಾಧ್ಯಕ್ಷರ ಪೀಠದಲ್ಲಿದ್ದ ರಾಜೇಂದ್ರ ಅಗರವಾಲ್ ಮನವಿ ಮಾಡಿದರು.

ಇದಕ್ಕೆ ವಿಪಕ್ಷಗಳ ಸದಸ್ಯರು ಒಪ್ಪಲಿಲ್ಲ. 'ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಅಗರವಾಲ್ ಎಚ್ಚರಿಸಿದರು. ಗದ್ದಲವನ್ನು ಮತ್ತಷ್ಟು ಹೆಚ್ಚಿಸಿದರು. ಬಳಿಕ ಕಲಾಪವನ್ನು ಮಧ್ಯಾಹ್ನ 2ಕ್ಕೆ ಮುಂದೂಡಿದರು.

ಮಧ್ಯಾಹ್ನ 2ಕ್ಕೆ ಕಲಾಪ ಆರಂಭವಾದಾಗ ಅಂಚೆ ಕಚೇರಿ ಮಸೂದೆಗೆ ಅಂಗೀಕಾರ ಪಡೆಯಲಾಯಿತು. ಕಲಾಪವನ್ನು ಮತ್ತೆ 2.45ಕ್ಕೆ ಮುಂದೂಡಲಾಯಿತು. ಮಧ್ಯಾಹ್ನ 3ಕ್ಕೆ ಕಲಾಪ ಆರಂಭವಾಗುತ್ತಿದ್ದಂತೆ 33 ಸದಸ್ಯರ ಅಮಾನತು ತೀರ್ಮಾನ ಪ್ರಕಟಿಸಲಾಯಿತು.

ರಾಜ್ಯಸಭೆಯ ಕಲಾಪವು ನಾಲ್ಕು ಸಲ ಮುಂದೂಡಿಕೆಯಾಯಿತು. 'ಭದ್ರತಾ ವೈಫಲ್ಯದ ಕುರಿತು ಪ್ರಧಾನಿ ಹಾಗೂ ಗೃಹ ಸಚಿವರು ಸದನದ ಹೊರಗೆ ಹೇಳಿಕೆ ನೀಡಿದ್ದಾರೆ. ಆದರೆ, ಅವರು ಸದನದಲ್ಲಿ ಹೇಳಿಕೆ ನೀಡಲು ಸಿದ್ಧರಿಲ್ಲ' ಎಂದು ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, ಜೈರಾಮ್ ರಮೇಶ್ ಮತ್ತಿತರರು ಆಕ್ರೋಶ ವ್ಯಕ್ತಪಡಿಸಿದ-ರು. ಭಿತ್ತಿಪತ್ರ ಹಿಡಿದು ಪ್ರತಿಭಟನೆ ನಡೆಸುತ್ತಿದ್ದ ಸದಸ್ಯರಿಗೆ ಸಭಾಪತಿ ಜಗದೀಪ್ ಧನಕರ್ ಎಚ್ಚರಿಕೆ ನೀಡಿದರು. ನಿಯಮ 267ರಡಿ ವಿರೋಧ ಪಕ್ಷಗಳ ಸದಸ್ಯರು ನೀಡಿದ್ದ 22 ನೋಟಿಸ್‌ಗಳನ್ನು ತಿರಸ್ಕರಿಸಿದರು.

ಪ್ರಜಾಪ್ರಭುತ್ವದ ಕೊಲೆ: ಖರ್ಗೆ ಕಿಡಿ

'ದೇಶದಲ್ಲಿ ತೀವ್ರ ನಿರಂಕುಶವಾದ ಜಾರಿಯಲ್ಲಿದೆ. ಯಾವುದೇ ಚರ್ಚೆ ಇಲ್ಲದೆ ಪ್ರಮುಖ ಶಾಸನಗಳನ್ನು ಬಲವಂತವಾಗಿ ಅಂಗೀಕಾರ (ಬುಲ್ಡೋಜ್) ಪಡೆಯಲು ಸರ್ಕಾರ ಮುಂದಾಗಿದೆ' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಿಡಿಕಾರಿದರು.

'ಮೊದಲು ಅತಿಕ್ರಮಣಕಾರರು ಸಂಸತ್ತಿನ ಮೇಲೆ ದಾಳಿ ಮಾಡಿದರು. ನಂತರ ಮೋದಿ ಸರ್ಕಾರವು ಸಂಸತ್ತಿನ ಮತ್ತು ಪ್ರಜಾಪ್ರಭುತ್ವದ ಮೇಲೆ ದಾಳಿ ಮಾಡಿತು. ಸಂಸದರನ್ನು ಅಮಾನತು-ಗೊಳಿಸುವ ಮೂಲಕ ಪ್ರಜಾಪ್ರಭುತ್ವದ ಎಲ್ಲ ಸಿದ್ಧಾಂತಗಳನ್ನು ನಿರಂಕುಶವಾದಿ ಮೋದಿ ಸರ್ಕಾರವು ಕಸದ ಬುಟ್ಟಿಗೆ ಎಸೆಯುತ್ತಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'19 ವರ್ಷಗಳಿಂದ ಸಂಸದನಾಗಿದ್ದೇನೆ. ಮೊದಲ ಬಾರಿಗೆ ಅಮಾನತಿನ 'ಗೌರವ'ಕ್ಕೆ ಪಾತ್ರನಾಗಿದ್ದೇನೆ' ಎಂದು ವ್ಯಂಗ್ಯವಾಡಿ-ರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಮೋದಿ ಆಡಳಿತದಲ್ಲಿ ದೇಶದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗಿದೆ' ಎಂದು ಟೀಕಿಸಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, 'ಸಂಸತ್ ಈಗ ಚರ್ಚೆ ನಡೆಸುವ ಸ್ಥಳವಾಗಿಲ್ಲ. ಅಮಾನತು ಮಾಡುವ ಸ್ಥಳವಾಗಿ ಮಾರ್ಪಟ್ಟಿದೆ' ಎಂದಿದ್ದಾರೆ.

ಕಾಲಚಕ್ರ ತಿರುಗಿದೆ, ಪರಂಪರೆ ಬಗ್ಗೆ ದೇಶ ಹೆಮ್ಮೆ ಪಡುತ್ತಿದೆ ಎಂದು ಪ್ರಧಾನಿ ಪ್ರತಿಪಾದನೆ

ಗುಲಾಮಗಿರಿ ಮನಃಸ್ಥಿತಿಯಿಂದ ದೇಶಕ್ಕೀಗ ಸ್ವಾತಂತ್ರ್ಯ: ಮೋದಿ

ವಾರಾಣಸಿ (ಪಿಟಿಐ): 'ದೇಶವೀಗ ಗುಲಾಮಗಿರಿಯ ಮನಃಸ್ಥಿತಿಯಿಂದ ಸ್ವಾತಂತ್ರ್ಯ ಪಡೆದಿದ್ದು, ತನ್ನ ಪರಂಪರೆಯ ಬಗ್ಗೆ ಹೆಮ್ಮೆ ಪಡುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಇಲ್ಲಿ ಪ್ರತಿಪಾದಿಸಿದರು.

ತಾವು ಪ್ರತಿನಿಧಿಸುವ ವಾರಾಣಸಿ ಕ್ಷೇತ್ರದಲ್ಲಿ ಬೃಹತ್ ಅಧ್ಯಾತ್ಮ ಕೇಂದ್ರ 'ಸ್ವರವೇದ ಮಹಾಮಂದಿರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕ್ಷೇತ್ರದಲ್ಲಿ ₹ 19,000 ಕೋಟಿ ಅಂದಾಜು ವೆಚ್ಚದ ಅಭಿವೃದ್ಧಿ ಯೋಜನೆಗಳಿಗೂ ಈ ಸಂದರ್ಭದಲ್ಲಿ ಚಾಲನೆ ನೀಡಿದರು.

'ಗುಲಾಮಿಗಿರಿಯ ಯುಗದಲ್ಲಿ ದೇಶವನ್ನು ದುರ್ಬಲಗೊಳಿಸುವ ಯತ್ನವಾಗಿ, ನಮ್ಮ ಹೆಗ್ಗುರುತುಗಳನ್ನು ಗುರಿಯಾಗಿಸಿ ದಾಳಿ ನಡೆಯಿತು. ಈಗ ಆ ಎಲ್ಲ ಸಾಂಸ್ಕೃತಿಕ ಹೆಗ್ಗುರುತುಗಳ ಮರುನಿರ್ಮಾಣ ಅತ್ಯಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

'ಸ್ವಾತಂತ್ರ್ಯದ ಏಳು ದಶಕದ ಬಳಿಕ ಈಗ ಕಾಲಚಕ್ರ ತಿರುಗಿದೆ. ಗುಲಾಮಗಿರಿ ಮನಃಸ್ಥಿತಿಯ ಕೆಂಪುಕೋಟೆಯ ಸ್ವಾತಂತ್ರ್ಯದಿಂದ ದೇಶ ಮುಕ್ತವಾಗಿದೆ. ಪರಂಪರೆ ಬಗ್ಗೆ ಹೆಮ್ಮೆಪಡುತ್ತಿದೆ' ಎಂದು ಹೇಳಿದರು.

'ವಿಶ್ವನಾಥನ ಘನತೆ, ಔನ್ನತ್ಯವು ಭಾರತದ ವೈಭವವನ್ನು ಸಾರುತ್ತಿವೆ. ಅಭಿವೃದ್ಧಿಯ ಹೊಸ ಎತ್ತರವನ್ನು ಕೇದಾರನಾಥ ಮುಟ್ಟಿದೆ. ಮಹಾಕಾಳ ಮಹಾಲೋಕವು ಅಮರತ್ವದ ಸಂಕೇತವಾಗಿದೆ' ಎಂದು ಪ್ರಧಾನಿ ಬಣ್ಣಿಸಿದರು.

ಬುದ್ಧ ಸರ್ಕ್ಯೂಟ್ ಅಭಿವೃದ್ಧಿಯ ಮೂಲಕ ವಿಶ್ವವನ್ನೇ ಬುದ್ಧ ಅಧ್ಯಾತ್ಮ ಕೇಂದ್ರದತ್ತ ಭಾರತ ಸೆಳೆಯುತ್ತಿದೆ. ರಾಮ ಸರ್ಕ್ಯೂಟ್ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆದಿದೆ. ಕೆಲವೇ ವಾರಗಳಲ್ಲಿ ರಾಮಮಂದಿರ ನಿರ್ಮಾಣ ಪೂರ್ಣವಾಗಲಿದೆ. ದೇಶದ ಸಾಮಾಜಿಕ ಸತ್ಯ, ಸಾಂಸ್ಕೃತಿಕ ಹೆಗ್ಗುರುತುಗಳು ಸಮೀಕರಿಸುತ್ತಿರುವ ಹೊತ್ತಿನಲ್ಲಿ ಸಮಗ್ರ ಅಭಿವೃದ್ಧಿಯತ್ತ ಹೆಜ್ಜೆ ಇಡಬೇಕಾಗಿದೆ ಎಂದು ಹೇಳಿದರು.

'ಕಾಶಿ ವಿಶ್ವನಾಥ ಧಾಮ ಅಭಿವೃದ್ಧಿಯ ಬಳಿಕ ಉದ್ಯೋಗಾವಕಾಶ, ವಹಿವಾಟು, ಉದ್ಯಮ ಗರಿಗೆದರಿವೆ. ವಾರಾಣಸಿ ಈಗ ಸ್ವಚ್ಛತೆ ಮತ್ತು ಪರಿವರ್ತನೆಗೆ ಇನ್ನೊಂದು ಹೆಸರಾಗಿದೆ. ಒಂಬತ್ತು ವರ್ಷಗಳಲ್ಲಿ ವಾರಾಣಸಿ ಕ್ಷೇತ್ರವು ಸಾಕಷ್ಟು ಅಭಿವೃದ್ಧಿಯಾಗಿದೆ ಎಂದು ತಿಳಿಸಿದರು.

ವಾರಾಣಸಿಯಲ್ಲಿ ಸೋಮವಾರ ಪ್ರಧಾನಿ ಉದ್ಘಾಟಿಸಿದ 'ಸ್ವರವೇದ ಮಹಾಮಂದಿರ' ಬೃಹತ್ ಅಧ್ಯಾತ್ಮ ಕೇಂದ್ರ —ಪಿಟಿಐ ಚಿತ್ರ

ಏಳು ಮಹಡಿಗಳ ಸಂಕೀರ್ಣ

ಜಗತ್ತಿನಲ್ಲೇ ಅತಿದೊಡ್ಡದು ಎನ್ನಲಾದ ಅಧ್ಯಾತ್ಮ ಕೇಂದ್ರ 'ಸ್ವರವೇದ ಮಹಾಮಂದಿರ'ವನ್ನು ಪ್ರಧಾನಿ ನರೇಂದ್ರ ಮೋದಿ ಇಲ್ಲಿ ಉದ್ಘಾಟಿಸಿದರು. 20 ಸಾವಿರ ಮಂದಿ ಏಕಕಾಲಕ್ಕೆ ಆಧ್ಯಾತ್ಮಿಕ ಚಟುವಟಿಕೆ, ಧ್ಯಾನದಲ್ಲಿ ಭಾಗವ-ಹಿಸಬಹುದಾಗಿದೆ. ಏಳು ಮಹಡಿಗಳ ಈ ಸಂಕೀರ್ಣದಲ್ಲಿ ಗೋಡೆಗಳ ಮೇಲೆ ಸ್ವರವೇದದ ಚರಣಗಳನ್ನು ಕೆತ್ತಲಾಗಿದೆ.

ಭಾಷಣ ತರ್ಜುಮೆಗೆ ಎ.ಐ ತಂತ್ರಜ್ಞಾನ

ವಾರಾಣಸಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿ ಸ್ಥಳೀಯ ಭಾಷೆಗೆ ಭಾಷಣ ಅನುವಾದಿಸುವ ಸೌಲಭ್ಯ ಇಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮದಲ್ಲಿ ಮೊದಲ ಬಾರಿಗೆ ಬಳಕೆಯಾಯಿತು.

ಕಾಶಿ ತಮಿಳ್ ಸಂಗಮಂ ಕಾರ್ಯಕ್ರಮಕ್ಕಾಗಿ ತಮಿಳುನಾಡಿನಿಂದ ಬಂದಿದ್ದವರ ಜೊತೆಗೆ, ಈ ಸೌಲಭ್ಯದ ಮೂಲಕ ಪ್ರಧಾನಿ, ಅವರದೇ ಭಾಷೆಯಲ್ಲಿ 'ಸಂವಹನ' ನಡೆಸಿದರು.

ಇಯರ್‌ಫೋನ್ ಹಾಕಿಕೊಳ್ಳಲು ಭಾಷಣದ ಆರಂಭದಲ್ಲೇ ಸಭಿಕರಿಗೆ ಕೋರಿದರು. 'ನನ್ನ ಹಿಂದಿ ಭಾಷಣವನ್ನು ನಿಮ್ಮ ಭಾಷೆಗೆ ತರ್ಜುಮೆಗೊಳಿಸಲು ಮೊದಲ ಬಾರಿಗೆ ಎ.ಐ ತಂತ್ರಜ್ಞಾನ ಬಳಸುತ್ತಿದ್ದೇನೆ. ಇದು ನನ್ನ ಮೊದಲ ಅನುಭವ. ಭವಿಷ್ಯದಲ್ಲಿ ಇದನ್ನೇ ಬಳಸುತ್ತೇನೆ. ಹಿಂದಿಯ ಭಾಷಣ, ತಕ್ಷಣವೇ ತಮಿಳಿಗೆ ತರ್ಜುಮೆಯಾಗಲಿದೆ' ಎಂದರು.

ಆದರೆ, ಈ ಪ್ರಯೋಗ ಕೆಲ ನಿಮಿಷಕ್ಕಷ್ಟೇ ಸೀಮಿತವಾಯಿತು. ಬಳಿಕ ಪ್ರಧಾನಿ ಭಾಷಣವನ್ನು ಭಾಷಾಂತರಕಾರರೊಬ್ಬರು ತಮಿಳಿಗೆ ಅನುವಾದಿಸಿದರು.

9 ಮನವಿ

ಲೋಕಸಭೆಯಲ್ಲಿ ತಾವು ಪ್ರತಿನಿಧಿಸುವ ಕ್ಷೇತ್ರದ ಜನರೆದುರು ಪ್ರಧಾನಿ 9 ಮನವಿ ಮುಂದಿಟ್ಟರು. ಆ ಮನವಿಗಳು–

- ಪ್ರತಿ ಹನಿ ನೀರಿನ ಸಂರಕ್ಷಣೆ, ಈ ಬಗ್ಗೆ ಜನಜಾಗೃತಿ ಮೂಡಿಸುವುದು
- ಹಳ್ಳಿ, ಹಳ್ಳಿಗಳಿಗೆ ತೆರಳಿ ಡಿಜಿಟಲ್ ವಹಿವಾಟು ಕುರಿತು ಅರಿವು ಮೂಡಿಸುವುದು
- ತನ್ನ ವಾಸಸ್ಥಳ, ಬೀದಿ, ಗ್ರಾಮದ ಸ್ವಚ್ಛತೆಗೆ ಆದ್ಯತೆ ನೀಡುವುದು
- ಸ್ಥಳೀಯ ಉತ್ಪನ್ನಗಳನ್ನೇ ಆದಷ್ಟೂ ಬಳಸುವುದು
- ಮೊದಲು ನಿಮ್ಮ ದೇಶದ ವಿವಿಧೆಡೆ ಪ್ರವಾಸ ಮಾಡಿ
- ಸಹಜ ಕೃಷಿ ಕುರಿತು ರೈತರಲ್ಲಿ ಆದಷ್ಟೂ ಅರಿವು ಮೂಡಿಸಿ
- ನಿತ್ಯದ ಬಳಕೆಯಲ್ಲಿ ಸಿರಿಧಾನ್ಯಕ್ಕೇ ಆದ್ಯತೆ ನೀಡಿ
- ಯೋಗ, ಕ್ರೀಡೆಯಲ್ಲಿ ತೊಡಗಿ. ದೇಹಾರೋಗ್ಯ ರಕ್ಷಿಸಿಕೊಳ್ಳಿ
- ಕನಿಷ್ಠ ಒಂದು ಬಡಕುಟುಂಬಕ್ಕೆ ನೆರವಾಗಿ

ನಾಗ್ಪುರ: ಮೃತರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿ ಸ್ಫೋಟಕಗಳ ಉತ್ಪಾದನಾ ಘಟಕದಲ್ಲಿ ಭಾನುವಾರ ಸಂಭವಿಸಿದ್ದ ಸ್ಫೋಟದಲ್ಲಿ ಮೃತಪಟ್ಟವರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಅವಘಡದಲ್ಲಿ 9 ಜನರು ಮೃತಪಟ್ಟಿದ್ದರು.

ತನಿಖಾ ತಂಡಗಳು ಸ್ಥಳದಿಂದ ದೇಹದ ವಿವಿಧ ಭಾಗಗಳನ್ನು ಸಂಗ್ರಹಿಸಿವೆ. ಇವುಗಳನ್ನು ಸರ್ಕಾರಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಾಗ್ಪುರದ ಚಾಕ್‌ಡೋಹ್‌ನಲ್ಲಿರುವ ಸೋಲಾರ್ ಇಂಡಸ್ಟ್ರೀಸ್ ಇಂಡಿಯಾ ಘಟಕದಲ್ಲಿ ಈ ಅವಘಡ ಸಂಭವಿಸಿತ್ತು. ಸ್ಥಳದಲ್ಲಿ ಸಂಗ್ರಹಿಸಿದ ದೇಹದ ವಿವಿಧ ಭಾಗಗಳನ್ನು ಭಿನ್ನ ಪ್ಯಾಕೆಟ್‌ಗಳಲ್ಲಿ ಇಡಲಾಗಿದೆ. ಮಾದರಿ ಆಧರಿಸಿ ಡಿಎನ್‌ಎ ಪರೀಕ್ಷೆ ಬಳಿಕ ಗುರುತು ಪತ್ತೆ ಮಾಡಿ ಸಂಬಂಧಿಕರಿಗೆ ಹಸ್ತಾಂತರಿ-ಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಅಪಘಡದ ತೀವ್ರತೆಗೆ ನತದೃಷ್ಟರ ದೇಹಗಳು ಚೂರುಗಳಾಗಿವೆ. ಹಲವು ದೂರಕ್ಕೆ ಎಸೆಯಲ್ಪಟ್ಟಿವೆ. ಕಟ್ಟಡ ಕುಸಿದಿದೆ. ಅವಘಡದ ಸ್ಥಳದಲ್ಲಿ ಅವಶೇಷಗಳನ್ನು ತೆರವುಗೊಳಿಸುವ ಕಾರ್ಯ ನಡೆದಿದೆ ಎಂದು ಸ್ಥಳೀಯ ಕೊಂದಳಿ ಠಾಣೆಯ ಅಧಿಕಾರಿ ತಿಳಿಸಿದರು.

ತನಿಖಾ ತಂಡಗಳು ಸ್ಥಳದಿಂದ ಇದುವರೆಗೂ 50 ಅಂಗಗಳನ್ನು ವಶಕ್ಕೆ ಪಡೆದಿವೆ. ಸಾವಿಗೆ ಕಾರಣವಾದ ನಿರ್ಲಕ್ಷ್ಯ (ಐಪಿಸಿ 304ಎ), ನಿರ್ಲಕ್ಷ್ಯ (286) ಕುರಿತು ಪ್ರಕರಣ ದಾಖಲಿಸಲಾಗಿದೆ. ತನಿಖೆ ಹಂತದಲ್ಲಿಯೇ ಆರೋಪಿಗಳನ್ನು ಗುರುತಿಸಲಾಗುವುದು ಎಂದರು.

ತನಿಖೆಗೆ ಆಗ್ರಹ: ಸ್ಥಳದಲ್ಲಿ ಸುರಕ್ಷತೆಗೆ ಒತ್ತು ನೀಡಿರಲಿಲ್ಲ. ಸುರಕ್ಷತಾ ವೈಫಲ್ಯವೇ ಅವಘಡಕ್ಕೆ ಕಾರಣವಾಗಿದೆ ಎಂದು ವಿರೋಧ ಪಕ್ಷದ ಶಾಸಕರು ಆರೋಪಿಸಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆ ಪ್ರತಿಪಕ್ಷದ ನಾಯಕ ಅಂಬಾದಾಸ್ ದಾನ್ವೆ (ಶಿವಸೇನಾ ಉದ್ಧವ್ ಬಣ) ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ರಾತ್ರಿ ಪಾಳಿ ನಂತರ ಹಗಲು ಪಾಳಿ ಕೆಲಸಕ್ಕೂ ಬರುವಂತೆ ಕಾರ್ಮಿಕರಿಗೆ ಒತ್ತಡ ಹೇರಲಾಗುತ್ತಿತ್ತು. ಸುರಕ್ಷತಾ ಕ್ರಮಗಳಿರಲಿಲ್ಲ ಎಂದು ಟೀಕಿಸಿದರು.

ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್, ಅಜಿತ್ ಪವಾರ್ ಅವರೂ ಸ್ಥಳಕ್ಕೆ ಭೇಟಿ ನೀಡಿದ್ದರು. ಅವಘಡ ಕುರಿತು ತನಿಖೆಗೆ ಮುಖ್ಯಮಂತ್ರಿ ಆದೇಶಿಸಿದ್ದಾರೆ ಎಂದು ತಿಳಿಸಿದರು.

ದುಬೈನಲ್ಲಿ ಐಪಿಎಲ್ ಆಟಗಾರರ ಮಿನಿ ಬಿಡ್ ಇಂದು; ರೇಸ್‌ನಲ್ಲಿ ಮನೀಷ್ ಪಾಂಡೆ

ಕಮಿನ್ಸ್, ಶಾರ್ದೂಲ್ ಮೇಲೆ ಕಣ್ಣು

ದುಬೈ (ಪಿಟಿಐ): ಮುಂದಿನ ಮಾರ್ಚ್‌ನಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಗಾಗಿ ಆಟಗಾರರ ಮಿನಿ ಹರಾಜು ಪ್ರಕ್ರಿಯೆ ಮಂಗಳವಾರ ನಡೆಯಲಿದೆ. ಹೋದ ತಿಂಗಳು ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಮತ್ತು ವಿವಿಧ ಟಿ20 ಸರಣಿಗಳಲ್ಲಿ ಮಿಂಚಿರುವ ಆಟಗಾರರು ಕೂಡ ಬಿಡ್‌ನಲ್ಲಿ ಲಭ್ಯವಿದ್ದು ಒಳ್ಳೆಯ ಮೌಲ್ಯ ಪಡೆಯುವ ನಿರೀಕ್ಷೆಯಲ್ಲಿದ್ದಾರೆ.

ಮಿನಿ ಹರಾಜು ಉದ್ದೇಶ: ವರ್ಷದಿಂದ ವರ್ಷಕ್ಕೆ ತಮ್ಮ ತಂಡಗಳನ್ನು ಬಲಪಡಿಸುವ ಫ್ರ್ಯಾಂಚೈಸಿಗಳ ಉದ್ದೇಶ ಈಡೇರುತ್ತದೆ. ಮೆಗಾ ಮತ್ತು ಮಿನಿ ಹರಾಜಿಗೂ ಇರುವ ವ್ಯತ್ಯಾಸವೆಂದರೆ, ಆಟಗಾರರ ಸಂಖ್ಯೆ ಹಾಗೂ ಪರ್ಸ್ ಮೌಲ್ಯ. ಉಳಿದೆಲ್ಲ ಉದ್ದೇಶಗಳೂ ಒಂದೇ. 2025ರಲ್ಲಿ ಮೆಗಾ ಹರಾಜು ನಡೆಯಲಿದೆ.

ಟೂರ್ನಿಯ ಹದಿನೈದು ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬಿಡ್ ಪ್ರಕ್ರಿಯೆಯು ವಿದೇಶದಲ್ಲಿ ನಡೆಯುತ್ತಿದೆ. ದುಬೈನ ಕೊಕಾಕೋಲಾ ಅರೇನಾದಲ್ಲಿ ಜರುಗಲಿದೆ.

ಹರಾಜಿನಲ್ಲಿರುವ ಆಟಗಾರರು: ಐಪಿಎಲ್ ಆಡಳಿತ ಸಮಿತಿಯು 1166 ನೋಂದಾಯಿತ ಆಟಗಾರರ ಪಟ್ಟಿಯನ್ನು ಫ್ರ್ಯಾಂಚೈಸಿಗಳಿಗೆ ನೀಡಿತ್ತು. ಅದನ್ನು ಪರಿಷ್ಕರಿಸಿ 333 ಆಟಗಾರರನ್ನು ಅಂತಿಮಗೊಳಿಸಲಾಗಿದೆ. ಅದರಲ್ಲಿ ಭಾರತದ 214 ಮತ್ತು ವಿದೇಶದ 119 ಆಟಗಾರರಿದ್ದಾರೆ.

ಹತ್ತು ಫ್ರ್ಯಾಂಚೈಸಿಗಳಲ್ಲಿ ಸೇರಿ ಒಟ್ಟು 77 ಆಟಗಾರರನ್ನು ಖರೀದಿಸಲು ಅವಕಾಶವಿದೆ. ಅದರಲ್ಲಿ 30 ವಿದೇಶಿ ಆಟಗಾರರೂ ಸೇರಿದ್ದಾರೆ.

₹ 20 ಲಕ್ಷದಿಂದ ₹ 2 ಕೋಟಿಯವರೆಗೆ ಮೂಲಬೆಲೆಗಳನ್ನು ಆಟಗಾರರಿಗೆ ನಿಗದಿ ಪಡಿಸಲಾಗಿದೆ.

ಏಕದಿನ ವಿಶ್ವಕಪ್ ವಿಜೇತ ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮಿಚೆಲ್ ಸ್ಟಾರ್ಕ್ ಸೇರಿದಂತೆ 23 ಆಟಗಾರರು ₹ 2 ಕೋಟಿ ಮೂಲಬೆಲೆ ಹೊಂದಿದ್ದಾರೆ. ₹ 1.5 ಕೋಟಿ ಮೂಲಬೆಲೆಯಲ್ಲಿ 13 ಆಟಗಾರರು ನೋಂದಾಯಿತರಾಗಿದ್ದಾರೆ.

ನ್ಯೂಜಿಲೆಂಡ್ ತಂಡದಲ್ಲಿ ಆಡುವ ಬೆಂಗಳೂರು ಮೂಲದ ರಚಿನ್ ರವೀಂದ್ರ ಅವರಿಗೆ ₹ 50 ಲಕ್ಷ ಮೂಲಬೆಲೆ ನಿಗದಿಯಾಗಿದೆ.

ಹರಾಜು ಪ್ರಕ್ರಿಯೆ ಹೇಗೆ?: ಆಟಗಾರರನ್ನು 19 ವಿವಿಧ ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಪರಿಣತಿ, ಕ್ಯಾಪ್ ಮತ್ತು ಅನ್‌ಕ್ಯಾಪ್ ಆಧಾರದಲ್ಲಿ ವಿಂಗಡಿಸಲಾಗಿದೆ.

ಐಪಿಎಲ್ ಇತಿಹಾಸದಲ್ಲಿಯೇ ಇದೇ ಮೊದಲ ಸಲ ಮಹಿಳಾ ನಿರೂಪಕಿಯೊಬ್ಬರು ಹರಾಜು ಪ್ರಕ್ರಿಯೆ ನಡೆಸಿಕೊಡಲಿದ್ದಾರೆ. ಮಲ್ಲಿಕಾ ಸಾಗರ್ ಅವರೇ ಆ ನಿರೂಪಕಿ. ಅವರು ಈಗಾಗಲೇ ಮಹಿಳಾ ಪ್ರೀಮಿಯರ್ ಲೀಗ್ ಬಿಡ್‌ಗಳನ್ನು ನಡೆಸಿಕೊಟ್ಟಿದ್ದಾರೆ.

ಆರಂಭ: ಮಧ್ಯಾಹ್ನ 1
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಪ್ಯಾಟ್ ಕಮಿನ್ಸ್

ತಂಡಗಳ ಪರ್ಸ್ ಮೌಲ್ಯ

ತಂಡ	ಮೌಲ್ಯ (₹ ಕೋಟಿ)
ಚೆನ್ನೈ ಸೂಪರ್ ಕಿಂಗ್ಸ್	31.4
ಡೆಲ್ಲಿ ಕ್ಯಾಪಿಟಲ್ಸ್	28.95
ಗುಜರಾತ್ ಟೈಟನ್ಸ್	38.15
ಕೋಲ್ಕತ್ತ ನೈಟ್ ರೈಡರ್ಸ್	32.70
ಲಖನೌ ಸೂಪರ್‌ಜೈಂಟ್ಸ್	13.15
ಮುಂಬೈ ಇಂಡಿಯನ್ಸ್	17.75
ಸನ್‌ರೈಸರ್ಸ್ ಹೈದರಾಬಾದ್	34
ರಾಯಲ್ ಚಾಲೆಂಜರ್ಸ್ ಬೆಂಗಳೂರು	23.25
ಪಂಜಾಬ್ ಕಿಂಗ್ಸ್	29.10
ರಾಜಸ್ಥಾನ ರಾಯಲ್ಸ್	14.15

ಪ್ರಮುಖ ಆಟಗಾರರು

ಭಾರತದ ಆಲ್‌ರೌಂಡರ್ ಶಾರ್ದೂಲ್ ಠಾಕೂರ್, ಹರ್ಷಲ್ ಪಟೇಲ್, ಆಶುತೋಷ್ ಶರ್ಮಾ, ಉಮೇಶ್ ಯಾದವ್, ಸರ್ಫರಾಜ್ ಖಾನ್ ಮತ್ತು ವಿದೇಶಿ ತಂಡಗಳ ಮಿಚೆಲ್ ಸ್ಟಾರ್ಕ್, ಜೋಷ್ ಹ್ಯಾಜಲ್‌ವುಡ್, ಡ್ಯಾರಿಲ್ ಮಿಚೆಲ್, ಅಫ್ಗಾನಿಸ್ತಾನದ ಅಜ್ಮತ್‌ಉಲ್ಲಾ ಒಮರ್‌ಝೈ, ದಿಲ್ಶಾನ್ ಮಧುಶಂಕಾ, ಫಿಲಿಪ್ ಸಾಲ್ಟ್ ಅವರು ಹರಾಜಿನಲ್ಲಿರುವ ಪ್ರಮುಖ ಆಟಗಾರರು.
ಕರ್ನಾಟಕದ ಆಟಗಾರರು: ಕರ್ನಾಟಕದ ಮನೀಷ್ ಪಾಂಡೆ, ಕರುಣ್ ನಾಯರ್, ಬೌಲರ್ ಶುಭಾಂಗ್ ಹೆಗಡೆ, ಬಿ.ಆರ್. ಶರತ್, ಕೆ.ಎಲ್. ಶ್ರೀಜಿತ್, ನಿಹಾಲ್ ಉಲ್ಲಾಳ, ಕೆ.ಸಿ. ಕಾರ್ಯಪ್ಪ ಮತ್ತು ಶ್ರೇಯಸ್ ಗೋಪಾಲ್ ಅವರು ಈ ಪಟ್ಟಿಯಲ್ಲಿದ್ದಾರೆ.

ಮನೀಷ್ ಪಾಂಡೆ

ಶಾರ್ದೂಲ್ ಠಾಕೂರ್

ಬೌಲಿಂಗ್ ಆಯ್ಕೆ ಆರ್‌ಸಿಬಿ ಆದ್ಯತೆ

ನವದೆಹಲಿ (ಪಿಟಿಐ): ವೇಗದ ದಾಳಿಯ ಮುಂಚೂಣಿಯಲ್ಲಿರುವ ಮೊಹಮ್ಮದ್ ಸಿರಾಜ್ ಅವರಿಗೆ ಬೆಂಬಲವಾಗಿ ಹೆಚ್ಚಿನ ಬೌಲಿಂಗ್ ಆಯ್ಕೆ ಪಡೆಯುವುದಕ್ಕೆ ರಾಯಲ್ ಚಾಲೆಂಜರ್ ಬೆಂಗಳೂರು (ಆರ್‌ಸಿಬಿ) ತಂಡ ಮಂಗಳವಾರ ನಡೆಯುವ ಹರಾಜಿನ ವೇಳೆ ಆದ್ಯತೆ ನೀಡಲಿದೆ ಎಂದು ತಂಡದ ಕ್ರಿಕೆಟ್ ನಿರ್ದೇಶಕ ಮೊಬೊಬಾಟ್ ಸೋಮವಾರ ಇಲ್ಲಿ ತಿಳಿಸಿದರು.

ಆರ್‌ಸಿಬಿ ತಂಡವು ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ, ನಾಯಕ ಫಫ್ ಡುಪ್ಲೆಸಿಸ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಸಿರಾಜ್ ಒಳಗೊಂಡಂತೆ 18 ಆಟಗಾರರನ್ನು ಉಳಿಸಿಕೊಂಡಿದೆ. 11 ಆಟಗಾರರನ್ನು ತಂಡದಿಂದ 'ಬಿಡುಗಡೆ' ಮಾಡಿದೆ. ಮಧ್ಯಮ ವೇಗದ ಬೌಲರ್ ಹರ್ಷಲ್ ಪಟೇಲ್, ಶ್ರೀಲಂಕಾದ ಲೆಗ್ ಸ್ಪಿನ್ನರ್ ವನಿಂದು ಹಸರಂಗ ಮತ್ತು ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜಲ್‌ವುಡ್ ಅವರನ್ನು ಬಿಟ್ಟಿರುವುದರಿಂದ ಬೌಲಿಂಗ್ ವಿಭಾಗ ಬಡವಾಗಿದೆ.

'ಸಿರಾಜ್ ನಮ್ಮ ಕಾರ್ಯತಂತ್ರದ ಪ್ರಮುಖ ಭಾಗವಾಗಿದ್ದಾರೆ. ತಂಡದ ಮುನ್ನಡೆಗೆ ಅವರಿಗೆ ಬೆಂಬಲವಾಗಿ, ಹೊರದೇಶದ ವೇಗದ ಬೌಲರ್ ಸೇರಿದಂತೆ ಹೆಚ್ಚಿನ ಬೌಲರ್‌ಗಳ ಆಯ್ಕೆ ನಮ್ಮ ನೈಜ ಆದ್ಯತೆಯಾಗಲಿದೆ' ಎಂದು ಮಾಧ್ಯಮ ಪ್ರಕಟಣೆಯಲ್ಲಿ ಬೊಬಾಟ್ ಹೇಳಿದ್ದಾರೆ.

'ಸ್ಥಳೀಯ ಸ್ಪಿನ್ನರ್‌ಗಳ ಆಯ್ಕೆ ಕಡೆಯೂ ಗಮನಹರಿಸಲಿದ್ದೇವೆ. ಇವರಲ್ಲಿ ಕೆಲವರು ಒಂದೆರಡು ವರ್ಷಗಳಿಂದ ಉತ್ತಮ ಅವಕಾಶ ಪಡೆದಿದ್ದಾರೆ. ಅವರು ತಂಡದ ಮುನ್ನಡೆಯಲ್ಲಿ ಮಹತ್ವದ ಪಾತ್ರ ವಹಿಸಬಲ್ಲರು' ಎಂದು ಹೇಳಿದ್ದಾರೆ.

ಮಧ್ಯಮ ಕ್ರಮಾಂಕ ಬಲಪಡಿಸಲು ಆರ್‌ಸಿಬಿಯು ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್ ಅವರನ್ನು ₹17.5 ಕೋಟಿಗೆ ಮುಂಬೈ ಇಂಡಿಯನ್ಸ್ ತಂಡದಿಂದ ಪಡೆದುಕೊಂಡಿದೆ.ಪ್ರಬಲ ಆಟಗಾರರು ತಂಡದಲ್ಲಿ ಉಳಿದುಕೊಂಡಿದ್ದಾರೆ. ನಮ್ಮ ಅಗ್ರ ಸರದಿ ಬಲಿಷ್ಠವಾಗಿದೆ. ಆಟಗಾರರನ್ನು ಬಿಟ್ಟುಕೊಡುವುದರ ಹಿಂದಿನ ನಿರ್ಧಾರದಲ್ಲಿ ಮಧ್ಯಮ ಕ್ರಮಾಂಕವನ್ನೂ ಬಲಪಡಿಸುವುದೂ ಸೇರಿತ್ತು. ಗ್ರೀನ್ ಸೇರಿಕೊಂಡಿರುವುದು ಒಳ್ಳೆಯ ನಡೆ' ಎಂದಿದ್ದಾರೆ. ಏಳು ಆಟಗಾರರನ್ನು ಖರೀದಿಸಲು ಆರ್‌ಸಿಬಿ ಬಳಿ ₹40.75 ಕೋಟಿ ಮೊತ್ತವಿದೆ.

ಭಾರತಕ್ಕೆ ಸರಣಿ ಕೈವಶದ ಗುರಿ

ದಕ್ಷಿಣ ಆಫ್ರಿಕಾ ವಿರುದ್ಧ ಎರಡನೇ ಏಕದಿನ ಪಂದ್ಯ ಇಂದು

ಭಾರತ ತಂಡದ ನಾಯಕ ಕೆ.ಎಲ್.ರಾಹುಲ್

ಗೆಬೆಹಾ (ದಕ್ಷಿಣ ಆಫ್ರಿಕಾ): ಸಪ್ಪೆ ಆಗಿರುವ ದಕ್ಷಿಣ ಆಫ್ರಿಕಾ ವಿರುದ್ಧ ಮಂಗಳವಾರ ನಡೆಯಲಿರುವ ಎರಡನೇ ಏಕದಿನ (ಇದು ಹಗಲು–ರಾತ್ರಿ) ಪಂದ್ಯವನ್ನೂ ಗೆದ್ದು ಭಾರತ ತಂಡ ಸರಣಿ ಕೈವಶ ಮಾಡಿಕೊಳ್ಳುವ ಉತ್ಸಾಹದಲ್ಲಿದೆ. ಪ್ರತಿಭಾನ್ವಿತ ಬ್ಯಾಟರ್ ರಜತ್ ಪಾಟೀದಾರ ಮತ್ತು 'ಫಿನಿಷರ್' ಖ್ಯಾತಿಯ ರಿಂಕು ಸಿಂಗ್ ಅವರು ತಂಡದಲ್ಲಿರುವ ಒಂದು ಬ್ಯಾಟಿಂಗ್ ಸ್ಥಾನಕ್ಕಾಗಿ ಸ್ಪರ್ಧೆಯಲ್ಲಿದ್ದಾರೆ.

ಯುವ ಬೌಲರ್‌ಗಳಾದ ಅರ್ಷದೀಪ್ ಸಿಂಗ್ ಮತ್ತು ಆವೇಶ್ ಖಾನ್ ಅವರ ಅಚ್ಚುಕಟ್ಟಾದ ಬೌಲಿಂಗ್ ಪ್ರದರ್ಶನದ ನೆರವಿನಿಂದ ಭಾರತ ಮೊದಲ ಪಂದ್ಯವನ್ನು ಎಂಟು ವಿಕೆಟ್‌ಗಳಿಂದ ಜಯಿಸಿತ್ತು. ಈಗ ಕೆ.ಎಲ್.ರಾಹುಲ್ ಬಳಗ ಇದೇ ವೇಗದಲ್ಲಿ ಸಾಗಲು ಸಜ್ಜಾಗಿದೆ. 2022ರಲ್ಲಿ ಭಾರತ ತಂಡ ಇಲ್ಲಿ ಪ್ರವಾಸ ಮಾಡಿದ್ದಾಗ 0–3 ಅಂತರದಲ್ಲಿ ಸರಣಿ ಸೋತಿತ್ತು. ಆಗಲೂ ನಾಯಕರಾಗಿದ್ದ ರಾಹುಲ್ ಇದನ್ನು ಮರೆತಿರಲಿಕ್ಕಿಲ್ಲ.

ಶ್ರೇಯಸ್ ಅಯ್ಯರ್ ಅವರು ಭಾನುವಾರದ ನಂತರ ಟೆಸ್ಟ್ ತಂಡದ ಜೊತೆ ಸೇರುವುದರಿಂದ ಸರಣಿಯ ಉಳಿದ ಪಂದ್ಯಗಳಲ್ಲಿ ಆಡುತ್ತಿಲ್ಲ. ಹೀಗಾಗಿ ಮೀಸಲು ಆಟಗಾರರಲ್ಲಿ ಒಬ್ಬರಿಗೆ ಅವಕಾಶ ದೊರೆಯಲಿದೆ. ಟೆಸ್ಟ್ ಸರಣಿ 'ಬಾಕ್ಸಿಂಗ್ ಡೇ' (ಡಿ. 26) ದಿನ ಆರಂಭವಾಗಲಿದೆ.

ಎಡಗೈ ಬ್ಯಾಟರ್ ರಿಂಕು ಸಿಂಗ್ ಅವರು ಟಿ20 ಸರಣಿಯಲ್ಲಿ ತಾವು ದಕ್ಷಿಣ ಆಫ್ರಿಕಾದ ಪಿಚ್‌ಗೂ ಸೈ ಎಂಬುದನ್ನು ತೋರಿಸಿದ್ದು, ಇಲ್ಲಿ ಏಕದಿನ ಸರಣಿಗೆ ಪದಾರ್ಪಣೆ ಮಾಡುವರೇ ಎಂಬ ಕುತೂಹಲವಿದೆ. ಆದರೆ ಇಂದೋರ್‌ನ ಬಲಗೈ ಬ್ಯಾಟರ್ ರಜತ್ ಪಾಟೀದಾರ್ ಅವರೂ ತಂಡಕ್ಕೆ ಮರಳುವ ಗುರಿಯಲ್ಲಿದ್ದಾರೆ. ತಂಡದ ಚಿಂತಕರ ಚಾವಡಿಯೂ ಆಟಗಾರರಿಗೆ ನಿರ್ದಿಷ್ಟ ಪಾತ್ರ ವಹಿಸಲು ಕಾತರವಾಗಿದೆ. ಪಾಟೀದಾರ್ ನಾಲ್ಕನೇ ಕ್ರಮಾಂಕದಲ್ಲಿ ಪರಿಣತ ಆಟಗಾರ. ಮಧ್ಯಪ್ರದೇಶ ತಂಡಕ್ಕೂ ಅವರು ಇದೇ ಕ್ರಮಾಂಕದಲ್ಲಿ ಆಡುವವರು. ಫಿನಿಷರ್ ಪಾತ್ರ ವಹಿಸುವ ರಿಂಕು ಆರನೇ ಕ್ರಮಾಂಕದಲ್ಲಿ ಆಡುತ್ತಿದ್ದಾರೆ. 2022ರಲ್ಲೇ ಅವರು ಭಾರತ ತಂಡಕ್ಕೆ ಆಡಿದ್ದರೂ ನಂತರ ಗಾಯಾಳಾಗಿ, ಹಿಮ್ಮಡಿ ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು. ಹೀಗಾಗಿ ಅಯ್ಯರ್ ತೆರವು ಮಾಡುತ್ತಿರುವ ಸ್ಥಾನಕ್ಕೆ ಸೂಕ್ತ ಪರ್ಯಾಯವೆಂಬಂತೆ ಕಾಣುತ್ತಿದ್ದಾರೆ.

ಈಗ ಆರನೇ ಕ್ರಮಾಂಕದಲ್ಲಿ ಸಂಜು ಸ್ಯಾಮ್ಸನ್ ಅವರು ಆಡುತ್ತಿದ್ದಾರೆ. ಆದರೆ ಕೀಪರ್ ಆಗಿದ್ದರೂ, ರಾಹುಲ್ ಆ ಹೊಣೆ ವಹಿಸುವ ಕಾರಣ ಸ್ಯಾಮ್ಸನ್ ಪರಿಣತ ಬ್ಯಾಟರ್ ಪಾತ್ರ ವಹಿಸಬಹುದು . ಅನುಭವಿ ಆಗಿರುವ ಕಾರಣ ಅವರಿಗೆ ಮತ್ತೆ ಕೆಲವು ಅವಕಾಶ ನೀಡುವ ಕಾರಣ ರಿಂಕು ಅಲ್ಲಿ ಹೊಂದುವುದು ಕಷ್ಟ.

ಆರಂಭ ಆಟಗಾರ ಸಾಯಿ ಸುದರ್ಶನ್, ಆಕರ್ಷಕ ಅರ್ಧ ಶತಕದೊಂದಿಗೆ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾ ಇನ್ನೊಂದೆಡೆ ಪರದಾಡುತ್ತಿದೆ. ಸಲೀಸಾಗಿ ಆಡುತ್ತಿದ್ದ ಕ್ವಿಂಟನ್ ಡಿ ಕಾಕ್ ಅವರ ಅನುಪಸ್ಥಿತಿ ಕಾಡುತ್ತಿದೆ. ಭಾರತದ ವೇಗಿಗಳು ಮೊದಲ ಪಂದ್ಯದಲ್ಲಿ ಆತಿಥೇಯ ಬ್ಯಾಟರ್‌ಗಳನ್ನು ಕಾಡಿದರು. ಎರಡನೇ ಪಂದ್ಯದಲ್ಲಿ ಸುಧಾರಿತ ಪ್ರದರ್ಶನ ನೀಡಬೇಕಾದ ಒತ್ತಡದಲ್ಲಿ ಈಗ ದಕ್ಷಿಣ ಆಫ್ರಿಕಾ ತಂಡವಿದೆ.

ಮೊದಲ ಪಂದ್ಯದಲ್ಲಿ ಯಶಸ್ಸು ಕಂಡ ಕಾರಣ ಭಾರತ ಬೌಲಿಂಗ್ ವಿಭಾಗದಲ್ಲಿ ಬದಲಾವಣೆಯ ಸಾಧ್ಯತೆ ಕಡಿಮೆ.

ಪಂದ್ಯ ಆರಂಭ: ಸಂಜೆ 4.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ವೃಂದಾ ಶತಕ: ಕರ್ನಾಟಕಕ್ಕೆ ಜಯ

ವೃಂದಾ ದಿನೇಶ್

ರಾಯಪುರ: ವೃಂದಾ ದಿನೇಶ್ ಅವರ ಭರ್ಜರಿ ಶತಕದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಕ್ರಿಕೆಟ್ ಟ್ರೋಫಿ ಟೂರ್ನಿಯಲ್ಲಿ 55 ರನ್‌ಗಳಿಂದ ಬರೋಡಾ ತಂಡವನ್ನು ಮಣಿಸಿತು.

ರಾಯಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ವೃಂದಾ ದಿನೇಶ್ (117; 69ಎ, 4x15, 6x5) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 181 ರನ್ ಗಳಿಸಿತು.

ಗುರಿಯನ್ನು ಬೆನ್ನಟ್ಟಿದ ಬರೋಡಾ ತಂಡವು ಕರ್ನಾಟಕದ ಬೌಲಿಂಗ್ ದಾಳಿಯ ಎದುರು 20 ಓವರ್‌ಗಳಲ್ಲಿ 126 ರನ್‌ಗಳಿಗೆ ಕುಸಿಯಿತು. ಕರ್ನಾಟಕದ ಪರ ಪೂಜಾ ಕುಮಾರಿ ಮತ್ತು ಅನನ್ಯಾ ಹೆಗ್ಡೆ ಕ್ರಮವಾಗಿ ನಾಲ್ಕು, 3 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 2 ವಿಕೆಟ್‌ಗೆ 181 (ವೃಂದಾ ದಿನೇಶ್ 117, ಜಿ.ಆರ್. ಪ್ರೇರಣಾ ಔಟಾಗದೆ 28). ಬರೋಡಾ: 20 ಓವರ್‌ಗಳಲ್ಲಿ 126 (ಅಮೃತಾ ಜೋಸೆಫ್ 35, ಸಿ.ಜೆ. ದೇಸಾಯಿ 25; ಅನನ್ಯಾ ಹೆಗ್ಡೆ 24ಕ್ಕೆ3, ಎಂ. ಪೂಜಾ ಕುಮಾರಿ 32ಕ್ಕೆ 4)

ಫಲಿತಾಂಶ: ಕರ್ನಾಟಕಕ್ಕೆ 55 ರನ್ ಜಯ

ಐಎಸ್‌ಪಿಎಲ್: ಮುಂಬೈ ತಂಡದ ಮಾಲೀಕತ್ವ ಪಡೆದ ಅಮಿತಾಭ್

ಅಮಿತಾಭ್

ಮುಂಬೈ (ಪಿಟಿಐ): ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಅವರು ಇಂಡಿಯನ್ ಸ್ಟ್ರೀಟ್ ಪ್ರೀಮಿಯರ್ ಲೀಗ್‌ನ (ಐಎಸ್‌ಪಿಎಲ್) ಮುಂಬೈ ತಂಡದ ಮಾಲೀಕತ್ವ ಹೊಂದಿರುವುದಾಗಿ ಸೋಮವಾರ ಘೋಷಿಸಿದ್ದಾರೆ.

ಐಎಸ್‌ಪಿಎಲ್ ಭಾರತದಲ್ಲಿ ಮೊದಲ ಬಾರಿ ನಡೆಯುತ್ತಿರುವ ಟೆನಿಸ್ ಬಾಲ್ ಟಿ10 ಕ್ರಿಕೆಟ್ ಟೂರ್ನಿಯಾಗಿದ್ದು, ಉದ್ಘಾಟನಾ ಆವೃತ್ತಿಯು ಮುಂಬೈನಲ್ಲಿ ಮಾರ್ಚ್ 2ರಿಂದ 9ರವರೆಗೆ ನಿಗದಿಯಾಗಿದೆ.

ಟೂರ್ನಿಯಲ್ಲಿ ಒಟ್ಟು 19 ಪಂದ್ಯಗಳು ಇರಲಿದ್ದು, ಬೆಂಗಳೂರು, ಮುಂಬೈ, ಹೈದರಾಬಾದ್, ಚೆನ್ನೈ, ಕೋಲ್ಕತ್ತ ಮತ್ತು ಶ್ರೀನಗರ ತಂಡಗಳು ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

'ಹೊಸ ದಿನ.. ಮತ್ತು ಹೊಸ ಉದ್ಯಮ . . . ಇದೊಂದು ದೊಡ್ಡ ಗೌರವ. ಮುಂಬೈ ತಂಡದ ಮಾಲೀಕನಾಗಿರುವುದು ನನ್ನ ಅದೃಷ್ಟ. ಐಎಸ್‌ಪಿಎಲ್ ಒಂದು ರೋಚಕ ಮತ್ತು ಉದಾತ್ತವಾದ ಪರಿಕಲ್ಪನೆ. ಬೀದಿಗಳಲ್ಲಿ, ಗಲ್ಲಿಗಳಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದ ಪ್ರತಿಭೆಗಳಿಗೆ ಇದು ಉತ್ತಮ ವೇದಿಕೆಯಾಗಿದೆ' ಎಂದು 81 ವರ್ಷದ ಅಮಿತಾಭ್ ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ.

ಚಿತ್ರನಟರಾದ ಅಕ್ಷಯ್ ಕುಮಾರ್ ಮತ್ತು ಹೃತಿಕ್ ರೋಷನ್ ಕ್ರಮವಾಗಿ ಶ್ರೀನಗರ ಮತ್ತು ಬೆಂಗಳೂರು ತಂಡದ ಮಾಲೀಕತ್ವ ಪಡೆದಿರುವುದಾಗಿ ಈಗಾಗಲೇ ಘೋಷಿಸಿದ್ದಾರೆ.

ಲೀಡ್‌ನಲ್ಲಿ ಗುಕೇಶ್, ಹರಿಕೃಷ್ಣ

ಚೆನ್ನೈ (ಪಿಟಿಐ): ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್, ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಸೋಮವಾರ ಸರ್ಬಿಯಾದ ಅಲೆಕ್ಸಾಂಡರ್ ಪ್ರೆಡ್ಕೆ ಅವರನ್ನು ಸೋಲಿಸಿದರು. 44 ನಡೆಗಳಲ್ಲಿ ಗಳಿಸಿದ ಈ ಗೆಲುವಿನಿಂದ ಅವರು ಸ್ವದೇಶದ ಪಿ.ಹರಿಕೃಷ್ಣ ಅವರೊಡನೆ ಅಗ್ರಸ್ಥಾನಕ್ಕೇರಿದರು.

17 ವರ್ಷದ ಗುಕೇಶ್ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅವರು ಆಡಿದ ಮೊದಲ ಮೂರು ಪಂದ್ಯಗಳು ಡ್ರಾ ಆಗಿದ್ದವು. ಹರಿಕೃಷ್ಣ ನಾಲ್ಕನೇ ಸುತ್ತಿನಲ್ಲಿ ಉಕ್ರೇನ್‌ನ ಪಾವೆಲ್ ಎಲ್ಯಾನೋವ್ ಅವರ ಜೊತೆ ಡ್ರಾ ಮಾಡಿಕೊಂಡರು.

ಅರ್ಜುನ್ ಇರಿಗೇಶಿ ಕಪ್ಪು ಕಾಯಿಗಳಲ್ಲಿ ಆಡಿ ಅಮೆರಿಕದ ಲೆವೊನ್ ಅರೋನಿಯನ್ ಜೊತೆ 41 ನಡೆಗಳಲ್ಲಿ ಡ್ರಾ ಸಾಧಿಸಿದರು. ಇರಾನ್‌ನ ಪರ್ಹಾಮ್ ಮಘ್‌ಸೂಡ್ಲು (2 ಪಾಯಿಂಟ್), ತಮ್ಮ ಮೊದಲ ಜಯ ದಾಖಲಿಸಿದರು. ಅವರು 34 ನಡೆಗಳಲ್ಲಿ ಸನನ್ ಸ್ಯುಗಿರೊವ್ ಅವರನ್ನು ಸೋಲಿಸಿದರು.

ರಾಷ್ಟ್ರೀಯ ತಂಡಕ್ಕೆ ಪಿಐಒ ಆಟಗಾರರ ನಿಯೋಜನೆ: ಎಐಎಫ್‌ಎಫ್ ಚಿಂತನೆ

ಕಲ್ಯಾಣ್ ಚೌಬೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ತಂಡಕ್ಕೆ ವಿದೇಶದಲ್ಲಿರುವ ಭಾರತ ಮೂಲದ ಆಟಗಾರರನ್ನು (ಪಿಐಒ) ಆಯ್ಕೆ ಮಾಡುವ ಸಾಧ್ಯತೆಯನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ (ಎಐಎಫ್‌ಎಫ್) ಪರಿಶೀಲಿಸುತ್ತಿದ್ದು, ಶೀಘ್ರದಲ್ಲೇ ಅಂತಹ 24 ಆಟಗಾರರನ್ನು ಸಂಪರ್ಕಿಸಲಿದೆ ಎಂದು ಅಧ್ಯಕ್ಷ ಕಲ್ಯಾಣ್ ಚೌಬೆ ಹೇಳಿದ್ದಾರೆ.

ಪಿಐಒ ಮತ್ತು ಸಾಗರೋತ್ತರ ಭಾರತೀಯ ನಾಗರಿಕ (ಒಸಿಐ) ಆಟಗಾರರನ್ನು ರಾಷ್ಟ್ರೀಯ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳುವ ವಿಷಯ ದೀರ್ಘ ಕಾಲದಿಂದ ಚರ್ಚೆಯಲ್ಲಿದೆ.

ರಾಷ್ಟ್ರೀಯ ತಂಡದ ಮುಖ್ಯ ಕೋಚ್ ಇಗೊರ್ ಸ್ಟಿಮಾಕ್ ಅವರು ಭಾರತೀಯ ತಂಡಕ್ಕೆ ಪಿಐಒ ಆಟಗಾರರನ್ನು ಆಯ್ಕೆ ಮಾಡುವ ಅಗತ್ಯವನ್ನು ಈಗಾಗಲೇ ಪ್ರತಿಪಾದಿಸಿದ್ದಾರೆ. ಆದರೆ ಸಮಸ್ಯೆ ಎಂದರೆ ಭಾರತದ ಕಾನೂನಿನಲ್ಲಿ ದ್ವಿಪೌರತ್ವಕ್ಕೆ ಅವಕಾಶವಿಲ್ಲ.

ಪಿಐಒ ಆಟಗಾರರು ಭಾರತದ ಪರ ಆಡಲು ಬಯಸಿದರೆ, ಅವರು ಭಾರತೀಯ ಪೌರತ್ವ ಪಡೆದುಕೊಳ್ಳಬೇಕು. ಪೌರತ್ವಕ್ಕೆ ಅರ್ಜಿ ಸಲ್ಲಿಸುವ ಮೊದಲು ಒಬ್ಬ ವ್ಯಕ್ತಿಯು ಒಂದು ವರ್ಷ ಭಾರತದಲ್ಲಿ ನೆಲೆಸಿರಬೇಕು.

'ವಿಶ್ವದಾದ್ಯಂತ ಆಡುತ್ತಿರುವ 24 ಪಿಐಒ ಆಟಗಾರರನ್ನು ಸಂಪರ್ಕಿಸುವ ಬಗ್ಗೆ ಪರಿಶೀಲಿಸುತ್ತಿದ್ದೇವೆ. ಆದರೆ, ದ್ವಿ ಪೌರತ್ವದ ಸಮಸ್ಯೆ ಇದೆ ಎಂದು ತಿಳಿದಿದೆ (ಭಾರತಕ್ಕಾಗಿ ಆಡಲು ಅನುಮತಿ ಇಲ್ಲ). ಆದ್ದರಿಂದ, ಕೇಂದ್ರ ಸರ್ಕಾರದ ನಿಯಮಗಳ ಚೌಕಟ್ಟಿನೊಳಗೆ ಇದನ್ನು ಹೇಗೆ ಮಾಡಬಹುದು ಎಂಬುದನ್ನು ಪರಿಶೀಲಿಸಬೇಕಾಗಿದೆ' ಎಂದು ಚೌಬೆ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ಆದರೆ ಅವರು ಆಟಗಾರರ ಹೆಸರುಗಳನ್ನು ಬಹಿರಂಗಪಡಿಸಲಿಲ್ಲ.

'ನಾವು ಈ ವಿಷಯದ ಬಗ್ಗೆ ಆಂತರಿಕ ಚರ್ಚೆ ನಡೆಸುತ್ತಿದ್ದೇವೆ ಮತ್ತು ಹೆಚ್ಚಿನ ಸ್ಪಷ್ಟತೆ ದೊರೆತ ನಂತರ ಮತ್ತಷ್ಟು ವಿವರಗಳೊಂದಿಗೆ ಮಾಹಿತಿ ನೀಡಲಾಗುವುದು' ಎಂದು ತಿಳಿಸಿದರು.

ಮೇ ತಿಂಗಳಲ್ಲಷ್ಟೇ ಹ್ಯಾಜಲ್‌ವುಡ್ ಲಭ್ಯ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜಲ್‌ವುಡ್ ಅವರು 2024ರ ಮೇ ಮೊದಲ ವಾರದ ನಂತರವಷ್ಟೇ ಐಪಿಎಲ್‌ಗೆ ಲಭ್ಯರಿರಲಿದ್ದಾರೆ ಎಂದು ಬಿಸಿಸಿಐ, ತಂಡಗಳಿಗೆ ಮಾಹಿತಿ ನೀಡಿದೆ.

ಜೋಶ್ ದಂಪತಿ ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಕಳೆದ ಐಪಿಎಲ್‌ನಲ್ಲಿ ಆರ್‌ಸಿಬಿ ತಂಡದಲ್ಲಿದ್ದ ಅವರನ್ನು ಬೆಂಗಳೂರಿನ ಫ್ರಾಂಚೈಸಿ ಉಳಿಸಿಕೊಂಡಿರುವ ಆಟಗಾರರ ಪಟ್ಟಿಯಿಂದ ಕೈಬಿಟ್ಟಿತ್ತು. ಬಾಂಗ್ಲಾದೇಶದ ಎಡಗೈ ವೇಗಿ ಮುಸ್ತಫಿಜುರ್ ರೆಹಮಾನ್ ಮಾರ್ಚ್ 22 ರಿಂದ ಮೇ 11ರ ಅವಧಿಗೆ ಮಾತ್ರ ಲಭ್ಯರಿರಲಿದ್ದಾರೆ. ಆದರೆ ವೇಗದ ಬೌಲರ್‌ಗಳಾದ ತಸ್ಕಿನ್ ಅಹ್ಮದ್ ಮತ್ತು ಶರೀಫುಲ್ ಇಸ್ಲಾಂ ಅವರು ಬಿಡ್‌ಗೆ ಅಲಭ್ಯರಾಗಿದ್ದಾರೆ. ಅವರು ಶ್ರೀಲಂಕಾ ಮತ್ತು ಜಿಂಬಾಬ್ವೆ ವಿರುದ್ಧ ಆಡುವ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗುವುದು ಬಹುತೇಕ ಖಚಿತ.

₹50 ಲಕ್ಷ ಮೂಲಬೆಲೆ ಹೊಂದಿದ್ದ ಇಂಗ್ಲೆಂಡ್‌ನ ಯುವ ಲೆಗ್ ಸ್ಪಿನ್ನರ್ ರೆಹಾನ್ ಅಹ್ಮದ್ ಅವರೂ ಬಿಡ್‌ನಲ್ಲಿ ಪಾಲ್ಗೊಳ್ಳುತ್ತಿಲ್ಲ. ಭಾರತದಲ್ಲಿ ಇಂಗ್ಲೆಂಡ್‌ನ ಐದು ಟೆಸ್ಟ್‌ಗಳ ಸರಣಿಯ ನಂತರ ಅವರು ತವರಿಗೆ ಮರಳಲಿದ್ದಾರೆ.

ಪ್ರೊ ಕಬಡ್ಡಿ: ಪುಣೇರಿ ಪಲ್ಟನ್‌ಗೆ ಮಣಿದ ದಬಾಂಗ್ ಡೆಲ್ಲಿ

ವಾರಿಯರ್ಸ್– ಯೋಧಾಸ್ ಪಂದ್ಯ 'ಟೈ'

ಪುಣೆ: ರೋಚಕವಾಗಿ ನಡೆದ ಬೆಂಗಾಲ್ ವಾರಿಯರ್ಸ್ ಮತ್ತು ಯುಪಿ ಯೋಧಾಸ್ ತಂಡಗಳ ನಡುವಿನ ಪ್ರೊ ಕಬಡ್ಡಿ ಲೀಗ್‌ನ ಪಂದ್ಯ ಸೋಮವಾರ 37–37ರಲ್ಲಿ ಸಮಬಲದೊಂದಿಗೆ ಮುಕ್ತಾಯವಾಯಿತು. ಇದು 10ನೇ ಆವೃತ್ತಿಯಲ್ಲಿ 'ಟೈ' ಆದ ಎರಡನೇ ಪಂದ್ಯವಾಗಿದೆ.

ಯೋಧಾಸ್ ತಂಡದ ರೈಡರ್ ಸುರೇಂದರ್ ಗಿಲ್ 13 ಟಚ್ ಪಾಯಿಂಟ್‌ನೊಂದಿಗೆ 18 ಅಂಕಗಳನ್ನು ಸಂಪಾದಿಸಿದರು. ಈ ಆವೃತ್ತಿಯಲ್ಲಿ ಅವರು ಮೂರನೇ ಬಾರಿ 'ಸೂಪರ್ 10' ಸಾಧನೆ ಮೆರೆದರು. ಅವರಿಗೆ ವಿಜಯ್ ಮಲಿಕ್ (7) ಸಾಥ್ ನೀಡಿದರೆ, ಈ ಹಿಂದಿನ ಪಂದ್ಯದಲ್ಲಿ ಮಿಂಚಿದ್ದ ನಾಯಕ ಪ್ರದೀಪ್ ನರ್ವಾಲ್ ನಿರಾಸೆ ಅನುಭವಿಸಿದರು.

ವಾರಿಯರ್ಸ್ ಪರ ನಿತಿನ್ ಕುಮಾರ್ (10) ಈ ಆವೃತ್ತಿಯಲ್ಲಿ ಎರಡನೇ ಬಾರಿ 'ಸೂಪರ್ ಟೆನ್' ಸಾಧನೆ ಮಾಡಿದರು. ಮಣಿಂದರ್ ಸಿಂಗ್ (9), ಶ್ರೀಕಾಂತ್ ಜಾಧವ್ (6) ಉಪಯುಕ್ತ ಕಾಣಿಕೆ ನೀಡಿದರು.

ಮಧ್ಯಂತರದ ವೇಳೆ 18–14ರಿಂದ ಮುನ್ನಡೆಯಲ್ಲಿದ್ದ ಯೋಧಾಸ್ ತಂಡವು, ಪಂದ್ಯ ಮುಗಿಯಲು ಐದು ನಿಮಿಷಗಳಿರುವಾಗ 35- 30ರಿಂದ ಹಿಡಿತ ಸಾಧಿಸಿತ್ತು. ಆದರೆ, ನಂತರದಲ್ಲಿ ಎಚ್ಚರಿಕೆಯ ಆಟವಾಡಿದ ವಾರಿಯರ್ಸ್ ಆಟಗಾರರು ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ಎರಡೂ ತಂಡಗಳು ಒಂದು ಬಾರಿ ಆಲೌಟ್ ಆದವು.

ವಾರಿಯರ್ಸ್ ತಂಡಕ್ಕೆ ಇದು ಎರಡನೇ 'ಟೈ' ಪಂದ್ಯವಾಗಿದೆ. ಈ ಹಿಂದೆ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದೊಂದಿಗೆ 28–28ರಿಂದ ಸಮಬಲ ಸಾಧಿಸಿತ್ತು.

ಆಡಿರುವ 6 ಪಂದ್ಯಗಳ ಪೈಕಿ ಮೂರರಲ್ಲಿ ಗೆದ್ದು, ಎರಡಲ್ಲಿ ಸಮಬಲ ಸಾಧಿಸಿ, ಮತ್ತೊಂದರಲ್ಲಿ ಸೋತಿರುವ ವಾರಿಯರ್ಸ್ ತಂಡವು 21 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಯೋಧಾಸ್ ತಂಡವು ಐದು ಪಂದ್ಯಗಳ ಪೈಕಿ ಎರಡಲ್ಲಿ ಜಯಿಸಿ, ಮತ್ತೆರಡಲ್ಲಿ ಸೋತು, ಕೊನೆಯ ಪಂದ್ಯದಲ್ಲಿ 'ಟೈ' ಸಾಧಿಸಿ 15 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎಂಟರಿಂದ ಐದನೇ ಸ್ಥಾನಕ್ಕೆ ಏರಿದೆ.



ಪ್ರೊ ಕಬಡ್ಡಿ ಪಂದ್ಯದಲ್ಲಿ ಯುಪಿ ಯೋಧಾಸ್ ಮತ್ತು ಬೆಂಗಾಲ್ ವಾರಿಯರ್ಸ್ ತಂಡಗಳ ಹಣಾಹಣಿ

ಪಲ್ಟನ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಆತಿಥೇಯ ಪುಣೇರಿ ಪಲ್ಟನ್ ತಂಡವು 30–23ರಿಂದ ದಬಾಂಗ್ ಡೆಲ್ಲಿ ತಂಡವನ್ನು ಮಣಿಸಿತು. ಪಲ್ಟನ್ ತಂಡಕ್ಕೆ ಇದು ತವರಿನಲ್ಲಿ ಸತತ ಎರಡನೇ ಜಯವಾಗಿದೆ. ಆಡಿರುವ ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಗೆದ್ದು, ಒಂದರಲ್ಲಿ ಸೋತಿರುವ ಪಲ್ಟನ್ ತಂಡವು ಪಾಯಿಂಟ್‌ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿದೆ.

ಇಂದಿನ ಪಂದ್ಯ: ಹರಿಯಾಣ ಸ್ಟೀಲರ್ಸ್– ಗುಜರಾತ್ ಜೈಂಟ್ಸ್ (ರಾತ್ರಿ 8)

ಮಾನಸಿ–ತುಳಸಿಮತಿ ಜೋಡಿಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಮಾನಸಿ ಜೋಶಿ ಮತ್ತು ತುಳಸಿಮತಿ ಮುರುಗೇಶನ್ ಜೋಡಿಯು ದುಬೈ ಪ್ಯಾರಾ ಬ್ಯಾಡ್ಮಿಂಟನ್ ಅಂತರರಾಷ್ಟ್ರೀಯ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು. 2023ರ ಟೋಕಿಯೊ ಪ್ಯಾರಾಲಿಂಪಿಕ್ ಚಾಂಪಿಯನ್ ಪ್ರಮೋದ್ ಭಗತ್ ಅವರು ಎರಡು ಬೆಳ್ಳಿ ಪದಕ ಗೆದ್ದರು.

ಡಿ.11ರಿಂದ 17ರವರೆಗೆ ಯುಎಇಯಲ್ಲಿ ನಡೆದ ಟೂರ್ನಿಯಲ್ಲಿ ಭಾರತದ ಆಟಗಾರರು ಒಂದು ಚಿನ್ನ, ಐದು ಬೆಳ್ಳಿ ಮತ್ತು ಎಂಟು ಕಂಚಿನ ಪದಕಗಳ ಸಾಧನೆ ಮಾಡಿದ್ದಾರೆ. ಮಾನಸಿ ಮತ್ತು ಮುರುಗೇಶನ್ ಜೋಡಿಯು ಎಸ್‌ಎಲ್ 3- ಎಸ್‌ಯು 5 ವಿಭಾಗದ ಫೈನಲ್‌ನಲ್ಲಿ 15-21, 21-14, 21-6ರಿಂದ ಇಂಡೊನೇಷ್ಯಾದ ಲಿಯಾನಿ ರಾತ್ರಿ ಒಕ್ಟಿಲಾ ಮತ್ತು ಖಲಿಮಟಸ್ ಸಾದಿಯಾ ಅವರನ್ನು ಮಣಿಸಿ ಚಿನ್ನ ಗೆದ್ದಿತ್ತು.

ಪುರುಷರ ಸಿಂಗಲ್ಸ್‌ನ (ಎಸ್‌ಎಲ್3) ಫೈನಲ್‌ನಲ್ಲಿ ಭಗತ್ 17-21, 18-21 ರಿಂದ ಇಂಗ್ಲೆಂಡ್‌ನ ಡೇನಿಯಲ್ ಬೆಥೆಲ್ ವಿರುದ್ಧ ಸೋತು ರನ್ನರ್ ಅಪ್ ಸ್ಥಾನ ಪಡೆದರು. ಮಿಶ್ರ ಡಬಲ್ಸ್‌ನ (ಎಸ್‌ಎಲ್3- ಎಸ್‌ಯು 5) ಫೈನಲ್‌ನಲ್ಲಿ ಭಗತ್ ಮತ್ತು ಮನೀಷಾ ರಾಮದಾಸ್ ಅವರು 14-21, 11-21ರಿಂದ ಇಂಡೊನೇಷ್ಯಾದ ಹಿಕ್ಮತ್ ರಾಮದಾನಿ ಮತ್ತು ಲಿಯಾನಿ ರಾತ್ರಿ ಒಕ್ಟಿಲಾ ಎದುರು ಪರಾಭವಗೊಂಡು, ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಕುಮಾರ್ ನಿತೇಶ್, ತುಳಸಿಮತಿ ಕಂಚಿನ ಪದಕ ಗೆದ್ದಿದ್ದಾರೆ.

ಕರ್ನಾಟಕಕ್ಕೆ ಮಣಿದ ಜಮ್ಮು–ಕಾಶ್ಮೀರ

ಬೆಂಗಳೂರು: ಕೆ.ಪಿ. ಕಾರ್ತಿಕೇಯ ಅವರ ಅಮೋಘ ಶತಕ ಹಾಗೂ ಬೌಲರ್‌ಗಳ ಸಾಂಘಿಕ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಸೋಮವಾರ ಜಮ್ಮುಕಾಶ್ಮೀರ ತಂಡದ ವಿರುದ್ಧ 130 ರನ್‌ಗಳ ಇನ್ನಿಂಗ್ಸ್ ಜಯ ದಾಖಲಿಸಿತು.

ಜಮ್ಮು ಕಾಶ್ಮೀರದ ಕ್ರಿಕೆಟ್ ಸಂಸ್ಥೆಯ ಹಾಸ್ಟೆಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆತಿಥೇಯ ತಂಡದ ಬ್ಯಾಟರ್‌ಗಳನ್ನು ಹಾರ್ದಿಕ್ ರಾಜ್ ಕಾಡಿದರು.

ಕರ್ನಾಟಕದ ದಾಳಿಗೆ ಎರಡನೇ ಇನ್ನಿಂಗ್ಸ್‌ನಲ್ಲೂ ಜಮ್ಮು ಕಾಶ್ಮೀರ ತಂಡವು 180 ರನ್‌ಗೆ ಕುಸಿಯಿತು. ಎನ್. ಸಮರ್ಥ್, ಹಾರ್ದಿಕ್ ರಾಜ್ ಮತ್ತು ಧೀರಜ್ ಜೆ. ಗೌಡ ತಲಾ ಮೂರು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನ್ನಿಂಗ್ಸ್: ಜಮ್ಮು ಕಾಶ್ಮೀರ 62 ಓವರ್‌ಗಳಲ್ಲಿ 170 (ಬಿಲಾಲ್ ಅಹಮ್ಮದ್ ಭಟ್ 44, ಹತೀಂ ರಿಯಾಜ್ 27, ಧ್ರುವ ಶರ್ಮಾ 37; ಸಮಿತ್ ದ್ರಾವಿಡ್ 25ಕ್ಕೆ 2, ಹಾರ್ದಿಕ್ ರಾಜ್ 28ಕ್ಕೆ 5). ಕರ್ನಾಟಕ 100 ಓವರ್‌ಗಳಲ್ಲಿ 5 ವಿಕೆಟ್‌ಗೆ 480 ಡಿಕ್ಲೇರ್ (ಕೆ.ಪಿ. ಕಾರ್ತಿಕೇಯ 163, ಸಮಿತ್ 98, ಧ್ರುವ್ ಪ್ರಭಾಕರ್ ಔಟಾಗದೆ 66, ಧೀರಜ್ ಜೆ.ಗೌಡ ಔಟಾಗದೆ 51; ಮೌಸಬ್ ಮೊಹಮ್ಮದ್ 119ಕ್ಕೆ 3). ಎರಡನೇ ಇನ್ನಿಂಗ್ಸ್: ಜಮ್ಮು ಕಾಶ್ಮೀರ 58.5 ಓವರ್‌ಗಳಲ್ಲಿ 180 (ರಿಶವ್ 47, ನಶಾಂತ್ ಕುಮಾರ್ 43; ಎನ್. ಸಮರ್ಥ್ 42ಕ್ಕೆ 2, ಹಾರ್ದಿಕ್ ರಾಜ್ 27ಕ್ಕೆ 2, ಧೀರಜ್ ಜೆ. ಗೌಡ 43ಕ್ಕೆ 2).

ಫಲಿತಾಂಶ: ಕರ್ನಾಟಕಕ್ಕೆ 130 ರನ್‌ಗಳ ಇನ್ನಿಂಗ್ಸ್ ಜಯ

27 ರಿಂದ ರಾಷ್ಟ್ರೀಯ ಟೇಕ್ವಾಂಡೊ

ಬೆಂಗಳೂರು: ಕರ್ನಾಟಕ ಟೇಕ್ವಾಂಡೊ ಸಂಸ್ಥೆ ಆಶ್ರಯದಲ್ಲಿ 38ನೇ ರಾಷ್ಟ್ರೀಯ ಟೇಕ್ವಾಂಡೊ ಚಾಂಪಿಯನ್‌ಷಿಪ್ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಇದೇ ತಿಂಗಳ 27 ರಿಂದ 30ರವರೆಗೆ ನಡೆಯಲಿದೆ.

ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ 25 ರಾಜ್ಯಗಳ ಸುಮಾರು ಒಂದು ಸಾವಿರ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಈ ಕೂಟದ ಪದಕ ವಿಜೇತರು 10ನೇ ಏಷ್ಯನ್ ಟೇಕ್ವಾಂಡೊ ಐಟಿಎಫ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ಅರ್ಹತೆ ಪಡೆಯುತ್ತಾರೆ. ಏಷ್ಯನ್ ಚಾಂಪಿಯನ್‌ಷಿಪ್ ಬೆಂಗಳೂರಿನಲ್ಲಿ ಆ.19-25ರವರೆಗೆ ನಡೆಯಲಿದೆ.